ಬುಧವಾರ, ಜೂನ್ 5, 2024 | ₹ 7.00

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಭ್ರಮ
ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನಲ್ಲಿ ಮುಖಕ್ಕೆ ಬಣ್ಣ ಹಚ್ಚಿ ಸಂಭ್ರಮಿಸಿದ ಟಿಎಂಸಿ ಕಾರ್ಯಕರ್ತೆ



Infinity Learn

Sri Chaitanya

PU & (+2) COLLEGE I CBSE TECHNO SCHOOL

39 YEARS OF EXCELLENCE 1986-2024

ಕರ್ನಾಟಕ

TRANSFORMING YOUR DREAMS INTO REALITY

NEET 2024 RESULTS



450 STUDENTS FROM KARNATAKA SCORED 550 AND ABOVE MARKS

Student	H.T. No.	Marks
BHARANIDHARAN G	H.T. NO. 2707120016	710/720
ANANYA ASHOK RAO	H.T. NO. 2712090359	710/720
MOHSIN SHAIKH	H.T. NO. 2712410319	705/720
MANYA JAIN	H.T. NO. 2712500027	705/720
ADITHYA A	H.T. NO. 2712270283	702/720
KUVAL K R	H.T. NO. 2712420036	700/720
NITEESH N V	H.T. NO. 2712080528	700/720
BERU SHASHANK	H.T. NO. 2712170053	700/720
HASINI TEJOMURTHULA	H.T. NO. 2712040116	700/720
SHAIK FAZAL AHMED	H.T. NO. 2712160411	700/720
MANASWITHA A	H.T. NO. 2712340074	700/720
MOHAMAD IRFAN M	H.T. NO. 2712370006	696/720
NIYA SAJU	H.T. NO. 2712020424	696/720
A SINGH RATHORE	H.T. NO. 2712080332	695/720
NAMITHA KOLLAPANENI	H.T. NO. 2712200510	695/720
YUKTHA SHREE A	H.T. NO. 2712020501	695/720
K M ROHAN KUMAR	H.T. NO. 2712250020	695/720
ASMITA MANGIPUDI	H.T. NO. 2712340359	691/720
SAKETH BATCHALA	H.T. NO. 2712190186	690/720
DHARUN BHALAGI	H.T. NO. 2712380130	690/720
NIKITHA NAYAK	H.T. NO. 2712520085	690/720
AKASH M	H.T. NO. 2712470057	690/720
TANUJA SHARMA R	H.T. NO. 2712260107	690/720
MANYA D S	HT. NO. 2712370265	688/720
VEEKSHA KAMANI	HT. NO. 2712011789	686/720
AISHWARYA.K.P	HT. NO. 2725050159	686/720
SHREERAM B	HT. NO. 2712350072	685/720
VINAY ABHILASH	HT. NO. 2712110453	682/720
KRITHIK NANDIGAMA	HT. NO. 2712270200	682/720
KESAR S ANGADI	HT. NO. 2712480016	680/720
SAANVI VENKATESH	HT. NO. 2712150186	677/720
A MOHAMED ASIF	HT. NO. 2712200513	675/720
KUNDAN D GOWDA	HT. NO. 2725050054	675/720
PAREENA SHAH	HT. NO. 2712070506	673/720
VIRUPAXIGOUDA	HT. NO. 240410146718	672/720
KARTIKEY MALL	HT. NO. 2712090653	670/720
PRINISHA A	HT. NO. 2702010484	670/720
MADHUMITHA P	HT. NO. 2712290290	670/720
GOBHIL KRISHNA N	HT. NO. 2712380019	670/720
VENU VINAYAKA G	HT. NO. 2712040162	670/720
VAISHNAV D	HT. NO. 224302170	670/720
ASHNITHA MOHAN	HT. NO. 2712210477	667/720
ANKITH.V	HT. NO. 2712070372	665/720
VARSHA B	HT. NO. 2712011438	664/720
B MEGHANA	HT. NO. 2712150391	662/720
PRAVYA KROTHA PI	HT. NO. 2712070289	662/720
ABDUR REHMAN B	HT. NO. 2706060392	662/720
DHANVI N	HT. NO. 2712290315	661/720
PREETHI L SHALOM	HT. NO. 2729010248	661/720
BALAGURU D	HT. NO. 2712410159	660/720
VARSHINI K	HT. NO. 2727010061	660/720
AKASHKUMAR K S	HT. NO. 2712011220	660/720
RAHUL R	HT. NO. 2712290361	660/720
S THOUSHIK AHMED	HT. NO. 4122011072	660/720
MADHUMITHA R	HT. NO. 2712350384	659/720
SONAKSHI SAINI	HT. NO. 2712020994	658/720
KRUTIK V GORNALE	HT. NO. 2712070466	657/720
DEEKSHITH Y J	HT. NO. 2707130178	656/720
G ADVAITH KARTHIKEYA	HT. NO. 2712390075	655/720
SUDHISH N	HT. NO. 4122050293	655/720
SONAL R. NAIK	HT. NO. 2712060705	653/720
VARUNYA V	HT. NO. 4118040005	652/720
DHARMIK S	HT. NO. 2712160435	652/720
SAI VARNITHA P	HT. NO. 2712120201	651/720
NAKSHATRA S R	HT. NO. 2712030555	651/720
ADITI T RAJESH	HT. NO. 2729090005	651/720
MONISH GOWDA B K	HT. NO. 2712120485	650/720
NIDHEESH. A	HT. NO. 2712530157	650/720
ARVIND N MURTHY	HT. NO. 2729060077	650/720
HARI KRISHNA DEV	HT. NO. 224302170	650/720
D KAVYA	HT. NO. 2712100491	649/720
MITHIL	HT. NO. 2712190385	647/720
BHAJAN CARIAPPA	HT. NO. 2712180271	647/720
JATHIN M .V	HT. NO. 2712030211	646/720
SAGAR LACHYAN	HT. NO. 2712520062	646/720
INIYA.S	HT. NO. 2712210222	644/720
HARINI BALAJI	HT. NO. 2712011538	643/720
ASHVIKA VIDYA S	HT. NO. 2712030581	643/720
SAMIR KUMAR T	HT. NO. 2712140265	642/720
KASHVIREDDY	HT. NO. 2712380044	631/720

Scan QR for NEET Longterm

FEE CONCESSIONS ARE AVAILABLE TILL JUNE 9 2024

CLASSES START FROM JUNE 17 2024

VAIDYAH-2025

NEET LONGTERM PROGRAM

ADMISSIONS OPEN

Extraordinary Performance from Long Term - VAIDYAH 2024

Student Name	Marks in 2023	Marks in 2024	Increase in Marks in NEET-2024	Student Name	Marks in 2023	Marks in 2024	Increase in Marks in NEET-2024
OM Vats	491	715	224	PAPPU AKSHAY	326	627	301
Kashish	528	701	173	ARYAN SATYANARAYAN P	330	650	320
Akala Reddy Manaswitha	510	700	190	YENDRA SNEHA REDDY	332	644	312
METTUPALLY DHARANESH	301	643	342	LANKA NIRDOSH	333	636	303
ERLA JHON VICTOR	309	611	302	KANDUKUR VAISHNAVI	335	651	316
MALLINA LAKSHMI ASRITHA	310	661	351	M VENKATA SAI SATHWIK	335	643	308
MADHIRE HIMADHYUTHI	310	652	342	K NAGA SATYANARAYANA	339	666	327
K VENU GOPAL	310	622	312	NAILAH ATHER KHAN	339	662	323
VALISHETTY AKHIL VARMA	313	658	345	ANURAG RAKESH BASA	341	648	307
JANNU SAI MOUNIKA	315	639	324	NAYANAPATRUNI NEELIMA	349	665	316
VARTHYA SIDDHU	315	626	311	G LAKSHMI AKASH REDDY	354	660	306
EDDANDI RUCHITHA	320	627	307				

Merit Concessions based on NEET 2024 marks in Karntaka

Marks range	Concession
>500	90%
490 to 499	80%
480 to 489	70%
470 to 479	60%
460 to 469	50%
450 to 459	40%
430 to 449	30%
400 to 429	20%
<400	10%

*T & C apply | Note: Any inadvertent error published in this advertisement could be brought to our notice | Note: The information is as per students feedback

Sri Chaitanya FUTURE PATHWAYS
THE NEW GENERATION GLOBAL SCHOOLS
Mapped to CBSE / IGCSE - with New-age Subjects

JP NAGAR Ph: 7207702406, 7411869835
VARTHUR Ph: 7022625895, 7022625896
HENNUR Ph: 7022625893, 7022625894
KUDLU Ph: 7619224040, 7619224041
KAGGADASAPURA Ph: 7022625898, 7022625897

Knowledge Hub
NEET | IIT JEE | FOUNDATION
www.srichaitanyaknowledgehub.com

IIT-JEE & NEET LONG-TERM BATCH ADMISSIONS OPEN

BASAVESHWARNAGAR Ph: 7207914069
JAYANAGAR Ph: 9177867198
KALYAN NAGAR Ph: 9177867027
BELGAVI Ph: 7207914070

*DLP-AITS

ANDHRA PRADESH I TELANGANA I KARNATAKA I TAMIL NADU I DELHI I HIMACHAL PRADESH I JHARKHAND I MADHYA PRADESH I PUNJAB I CHANDIGARH I HARYANA
UTTAR PRADESH I MAHARASTRA I UTTARAKHAND I RAJASTHAN I BIHAR I WEST BENGAL I CHHATTISGARH I ASSAM I ODISHA I GUJARAT

ಬುಧವಾರ, ಜೂನ್ 5, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 156 | ಪುಟ 22

www.prajavani.net

prajavani.net prajavani prajavani prajavani


ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ ಚಂದ್ರನ ಅಂಗಳದಿಂದ ಕಲ್ಲಿನ ಮಾದರಿ ತರುತ್ತಿರುವ ಚೀನಾ 14

ಸಂಕಥನಗಳನ್ನು ಒಡೆದುಹಾಕಿದ ಚುನಾವಣೆ

‘ಫಸ್ಟ್ ಫೈನಾನ್ಸ್’ಗೆ ₹94.73 ಕೋಟಿ 5



ಗೆದ್ದ ಪ್ರಜಾತಂತ್ರ, ಮೈತ್ರಿಯೇ ಮಂತ್ರ

ಫಲಿತಾಂಶದಲ್ಲಿ ಎಲ್ಲರಿಗೂ ಪಾಠ • ಎನ್‌ಡಿಎಗೆ ಗೆಲುವಿನಲ್ಲೂ ಸೋಲಿನ ಭಾವ • ಸೋಲಿನಲ್ಲೂ ಗೆಲುವು ಕಂಡ ‘ಇಂಡಿಯಾ’

• ಮಂಜುನಾಥ ಹೆಬ್ಬಾರ್

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ 370 ಕ್ಷೇತ್ರಗಳಲ್ಲಿ ಗೆಲ್ಲುವ ಕನಸು ಬಿತ್ತಿದ್ದ ‘ಹಿಂದೂಗಳ ಹೃದಯ ಸಾಮ್ರಾಟ’ ನರೇಂದ್ರ ಮೋದಿ ಅವರು ಕೇಂದ್ರ ಸರ್ಕಾರ ರಚನೆಗೆ ಅಗತ್ಯವಿರುವ 272 ಸ್ಥಾನಗಳ ಗಡಿಗೆ ಬಿಜೆಪಿಯನ್ನು ತಲುಪಿಸುವಲ್ಲಿ ಯಶ ಕಂಡಿಲ್ಲ. ‘ಇಂಡಿಯಾ’ ಮೈತ್ರಿಕೂಟದ ಪ್ರಬಲ ಪೈಪೋಟಿಯ ನಡುವೆಯೂ ಎನ್‌ಡಿಎ ಮೈತ್ರಿಕೂಟ ಸರಳ ಬಹುಮತಕ್ಕೆ ಬೇಕಿರುವ ಸ್ಥಾನಗಳನ್ನು ಗಳಿಸಿದೆ ಅಥವಾ ಅಷ್ಟು ಕ್ಷೇತ್ರಗಳಲ್ಲಿ ಮುನ್ನಡೆ ಹೊಂದಿದೆ. ದೇಶದಲ್ಲಿ ಸತತ ಮೂರನೇ ಬಾರಿಗೆ ಸರ್ಕಾರ ರಚನೆಗೆ ಎನ್‌ಡಿಎ ಮೈತ್ರಿಕೂಟ ಸಜ್ಜಾಗಿದೆ.

543 ಲೋಕಸಭಾ ಸೀಟುಗಳ ಪೈಕಿ 291ರಲ್ಲಿ ಎನ್‌ಡಿಎ ಮುನ್ನಡೆ ಸಾಧಿಸಿದೆ. ಇದರಲ್ಲಿ ಬಿಜೆಪಿ ಮುನ್ನಡೆ ಗಳಿಸಿರುವ ಸ್ಥಾನಗಳ ಸಂಖ್ಯೆ 240. ಸರ್ಕಾರದಲ್ಲಿ ಆಯಕಟ್ಟಿನ ಜಾಗದಲ್ಲಿದ್ದ ಬಿಜೆಪಿಯ ಹಲವು ಪ್ರಮುಖ ನಾಯಕರು ಸೋತು ಸುಣ್ಣವಾಗಿದ್ದಾರೆ. ಆಡಳಿತ ವಿರೋಧಿ ಅಲೆಯ ಕಾರಣಕ್ಕೆ ನೂರಕ್ಕೂ ಅಧಿಕ ಸಂಸದರಿಗೆ ಟಿಕೆಟ್ ನಿರಾಕರಿಸಿ ಹೊಸ ಮುಖಗಳಿಗೆ ಮಣೆ ಹಾಕಿದರೂ ‘ಮ್ಯಾಜಿಕ್’ ಮಾಡುವಲ್ಲಿ ಬಿಜೆಪಿ ವಿಫಲವಾಗಿದೆ. ಈ ಸಲ ಬಿಜೆಪಿ ಮತ ಗಳಿಕೆ ಪ್ರಮಾಣ ಭಾರಿ ಕಡಿಮೆಯೇನೂ ಆಗಿಲ್ಲ. ಆದರೆ, ಸೀಟುಗಳ ಸಂಖ್ಯೆಯಲ್ಲಿ ದೊಡ್ಡ ಕುಸಿತ ಆಗಿದೆ. ಲೋಕಸಭಾ ಚುನಾವಣಾ ಪೂರ್ವದಲ್ಲಿ ಮಾಡಿಕೊಂಡ ಮೈತ್ರಿಯು ಬಿಜೆಪಿಗೆ ಅನುಕೂಲ ಮಾಡಿಕೊಟ್ಟಿದೆ. ‘ಇಂಡಿಯಾ’ ಮೈತ್ರಿಕೂಟದ ಆಧಾರಸ್ತಂಭವಾಗಿದ್ದ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಸೆಳೆದುಕೊಂಡಿದ್ದು ಕೇಸರಿ ಪಾಳಯದ ಚಾಣಾಕ್ಷ ನಡೆ. ಆಂಧ್ರ ಪ್ರದೇಶದಲ್ಲಿ ಟಿಡಿಪಿ–ಜನಸೇನಾ ಪಕ್ಷದ ಜತೆಗಿನ ದೋಸ್ತಿಯಿಂದ ಬಿಜೆಪಿಗೆ ಭಾರಿ ಲಾಭವಾಗಿದೆ.

14ನೇ ಪುಟ ನೋಡಿ

ನಾಯ್ಡು, ನಿತೀಶ್ ಕಿಂಗ್‌ಮೇಕರ್‌ಗಳು

ಮಹಾ ಸಮರದಲ್ಲಿ ತೆಲುಗು ದೇಶಂ ಪಕ್ಷದ ನಾಯಕ ಚಂದ್ರಬಾಬು ನಾಯ್ಡು ಹಾಗೂ ಜೆಡಿಯು ನಾಯಕ ನಿತೀಶ್ ಕುಮಾರ್ ಅವರು ಕಿಂಗ್ ಮೇಕರ್‌ಗಳಾಗಿ ಹೊರಹೊಮ್ಮಿದ್ದಾರೆ.

ಅಟಲ್ ಬಿಹಾರಿ ವಾಜಪೇಯಿ ಅವರನ್ನು ಪ್ರಧಾನಿ ಮಾಡುವಲ್ಲಿ ನಾಯ್ಡು ಮಹತ್ವದ ಪಾತ್ರ ವಹಿಸಿದ್ದರು. ಮೋದಿ ಆಡಳಿತ ವೈಖರಿ ಬಗ್ಗೆ ಅಸಮಾಧಾನಗೊಂಡು 2019ರ ಲೋಕಸಭಾ ಚುನಾವಣೆಯ ಪೂರ್ವದಲ್ಲಿ ನಾಯ್ಡು ಅವರು ಎನ್‌ಡಿಎ ಮೈತ್ರಿಕೂಟವನ್ನು ತೊರೆದಿದ್ದರು. ಬಳಿಕ ನಡೆದ ಚುನಾವಣೆಯಲ್ಲಿ ಅವರ ಪಕ್ಷ ಸೋತು ಹೋಗಿತ್ತು.ಇದೀಗ ಅವರು ರಾಜಕೀಯ ಮರು ಜನ್ಮ ಪಡೆದಿದ್ದಾರೆ. ಅವರ ಪಕ್ಷ 16 ಸ್ಥಾನಗಳನ್ನು ಗೆದ್ದುಕೊಂಡಿದೆ. ಅದೇ ರೀತಿ, ನಿತೀಶ್ ಕುಮಾರ್ ಅವರ ಪಕ್ಷವು 12ರಲ್ಲಿ ವಿಜಯ ಸಾಧಿಸಿದೆ. ಇವರಿಬ್ಬರೂ ‘ಜಿಗಿತ ವೀರ’ರೆಂದೇ ಪ್ರಖ್ಯಾತರು. ಮೈತ್ರಿಕೂಟ ಬದಲಿಸುವುದರಲ್ಲಿ ನಿಸ್ಸೀಮರು.


ಮತಗಟ್ಟೆ ಸಮೀಕ್ಷೆ ಅಂದಾಜು ಹುಸಿ

ನವದೆಹಲಿ (ಪಿಟಿಐ): ಅರವತ್ತನಾಲ್ಕು ಕೋಟಿಗೂ ಹೆಚ್ಚು ಜನರು ಮತದಾನ ಮಾಡಿದ್ದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ 2019ರ ಚುನಾವಣೆಯಲ್ಲಿ ಗೆದ್ದಷ್ಟೇ ಅಥವಾ ಅದಕ್ಕಿಂತ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ಬಹುತೇಕ ಮತಗಟ್ಟೆ ಸಮೀಕ್ಷೆಗಳು ಅಂದಾಜಿಸಿದ್ದವು. ಆದರೆ, ಯಾವ ಸಮೀಕ್ಷೆಗೂ ಹೋಲಿಕೆಯಾಗುವಂತಹ ಜನಾದೇಶ ಈಗ ಸಿಕ್ಕಿಲ್ಲ.

2019ರ ಚುನಾವಣೆಯಲ್ಲಿ ಬಿಜೆಪಿ ಸ್ವತಂತ್ರವಾಗಿ 303 ಸ್ಥಾನಗಳನ್ನು ಗೆದ್ದಿತ್ತು. ಈ ಬಾರಿಯ ಚುನಾವಣಾ ಫಲಿತಾಂಶ ಗಮನಿಸಿದರೆ, ಸುಮಾರು 240 ಸ್ಥಾನಗಳನ್ನು ಪಕ್ಷ ಗೆಲ್ಲಬಹುದು ಎಂಬ ಸೂಚನೆ ದೊರೆತಿದೆ. ಇದು ಮತಗಟ್ಟೆ ಸಮೀಕ್ಷೆಗಳು ನೀಡಿದ್ದ ಸ್ಥಾನಗಳಿಗೆ ಹೋಲಿಸಿದರೆ ತುಂಬಾ ಕಡಿಮೆ ಎಂದು ಪರಿಣತರು ವಿಶ್ಲೇಷಿಸಿದ್ದಾರೆ.

58 2019ರ ಚುನಾವಣಾ ಫಲಿತಾಂಶಕ್ಕೆ ಹೋಲಿಸಿದರೆ ಬಿಜೆಪಿ ನೇತೃತ್ವದ ಎನ್‌ಡಿಎ ಈ ಚುನಾವಣೆಯಲ್ಲಿ ಕಳೆದುಕೊಂಡ ಸ್ಥಾನಗಳು

140 ‘ಇಂಡಿಯಾ’ ಮೈತ್ರಿಕೂಟದ ಎಲ್ಲ ಪಕ್ಷಗಳ ಸ್ಥಾನದಲ್ಲಿ ಆದ ಏರಿಕೆ



ಮಣ್ಣು ಮುಕ್ಕಿದ ಪಕ್ಷಗಳು

ಎನ್‌ಡಿಎ ಹಾಗೂ ‘ಇಂಡಿಯಾ’ ಮೈತ್ರಿಕೂಟದ ಮೇಲಾಟದಲ್ಲಿ ಬಲಿಷ್ಠ ಪ್ರಾದೇಶಿಕ ಪಕ್ಷಗಳು ಮಣ್ಣು ಮುಕ್ಕಿವೆ. ಒಡಿಶಾದ ಬಿಜು ಜನತಾದಳ, ಆಂಧ್ರಪ್ರದೇಶದ ವೈಎಸ್‌ಆರ್‌ಸಿಪಿ, ಉತ್ತರ ಪ್ರದೇಶದ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ), ತೆಲಂಗಾಣದ ಬಿಆರ್‌ಎಸ್ ಯಾವುದೇ ಮೈತ್ರಿಕೂಟಕ್ಕೆ ಸೇರದೆ ಸ್ವತಂತ್ರವಾಗಿ ಸ್ಪರ್ಧಿಸಿದ್ದವು.

ಬಿಎಸ್‌ಪಿ, ಬಿಆರ್‌ಎಸ್ ಖಾತೆಯನ್ನೇ ತೆರೆದಿಲ್ಲ. ಬಿಜೆಡಿ, ವೈಎಸ್‌ಆರ್‌ಸಿಪಿ ಸಹ ಪರಾಭವ ಕಂಡಿವೆ.

ಪ್ರಮುಖರು ಹೇಳಿದ್ದೇನು?



ಇದು ಜನರ ಗೆಲುವು. ಜವಾಹರಲಾಲ್ ನೆಹರೂ ಅವರು ಪ್ರಧಾನಿಯಾಗಿದ್ದಾಗ ಸತತ ಮೂರು ಬಾರಿ ಲೋಕಸಭಾ ಚುನಾವಣೆಯಲ್ಲಿ ಗೆದ್ದ ದಾಖಲೆ ಬರೆದಿದ್ದರು. ಅವರ ನಂತರ ಅಂತಹುದೇ ವಿಕ್ರಮವನ್ನು ನಾನು ಸಾಧಿಸಿರುವೆ

ನರೇಂದ್ರ ಮೋದಿ, ಪ್ರಧಾನಿ




ಪ್ರಧಾನಿ ನರೇಂದ್ರ ಮೋದಿ ಅವರೇ ನೀವು ಅಧಿಕಾರದಲ್ಲಿ ಮುಂದುವರಿಯುವುದು ತನಗೆ ಇಷ್ಟವಿಲ್ಲ ಎಂದು ಮತದಾರ ಹೇಳಿದ್ದಾನೆ. ‘ನೀವು ನಮಗೆ ಬೇಕಿಲ್ಲ’ ಎಂದು ಇಡೀ ದೇಶ ಸಾರಿ ಹೇಳಿದೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ವಿಶೇಷ ಪುಟಗಳು 7,8,9,10,11 ,12 ಮತ್ತು 13

ಸಂಪಾದಕೀಯ 6

ಕರ್ನಾಟಕದ ಫಲಿತಾಂಶ



ಗೆದ್ದ ಪ್ರಮುಖರು

ರಾಜ್ಯ	ರಾಷ್ಟ್ರ
1. ಪ್ರಲ್ಹಾದ ಜೋಶಿ(ಬಿಜೆಪಿ)	1. ನರೇಂದ್ರ ಮೋದಿ
2. ಜಗದೀಶ ಶೆಟ್ಟರ್(ಬಿಜೆಪಿ)	2. ರಾಹುಲ್ ಗಾಂಧಿ
3. ಬಸವರಾಜ ಬೊಮ್ಮಾಯಿ(ಬಿಜೆಪಿ)	3. ಅಮಿತ್ ಶಾ
4. ಎಚ್‌.ಡಿ. ಕುಮಾರಸ್ವಾಮಿ (ಜೆಡಿಎಸ್)	4. ಶಿವರಾಜ್ ಸಿಂಗ್ ಚೌಹಾಣ್
5. ಶೋಭಾ ಕರಂದ್ಲಾಜೆ(ಬಿಜೆಪಿ)	5. ಶಶಿಕಾಂತ್ ಸೆಂಥಿಲ್
6. ಡಾ.ಸಿ.ಎನ್. ಮಂಜುನಾಥ್(ಬಿಜೆಪಿ)	6. ಶಶಿ ತರೂರ್
7. ತೇಜಸ್ವಿ ಸೂರ್ಯ(ಬಿಜೆಪಿ)	7. ಮಹುವಾ ಮೊಯಿತ್ರಾ

ಸೋತ ಪ್ರಮುಖರು

1. ಭಗವಂತ ಖೂಬಾ(ಬಿಜೆಪಿ)	1. ಸ್ಮೃತಿ ಇರಾನಿ
2. ಬಿ. ಶ್ರೀರಾಮುಲು(ಬಿಜೆಪಿ)	2. ಕೆ. ಅಣ್ಣಾಮಲೈ
3. ಡಿ.ಕೆ. ಸುರೇಶ್ (ಕಾಂಗ್ರೆಸ್)	3. ರಾಜೀವ್ ಚಂದ್ರಶೇಖರ್
4. ಗೀತಾ ಶಿವರಾಜ್‌ಕುಮಾರ್(ಕಾಂಗ್ರೆಸ್)	4. ದಿಗ್ವಿಜಯ್ ಸಿಂಗ್
5. ಅಣ್ಣಾಸಾಹೇಬ್ ಜೊಲ್ಲೆ(ಬಿಜೆಪಿ)	5. ಮೇನಕಾ ಗಾಂಧಿ
6. ಪ್ರಜ್ವಲ್ ರೇವಣ್ಣ (ಜೆಡಿಎಸ್)	6. ಭೂಪೇಶ್ ಬಘೇಲ್

ಅತಿ ಹೆಚ್ಚು ಅಂತರದ ಗೆಲುವು

ರಾಜ್ಯ

ಉತ್ತರಕನ್ನಡ– ವಿಶ್ವೇಶ್ವರ ಹೆಗಡೆ ಕಾಗೇರಿ(ಬಿಜೆಪಿ)	3,37,428
ಮಂಡ್ಯ–ಎಚ್‌.ಡಿ. ಕುಮಾರಸ್ವಾಮಿ(ಜೆಡಿಎಸ್)	2,84,620
ಬೆಂಗಳೂರು ದಕ್ಷಿಣ– ತೇಜಸ್ವಿಸೂರ್ಯ(ಬಿಜೆಪಿ)	2,77,083
ಬೆಂಗಳೂರು ಗ್ರಾ. ಸಿ.ಎನ್. ಮಂಜುನಾಥ್(ಬಿಜೆಪಿ)	2,68,094
ಬೆಂಗಳೂರು ಉ.– ಶೋಭಾ ಕರಂದ್ಲಾಜೆ(ಬಿಜೆಪಿ)	2,59,476

ರಾಷ್ಟ್ರ

ಇಂದೋರ್- ಶಂಕರ್ ಲಾಲ್ವಾನಿ(ಬಿಜೆಪಿ)	11,75,092
ವಿದಿಶಾ– ಶಿವರಾಜ್ ಸಿಂಗ್ ಚೌಹಾಣ್(ಬಿಜೆಪಿ)	8,21,408
ಗಾಂಧಿ ನಗರ– ಅಮಿತ್ ಶಾ (ಬಿಜೆಪಿ)	7,44,716
ಗೌತಮ ಬುದ್ಧ ನಗರ– ಮಹೇಶ್ ಶರ್ಮಾ (ಬಿಜೆಪಿ)	5,59,472
ರಾಯ್‌ಬರೇಲಿ–ರಾಹುಲ್ ಗಾಂಧಿ (ಕಾಂಗ್ರೆಸ್)	3,90,030
ಗಾಜಿಯಾಬಾದ್– ಅತುಲ್ ಗರ್ಗ್ (ಬಿಜೆಪಿ)	3,36965

ನೀಟ್: ಮಂಗಳೂರಿನ ಅರ್ಜುನ್ ಕಿಶೋರ್‌ಗೆ ಪ್ರಥಮ ರ್‍ಯಾಂಕ್

ಪ್ರಜಾವಾಣಿ ವಾರ್ತೆ

ಮಂಗಳೂರು: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್‌–ಯುಜಿ) ಮಂಗಳೂರಿನ ಎಕ್ಸ್‌ಪರ್ಟ್ ಪಿಯು ಕಾಲೇಜಿನ ವಿದ್ಯಾರ್ಥಿ ಅರ್ಜುನ್ ಕಿಶೋರ್ (720ಕ್ಕೆ 720 ಅಂಕ) ಅಖಿಲ ಭಾರತ ಮಟ್ಟದಲ್ಲಿ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ.



ಅರ್ಜುನ್ ಕಿಶೋರ್

‘ನೀಟ್‌ನಲ್ಲಿ ಉತ್ತಮ ಫಲಿತಾಂಶ ನಿರೀಕ್ಷಿಸಿದ್ದೆ, ಆದರೆ, ಪ್ರಥಮ ರ್‍ಯಾಂಕ್ ನಿರೀಕ್ಷಿಸಿರಲಿಲ್ಲ. ದೆಹಲಿಯ ಏಮ್ಸ್‌ನಲ್ಲಿ ವೈದ್ಯಕೀಯ ಶಿಕ್ಷಣ ಓದುವುದು ನನ್ನ ಕನಸಾಗಿತ್ತು. ಕಾಲೇಜು ವೇಳಾಪಟ್ಟಿಯನ್ನು ಚಾಚೂತಪ್ಪದೆ ಅನುಸರಿಸುತ್ತಿದ್ದೆ. ಯಾವುದೇ ಅನುಮಾನ ಇದ್ದರೂ ಉಪನ್ಯಾಸಕರು ಪರಿಹರಿಸುತ್ತಿದ್ದರು. ಕಠಿಣ ಪರಿಶ್ರಮ ಮತ್ತು ಏಕಾಗ್ರತೆಯ ಓದು ಗುರಿ ಸಾಧನೆಗೆ ಸಹಕಾರಿಯಾಯಿತು’ ಎಂದು ಅರ್ಜುನ್ ಪ್ರತಿಕ್ರಿಯಿಸಿದರು.

14ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಕಮಲ ಅರಳಲು ದಳ ಊರುಗೋಲು: ಸಿದ್ದರಾಮಯ್ಯ ಅಧಿಕಾರ ಅಬಾಧಿತ

ಕುಗ್ಗಿದ ಬಿಜೆಪಿ: ಹಿಗ್ಗಿದ ಕಾಂಗ್ರೆಸ್

• ವೈ.ಗ. ಜಗದೀಶ್

ಬೆಂಗಳೂರು: ಮೂರು ರಾಜಕೀಯ ಪಕ್ಷಗಳಿಗೆ ಪ್ರತಿಷ್ಠೆ ಹಾಗೂ ಸಾಮರ್ಥ್ಯ ಪ್ರದರ್ಶನದ ಸವಾಲೊಡ್ಡಿದ್ದ ಲೋಕಸಭೆ ಚುನಾವಣೆಯ ಫಲಿತಾಂಶ ಹೊರಬಿದ್ದಿದ್ದು, ಬಿಜೆಪಿಯ ಬಲ ಕುಗ್ಗಿದ್ದರೆ, ಕಾಂಗ್ರೆಸ್ ಶಕ್ತಿ ಹಿಗ್ಗಿದೆ. ಇನ್ನೇನು ಭವಿಷ್ಯವೇ ಮುಗಿದು ಹೋಯಿತೆಂಬ ಭೀತಿಯಲ್ಲಿದ್ದ ದಳಪತಿಗಳಿಗೆ ಜೀವ ಚೈತನ್ಯವನ್ನೂ ಫಲಿತಾಂಶ ತಂದುಕೊಟ್ಟಿದೆ.

ವರ್ಷದ ಹಿಂದೆ ನಡೆದ ವಿಧಾನಸಭೆ ಚುನಾವಣೆಯಲ್ಲಿ 135ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆದ್ದು ಬೀಗಿದ್ದ ಕಾಂಗ್ರೆಸ್, ಈ ಚುನಾವಣೆಯಲ್ಲೂ ಭಾರಿ ಸಂಖ್ಯೆಯಲ್ಲಿ ಗೆಲುವು ಸಾಧಿಸಬಹುದೆಂಬ ಉಮೇದಿನಲ್ಲಿತ್ತು. ಆರ್ಥಿಕತೆ ಉತ್ತಮವಾಗಿಲ್ಲದೇ ಇದ್ದರೂ, ಲೋಕಸಭೆಯಲ್ಲೂ ಸಾಧನೆ ಮಾಡಲೇಬೇಕೆಂಬ ಆಕಾಂಕ್ಷೆಯಲ್ಲಿ ವಿಧಾನಸಭೆ ಚುನಾವಣೆ ವೇಳೆ ಘೋಷಿಸಿದ್ದ ‘ಗ್ಯಾರಂಟಿ’ಗಳನ್ನು ಜಾರಿ ಮಾಡುವ ಧೈರ್ಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತೆಗೆದುಕೊಂಡಿದ್ದರು.

ಗ್ಯಾರಂಟಿಗಳು ಭರ್ಜರಿ ಜಯ ಕೊಡಿಸಬಹುದೆಂಬ ಕಾಂಗ್ರೆಸ್ ನಾಯಕರ ವಿಶ್ವಾಸ ನಿರೀಕ್ಷಿತ ಮಟ್ಟದಲ್ಲಿ ಫಲ ನೀಡಿಲ್ಲ. ಇಡೀ ದೇಶದಲ್ಲಿ ಬಿಜೆಪಿ ತೀವ್ರ ಹಿನ್ನಡೆ ಅನುಭವಿಸಿದ್ದು, ಕಾಂಗ್ರೆಸ್ ಚೇತರಿಸಿಕೊಂಡಿದೆ. ಹೀಗಿರುವಾಗ ಕಾಂಗ್ರೆಸ್ ಅಧಿಕಾರದಲ್ಲಿರುವ ಕರ್ನಾಟಕದಲ್ಲಿ ಗೆದ್ದ ಸಂಖ್ಯೆ ಹೆಚ್ಚಿದೆಯಾದರೂ ಸಂಭ್ರಮ ಪಡುವಂತಹದ್ದು ಏನೂ ಇಲ್ಲ. ಹಿಂದೆ ಗೆದ್ದಿದ್ದ ಒಂದು ಸ್ಥಾನವನ್ನು ಕಳೆದುಕೊಂಡಿದ್ದರೂ 9 ಸ್ಥಾನಗಳಲ್ಲಿ ಗೆಲ್ಲುವಲ್ಲಿ ಪಕ್ಷ ಯಶಸ್ವಿಯಾಗಿದೆ. ಗ್ಯಾರಂಟಿ ಹಾಗೂ ಸರ್ಕಾರದ ವರ್ಚಸ್ಸಿಗಿಂತ ಬಿಜೆಪಿ ಮತ್ತು ಪ್ರಧಾನಿ ಮೋದಿ ಅಲೆಗೆ ಜನ ಮತ ಹಾಕಿರುವುದನ್ನು ಚುನಾವಣೆ ಫಲಿತಾಂಶ ತೋರಿಸಿದೆ. ಜತೆಗೆ, ಜೆಡಿಎಸ್ ಜತೆಗಿನ ಮೈತ್ರಿಯಿಂದ ಬಿಜೆಪಿಗೆ ಪರಿವರ್ತನೆ-

ವಿಧಾನಸಭೆಯ 3, ಮೇಲ್ಮನೆಯ 1ಕ್ಕೆ ಉಪ ಚುನಾವಣೆ

ವಿಧಾನಸಭೆ ಪ್ರತಿನಿಧಿಸುತ್ತಿರುವ ಎಚ್‌.ಡಿ. ಕುಮಾರಸ್ವಾಮಿ (ಚನ್ನಪಟ್ಟಣ), ಬಸವರಾಜ ಬೊಮ್ಮಾಯಿ (ಶಿಗ್ಗಾವಿ) ಹಾಗೂ ಈ. ತುಕಾರಾಂ (ಸಂಡೂರು) ಹಾಗೂ ಪರಿಷತ್ತಿಗೆ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದ ಕೋಟ ಶ್ರೀನಿವಾಸ ಪೂಜಾರಿ (ದಕ್ಷಿಣ ಕನ್ನಡ) ಲೋಕಸಭೆ ಚುನಾವಣೆಯಲ್ಲಿ ಗೆದ್ದಿದ್ದಾರೆ. ಇವರು ತಾವು ಹೊಂದಿರುವ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟರೆ, ಆರು ತಿಂಗಳೊಳಗೆ ಉಪ ಚುನಾವಣೆ ನಡೆಯಬೇಕಿದೆ. ರಾಜ್ಯವು ಮತ್ತೊಮ್ಮೆ ಈ ಚುನಾವಣೆಗೆ ಸಜ್ಜಾಗಬೇಕಿದೆ.

ಸುದ್ದಿ ವಿಶ್ಲೇಷಣೆ

ಗೊಂಡ ಒಕ್ಕಲಿಗರ ಮತಗಳು ಹಾಗೂ ಒಕ್ಕಲಿಗ–ಲಿಂಗಾಯತ ನಾಯಕರ ಸಖ್ಯದ ರಾಜಕೀಯ ಬಿಜೆಪಿಯ ಮರ್ಯಾದೆಯನ್ನು ಉಳಿಸಿದೆ. ಯಡಿಯೂರಪ್ಪನವರ ಹಿಂದಿರುವ ಲಿಂಗಾಯತ ಮತಬ್ಯಾಂಕ್ ಕೂಡ ಪಕ್ಷವನ್ನು ಕೈಬಿಟ್ಟಿಲ್ಲ ಎಂಬುದು ಲಿಂಗಾಯತ ಸಮುದಾಯ ನಿರ್ಣಾಯಕವಾಗಿರುವ ಕ್ಷೇತ್ರಗಳ ಫಲಿತಾಂಶ ಸಾಬೀತುಪಡಿಸಿದೆ.

ಸಿದ್ದರಾಮಯ್ಯ ತಮ್ಮ ಸ್ವಂತ ಜಿಲ್ಲೆ ಮೈಸೂರಿನಲ್ಲಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವಲ್ಲಿ ಸೋತಿದ್ದಾರೆ. ಆದರೆ, ತಮ್ಮ ಸ್ವಕ್ಷೇತ್ರ ವರುಣವನ್ನು ಒಳಗೊಳ್ಳುವ ಚಾಮರಾಜನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡಿದ್ದಾರೆ.

12ನೇ ಪುಟ ನೋಡಿ


ಒಂದೇ ದಿನ ಹೂಡಿಕೆದಾರರ ಸಂಪತ್ತು ₹31 ಲಕ್ಷ ಕೋಟಿ ನಷ್ಟ

ಷೇರು ಸೂಚ್ಯಂಕದ ಮಹಾಪತನ

ಮುಂಬೈ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಮೈತ್ರಿಯ ಬೆಂಬಲವಿಲ್ಲದೆ ಬಹುಮತ ಪಡೆಯುವಲ್ಲಿ ವೈಫಲ್ಯ ಕಂಡಿದ್ದರಿಂದ ದೇಶದ ಷೇರು ಸೂಚ್ಯಂಕಗಳು ಮಂಗಳವಾರ ಮಹಾಪತನ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಸುಮಾರು ಶೇ 6ರಷ್ಟು ಕುಸಿತ ದಾಖಲಿಸಿವೆ. ಹಾಗಾಗಿ, ಹೂಡಿಕೆದಾರರ ಸಂಪತ್ತು ಒಂದೇ ದಿನ ₹31 ಲಕ್ಷ ಕೋಟಿ ಕರಗಿದೆ.

2020ರ ಮಾರ್ಚ್ 23ರಂದು ಕೋವಿಡ್ ಸಾಂಕ್ರಾಮಿಕ ಉಲ್ಬಣಗೊಂಡಿದ್ದರಿಂದ ಸರ್ಕಾರವು ಲಾಕ್‌ಡೌನ್ ಘೋಷಿಸಿತ್ತು. ಅಂದಿನ ವಹಿವಾಟಿನಲ್ಲಿ ಸೂಚ್ಯಂಕಗಳು ಶೇ 13ರಷ್ಟು ಕುಸಿತ ಕಂಡಿದ್ದವು. ನಾಲ್ಕು ವರ್ಷಗಳ ಬಳಿಕ ಈಗ ತೀವ್ರ ಇಳಿಕೆ ಕಂಡಿವೆ.



14ನೇ ಪುಟ ನೋಡಿ

ಅದಾನಿ ಸಮೂಹದ ಷೇರಿನ ಮೌಲ್ಯ ಕುಸಿತ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣಾ ಫಲಿತಾಂಶವು ಉದ್ಯಮಿ ಗೌತಮ್ ಅದಾನಿ ಸಮೂಹದ ಮೇಲೂ ಪರಿಣಾಮ ಬೀರಿದ್ದು, ಒಂದೇ ದಿನ ಕಂಪನಿಗಳ ಮಾರುಕಟ್ಟೆ ಮೌಲ್ಯವು ₹3.64 ಲಕ್ಷ ಕೋಟಿ ಕರಗಿದೆ.

ಸೋಮವಾರದ ವಹಿವಾಟಿನಲ್ಲಿ ಕಂಪನಿಗಳ ಷೇರಿನ ಮೌಲ್ಯದಲ್ಲಿ ಶೇ 16ರಷ್ಟು ಏರಿಕೆಯಾಗಿದ್ದರಿಂದ, ಮಾರುಕಟ್ಟೆ ಮೌಲ್ಯವು ₹19.42 ಲಕ್ಷ ಕೋಟಿ ದಾಟಿತ್ತು. ಮಂಗಳವಾರದ ಆರಂಭಿಕ ವಹಿವಾಟಿನಲ್ಲಿಯೇ ಷೇರಿನ ಮೌಲ್ಯ ಇಳಿಕೆ ಕಂಡವು. ಹತ್ತು ಕಂಪನಿಗಳ ಪೈಕಿ ಎಂಟು ಕಂಪನಿಗಳ ಷೇರಿನ ಮೌಲ್ಯವು ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಒಟ್ಟು ಎಂ–ಕ್ಯಾಪ್ ₹15.78 ಲಕ್ಷ ಕೋಟಿ ಆಗಿದೆ.

ಅದಾನಿ ಪೋರ್ಟ್ಸ್ ಷೇರಿನ ಮೌಲ್ಯದಲ್ಲಿ ಶೇ 21.26ರಷ್ಟು ಕುಸಿದಿದೆ. ಅದಾನಿ ಎನರ್ಜಿ ಸೆಲ್ಯೂಷನ್ಸ್ ಶೇ 20, ಅದಾನಿ ಎಂಟರ್‌ಪ್ರೈಸಸ್ ಶೇ 19.35, ಅದಾನಿ ಗ್ರೀನ್ ಎನರ್ಜಿ ಷೇರಿನ ಮೌಲ್ಯದಲ್ಲಿ ಶೇ 19.20ರಷ್ಟು ಇಳಿಕೆಯಾಗಿದೆ.

14ನೇ ಪುಟ ನೋಡಿ

ಬುಧವಾರದ ಉಷ್ಣಾಂಶ 31° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಇಂದು ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಗುಡುಗು ಸಹಿತ ಮಳೆ ಸುರಿಯುವ ಸಾಧ್ಯತೆ ಇದೆ

ತಾಪಮಾನ

ಗುರುವಾರ	ಶುಕ್ರವಾರ	ಶನಿವಾರ
31° 21°	30° 20°	30° 20°

1 ಕೋಟಿ ಸಸಿ ನೆಡುವ ಗುರಿ: ಪೊಲೀಸರ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಒಂದು ಕೋಟಿ ಸಸಿ ನೆಡಲು ಪೊಲೀಸರು ವಿಶೇಷ ಅಭಿಯಾನ ಹಮ್ಮಿಕೊಂಡಿದ್ದು, ಬುಧವಾರದಿಂದ ಹಂತ ಹಂತವಾಗಿ ಸಸಿ ನೆಡುವ ಕೆಲಸ ಆರಂಭವಾಗಲಿದೆ.

ವಿಶ್ವ ಪರಿಸರ ದಿನದ ಅಂಗವಾಗಿ ಗೋ ಗ್ರೀನ್ ರೆವೆಲ್ಯೂಷನ್ ಸಂಘಟನೆ ಸಹಯೋಗದಲ್ಲಿ ಪೊಲೀಸರು ಈ ಅಭಿಯಾನ ರೂಪಿಸಿದ್ದಾರೆ. ಪೊಲೀಸ್ ಠಾಣೆಗಳು, ಪೊಲೀಸ್ ವಸತಿ ಗೃಹಗಳ ಆವರಣ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಸಸಿ ನೆಡುವ ಗುರಿ ಇಟ್ಟುಕೊಂಡಿದ್ದಾರೆ. ಆಡುಗೋಡಿಯಲ್ಲಿರುವ ಸಿಎಆರ್ (ನಗರ ಸಶಸ್ತ್ರ ಮೀಸಲು ಪಡೆ) ದಕ್ಷಿಣ ವಿಭಾಗದ ಮೈದಾನದಲ್ಲಿ ಬುಧವಾರ (ಜೂನ್ 5) ನಡೆಯಲಿರುವ ಕಾರ್ಯಕ್ರಮದಲ್ಲಿ ಅಭಿಯಾನಕ್ಕೆ ಚಾಲನೆ ನೀಡಲಾಗುತ್ತಿದೆ. ಪರಿಸರ ತಜ್ಞ ಎ.ಎನ್. ಯಲ್ಲಪ್ಪರೆಡ್ಡಿ ಹಾಗೂ ಕಮಿಷನರ್ ಬಿ. ದಯಾನಂದ್ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ನೀಟ್: ರಾಜ್ಯದ ಮೂವರು ಟಾಪರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಸುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಫಲಿತಾಂಶ ಪ್ರಕಟವಾಗಿದ್ದು, ಕರ್ನಾಟಕದ ಮೂವರು ವಿದ್ಯಾರ್ಥಿಗಳು ಅಖಿಲ ಭಾರತ ಶ್ರೇಣಿಯಲ್ಲಿ 720ಕ್ಕೆ 720 ಅಂಕ ಗಳಿಸಿದ್ದಾರೆ.

ಮೊದಲ ಸ್ಥಾನ ಪಡೆದ ದೇಶದ 67 ವಿದ್ಯಾರ್ಥಿಗಳಲ್ಲಿ ಬೆಂಗಳೂರಿನ ನಾರಾಯಣ ಕಾಲೇಜಿನ ವಿದ್ಯಾರ್ಥಿ ಸ್ಯಾಮ್ ಶ್ರೇಯಸ್ ಜೋಸೆಫ್, ಚೈತನ್ಯ ಶಿಕ್ಷಣ ಸಂಸ್ಥೆಯ ಕಲ್ಯಾಣ್ ವಿ, ಹಾಗೂ ಮಂಗಳೂರು ಎಕ್ಸ್‌ಪರ್ಟ್ ಕಾಲೇಜಿನ ಅರ್ಜುನ್ ಕಿಶೋರ್ (99.99 ಪರ್ಸೆಂಟೈಲ್) ಸಹ ಇದ್ದಾರೆ.

ಕಲ್ಯಾಣ್ ಅವರು ಪಶುವೈದ್ಯಕೀಯ ವಿಜ್ಞಾನ, ಬಿ ಫಾರ್ಮಾ, ಡಿ ಫಾರ್ಮಾ ಮತ್ತು ಬಿಎಸ್‌ಸಿ ನರ್ಸಿಂಗ್‌ನಲ್ಲಿ ಮೊದಲ ರ್‍ಯಾಂಕ್ ಗಳಿಸುವ ಮೂಲಕ ಸಿಇಟಿಯಲ್ಲೂ ಅಗ್ರಸ್ಥಾನ ಪಡೆದಿದ್ದರು. ಅವರು ದೆಹಲಿಯ 'ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (ಏಐಎಂಎಸ್)' ಸೇರುವ ಗುರಿ ಇಟ್ಟುಕೊಂಡಿದ್ದಾರೆ.

'ವೈದ್ಯರೂಆಗಿರುವನನ್ನತಂದೆನನಗೆಸ್ಫೂರ್ತಿ.ಅವರ ಹಾದಿಯಲ್ಲಿ ನಾನು ನಡೆಯುವೆ. ದೆಹಲಿಯ ಏಮ್ಸ್‌ಗೆ ಪ್ರವೇಶ ಪಡೆಯುವೆ' ಎಂದು ಶ್ರೇಯಸ್ ಜೋಸೆಫ್ ಪ್ರತಿಕ್ರಿಯೆ ನೀಡಿದ್ದಾರೆ. ರಾಜ್ಯದ ಆರು ವಿದ್ಯಾರ್ಥಿಗಳು ಅಖಿಲ ಭಾರತ ಮಟ್ಟದ 100ರ ಒಳಗಿನ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಕರ್ನಾಟಕದ 1,50,171 ವಿದ್ಯಾರ್ಥಿಗಳು ನೀಟ್ ಬರೆದಿದ್ದರು. ಅವರಲ್ಲಿ 89,088 ಅಭ್ಯರ್ಥಿಗಳು ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹತೆ ಪಡೆದಿದ್ದಾರೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಹೇಳಿದೆ. 2023ರಲ್ಲಿ ರಾಜ್ಯದ 75,248 ವಿದ್ಯಾರ್ಥಿಗಳು, 2022 ರಲ್ಲಿ 72,262 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದರು. ಕನ್ನಡ ಸೇರಿದಂತೆ 13 ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು. 1,065 ಅಭ್ಯರ್ಥಿಗಳು ಕನ್ನಡದಲ್ಲಿ ಬರೆಯಲು ಹೆಸರು ನೋಂದಾಯಿಸಿಕೊಂಡಿದ್ದರು.

ಚೈತನ್ಯ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳ ಸಾಧನೆ

ಬೆಂಗಳೂರು: ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ನಡೆದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಚೈತನ್ಯ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದು, 13 ಮಂದಿ ರ್‍ಯಾಂಕ್ ಪಡೆದಿದ್ದಾರೆ.

ಸಂಸ್ಥೆಯ ವಿದ್ಯಾರ್ಥಿ ವಿ. ಕಲ್ಯಾಣ್ 720 ಅಂಕ ಪಡೆಯುವು ದರೊಂದಿಗೆ ದೇಶಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಅನಿಮೇಶ್ ಸಿಂಗ್ ರಾಥೋಡ್ ಅವರು ತೃತೀಯ ರ್‍ಯಾಂಕ್ ಗಳಿಸಿದ್ದಾರೆ. ನೇಹಾಲ್ ಎಚ್. ಪ್ರಸನ್ನ 715 ಅಂಕ, ಅನನ್ಯ ಅಶೋಕ್ ರಾವ್ 710 ಅಂಕ, ಭರಣಿಧರನ್ ಜಿ. 710 ಅಂಕ, ಮಾನ್ಯ ಜೈನ್ 705 ಅಂಕ, ಮೊಹ್ಸಿನ್ ಶೇಕ್ 705 ಅಂಕ ಪಡೆದಿದ್ದಾರೆ.

ಶೇಕ್ ಫಜಲ್ ಅಹಮದ್, ನಿತೀಶ್ ಎನ್.ವಿ., ಬೇರು ಶಶಾಂಕ್, ಹಾಸಿನಿ ತೇಜೋಮೂರ್ತುಲ ಹಾಗೂ ಕುವಲ್ ಕೆ.ಆರ್. ತಲಾ 700 ಅಂಕ ಪಡೆದಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಶಿಕ್ಷಣ ಸಂಸ್ಥೆಗಳ ನಿರ್ದೇಶಕಿ ಸುಷ್ಮಾ ಬೋಪಣ್ಣ ಅಭಿನಂದಿಸಿದ್ದಾರೆ ಎಂದು ಬೆಂಗಳೂರಿನ ಶ್ರೀ ಚೈತನ್ಯ ಎಜುಕೇಶನಲ್ ಇನ್‌ಸ್ಟಿಟ್ಯೂಷನ್ಸ್‌ನ ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕ ವಿ. ಸತೀಶ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಿ. ಕಲ್ಯಾಣ್ · ಭರಣಿಧರನ್ ಜಿ. · ಅನನ್ಯ ಅಶೋಕ್ ರಾವ್ · ಅನಿಮೇಶ್ ಸಿಂಗ್ ರಾಥೋಡ್ · ನೇಹಾಲ್ ಎಚ್. ಪ್ರಸನ್ನ

ವಿಧಾನ ಪರಿಷತ್ ಚುನಾವಣೆ ಎಲ್ಲ ನಾಮಪತ್ರಗಳ ಅಂಗೀಕಾರ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ನ 11 ಸ್ಥಾನಗಳಿಗೆ ನಡೆಯುವ ಚುನಾವಣೆಗೆ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ನಿಂದ ಸ್ಪರ್ಧಿಸಿರುವ ಎಲ್ಲ ಅಭ್ಯರ್ಥಿಗಳ ನಾಮಪತ್ರಗಳು ಅಂಗೀಕಾರಗೊಂಡಿವೆ.

ವಿಧಾನಸಭೆಯಲ್ಲಿನ ಸದಸ್ಯಬಲಕ್ಕೆ ಅನುಗುಣವಾಗಿ ಕಾಂಗ್ರೆಸ್ ಏಳು, ಬಿಜೆಪಿ ಮೂರು ಮತ್ತು ಜೆಡಿಎಸ್ ಒಂದು ಸ್ಥಾನಕ್ಕೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. ಮೂರೂ ಪಕ್ಷಗಳ ಎಲ್ಲ ಅಭ್ಯರ್ಥಿಗಳ ನಾಮಪತ್ರಗಳೂ ಅಂಗೀಕಾರಗೊಂಡಿವೆ ಎಂದು ಚುನಾವಣಾಧಿಕಾರಿಯಾಗಿರುವ ವಿಧಾನ ಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರು ತಿಳಿಸಿದ್ದಾರೆ.



ಕಸಾಪ ಆವರಣದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಗೆ ಮಹೇಶ ಜೋಶಿ ಮಾಲಾರ್ಪಣೆ ಮಾಡಿದರು. ಕಸಾಪ ಕಾರ್ಯದರ್ಶಿಗಳಾದ ಪದ್ಮಿನಿ ನಾಗರಾಜು, ನೇ.ಭ.ರಾಮಲಿಂಗ ಶೆಟ್ಟಿ, ಕೋಶಾಧ್ಯಕ್ಷ ಪಟೇಲ್ ಪಾಂಡು ಹಾಗೂ ಧರ್ಮೇಂದ್ರ ಕುಮಾರ್ ಪಾಲ್ಗೊಂಡಿದ್ದರು.

ಒಡೆಯರ್ ಸ್ಮರಣೆ, ಗುಣಗಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 140ನೇ ಜಯಂತಿಯನ್ನು ಆಚರಿಸಿ, ಅವರು ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳನ್ನು ಸ್ಮರಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ), ಉದಯಭಾನು ಕಲಾಸಂಘ, ಸಮತಾ ಸೈನಿಕ ದಳ ಸೇರಿ ವಿವಿಧ ಸಂಘ–ಸಂಸ್ಥೆಗಳು ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಿಸಿದವು.

ಕಸಾಪ ಹಮ್ಮಿಕೊಂಡ ಕಾರ್ಯಕ್ರಮ ಉದ್ಘಾಟಿಸಿದ ಲೇಖಕ ಟಿ.ಆರ್. ಅನಂತರಾಮು,'ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಗಾಂಧೀಜಿಯಿಂದಲೇ 'ರಾಜರ್ಷಿ' ಎಂಬ ಗೌರವ ಪಡೆದಿದ್ದರು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಗಣನೀಯ ಪ್ರಗತಿ ಸಾಧಿಸಿದ ಮೈಸೂರು ಸಂಸ್ಥಾನವು ನಾಲ್ವಡಿ ಅವರ ಅವಧಿಯಲ್ಲಿ ತಾಂತ್ರಿಕವಾಗಿಯೂ ಬೆಳವಣಿಗೆ ಕಂಡಿತು. ವಿದ್ಯುತ್ ತಂದಿದ್ದು ಅವರ ದೊಡ್ಡ ಕೊಡುಗೆ' ಎಂದರು.

ನಾಲ್ವಡಿಯವರ ಕೊಡುಗೆಗಳ ಬಗ್ಗೆ ವಿಶೇಷ ಉಪನ್ಯಾಸ ನೀಡಿದ ಸಾಮಾಜಿಕ ಇತಿಹಾಸಕಾರ ಧರ್ಮೇಂದ್ರ ಕುಮಾರ್, 'ನಾಲ್ವಡಿಯವರ ಜೀವನ ಸುಖದ ಸುಪ್ಪತ್ತಿಗೆಯಾಗಿರಲಿಲ್ಲ. ಪ್ರತಿ ಕ್ಷಣವೂ ಅವರು ಸವಾಲುಗಳನ್ನು ಎದುರಿಸಿ, ಬೆಂಕಿಯಲ್ಲಿ ಅರಳಿದ ಹೂವಾಗಿ ಹೊರಹೊಮ್ಮಿದರು. ತಮ್ಮನ್ನೇ ಗಂಧದ ಹಾಗೆ ತೇಯ್ದುಕೊಂಡು, ನಾಡಿನ ಭವಿಷ್ಯವನ್ನು ಉಜ್ವಲವಾಗಿಸಿದರು' ಎಂದು ತಿಳಿಸಿದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, 'ಸಾಮಾಜಿಕ ಬದಲಾವಣೆಗೆ, ದೇಶದ ಸಂಪತ್ತಿಗೆ ವಿದ್ಯೆಯು ಮೂಲ ಎಂದು ಅರಿತ ನಾಲ್ವಡಿ ಅವರು, 1915ರಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಉಚಿತವಾಗಿಸಿದರು. ಶಿಕ್ಷಣವನ್ನು ಗ್ರಾಮೀಣ ಪ್ರದೇಶಕ್ಕೆ ವಿಸ್ತರಿಸಿದರು ಎಂದು ಸ್ಮರಿಸಿದರು.

ನಗರದಲ್ಲಿ ಇಂದು

ವೈ.ಕೆ.ಎಂ. ಜನ್ಮದಿನ, ಪರಿಸರ ದಿನಾಚರಣೆ: ಉಪಸ್ಥಿತಿ: ಎನ್. ಚೆಲುವರಾಯ ಸ್ವಾಮಿ, ಆರ್. ಅಶೋಕ, ಸಿ.ಕೆ. ರಾಮಮೂರ್ತಿ, ಆಯೋಜನೆ: ವೈ.ಕೆ. ಮುದ್ದುಕೃಷ್ಣ ಗೆಳೆಯರ ಬಳಗ, ಸ್ಥಳ: ಲಕ್ಷ್ಮಣರಾವ್ ಉದ್ಯಾನ, 7ನೇ ಬಡಾವಣೆ, ಜಯನಗರ, ಬೆಳಿಗ್ಗೆ 8.30

ಪರಿಸರ ದಿನಾಚರಣೆ: ಆಯೋಜನೆ ಮತ್ತು ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ಮಲ್ಲತ್ತಹಳ್ಳಿ ಬೆಳಿಗ್ಗೆ 9.30

ಪರಿಸರ ಸಂರಕ್ಷಣಾ ಸಾಂಸ್ಕೃತಿಕ ವೈಭವ 'ಹನುಮದ್ವಿಲಾಸ' 'ವಾರ್ಷಿಕ ಪರಿಸರ ಸಂರಕ್ಷಣಾ ಸೇವಾ ಪ್ರಶಸ್ತಿ'ಗಳ ಪ್ರದಾನ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಉದ್ಘಾಟನೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಗೊ.ರು. ಚನ್ನಬಸಪ್ಪ, ಪ್ರಶಸ್ತಿ ಪ್ರದಾನ: ಸಿ. ಸೋಮಶೇಖರ್, ಅತಿಥಿ: ವಿಶ್ವನಾಥ್, ಆಯೋಜನೆ: ಭಾರತೀಯ ಸಮಾಜ ಸೇವಾ ಟ್ರಸ್ಟ್, ಸ್ಥಳ: ನಿಡುಮಾಮಿಡಿ ಮಠ, ಎಚ್.ಬಿ. ಸಮಾಜ ರಸ್ತೆ, ಬೆಳಿಗ್ಗೆ 10

ಮಲ್ಲೇಪುರಂ ಜಿ. ವೆಂಕಟೇಶ ಸಂಪಾದಿಸಿದ 'ಜ್ಞಾನಸಿಂಧು' ಪುಸ್ತಕ ಬಿಡುಗಡೆ, ಪ್ರೊ. ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ ಪ್ರದಾನ': ಪುಸ್ತಕ ಬಿಡುಗಡೆ: ದತ್ತಾವಧೂತ ಸ್ವಾಮೀಜಿ, ಪ್ರಶಸ್ತಿ ಪ್ರದಾನ: ವೂಡೇ ಪಿ. ಕೃಷ್ಣ, ಪ್ರಶಸ್ತಿ ಪುರಸ್ಕೃತರು: ಎಸ್.ಎಚ್. ಗೋವರ್ಧನ, ಸಿ. ಚಂದ್ರಪ್ಪ, ಪುಸ್ತಕ ಪರಿಚಯ: ಶಾಮಾನಂದ ಪೂಜೇರಿ, ಅತಿಥಿ: ಪ್ರಕಾಶ್ ಕಂಬತ್ತಹಳ್ಳಿ, ಆಯೋಜನೆ: ಪ್ರೊ. ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಶ್ರೀಕೃಷ್ಣರಾಜೇಂದ್ರ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

ಅಪರಾಧ: ತಲೆಮರೆಸಿಕೊಂಡಿದ್ದ ಇಬ್ಬರು ವ್ಯಕ್ತಿಗಳ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಅಪರಾಧ ಕೃತ್ಯ ಎಸಗಿ ನ್ಯಾಯಾಲಯದ ವಿಚಾರಣೆಗೆ ಗೈರಾಗಿ ಹಲವು ವರ್ಷಗಳಿಂದ ತಲೆಮರೆಸಿಕೊಂಡಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಧನುಷ್ (27) ಹಾಗೂ ಶೋಯೆಬ್ ಖಾನ್ ಬಂಧಿತರು. ಇಬ್ಬರ ವಿರುದ್ಧವೂ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ಹಳೇ ಪ್ರಕರಣಗಳ ಬಗ್ಗೆ ಮರು ತನಿಖೆ ಕೈಗೊಂಡು ಇಬ್ಬರನ್ನೂ ಸೆರೆ ಹಿಡಿಯಲಾಗಿದೆ. ಇವರಿಬ್ಬರು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಧನುಷ್, ಅಪರಾಧ ಹಿನ್ನೆಲೆಯುಳ್ಳವ. ವ್ಯಕ್ತಿಯೊಬ್ಬರಿಗೆ ಜೀವ ಬೆದರಿಕೆಯೊಡ್ಡಿದ್ದ ಆರೋಪದಡಿ ಈತನ ವಿರುದ್ಧ ಜೀವನ್‌ಭಿಮಾನಗರ ಠಾಣೆಯಲ್ಲಿ 2022ರಲ್ಲಿ ಪ್ರಕರಣ ದಾಖಲಾಗಿತ್ತು. ಜಾಮೀನು ಪಡೆದುಕೊಂಡಿದ್ದ ಆರೋಪಿ, ನ್ಯಾಯಾಲಯದ ವಿಚಾರಣೆಗೆ ಗೈರಾಗುತ್ತಿದ್ದ. ಈತನ ಬಂಧನಕ್ಕೆ ನ್ಯಾಯಾಲಯ ವಾರಂಟ್ ಜಾರಿ ಮಾಡಿತ್ತು' ಎಂದು ತಿಳಿಸಿದರು.

'ಹಳೇ ಏರ್‌ಪೋರ್ಟ್ ರಸ್ತೆಯಲ್ಲಿರುವ ಇಂದಿರಾ ಕ್ಯಾಂಟಿನ್ ಬಳಿ ಮೇ 30ರಂದು ಆರೋಪಿ ಸುತ್ತಾಡುತ್ತಿದ್ದ. ಈ ಬಗ್ಗೆ ಮಾಹಿತಿ ಲಭ್ಯವಾಗುತ್ತಿದ್ದಂತೆ ಸ್ಥಳಕ್ಕೆ ಹೋಗಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಹೇಳಿದರು.

ಅಪಹರಣ ಪ್ರಕರಣದ ಆರೋಪಿ: 'ಅಪಹರಣ, ಕೊಲೆ, ಕಳ್ಳತನ ಹಾಗೂ ಇತರೆ ಪ್ರಕರಣದ ಆರೋಪಿ ಶೋಯೆಬ್, ಹಲವು ವರ್ಷಗಳಿಂದ ತಲೆಮರೆಸಿಕೊಂಡಿದ್ದ. ಈತನನ್ನು ಚಿಕ್ಕಮಗಳೂರಿನ ಮಲ್ಲಂದೂರು ರಸ್ತೆಯಲ್ಲಿರುವ ಮನೆಯಲ್ಲಿ ಇತ್ತೀಚೆಗೆ ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

'ಚಿಕ್ಕಮಗಳೂರಿನ ಶೋಯೆಬ್, ಹಲವು ವರ್ಷಗಳ ಹಿಂದೆ ನಗರದಲ್ಲಿ ವಾಸವಿದ್ದ. ಇದೇ ಸಂದರ್ಭದಲ್ಲಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ. ಕೆಲ ಪ್ರಕರಣಗಳಲ್ಲಿ ಜಾಮೀನು ಪಡೆದಿದ್ದ ಈತ, ತಮ್ಮೂರಿಗೆ ಹೋಗಿ ತಲೆಮರೆಸಿಕೊಂಡಿದ್ದ' ಎಂದು ಹೇಳಿದರು.

ಇಂದು 17 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಬುಧವಾರವೂ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಹವಾಮಾನ ಇಲಾಖೆಯು 17 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಯಾದಗಿರಿ, ರಾಯಚೂರು, ಕೊಪ್ಪಳ, ಗದಗ, ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ಹಾಸನ, ಮೈಸೂರು, ಮಂಡ್ಯ, ತುಮಕೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗಲಿದೆ. ಕೆಲವೆಡೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದೆ ಎಂದು ಇಲಾಖೆ ಹೇಳಿದೆ.

ಇದೇ 8ರವರೆಗೂ ರಾಜ್ಯದ ಹಲವು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದ್ದು, ವಿವಿಧೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಬಿಟ್ ಕಾಯಿನ್ ಹಗರಣ: ಶ್ರೀಧರ ಕೆ ಪೂಜಾರಗಾಗಿ ಎಸ್‌ಐಟಿ ಶೋಧ

ಸಾಕ್ಷ್ಯನಾಶ: ಡಿವೈಎಸ್ಪಿ ಮತ್ತೆ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ (ಬಿಟಿಸಿ) ಹಗರಣದ ಸಾಕ್ಷ್ಯಗಳನ್ನು ನಾಶಪಡಿಸಿದ್ದ ಪ್ರಕರಣದ ಆರೋಪಿಯಾಗಿರುವ ಡಿವೈಎಸ್ಪಿ ಶ್ರೀಧರ್ ಕೆ. ಪೂಜಾರ ಮತ್ತೆ ತಲೆಮರೆಸಿಕೊಂಡಿದ್ದು, ಅವರ ಪತ್ತೆಗಾಗಿ ಎಸ್‌ಐಟಿ ಅಧಿಕಾರಿಗಳು ಶೋಧ ಮುಂದುವರಿಸಿದ್ದಾರೆ.

ಬಿಟ್ ಕಾಯಿನ್ ಅಕ್ರಮ ಪ್ರಕರಣದ ಪ್ರಮುಖ ಆರೋಪಿ ಎನ್ನಲಾದ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕಿ ಅಲಿಯಾಸ್ ಶ್ರೀಕೃಷ್ಣನನ್ನು ಬಂಧಿಸಿದ್ದ ಅಂದಿನ ಸಿಸಿಬಿ ಪೊಲೀಸರು, ಆತನಿಂದ ಹಲವು ವಸ್ತುಗಳನ್ನು ಜಪ್ತಿ ಮಾಡಿ ಸಾಕ್ಷ್ಯ ನಾಶಪಡಿಸಿದ್ದರು. ಈ ಸಂಬಂಧ ಅಂದಿನ ಸಿಸಿಬಿ ಇನ್‌ಸ್ಪೆಕ್ಟರ್‌ಗಳಾಗಿದ್ದ ಶ್ರೀಧರ್ ಪೂಜಾರ, ಲಕ್ಷ್ಮಿಕಾಂತಯ್ಯ, ಚಂದ್ರಾಧರ್, ಡಿ.ಎಂ. ಪ್ರಶಾಂತಬಾಬು ಹಾಗೂ ಸೈಬರ್ ತಜ್ಞ ಸಂತೋಷ್‌ಕುಮಾರ್ ವಿರುದ್ಧ ಸಿಐಡಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಪ್ರಶಾಂತ್ ಹಾಗೂ ಸಂತೋಷ್ ಅವರನ್ನು ಬಂಧಿಸಲಾಗಿತ್ತು.

ಬಂಧನ ಭೀತಿಯಲ್ಲಿ ತಲೆಮರೆಸಿಕೊಂಡಿದ್ದ ಶ್ರೀಧರ್ ಪೂಜಾರ, ಹೈಕೋರ್ಟ್‌ನಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದರು. ಜಾಮೀನು ಮಂಜೂರು ಆದೇಶವನ್ನು ಪ್ರಶ್ನಿಸಿದ್ದ ಎಸ್‌ಐಟಿ ಅಧಿಕಾರಿಗಳು, ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.



ಶ್ರೀಧರ್ ಪೂಜಾರ

ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಜಾಮೀನು ರದ್ದುಗೊಳಿಸಿ ಆದೇಶ ಹೊರಡಿಸಿದೆ. ಜಾಮೀನು ರದ್ದಾಗುತ್ತಿದ್ದಂತೆ ಶ್ರೀಧರ್ ಪೂಜಾರ ನಗರದಿಂದ ಪರಾರಿಯಾಗಿದ್ದಾರೆ.

'ಸಾಕ್ಷ್ಯ ನಾಶ ಪ್ರಕರಣದಲ್ಲಿ ಶ್ರೀಧರ್ ಪೂಜಾರ ಪಾತ್ರವಿದೆ. ನಿರೀಕ್ಷಣಾ ಜಾಮೀನು ಪಡೆದಿದ್ದ ಅವರು ಒಂದು ಬಾರಿ ಮಾತ್ರ ವಿಚಾರಣೆಗೆ ಬಂದು ಹೋಗಿದ್ದಾರೆ. ಇದೀಗ, ಜಾಮೀನು ರದ್ದಾಗಿದ್ದರಿಂದ ಅವರು ನಾಪತ್ತೆಯಾಗಿದ್ದಾರೆ. ಅವರ ಬಂಧನಕ್ಕೆ ತನಿಖೆ ಮುಂದುವರಿಸಲಾಗಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಬಂಧಿಸಲು ಹೋಗಿದ್ದ ಎಸ್‌ಐಟಿ ಅಧಿಕಾರಿಗಳ ಮೇಲೂ ಶ್ರೀಧರ್ ಪೂಜಾರ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ್ದರು. ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣವೂ ದಾಖಲಾಗಿದೆ' ಎಂದು ತಿಳಿಸಿವೆ.

ಅಪಘಾತ: ಲಾರಿ ಚಕ್ರ ಹರಿದು ಸಾವು

ಬೆಂಗಳೂರು: ನಗರದ ಟಿ. ದಾಸರಹಳ್ಳಿ ಕೆರೆ ರಸ್ತೆಯಲ್ಲಿ ಸೋಮವಾರ ರಾತ್ರಿ ಅಪಘಾತ ಸಂಭವಿಸಿದ್ದು, ಲಾರಿ ಚಕ್ರ ಮೈ ಮೇಲೆ ಹರಿದು ಕಾರ್ತಿಕ್ (33) ಎಂಬುವವರು ಮೃತಪಟ್ಟಿದ್ದಾರೆ.

'ತಮಿಳುನಾಡಿನ ಕಾರ್ತಿಕ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಗೊರಗುಂಟೆಪಾಳ್ಯದಲ್ಲಿ ವಾಸವಿದ್ದರು. ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು' ಎಂದು ಪೀಣ್ಯ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಕಾರ್ತಿಕ್ ಅವರು ಸ್ನೇಹಿತನ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಸ್ನೇಹಿತ ವಾಹನ ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ಕಾರ್ತಿಕ್ ಕುಳಿತಿದ್ದರು. ಟಿ. ದಾಸರಹಳ್ಳಿ ಕೆರೆ ರಸ್ತೆಯಲ್ಲಿ ಲಾರಿ ಹೊರಟಿತ್ತು. ಹಿಂದಿಕ್ಕುವ ಸಂದರ್ಭದಲ್ಲಿ ಲಾರಿಗೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದಿತ್ತು.'

'ಅಪಘಾತದಿಂದಾಗಿ ದ್ವಿಚಕ್ರ ವಾಹನ ಸಮೇತ ಕಾರ್ತಿಕ್ ಹಾಗೂ ಸ್ನೇಹಿತ ರಸ್ತೆಯಲ್ಲಿ ಉರುಳಿಬಿದ್ದಿತ್ತು. ಕಾರ್ತಿಕ್ ಮೈ ಮೇಲೆಯೇ ಲಾರಿಯ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡು ಅವರು ಮೃತಪಟ್ಟಿದ್ದಾರೆ. ಸ್ನೇಹಿತನ ಸಹ ಗಾಯಗೊಂಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಸಿಸಿಬಿ ದಾಳಿ: 9 ಮಂದಿ ವಶಕ್ಕೆ

ಬೆಂಗಳೂರು: ಕಲ್ಕೆರೆಯ ಪುಣ್ಯಭೂಮಿ ಬಡಾವಣೆಯ ನಿರ್ಜನ ಪ್ರದೇಶದಲ್ಲಿ ಜೂಜು ಆಡುತ್ತಿದ್ದ 9 ಮಂದಿಯನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದು, ₹70 ಸಾವಿರ ನಗದು ಜಪ್ತಿ ಮಾಡಿದ್ದಾರೆ.

'ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿರುವ ಪ್ರದೇಶದಲ್ಲಿ ಸ್ಥಳೀಯರು ಜೂಜು ಆಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಸಿಸಿಬಿ ಪೊಲೀಸರ ತಂಡ ದಾಳಿ ನಡೆಸಿ 9 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ. ಮತ್ತಷ್ಟು ಮಂದಿ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು

ಹಣ ಅಕ್ರಮ ವರ್ಗಾವಣೆ: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಸಿಬಿಐ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿಕೊಂಡಿದ್ದು, ತನಿಖೆ ಶುರು ಮಾಡಿದ್ದಾರೆ.

'ನಿಗಮದ ಖಾತೆಯಲ್ಲಿದ್ದ ಹಣ ಹಲವು ಖಾಸಗಿ ಕಂಪನಿಗಳು ಮತ್ತು ಖಾಸಗಿ ವ್ಯಕ್ತಿಗಳ ಖಾತೆಗೆ ಅಕ್ರಮವಾಗಿ ವರ್ಗಾವಣೆ ಆಗಿದೆ' ಎಂದು ಆರೋಪಿಸಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರು ಪೂರ್ವ ವಲಯದ ಡೆಪ್ಯುಟಿ ಜನರಲ್ ಮ್ಯಾನೇಜರ್ (ಡಿಜಿಎಂ) ಮಹೇಶ್ ಜೆ. ಅವರು ಸಿಬಿಐಗೆ ಇತ್ತೀಚೆಗೆ ದೂರು ನೀಡಿದ್ದರು.

ದೂರು ಪರಿಶೀಲನೆ ನಡೆಸಿದ್ದ ಸಿಬಿಐ ಅಧಿಕಾರಿಗಳು, ಯೂನಿಯನ್ ಬ್ಯಾಂಕ್ ಇಂಡಿಯಾದ ಎಂ.ಜಿ.ರಸ್ತೆ ಶಾಖೆಯ ಮುಖ್ಯ ವ್ಯವಸ್ಥಾಪಕಿ ಸುಚಿಸ್ಮಿತಾ ರಾವಲ್, ಉಪ ವ್ಯವಸ್ಥಾಪಕಿ ಡಿ. ದೀಪಾ, ಅಧಿಕಾರಿ ವಿ. ಕೃಷ್ಣಮೂರ್ತಿ ಹಾಗೂ ಇಬ್ಬರು ಖಾಸಗಿ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

'2024ರ ಫೆಬ್ರುವರಿ 21ರಿಂದ ಮೇ 6ರವರೆಗೆ ಹಂತ ಹಂತವಾಗಿ ₹89.63 ಕೋಟಿ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಲಾಗಿದೆ. ಇದರಲ್ಲಿ ಕೇವಲ ₹5 ಕೋಟಿ ವಾಪಸು ಪಡೆಯಲಾಗಿದೆ. ಉಳಿದಂತೆ ₹84.63 ಕೋಟಿ ವಾಪಸು ಬರಬೇಕಿದೆ' ಎಂದು ಡಿಜಿಎಂ ಮಹೇಶ್ ಅವರು ದೂರಿನಲ್ಲಿ ತಿಳಿಸಿದ್ದಾರೆ.

ಹಲವು ಕಂಪನಿ ಖಾತೆಗಳ ವಿವರ ಹಾಗೂ ಹಣ ವರ್ಗಾವಣೆ ದಾಖಲೆಗಳನ್ನು ದೂರಿನ ಜೊತೆ ಲಗತ್ತಿಸಲಾಗಿದೆ.

ವಿಷ್ಣುವರ್ಧನ್ ಸ್ಮಾರಕಕ್ಕೆ ಜಾಗ: ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಟ ದಿವಂಗತ ವಿಷ್ಣುವರ್ಧನ್ ಅಂತ್ಯಕ್ರಿಯೆ ನಡೆದ ಸ್ಥಳದಲ್ಲಿ ಅವರ ಸ್ಮಾರಕ ನಿರ್ಮಿಸಲು 10 ಗುಂಟೆ ಜಾಗ ನೀಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ 'ವಿಷ್ಣುವರ್ಧನ್ ಪುಣ್ಯಭೂಮಿ ಟ್ರಸ್ಟ್' ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ, 'ಈ ರೀತಿ ಸಿನಿಮಾ ತಾರೆಯರ ಸ್ಮಾರಕ ನಿರ್ಮಿಸುವಂತೆ ಕೋರಿ ಹೈಕೋರ್ಟ್ ನಲ್ಲಿ ಅರ್ಜಿ ಸಲ್ಲಿಸುವುದು ಸೂಕ್ತವಲ್ಲ.

ಇದರಲ್ಲಿ ಯಾವುದೇ ಸಾರ್ವಜನಿಕ ಹಿತಾಸಕ್ತಿ ಅಡಗಿಲ್ಲ. ಬೇಕಿದ್ದರೆ ಸರ್ಕಾರ ಅಥವಾ ಸಂಬಂಧಪಟ್ಟ ಪ್ರಾಧಿಕಾರದ ಮೂಲಕ ಸಮಸ್ಯೆ ಇತ್ಯರ್ಥ ಮಾಡಿಕೊಳ್ಳಿ' ಎಂದು ಸಲಹೆ ನೀಡಿ ಅರ್ಜಿ ವಜಾ ಮಾಡಿತು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331


ಹೃದಯಪೂರ್ವಕ
ಅಭಿನಂಧನೆಗಳು
ತುಮಕೂರು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ
7,20,946 ಮತಗಳನ್ನು ಪಡೆದು 1,75,594 ಮತಗಳ
ಅಂತರದಿಂದ ಗೆಲುವು ಸಾಧಿಸಿರುವ
ವಿ. ಸೋಮಣ್ಣ ನವರಿಗೆ
ಅಭಿನಂಧನೆಗಳು
ಈ ಗೆಲುವಿಗೆ ಪ್ರತ್ಯೇಕ್ಷ ಹಾಗೂ ಪರೋಕ್ಷವಾಗಿ
ಸಹಕರಿಸಿದ ಪಕ್ಷದ ಎಲ್ಲಾ ನಾಯಕರುಗಳಿಗೂ,
ಅಭಿಮಾನಿಗಳು, ಎಲ್ಲಾ ಬಿಜೆಪಿ ಮತ್ತು ಜೆಡಿಎಸ್
ಕಾರ್ಯಕರ್ತರುಗಳಿಗೂ ಹೃತ್ಪೂರ್ವಕ ಧನ್ಯವಾದಗಳು
ಶುಭ ಕೋರುವವರು
ಶ್ರೀ ಎಸ್.ಎಂ. ಶಿವಪ್ರಕಾಶ್
ಉಪಾಧ್ಯಕ್ಷರು: ಶರಣ ವೇದಿಕೆ (ರಿ) | ಮಾಜಿ ಕಾರ್ಯದರ್ಶಿಗಳು: ಬಿಜೆಪಿ ನಗರ
ಮಾಲೀಕರು: ಎಸ್.ಎಂ.ಪಿ. ಡೆವಲಪರ್ಸ್, ಮೈಸೂರು
ಸಂಸ್ಥಾಪಕರು: ಎಸ್.ಎಂ.ಪಿ. ಫೌಂಡೇಶನ್, ಮೈಸೂರು


ಹೃತ್ಪೂರ್ವಕ ಅಭಿನಂದನೆಗಳು
ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಭಾರಿ ಬಹುಮತದೊಂದಿಗೆ
ಜಯಬೇರಿ ಸಾಧಿಸಿ ಸಂಸದರಾಗಿ ಆಯ್ಕೆಯಾಗಿರುವ
ಸನ್ಮಾನ್ಯ ಶ್ರೀ ಹೆಚ್.ಎಂ. ಸುನೀಲ್ ಬೋಸ್ ರವರಿಗೆ
ಹೃತ್ಪೂರ್ವಕ ಅಭಿನಂದನೆಗಳು
ಇವರಿಗೆ ಮತನೀಡಿ ಗೆಲ್ಲಲು ಸಹಕರಿಸಿದ ಎಲ್ಲಾ ಸಮಾಜ ಬಾಂಧವರಿಗೂ
ಹಾಗೂ ನಾಗರಿಕ ಬಂಧುಗಳಿಗೂ ನಮ್ಮ ತುಂಬು
ಹೃದಯದ ಧನ್ಯವಾದಗಳು
ಶುಭಕೋರುವವರು
ಡಾ. ಹೆಚ್.ಎಂ. ಅನಿತಾ ಬೋಸ್ ಅಭಿಮಾನಿಗಳ ಸಂಘ
ಚಾಮರಾಜನಗರ





ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಎರಡನೇ ಬಾರಿಗೆ ಬಿಜೆಪಿ ಗೆಲುವು

ಕಾಂಗ್ರೆಸ್‌ಗೆ ಗುದ್ದು; ಸುಧಾಕರ್‌ಗೆ ಗದ್ದುಗೆ

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಡಾ.ಕೆ.ಸುಧಾಕರ್ ಗೆಲ್ಲುವ ಮೂಲಕ ಬಿಜೆಪಿ ಗೆಲುವಿನ ನಗೆ ಬೀರಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋಲು ಕಂಡಿದ್ದ ಸುಧಾಕರ್ ಈಗ ಪುಟಿದು ನಿಂತಿದ್ದಾರೆ. ಆ ಮೂಲಕ ಬಿಜೆಪಿಯ ತೆಕ್ಕೆಯಲ್ಲಿಯೇ ಕ್ಷೇತ್ರವನ್ನು ಉಳಿಸಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಬಿ.ಎನ್. ಬಚ್ಚೇಗೌಡ ಅವರು ಗೆಲ್ಲುವ ಮೂಲಕ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಮೊದಲ ಬಾರಿಗೆ ಬಿಜೆಪಿ ಖಾತೆ ತೆರೆದಿತ್ತು. ಬಚ್ಚೇಗೌಡರ ರಾಜಕೀಯ ನಿವೃತ್ತಿ ಕಾರಣದಿಂದ ಡಾ.ಕೆ.ಸುಧಾಕರ್ ಬಿಜೆಪಿಯಿಂದ ಕಣಕ್ಕೆ ಇಳಿದಿದ್ದರು. ಅವರಿಗೆ ಇದು ಮೊದಲ ಲೋಕಸಭಾ ಚುನಾವಣೆಯಾಗಿತ್ತು. ಕಾಂಗ್ರೆಸ್‌ನಿಂದ ರಕ್ಷಾ ರಾಮಯ್ಯ ಪ್ರತಿಸ್ಪರ್ಧಿಯಾಗಿದ್ದರು.

ಡಾ.ಕೆ.ಸುಧಾಕರ್ ಒಟ್ಟು 8,22,619 ಮತಗಳನ್ನು ಪಡೆದರೆ ಕಾಂಗ್ರೆಸ್‌ನ ಎಂ.ಎಸ್. ರಕ್ಷಾ ರಾಮಯ್ಯ 6,59,159 ಮತಗಳನ್ನು ಪಡೆದಿದ್ದಾರೆ. 1,63,460 ಮತಗಳ ಅಂತರದಿಂದ ಸುಧಾಕರ್ ಗೆಲುವು ಸಾಧಿಸಿದ್ದಾರೆ.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಂಟೂ ವಿಧಾನಸಭಾ ಕ್ಷೇತ್ರಗಳ ಪೈಕಿ ದೊಡ್ಡಬಳ್ಳಾಪುರ ಮತ್ತು ಯಲಹಂಕದಲ್ಲಿ ಬಿಜೆಪಿ ಶಾಸಕರು, ದೇವನಹಳ್ಳಿ, ಹೊಸಕೋಟೆ, ಬಾಗೇಪಲ್ಲಿ, ನೆಲಮಂಗಲ, ಚಿಕ್ಕಬಳ್ಳಾಪುರ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಗೌರಿಬಿದನೂರಿನಲ್ಲಿ ಪಕ್ಷೇತರ ಶಾಸಕರು ಇದ್ದಾರೆ. ಪಕ್ಷೇತರ ಶಾಸಕ ಕೆ.ಎಚ್. ಪುಟ್ಟಸ್ವಾಮಿ ಗೌಡ ಕಾಂಗ್ರೆಸ್ ಬೆಂಬಲಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳು, ಶಾಸಕರ ಬಲ ಮತ್ತು ಅಹಿಂದ ಮತಗಳ ಕಾರಣದಿಂದ ಕಾಂಗ್ರೆಸ್ ಈ ಕ್ಷೇತ್ರದಲ್ಲಿ ಗೆಲ್ಲುವ ವಿಶ್ವಾಸವನ್ನು ಹೊಂದಿತ್ತು. ಲೋಕಸಭಾ ಕ್ಷೇತ್ರದ ಇತಿಹಾಸವನ್ನು ನೋಡಿದರೆ ಕಾಂಗ್ರೆಸ್‌ನ ಅಭ್ಯರ್ಥಿಗಳು ಹೆಚ್ಚು ಬಾರಿ ಗೆಲುವು ಸಾಧಿಸಿದ್ದಾರೆ.

ಆದರೆ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಈ ಕ್ಷೇತ್ರದಲ್ಲಿ ಚುನಾವಣೆಯಿಂದ ಚುನಾವಣೆಗೆ ಬಿಜೆಪಿ ಪ್ರಬಲವಾಗುತ್ತಿದೆ. ಕಳೆದ ಮೂರು ಲೋಕಸಭಾ ಚುನಾವಣೆಯಲ್ಲಿ ಕಮಲ ಪಕ್ಷದ ಮತಗಳಿಕೆ ಪ್ರಮಾಣ ಹೆಚ್ಚುತ್ತಲೇ ಇದೆ. ಈ ಕಾರಣದಿಂದ ಚಿಕ್ಕಬಳ್ಳಾಪುರ ಕ್ಷೇತ್ರದ ಕಮಲದ ತೆಕ್ಕೆಗೆ ಮತ್ತೊಮ್ಮೆ ಜಾರುತ್ತದೆ ಎನ್ನುವ ಅಚಲ ವಿಶ್ವಾಸ ಬಿಜೆಪಿಯಲ್ಲಿತ್ತು. ಅದೇ ಪ್ರಕಾರ ಬಿಜೆಪಿ ಮತ್ತೊಮ್ಮೆ ಗೆದ್ದು ಬೀಗಿದೆ.

ಬಾಗೇಪಲ್ಲಿ ಮತ್ತು ಹೊಸಕೋಟೆ ವಿಧಾನಸಭಾ ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದ ಆರು ವಿಧಾನಸಭಾ ಕ್ಷೇತ್ರಗಳಲ್ಲಿಯೂ ಡಾ.ಕೆ. ಸುಧಾಕರ್ ಮುನ್ನಡೆ ಪಡೆದಿದ್ದಾರೆ.

ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಬಲ: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಜೆಡಿಎಸ್‌ಗೆ ಉತ್ತಮವಾದ ನೆಲೆ ಇದೆ. ತನ್ನದೇ ಆದ ಮತ ಬ್ಯಾಂಕ್ ಇದೆ. ಎರಡೂ ಪಕ್ಷಗಳ ನಾಯಕರು ಮತ್ತು ಕಾರ್ಯಕರ್ತರು ಸಂಘಟಿತವಾಗಿ ಗೆಲುವಿಗೆ ಹೋರಾಟ ನಡೆಸಿದರು.

ಸುಧಾಕರ್‌ಗೆ ಟಿಕೆಟ್ ನೀಡಿದ್ದನ್ನು ವಿರೋಧಿಸಿ ಚಿಕ್ಕಬಳ್ಳಾಪುರದ ಮಾಜಿ ಶಾಸಕ ಕೆ.ಪಿ.ಬಚ್ಚೇಗೌಡ ಜೆಡಿಎಸ್ ತೊರೆದರು. ಇದನ್ನು ಹೊರತುಪಡಿಸಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಿಯೂ ಜೆಡಿಎಸ್, ಬಿಜೆಪಿ ನಡುವೆ ಬಿರುಕು ಮೂಡಲಿಲ್ಲ. ಜೆಡಿಎಸ್ ರಾಜ್ಯ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರ ಬಿರುಸಿನ ಪ್ರಚಾರ ಜೆಡಿಎಸ್‌ಗಷ್ಟೇ ಅಲ್ಲ ಬಿಜೆಪಿಗೂ ಹುಮ್ಮಸ್ಸು ಮೂಡಿಸಿತು. ಹೀಗೆ ಜೆಡಿಎಸ್ ಬೆಂಬಲ ಸುಧಾಕರ್ ಅವರ ಗೆಲುವಿಗೆ ಪ್ರಮುಖ ಅಂಶವಾಗಿದೆ.



ಗೆಲುವಿನ ಬಳಿಕ ಕಾರ್ಯಕರ್ತರೊಂದಿಗೆ ಸಂಭ್ರಮಿಸಿದ ಡಾ.ಕೆ.ಸುಧಾಕರ್

ಸುಧಾಕರ್ ಗೆಲುವಿಗೆ ಕಾರಣವಾದ ಅಂಶಗಳು

- ಸುಧಾಕರ್ ಬೆಂಬಲಕ್ಕೆ ನಿಂತ ಪ್ರಬಲ ಒಕ್ಕಲಿಗ ಸಮುದಾಯ
- ಜೆಡಿಎಸ್ ಮತ್ತು ಬಿಜೆಪಿಯ ಮೈತ್ರಿಯ ಬಂಧಗಳು ಗಟ್ಟಿಯಾದುದು. ಎರಡೂ ಪಕ್ಷಗಳ ಕಾರ್ಯಕರ್ತರು ಮತ್ತು ನಾಯಕರ ಸಂಘಟಿತ ಹೋರಾಟ
- ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಉಸ್ತುವಾರಿ ಸಚಿವರಾಗಿ ಕೆಲಸ ಮಾಡಿರುವ ಕಾರಣ ಕ್ಷೇತ್ರದ ನಾಡಿಮಿಡಿತ ಬಲ್ಲವರು
- ಎರಡೂ ಜಿಲ್ಲೆಗಳಲ್ಲಿ ಅವರ ಅವಧಿಯಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳು
- ಚುನಾವಣಾ ತಂತ್ರಗಳನ್ನು ರೂಪಿಸುವಲ್ಲಿ ತೋರಿದ ನಿಪುಣತೆ
- ವಿಧಾನಸಭೆ ಸೋಲಿನ ಅನುಕಂಪ. ಜೆಡಿಎಸ್ ಮತ್ತು ಬಿಜೆಪಿಯ ಎಲ್ಲ ನಾಯಕರನ್ನು ಒಟ್ಟಿಗೆ ಕೊಂಡೊಯ್ದ ಜಾಣ್ಮೆ

ರಕ್ಷಾ ರಾಮಯ್ಯ ಸೋಲಿಗೆ ಕಾರಣವಾದ ಅಂಶಗಳು

- ಚುನಾವಣಾ ಕಾರ್ಯತಂತ್ರ ಉತ್ತಮವಾಗಿ ರೂಪಿಸುವಲ್ಲಿ ವಿಫಲ
- ಎಲ್ಲ ಹಿಂದುಳಿದ ಸಮುದಾಯಗಳನ್ನು ವಿಶ್ವಾಸಕ್ಕೆ ಪಡೆಯುವಲ್ಲಿ ಸೋಲು
- ಅಸಮಾಧಾನಿತರಿಂದ ಒಳ ಏಟು. ಪಕ್ಷದಲ್ಲಿಯೇ ಇದ್ದರೂ 'ಕೈ'ಕೊಟ್ಟ ನಾಯಕರು

'ಸಂಸದ ಸ್ಥಾನ; ಜನರ ಭಿಕ್ಷೆ'

ಚಿಕ್ಕಬಳ್ಳಾಪುರ: ವಿಕಸಿತ ಚಿಕ್ಕಬಳ್ಳಾಪುರ ನಿರ್ಮಾಣದ ಕನಸನ್ನು ನನಸು ಮಾಡಲು ಹಾಗೂ ಕ್ಷೇತ್ರದ ಎಲ್ಲರ ಆಕಾಂಕ್ಷೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಮುಂದಿನ ಐದು ವರ್ಷಗಳ ಕಾಲ ಸಮರ್ಪಣಾ ಮನೋಭಾವದಿಂದ ಶ್ರಮಿಸುತ್ತೇನೆ ಎಂದು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದ ಡಾ.ಕೆ.ಸುಧಾಕರ್ ತಿಳಿಸಿದರು.

ಗೆಲುವಿನ ಕುರಿತು ಸಂತಸ ವ್ಯಕ್ತಪಡಿಸಿರುವ ಅವರು, ನನ್ನನ್ನು ದೊಡ್ಡಮಟ್ಟದಲ್ಲಿ ಆಶೀರ್ವದಿಸಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಜನಸೇವಕನಾಗಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿರುವ ಜನರಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ಪ್ರದೀಪ್ ಮಾತು 'ಕೈ'ಗೆ ದುಬಾರಿ?

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಅಚ್ಚರಿಯ ಅಭ್ಯರ್ಥಿಯಾಗಿ ಡಾ.ಕೆ. ಸುಧಾಕರ್ ವಿರುದ್ಧ ಗೆಲುವು ಸಾಧಿಸಿದ ಶಾಸಕ ಪ್ರದೀಪ್ ಈಶ್ವರ್ ಮಾತುಗಳು ಈ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ದುಬಾರಿಯಾಗಿ ಪರಿಣಮಿಸಿದೆ.

ಅಬ್ಬರದ ಮಾತುಗಳ ಕಾರಣದಿಂದಲೇ ಪ್ರದೀಪ್ ಈಶ್ವರ್ ಗಮನ ಸೆಳೆಯುತ್ತಿದ್ದಾರೆ. ಅವರ ಈ ಮಾತುಗಳು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ತಂದುಕೊಡುವುದಕ್ಕಿಂತ ಪೆಟ್ಟು ನೀಡಿದೆ ಎನ್ನುವ ಮಾತುಗಳು ಕಾಂಗ್ರೆಸ್ ವಲಯದಲ್ಲಿಯೇ ಕೇಳಿ ಬರುತ್ತಿವೆ.

ಚುನಾವಣೆಯ ಸಮಯದಲ್ಲಿ ಸೈದ್ಧಾಂತಿಕ ಟೀಕೆಗಳ ಬದಲು ಪ್ರದೀಪ್ ಈಶ್ವರ್, ಸುಧಾಕರ್ ವಿರುದ್ಧ ವ್ಯಕ್ತಿ ನಿಂದನೆಯ ಟೀಕೆಯಲ್ಲಿಯೇ ಅಬ್ಬರಿಸಿದರು. ಇದು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಪ್ರಬಲ ಒಕ್ಕಲಿಗ ಸಮುದಾಯದ ಮತಗಳ ಧ್ರುವೀಕರಣಕ್ಕೆ ಪ್ರಮುಖವಾಗಿ ಕಾರಣವಾಯಿತು ಎನ್ನುವ ಚರ್ಚೆ ಈಗ ಜೋರಾಗಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಡಾ.ಕೆ.ಸುಧಾಕರ್ ಮೇಲಿನ ಸಿಟ್ಟಿಗೆ ಕಾಂಗ್ರೆಸ್ ಬೆಂಬಲಿಸಿದ್ದ ಚಿಕ್ಕಬಳ್ಳಾಪುರ ಕ್ಷೇತ್ರದ ಒಕ್ಕಲಿಗರಲ್ಲಿ ಪ್ರದೀಪ್ ಮಾತುಗಳು ಅಸಮಾಧಾನಕ್ಕೆ ಕಾರಣವಾಯಿತು. ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರವಷ್ಟೇ ಅಲ್ಲ ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ಸೇರಿದಂತೆ ಒಕ್ಕಲಿಗ ಮತದಾರರು ಗಣನೀಯವಾಗಿರುವ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರದೀಪ್ ಈಶ್ವರ್, ಸುಧಾಕರ್‌ಗೆ ಸವಾಲು ಹಾಕಿದ ವಿಡಿಯೊಗಳು ಜೋರಾಗಿಯೇ ಹರಿದಾಡಿದವು.

ಒಕ್ಕಲಿಗ ಸಮುದಾಯದ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಪ್ರದೀಪ್ ಮಾತುಗಳ ಬಗ್ಗೆ ಆಕ್ರೋಶ ಸಹ ವ್ಯಕ್ತವಾಯಿತು. 'ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಸುಧಾಕರ್ ಒಂದು ಮತ ಹೆಚ್ಚಿಗೆ ಪಡೆಯಲಿ', 'ಸುಧಾಕರ್ ಅವರನ್ನು ಪಾರ್ಲಿಮೆಂಟ್ ಮೆಟ್ಟಿಲು ಹತ್ತಲು ಬಿಡುವುದಿಲ್ಲ' ಎನ್ನುವ ಸವಾಲು ಸಮುದಾಯದ ಒಗ್ಗಟ್ಟಿಗೆ ಮತ್ತಷ್ಟು ಕಾರಣವಾಯಿತು.

ಪ್ರದೀಪ್ ಈಶ್ವರ್, ಸುಧಾಕರ್ ವಿರುದ್ಧ ಮಾತನಾಡಿದ್ದ ವಿಡಿಯೊಗಳನ್ನು ಒಕ್ಕಲಿಗ ಸಮುದಾಯದ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡಿದವು.

'ಸುಧಾಕರ್ ಒಂದು ಮತ ಹೆಚ್ಚು ಪಡೆಯಲಿ ಎನ್ನುವ ಸವಾಲು, ಒಕ್ಕಲಿಗ ಸಮುದಾಯ ಒಂದು ಮತ ಹೆಚ್ಚು ಪಡೆಯಲಿ ಎನ್ನುವ ರೀತಿ ಸಮುದಾಯದಲ್ಲಿ ಹರಡಿತು. ಚಿಕ್ಕಬಳ್ಳಾಪುರವಷ್ಟೇ ಅಲ್ಲ ಇಡೀ ಲೋಕಸಭಾ ಕ್ಷೇತ್ರದಲ್ಲಿನ ಸಾಮಾನ್ಯ ಒಕ್ಕಲಿಗ ಮತದಾರರಲ್ಲಿ ಇದು ಪ್ರವಹಿಸಿತು. ಪ್ರತಿಷ್ಠೆಯಾಗಿ ಸಮುದಾಯ ಪರಿಗಣಿಸಿತು' ಎಂದು ಕಾಂಗ್ರೆಸ್‌ನ ಒಕ್ಕಲಿಗ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಮಾಧುಸ್ವಾಮಿ ನೀಚ ಬುದ್ಧಿ ಬಿಡಲಿ: ಸೋಮಣ್ಣ

ಪ್ರಜಾವಾಣಿ ವಾರ್ತೆ



ವಿ.ಸೋಮಣ್ಣ

ತುಮಕೂರು: 'ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಇನ್ನು ಮುಂದಾದರೂ ನೀಚ ಬುದ್ಧಿ ಬಿಡಲಿ' ಎಂದು ನೂತನ ಸಂಸದ ವಿ.ಸೋಮಣ್ಣ ಹೇಳಿದ್ದಾರೆ.

ಲೋಕಸಭೆ ಚುನಾವಣೆ ಫಲಿತಾಂಶದ ನಂತರ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಲೋಕಸಭೆ ಟಿಕೆಟ್ ಘೋಷಣೆಯಾದ ನಂತರ ಅವರನ್ನು ಭೇಟಿಯಾಗಿ ಸುಮಾರು ಎರಡು ತಾಸು ಚರ್ಚಿಸಿದೆ. ತಾತ್ಸಾರದಿಂದಲೇ ಕಂಡರು. ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ. ಇನ್ನು ಮುಂದಾದರೂ ತಿದ್ದಿಕೊಂಡು ನಡೆಯಲಿ' ಎಂದರು.

'ಗೋವಿಂದರಾಜ ನಗರದಲ್ಲಿ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ನನ್ನ ಕೆಲಸ ನೋಡಿ ಜಿಲ್ಲೆಯ ಮತದಾರರು ಸೇವೆ ಮಾಡಲು ಅವಕಾಶ ಕೊಟ್ಟಿದ್ದಾರೆ. ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುತ್ತೇನೆ. ವಿಧಾನಸಭಾ ಚುನಾವಣೆಯಲ್ಲಿ ಎರಡೂ ಕಡೆ ಸೋತರೂ ಮತ್ತೊಮ್ಮೆ ಸ್ಪರ್ಧಿಸಲು ಹೈಕಮಾಂಡ್ ನಾಯಕರು ಅವಕಾಶ ಕಲ್ಪಿಸಿದರು' ಎಂದು ಹೇಳಿದರು.

'ಹೊರಗಿನ ಅಭ್ಯರ್ಥಿ ಎಂದು ಪದೇ ಪದೇ ಹೇಳುವ ಮೂಲಕ ನನ್ನನ್ನು ಎಚ್ಚರಿಸುವ ಕೆಲಸ ಮಾಡಿದರು. ಇದನ್ನೇ ಎಚ್ಚರಿಕೆಯ ಗಂಟೆ ಎಂದು ಪರಿಗಣಿಸಿ ಎಲ್ಲೆಡೆ ಪ್ರಚಾರ ಮಾಡಲಾಯಿತು' ಎಂದರು.

'ಗೌಡರಿಂದ ನನ್ನ ಗೆಲುವು'

'ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ಜೆಡಿಎಸ್ ವರಿಷ್ಠ ದೇವೇಗೌಡ ಅವರಿಂದ ನನ್ನ ಈ ಗೆಲವು ಸಾಧ್ಯವಾಗಿದೆ. ಮಾಜಿ ಸಂಸದ ಜಿ.ಎಸ್. ಬಸವರಾಜು ಮಾರ್ಗದರ್ಶನ ಕೈ ಹಿಡಿಯಿತು' ಎಂದು ಸೋಮಣ್ಣ ಪ್ರತಿಕ್ರಿಯಿಸಿದ್ದಾರೆ.

'ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಕೇಂದ್ರದ ಮಂತ್ರಿಯಾಗಲಿ ಎಂಬುವುದು ನನ್ನ ಬಯಕೆ' ಎಂದು ಅವರು ಹೇಳಿದರು.

'ಒತ್ತಡ ಹೇರಿ ಕ್ಷೇತ್ರದ ಕೆಲಸ'

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ನಿರೀಕ್ಷೆಯಂತೆ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದೇವೆ. ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ 1,01,183 ಹಾಗೂ ಕಾಂಗ್ರೆಸ್ 68,597 ಮತಗಳನ್ನು ಪಡೆದಿದ್ದು ಬಿಜೆಪಿಗೆ 32,590 ಮತಗಳ ಮುನ್ನಡೆ ಬಂದಿದೆ.

ಬಿಜೆಪಿ ಜೆಡಿಎಸ್ ಮೈತ್ರಿ ಕಾರ್ಯಕರ್ತರ ಶ್ರಮದ ಫಲವಾಗಿ ಬಹುತೇಕ ಎಲ್ಲ ಬೂತ್‌ಗಳಲ್ಲೂ ಬಿಜೆಪಿ ಹೆಚ್ಚಿನ ಮತಗಳನ್ನು ಪಡೆದಿದೆ ಎಂದು ಬಿಜೆಪಿ ಅಧ್ಯಕ್ಷ ಜಗದೀಶ್ ಚೌಧರಿ ತಿಳಿಸಿದರು.

ತಾಲ್ಲೂಕು ಕಚೇರಿ ಎದುರು ಜಮಾಯಿಸಿದ ಬಿಜೆಪಿ ಜೆಡಿಎಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದ ಬಳಿಕ ಅವರು ಮಾತನಾಡಿದರು.

ಕೆ.ಸುಧಾಕರ್ ಅವರು ನೀಡಿದ ಭರವಸೆಗಳನ್ನು ಈಡೇರಿಸಲು ಅವರ ಮೇಲೆ ಒತ್ತಡ ಹೇರುತ್ತೇವೆ. ನೆಲಮಂಗಲ ಕ್ಷೇತ್ರದ ಅಭಿವೃದ್ಧಿಗೆ ಕ್ರಮ ವಹಿಸುತ್ತೇವೆ ಎಂದರು.

ಬಿಜೆಪಿ ಜಿಲ್ಲಾ ಅಧ್ಯಕ್ಷ ರಾಮಕೃಷ್ಣಪ್ಪ, ಮಾಜಿ ಶಾಸಕರಾದ ಎಂ.ವಿ.ನಾಗರಾಜು, ಕೆ.ಶ್ರೀನಿವಾಸ್, ಮುಖಂಡರಾದ ಸಪ್ತಗಿರಿ ಶಂಕರ್‌ನಾಯಕ್, ಭವಾನಿ ಶಂಕರ್ ಬೈರೇಗೌಡ, ಜೆಡಿಎಸ್ ಅಧ್ಯಕ್ಷ ಟಿ.ತಿಮ್ಮರಾಯಪ್ಪ ಹಾಜರಿದ್ದರು.

'ಉತ್ತರ'ದಲ್ಲಿ ಮತ್ತೆ ಅರಳಿದ 'ಕಮಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉತ್ತರ' ಕ್ಷೇತ್ರದಲ್ಲಿ ಮತ್ತೆ 'ಕಮಲ' ಅರಳಿದೆ. 2019ರ ಚುನಾವಣೆಯಲ್ಲಿ ಉಡುಪಿ–ಚಿಕ್ಕಮಗಳೂರು ಕ್ಷೇತ್ರದಿಂದ ಗೆದ್ದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಈ ಬಾರಿ ಇಲ್ಲಿ ಗೆಲುವಿನ ನಗು ಬೀರಿದ್ದಾರೆ. ಬಿಜೆಪಿಯ ಈ ಭದ್ರಕೋಟೆಯನ್ನು ಛಿದ್ರ ಮಾಡಬೇಕೆಂದು ಹೊರಟಿದ್ದ ಕಾಂಗ್ರೆಸ್‌ನ ಎಂ.ವಿ. ರಾಜೀವ್ ಗೌಡ ಅವರ ಶತಾಯ ಗತಾಯ ಪ್ರಯತ್ನಕ್ಕೆ ಸೋಲಾಗಿದೆ.

ಉಡುಪಿ– ಚಿಕ್ಕಮಗಳೂರು ಕ್ಷೇತ್ರದಲ್ಲಿ ಶೋಭಾ ಅವರ ವಿರುದ್ಧ ಕೆಲವರು 'ಗೋ ಬ್ಯಾಕ್' ಎಂದಿದ್ದರು. ಹೀಗಾಗಿ, ಹಾಲಿ ಸಂಸದ ಡಿ.ವಿ. ಸದಾನಂದ ಗೌಡರಿಗೆ ಟಿಕೆಟ್ ನಿರಾಕರಿಸಿದ ಬಿಜೆಪಿ, ಶೋಭಾ ಅವರನ್ನು ಈ ಕ್ಷೇತ್ರದಿಂದ ಕಣಕ್ಕಿಳಿಸಿತ್ತು. ಆರಂಭದಲ್ಲಿ ಇಲ್ಲಿಯೂ ಶೋಭಾ ಅವರಿಗೆ ಕಾರ್ಯಕರ್ತರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಈ ಬಾರಿಯೂ ಕ್ಷೇತ್ರದ ಹೊರಗಿನವರಿಗೆ ಟಿಕೆಟ್ ನೀಡಿದ್ದಾರೆ ಎಂದು ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಅಸಮಾಧಾನ ವ್ಯಕ್ತಪಡಿಸಿದ್ದರು. ಈ ವಿರೋಧದ ನಡುವೆಯು ಶೋಭಾ ಅವರು ಗೆದ್ದು ಬೀಗಿದ್ದಾರೆ.

ಮೋದಿ ಅಲೆ, ಬಿಜೆಪಿಯ ಸಾಂಪದಾಯಿಕ ಮತಗಳು ಶೋಭಾ ಅವರನ್ನು ಗೆಲುವಿನ ದಡ ಸೇರಿಸಿದೆ. ಪಂಚ 'ಗ್ಯಾರಂಟಿ'ಗಳು ಕೈ ಹಿಡಿಯುವ ಜೊತೆಗೆ, ರಾಜೀವ್ ಗೌಡರ 'ಪ್ರೊಫೆಸರ್' ಹಿನ್ನೆಲೆ ಕೈ ಹಿಡಿಯಬಹುದೆಂಬ ಕಾಂಗ್ರೆಸ್ ನಾಯಕ ನಿರೀಕ್ಷೆ ಹುಸಿಯಾಗಿದೆ. 'ಕೈ' ನಾಯಕರ ಅಬ್ಬರದ ಪ್ರಚಾರ ಫಲ ಕೊಟ್ಟಿಲ್ಲ.

ಹೊರಗಿನಿಂದ ಬಂದ ಸದಾನಂದ ಗೌಡರನ್ನು 2014 ಮತ್ತು 2019ರಲ್ಲಿ ಈ ಕ್ಷೇತ್ರದ ಜನ ಗೆಲ್ಲಿಸಿದ್ದರು. ಅದಕ್ಕೂ ಮೊದಲು, 2009ರಲ್ಲಿ ಬಿಜೆಪಿಯ ಡಿ.ಬಿ. ಚಂದ್ರೇಗೌಡ ಈ ಕ್ಷೇತ್ರವನ್ನು ಲೋಕಸಭೆಯಲ್ಲಿ ಪ್ರತಿನಿಧಿಸಿದ್ದರು. ಕಾಂಗ್ರೆಸ್ ಮುಖಂಡ ಮತ್ತು ಮಾಜಿ ಕೇಂದ್ರ ಸಚಿವ ದಿವಂಗತ ಸಿ.ಕೆ. ಜಾಫರ್ ಷರೀಫ್ ಇಲ್ಲಿಂದ ಅತಿ ಹೆಚ್ಚು ಬಾರಿ ಸಂಸದರಾಗಿ ಆಯ್ಕೆಯಾಗಿದ್ದಾರೆ.

ಉತ್ತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆ.ಆರ್. ಪುರ, ಬ್ಯಾಟರಾಯನಪುರ, ಯಶವಂತಪುರ, ದಾಸರಹಳ್ಳಿ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರಂ, ಹೆಬ್ಬಾಳ ಮತ್ತು ಪುಲಕೇಶಿನಗರ ವಿಧಾನಸಭಾ ಕ್ಷೇತ್ರಗಳಿವೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಹೆಬ್ಬಾಳ, ಪುಲಕೇಶಿನಗರ ಮತ್ತು ಬ್ಯಾಟರಾಯನ ಪುರ ಕ್ಷೇತ್ರಗಳನ್ನು ಕಾಂಗ್ರೆಸ್ ಗೆದ್ದಿತ್ತು. ಉಳಿದವು ಬಿಜೆಪಿ ಪಾಲಾಗಿದ್ದವು. ಆದರೆ, ಲೋಕಸಭೆ ಚುನಾವಣೆಯಲ್ಲಿ ಹೆಬ್ಬಾಳ ಮತ್ತು ಪುಲಕೇಶಿನಗರದಲ್ಲಿ ಮಾತ್ರ ಕಾಂಗ್ರೆಸ್ (ರಾಜೀವ್ ಗೌಡ) ಮುನ್ನಡೆ ಸಾಧಿಸಿದ್ದಾರೆ. ಉಳಿದ ಎಲ್ಲ ಕಡೆಗಳಲ್ಲಿ ಶೋಭಾ ಅವರು ಮುನ್ನಡೆ ಪಡೆದಿದ್ದು, ಅದರಲ್ಲೂ ಯಶವಂತಪುರ ಕ್ಷೇತ್ರದಲ್ಲಿ ಅವರಿಗೆ ಭಾರಿ ಪ್ರಮಾಣದ ಮತ ಸಿಕ್ಕಿದೆ.

ಗೊಂದಲ, ಗದ್ದಲಗಳಿಲ್ಲದೇ ಸುಸೂತ್ರವಾಗಿ ನಡೆದ ಮತ ಎಣಿಕೆ ಕಾರ್ಯ

ಉತ್ತರದಲ್ಲಿ ಆರಂಭದಿಂದಲೇ ಬಿಜೆಪಿಗೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಲ್ಯರಸ್ತೆಯ ಸೇಂಟ್ ಜೋಸೆಫ್ ಪಿಯು ಕಾಲೇಜಿನ ಕೊಠಡಿಗಳಲ್ಲಿ ಮಂಗಳವಾರ ಬೆಳಿಗ್ಗೆ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಮತ ಎಣಿಕೆ ಕಾರ್ಯ ನಡೆಯಿತು.

ಬೆಳಿಗ್ಗೆ 8ಕ್ಕೆ ಮತ ಎಣಿಕೆ ಕಾರ್ಯ ಆರಂಭವಾಯಿತು. ಹಲವು ಸುತ್ತುಗಳ ಎಣಿಕೆ ನಡೆಯಿತು. ಆರಂಭದಿಂದ ಮುನ್ನಡೆ ಸಾಧಿಸಿದ್ದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಕೊನೆಯವರೆಗೂ ಅದನ್ನು ಬಿಟ್ಟುಕೊಡದೇ 2,59,476 ಮತಗಳ ಭಾರಿ ಅಂತರದಿಂದ ಜಯದ ನಗೆ ಬೀರಿದರು. ಶೋಭಾ ಕರಂದ್ಲಾಜೆ 9,82,805 ಮತಗಳನ್ನು ಪಡೆದರೆ, ರಾಜೀವ್ ಗೌಡ 7,25,190 ಮತ ಗಳಿಸಿದರು. 13,554 ನೋಟಾಕ್ಕೆ ಚಲಾವಣೆಯಾಗಿದ್ದು, ನೋಟಾ ಮೂರನೇ ಸ್ಥಾನ ಪಡೆಯಿತು.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಂಟು ವಿಧಾನಸಭೆ ಕ್ಷೇತ್ರಗಳ ಮತ ಎಣಿಕೆಗಾಗಿ ಕಾಲೇಜಿನ ಒಂದೊಂದು ಕೊಠಡಿಯಲ್ಲಿ 14 ಟೇಬಲ್‌ಗಳನ್ನು ಜೋಡಿಸಲಾಗಿತ್ತು. ಮೊದಲು 6,263 ಅಂಚೆ ಮತಗಳ ಎಣಿಕೆ ನಡೆಯಿತು. ಯಾವುದೇ ಗೊಂದಲ, ಗದ್ದಲಗಳಿಲ್ಲದೇ 34 ಸುತ್ತುಗಳಲ್ಲಿ ಎಣಿಕೆ ಕಾರ್ಯ ಸುಸೂತ್ರವಾಗಿ ನಡೆಯಿತು.

ಬೆಳಿಗ್ಗೆ ಮತ ಎಣಿಕೆ ಆರಂಭವಾಗುವ ಮೊದಲೇ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ ಕೇಂದ್ರಕ್ಕೆ ಬಂದರು. ಬೆಳಿಗ್ಗೆ 10 ಗಂಟೆಯವರೆಗೆ ಕೇಂದ್ರದಲ್ಲಿದ್ದ ಅವರು, ಬಿಜೆಪಿಯ ಅಭ್ಯರ್ಥಿ ಪ್ರತಿ ಸುತ್ತಿನಲ್ಲಿ ಮುನ್ನಡೆ ಸಾಧಿಸುತ್ತಿರುವುದನ್ನು ಕಂಡು ಹೊರಟು ಹೋದರು. ಮಧ್ಯಾಹ್ನ 3.20ರ ಹೊತ್ತಿಗೆ ಮತ್ತೆ ಮಾಧ್ಯಮ ಕೇಂದ್ರಕ್ಕೆ ರಾಜೀವ್ ಗೌಡ ಆಗಮಿಸಿದರು. 'ನಮ್ಮ ಕ್ಷೇತ್ರದ ಫಲಿತಾಂಶ ನಿರಾಸೆ ತಂದಿದೆ. ಆದರೆ, ಇಂಡಿಯಾ ಒಕ್ಕೂಟದ ಸಾಧನೆ ಚೆನ್ನಾಗಿದೆ' ಎಂದು ಸಮಾಧಾನಪಟ್ಟರು.

ಸ್ಪಷ್ಟ ಫಲಿತಾಂಶ ಬಂದ ಬಳಿಕ ಬಿಜೆಪಿಯ ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರು ಕಾರ್ಯಕರ್ತರೊಂದಿಗೆ ಮಧ್ಯಾಹ್ನ 3.45ಕ್ಕೆ ಮತ ಎಣಿಕೆ ಕೇಂದ್ರಕ್ಕೆ ಆಗಮಿಸಿದರು. ಮಾಧ್ಯಮ ಕೇಂದ್ರಕ್ಕೆ ಬಂದು ಸಂಭ್ರಮ ಹಂಚಿಕೊಂಡರು.

'ಸರಳ ಬಹುಮತಕ್ಕೆ ಬೇಕಿರುವ ಸ್ಥಾನಗಳಿಗಿಂತ ಅಧಿಕ ಸ್ಥಾನಗಳನ್ನು ಎನ್‌ಡಿಎ ಪಡೆದಿದೆ. ನರೇಂದ್ರ ಮೋದಿ ನೇತೃತ್ವದಲ್ಲಿ ಮೂರನೇ ಬಾರಿಗೆ ಸರ್ಕಾರ ರಚನೆಯಾಗಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಮತ ಎಣಿಕೆಯ ಸುತ್ತುಗಳು ಮುಗಿದಂತೆ ಬಿಜೆಪಿ ಮುನ್ನಡೆ ಗಳಿಸುತ್ತಾ ಹೋದರೂ ಮತ ಎಣಿಕೆ ಕೇಂದ್ರದ ಸುತ್ತಮುತ್ತ ಸಂಭ್ರಮ ಕಾಣಿಸಲಿಲ್ಲ. ಕೇಂದ್ರಕ್ಕೆ ಅಭ್ಯರ್ಥಿ ಬಂದ ಬಳಿಕವಷ್ಟೇ ಕಾರ್ಯಕರ್ತರು ಸಂಭ್ರಮಪಟ್ಟರು.



ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಜಯಗಳಿಸಿದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರು ವಿಜಯದ ಸಂಕೇತ ತೋರಿಸಿ ಕಾರ್ಯಕರ್ತರೊಂದಿಗೆ ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ರಸ್ತೆಗಳಲ್ಲಿ ಪೋಷಣೆ, ಅರಣ್ಯ ಇಲಾಖೆ, ಬಿಬಿಎಂಪಿ, ಬಿಡಿಎ ನರ್ಸರಿಗಳಲ್ಲೂ ಸಾವಿರಾರು ಗಿಡ

ಆರೋಗ್ಯಕ್ಕೆ ಮಾರಕವಾದ 'ದುಬೈ ಗಿಡ'

• ಆರ್. ಮಂಜುನಾಥ್

ಬೆಂಗಳೂರು: ಮಳೆ ಪರಿಸರವನ್ನು ಹಾಳು ಮಾಡುವ, ನಾಗರಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ, ಯುಎಇ ಹಾಗೂ ದೇಶದ ಎರಡು ರಾಜ್ಯಗಳಲ್ಲಿ ನಿಷೇಧವಾಗಿರುವ ಕೊನೊಕಾರ್ಪಸ್ (Conocarpus) ಗಿಡ ನಗರದಲ್ಲೆಡೆ ಹರಡಿಕೊಳ್ಳುತ್ತಿದೆ.

ಮಾನವನ ಆರೋಗ್ಯಕ್ಕೆ ಮಾರಕ ಹಾಗೂ ಈ ಗಿಡಗಳು ಹೆಚ್ಚಾಗುವ ಪ್ರದೇಶದಲ್ಲಿ ಮಳೆ ಕಡಿಮೆಯಾಗಿ ಬರದ ಪರಿಸ್ಥಿತಿ ಉಂಟಾಗುತ್ತದೆ ಎಂದು ಗುಜರಾತ್, ತೆಲಂಗಾಣ ರಾಜ್ಯದಲ್ಲಿ 2023ರಲ್ಲಿ ಕೊನೊಕಾರ್ಪಸ್ ಗಿಡವನ್ನು ನಿಷೇಧಿಸಲಾಗಿದೆ. ಗುಜರಾತ್‌ನಲ್ಲಿ ಈ ಗಿಡ–ಮರಗಳನ್ನು ಬುಡಸಹಿತ ತೆರವುಗೊಳಿಸಿ, ಸುಟ್ಟುಹಾಕಲಾಗಿದೆ.

'ದುಬೈಗಿಡ'ಎಂದೂ ಕರೆಯಲಾಗುವ ಹಾನಿಕಾರ ಕೊನೊಕಾರ್ಪಸ್ ಗಿಡವನ್ನು ಅರಣ್ಯ ಇಲಾಖೆ, ಬಿಬಿಎಂಪಿ, ಬಿಡಿಎ ನಗರದ ಬಹುತೇಕ ಪ್ರದೇಶಗಳಲ್ಲಿ ನೆಟ್ಟಿದೆ ಹಾಗೂ ನೆಡುತ್ತಿದೆ. ನಗರದ ಪ್ರಮುಖ ಮುಖ್ಯರಸ್ತೆ, ಹೊರವರ್ತುಲ ರಸ್ತೆಗಳು, ಕೇಂದ್ರ ಭಾಗ ರಸ್ತೆಗಳ ಮಧ್ಯಭಾಗದಲ್ಲಿ ನೂರಾರು ಸಂಖ್ಯೆಯಲ್ಲಿ ಬಿಬಿಎಂಪಿ ಹಾಗೂ ಬಿಡಿಎ ಕೊನೊಕಾರ್ಪಸ್ ಗಿಡವನ್ನು ಬೆಳೆಸುತ್ತಿದೆ. ಬಿಬಿಎಂಪಿ ತನ್ನ ಉದ್ಯಾನಗಳಲ್ಲೂ ಕೊನೊಕಾರ್ಪಸ್ ಅನ್ನು ಹೆಚ್ಚಾಗಿ ನೆಟ್ಟಿದೆ.

ಬಿಡಿಎ, ಬಿಬಿಎಂಪಿ ಹಾಗೂ ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಸಾವಿರಾರು ಸಸಿಗಳನ್ನೂ ಬೆಳಸಲಾಗುತ್ತಿದೆ. ಅತಿವೇಗದಲ್ಲಿ ಬೆಳೆಯುವ ಕೊನೊಕಾರ್ಪಸ್‌ಗೆ ಹೆಚ್ಚಿನ ಆರೈಕೆ ಬೇಕಾಗುವುದಿಲ್ಲ. ಬದಲಿಗೆ ಬೇಗ ಹಸಿರು ಹರಡಿಕೊಂಡು, ಬೇರೂರುತ್ತದೆ. ಈ ಕಾರಣದಿಂದ ಸರ್ಕಾರಿ ಇಲಾಖೆಗಳು ಈ ಗಿಡವನ್ನು ಹೆಚ್ಚು ನೆಡುತ್ತಿದ್ದಾರೆ. ಹೆಚ್ಚು ಹಸಿರನ್ನು ತೋರಿಸುವ ಉದ್ದೇಶದಿಂದ ನಾಗರಿಕರು, ಪರಿಸರಕ್ಕೆ ಮಾರಕವಾಗಿರುವ ಗಿಡಗಳನ್ನು ಅಧಿಕಾರಿಗಳು ಪೋಷಿಸುತ್ತಿದ್ದಾರೆ.

'ಕೊನೊಕಾರ್ಪಸ್ ಗಿಡದ ದುಷ್ಪರಿಣಾಮದ ಬಗ್ಗೆ ಹೆಚ್ಚಿನ ಮಾಹಿತಿ ಇರಲಿಲ್ಲ. ವೇಗವಾಗಿ ಬೆಳೆಯುತ್ತದೆ ಎಂದು ನೆಟ್ಟಿದ್ದೇವೆ. ನರ್ಸರಿಗಳಲ್ಲೂ ಗಿಡಗಳು ಇವೆ. ಇದು ಅಂತರ್ಜಲವನ್ನು ಹೆಚ್ಚು ಹೀರಿಕೊಳ್ಳುತ್ತದೆ ಹಾಗೂ ಉಸಿರಾಟದ ಮೇಲೆ ಪರಿಣಾಮ ಬೀಳುತ್ತದೆ ಎಂದು ಇತ್ತೀಚೆಗೆ ತಜ್ಞರು ನಮ್ಮ ಗಮನಕ್ಕೆ ತಂದಿದ್ದಾರೆ. ಇದರ ಬೀಜಗಳು ಹೆಚ್ಚಾಗಿದ್ದು, ಅದರಿಂದಲೇ ಗಿಡಗಳು ಹುಟ್ಟಿಕೊಳ್ಳುತ್ತವೆ. ಇದು ಮಾರಕ ಎಂಬುದು ನಮಗೆ ಇದೀಗ ಅರಿವಾಗಿದೆ. ಈ ಗಿಡಗಳನ್ನು ನಿಷೇಧಿಸುವ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಅರಣ್ಯ ಇಲಾಖೆ ಉನ್ನತ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು' ಎಂದು ಬಿಬಿಎಂಪಿ ಹಾಗೂ ಬಿಡಿಎ ಅಧಿಕಾರಿಗಳು ತಿಳಿಸಿದರು.



ಕೆಂಗೇರಿ ಮುಖ್ಯರಸ್ತೆಯ ಮಧ್ಯಭಾಗದಲ್ಲಿ ನೆಡಲಾಗಿರುವ ಕೊನೊಕಾರ್ಪಸ್ ಗಿಡಗಳು

ದುಷ್ಪರಿಣಾಮವೇನು?

ಕೊನೊಕಾರ್ಪಸ್ ಗಿಡ– ಮರ ಅತಿಹೆಚ್ಚು ಇಂಗಾಲದ ಜೊತೆಗೆ ಮಾನವನ ದೇಹ ಮೇಲೆ ದುಷ್ಪರಿಣಾಮ ಬೀರುವ ಮಾರಕ ಆಮ್ಲವನ್ನು ಹೊರಸೂಸುವುದರಿಂದ ಉಸಿರಾಟದ ತೊಂದರೆ ಉಂಟಾಗುತ್ತದೆ. ನೆಗಡಿ, ಕೆಮ್ಮು, ಆಸ್ತಮಾ ಸೇರಿದಂತೆ ಅಲರ್ಜಿಯಂತಹ ಕಾಯಿಲೆಗಳು ಉದ್ಭವಿಸುತ್ತದೆ. ಸ್ಥಳೀಯ ಕೀಟ, ಪಕ್ಷಿ ಹಾಗೂ ಪ್ರಾಣಿಗಳ ಆರೋಗ್ಯಕ್ಕೂ ಹಾನಿಕಾರಕ. ಚಳಿಗಾಲದಲ್ಲಿ ಈ ಗಿಡ–ಮರದಿಂದ ಹೆಚ್ಚು ದುಷ್ಪರಿಣಾಮವಾಗುತ್ತದೆ. ಅತಿಹೆಚ್ಚು ಬೇರು ಬಿಡುವುದರಿಂದ ನೆಲದಡಿಯಲ್ಲಿರುವ ಕೇಬಲ್ ಹಾಗೂ ಕೊಳವೆ ಮಾರ್ಗಗಳಿಗೂ ಅಧಿಕ ಹಾನಿಯಾಗುತ್ತದೆ.

'ಪರಿಸರ ದಿನವೆಂದು ನೆಡಬೇಡಿ'



ಕೊನೊಕಾರ್ಪಸ್ ಗಿಡ

'ಬಿಬಿಎಂಪಿ, ಅರಣ್ಯ ಇಲಾಖೆಗಳ ನರ್ಸರಿಯಲ್ಲಿ ಅಧಿಕ ಸಂಖ್ಯೆಯಲ್ಲಿರುವ ಮಾರಕ ಕೊನೊಕಾರ್ಪಸ್ ಗಿಡಗಳನ್ನು ಪರಿಸರ ದಿನದ ಸಂದರ್ಭದಲ್ಲಿ ಸಂಘ–ಸಂಸ್ಥೆಗಳು, ನಾಗರಿಕರು ನೆಡಬಾರದು. ಸ್ಥಳೀಯ ಗಿಡಗಳಿಗೆ ಮಾತ್ರ ಆದ್ಯತೆ ನೀಡಬೇಕು. ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊನೊಕಾರ್ಪಸ್ ಗಿಡಗಳನ್ನು ನೆಡುತ್ತಿರುವ ಬಗ್ಗೆ ಅರಣ್ಯ ವಿಭಾಗದ ಅಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಈ ಗಿಡಗಳಿಂದಾಗುವ ಮಾರಕಗಳನ್ನು ಅವರಿಗೆ ವಿವರಿಸಲಾಗಿದ್ದು, ಅದನ್ನು ನಿಷೇಧಿಸುವ ಕುರಿತಂತೆ ಕ್ರಮ ಕೈಗೊಳ್ಳಲು ಮನವಿ ಮಾಡಿಕೊಳ್ಳಲಾಗಿದೆ. ನೆಟ್ಟಿರುವ ಗಿಡಗಳನ್ನು ತೆಗೆಯಬೇಕು. ಅದಕ್ಕೆ ಮುನ್ನ ಇನ್ನು ಮುಂದೆ ಈ ಗಿಡಗಳನ್ನು ನೆಡದಂತೆ ನೋಡಿಕೊಳ್ಳಬೇಕು' ಎಂದು 'ಟ್ರೀ ಡಾಕ್ಟರ್' ವಿಜಯ್ ನಿಶಾಂತ್ ಹೇಳಿದರು.

'ತೆರವುಗೊಳಿಸಿ...'

'ಆರೋಗ್ಯದ ಮೇಲೆ ಪರಿಣಾಮ ಬೀರುವ ಹಾಗೂ ನೈಸರ್ಗಿಕವಾಗಿ ಕೀಟ–ಪಕ್ಷಿಗಳಿಗೆ ಮಾರಕವಾಗಿರುವ ಇತರೆಡೆ ನಿಷೇಧವಾಗಿರುವ ಕೊನೊಕಾರ್ಪಸ್ ಗಿಡವನ್ನು ಬೆಳೆಸಬಾರದು. ನೆಟ್ಟು, ಬೆಳೆಯಲಾಗುತ್ತಿರುವ ಮರ–ಗಿಡಗಳನ್ನು ತೆರವುಗೊಳಿಸಲೂ ಕ್ರಮ ಕೈಗೊಳ್ಳಬೇಕು' ಎಂದು ಸಸ್ಯ ತಜ್ಞ ಎನ್.ಎಂ. ಗಣೇಶ್ ಬಾಬು ಆಗ್ರಹಿಸಿದರು.

'ಕ್ರಮ ಕೈಗೊಳ್ಳುತ್ತೇವೆ...'

'ಕೊನೊಕಾರ್ಪಸ್ ಗಿಡಗಳ ದುಷ್ಪರಿಣಾಮ ಬಗ್ಗೆ ತಜ್ಞರು ನಮ್ಮ ಗಮನಕ್ಕೆ ತಂದಿದ್ದಾರೆ. ಗಿಡ ಹೆಚ್ಚು ಹಸಿರಾಗಿದೆ ಎಂದು ರಸ್ತೆಗಳ ಮಧ್ಯಭಾಗದಲ್ಲಿ ಬೆಳೆಸಲಾಗುತ್ತದೆ. ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಚರ್ಚೆ ನಡೆಸಿ ಮಂದಿನ ಕ್ರಮ ಕೈಗೊಳ್ಳುತ್ತೇವೆ' ಎಂದು ಬಿಬಿಎಂಪಿ, ಬಿಡಿಎ ಅರಣ್ಯ ವಿಭಾಗದ ಹಿರಿಯ ಅಧಿಕಾರಿಗಳು ತಿಳಿಸಿದರು.

ಸೋಲಿನ ಹೊಣೆ ಹೊತ್ತು ಸಿ.ಎಂ ರಾಜೀನಾಮೆ ನೀಡಲಿ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲೋಕಸಭಾ ಚುನಾವಣೆ ಸೋಲಿನ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಲಿ ಎಂದು ವಿಧಾನಸಭಾ ಪ್ರತಿಪಕ್ಷ ನಾಯಕ ಆರ್.ಅಶೋಕ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಭಾವುಕ ವ್ಯಕ್ತಿ. ಆದ್ದರಿಂದ ಅವರು ಸೋಲಿನ ಹೊಣೆ ಹೊತ್ತು ರಾಜೀನಾಮೆ ನೀಡಬಹುದು ಎಂದು ಭಾವಿಸಿದ್ದೆ ಎಂದು ಹೇಳಿದರು.

ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಸೇರಿ ಎನ್‌ಡಿಎಗೆ ಶೇ 51.66 ರಷ್ಟು ಮತ ಬಂದಿದೆ. 136 ಶಾಸಕರನ್ನು ಹೊಂದಿರುವ ಕಾಂಗ್ರೆಸ್‌ಗೆ ಶೇ 45.43 ರಷ್ಟು ಮತ ಬಂದಿದೆ. ಎರಡಂಕಿ ದಾಟುತ್ತೇವೆ ಎಂದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹೇಳಿದ್ದರು. ಆದರೆ ಗುರಿ ಮುಟ್ಟುವಲ್ಲಿ ಅವರು ವಿಫಲರಾಗಿದ್ದಾರೆ ಎಂದರು.

'ಮುಖ್ಯಮಂತ್ರಿಯವರ ತವರು ಜಿಲ್ಲೆ ಮೈಸೂರಿನಲ್ಲಿ ನಮ್ಮ ಅಭ್ಯರ್ಥಿ 1.39 ಲಕ್ಷ ಅಂತರದಿಂದ ಗೆದ್ದಿದ್ದಾರೆ. ಕೆಪಿಸಿಸಿ ಅಧ್ಯಕ್ಷರ ಸಹೋದರ ಹೀನಾಯವಾಗಿ ಸೋತಿದ್ದಾರೆ. ಬಿಜೆಪಿ ಅಭ್ಯರ್ಥಿ ಡಾ.ಮಂಜುನಾಥ್ 2.68 ಲಕ್ಷ ಅಂತರಗಳಿಂದ ಗೆದ್ದಿದ್ದಾರೆ' ಎಂದರು.

'ಎನ್‌ಡಿಎದಲ್ಲಿ ಯಾವುದೇ ಒಡಕಿಲ್ಲ. ಇಂಡಿಯಾ ಒಕ್ಕೂಟದಿಂದಲೇ ಕೆಲವರು ಎನ್‌ಡಿಎಗೆ ಬರುವ ಸಾಧ್ಯತೆ ಇದೆ. ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಿ ಆಗಲಿದ್ದಾರೆ' ಎಂದು ಹೇಳಿದರು.



ಬಿಜೆಪಿ ಕಚೇರಿ ಮುಂದೆ ಬಿಜೆಪಿ ಕಾರ್ಯಕರ್ತೆಯರು ವಿಜಯೋತ್ಸವ ಆಚರಿಸಿದರು

ಮೂರನೇ ಬಾರಿಗೆ ಬಹುಮತ ಐತಿಹಾಸಿಕ: ವಿಜಯೇಂದ್ರ

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸತತವಾಗಿ ಮೂರನೇ ಬಾರಿಗೆ ಬಹುಮತ ಪಡೆದಿದೆ. ಕಾಂಗ್ರೆಸೇತರ ಪಕ್ಷವೊಂದು ಈ ಸಾಧನೆ ಮಾಡುವ ಮೂಲಕ ಇತಿಹಾಸ ಸೃಷ್ಟಿಸಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ವಿಜಯೋತ್ಸವ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸೇರಿ 19 ಸ್ಥಾನಗಳನ್ನು ಗೆದ್ದುಕೊಂಡಿದ್ದೇವೆ. ಗ್ಯಾರಂಟಿಗಳ ಮೂಲಕ 20 ಕ್ಕೂ ಹೆಚ್ಚು ಸ್ಥಾನ ಗೆಲ್ಲುವ ಭ್ರಮೆಯಲ್ಲಿದ್ದ ಕಾಂಗ್ರೆಸ್‌ಗೆ ಮುಖಭಂಗವಾಗಿದೆ ಎಂದು ಅವರು ವಿಶ್ಲೇಷಿಸಿದರು. ಗ್ಯಾರಂಟಿ ಬಗ್ಗೆ ಸಾಕಷ್ಟು ಚರ್ಚೆಗಳಾಗಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಮಗೆ ಹಿನ್ನಡೆಯಾಗಿತ್ತು. ಇದೆಲ್ಲವನ್ನೂ ಮೀರಿ ರಾಜ್ಯದ ಪ್ರಜ್ಞಾವಂತ ಮತದಾರರು ದೇಶದ ಭವಿಷ್ಯ ರೂಪಿಸುವ ಚುನಾವಣೆಯಲ್ಲಿ ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕು ಎಂಬ ಕಾರಣಕ್ಕೆ ಸಂಪೂರ್ಣ ಬೆಂಬಲ ನೀಡಿದ್ದಾರೆ ಎಂದರು.

ವಿಜಯೋತ್ಸವ: ರಾಜ್ಯದಲ್ಲಿ ಬಿಜೆಪಿ– ಜೆಡಿಎಸ್ ಸೇರಿ ಹೆಚ್ಚು ಮತಗಳನ್ನು ಗೆದ್ದ ಕಾರಣಕ್ಕೆ ಬಿಜೆಪಿ ಕಚೇರಿ ಮುಂದೆ ಕಾರ್ಯಕರ್ತರ ವಿಜಯೋತ್ಸವವನ್ನು ಆಚರಿಸಿ, ಸಿಹಿ ಹಂಚಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಬಿಜೆಪಿ ನಾಯಕ ಸಿ.ಟಿ.ರವಿ ಮತ್ತಿತರರು ಇದ್ದರು.





ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ ಫಲಿತಾಂಶದ ತೂಗುಯ್ಯಾಲೆ • ಅಂತಿಮ ಸುತ್ತಿನವರೆಗೂ ಕೆರಳಿದ ಕುತೂಹಲ

ಕೊನೆಯಲ್ಲಿ ಅರಳಿದ ‘ಕಮಲ’; ‘ಕೈ’ಗೆ ನಿರಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸಂತನಗರದ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಮಂಗಳವಾರ ನಡೆದ ಕೇಂದ್ರ ಲೋಕಸಭಾ ಕ್ಷೇತ್ರದ ಮತ ಎಣಿಕೆ ಕಾರ್ಯವು ತೀವ್ರ ಕುತೂಹಲ ಹಾಗೂ ಅಭ್ಯರ್ಥಿಗಳು– ಕಾರ್ಯಕರ್ತರ ಎದೆಬಡಿತ ಹೆಚ್ಚಿಸಿತ್ತು.

ಎಣಿಕೆಯ ಉದ್ದಕ್ಕೂ ತೂಗುಯ್ಯಾಲೆ ಆಡುತ್ತಿದ್ದ ಜಯವು ಕೊನೆಯಲ್ಲಿ ಬಿಜೆಪಿ ಅಭ್ಯರ್ಥಿ ಪಿ.ಸಿ.ಮೋಹನ್ ಅವರ ಪಾಲಾಯಿತು. ಕಾಂಗ್ರೆಸ್‌ನಿಂದ ಅದೃಷ್ಟ ಪರೀಕ್ಷೆಗೆ ಇಳಿದಿದ್ದ ಮನ್ಸೂರ್ ಅಲಿಖಾನ್ ಅವರು ಸೋತರು.

ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳ ನಡುವೆ ಮತ ಎಣಿಕೆ ಹಲವು ಸುತ್ತುಗಳಲ್ಲಿ ಸವಾಲೊಡ್ಡುವಂತೆ ಸ್ಪರ್ಧೆ ಏರ್ಪಟ್ಟಿತ್ತು. ಎಣಿಕೆಯು ಹಾವು–ಏಣಿ ಆಟದಂತೆ ಏರಿಳಿತ ಕಾಣಿಸುತ್ತಿತ್ತು. ಮುನ್ನಡೆ– ಹಿನ್ನಡೆ ಆಗುತ್ತಿದ್ದಂತೆಯೇ ಪರಸ್ಪರ ಬೆಂಬಲಿತ ಕಾರ್ಯಕರ್ತರು ಕೇಕೆ ಹಾಕಿ ಸಂಭ್ರಮಿಸುತ್ತಿದ್ದರು. ಮತ ಎಣಿಕೆಯು ಒಮ್ಮೆ ಬಿಜೆಪಿ, ಮತ್ತೊಮ್ಮೆ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಸಂಭ್ರಮ ತರುತ್ತಿತ್ತು.

ಮಂಗಳವಾರ ಬೆಳಿಗ್ಗೆ ಭದ್ರತಾ ಕೊಠಡಿ ತೆರೆದ ಮೇಲೆ ಅಂಚೆ ಮತ ಎಣಿಕೆ ಕಾರ್ಯ ನಡೆಯಿತು. ಒಟ್ಟು 2,648 ಅಂಚೆ ಮತಗಳು ಚಲಾವಣೆಗೊಂಡಿದ್ದವು. ಆ ಪೈಕಿ ಬಿಜೆಪಿ ಅಭ್ಯರ್ಥಿಗೆ 1,679 ಹಾಗೂ ಕಾಂಗ್ರೆಸ್ ಅಭ್ಯರ್ಥಿಗೆ 840 ಅಂಚೆ ಮತಗಳು ಬಿದ್ದಿದ್ದವು. ಅದರಲ್ಲಿ 23 ನೋಟಾ ಚಲಾವಣೆಗೊಂಡಿದ್ದವು. ಇದರಲ್ಲಿ ಮೋಹನ್ 875 ಮತಗಳಿಂದ ಮುನ್ನಡೆ ಕಾಯ್ದುಕೊಂಡಿದ್ದರು.

ನಂತರ, ಇವಿಎಂ ತೆರೆದು ಎಣಿಕೆ ಆರಂಭಿಸಲಾಯಿತು. ಆರಂಭದಲ್ಲಿ 2,983 ಮತಗಳಿಂದ ಮೋಹನ್ ಮುನ್ನಡೆ ಕಾಯ್ದುಕೊಂಡಿದ್ದರು. ಆರಂಭಿಕ ಹಲವು ಸುತ್ತುಗಳಲ್ಲಿ ಬಿಜೆಪಿ ಮುನ್ನಡೆ ಹೆಚ್ಚಿಸಿಕೊಳ್ಳುತ್ತಲೇ ಸಾಗಿತು.

ಸರ್ವಜ್ಞನಗರ, ಶಿವಾಜಿನಗರ, ಶಾಂತಿನಗರ, ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಣಿಕೆ ಕಾರ್ಯ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್‌ಗೆ ಮುನ್ನಡೆ ಬರಲು ಆರಂಭಿಸಿತು. ಆಗ ಕೈ ಕಾರ್ಯಕರ್ತರು ಸಂಭ್ರಮಿಸಲು ಆರಂಭಿಸಿದರು. ಮುನ್ನಡೆಯು 68 ಸಾವಿರದಿಂದ 72,583ಕ್ಕೆ ಜಿಗಿಯಿತು. ಸಂಭ್ರಮ ಇನ್ನಷ್ಟು ಹೆಚ್ಚಾಯಿತು. ಆಗ ಎಣಿಕೆ ಕೇಂದ್ರದ ಸುತ್ತ ಕಾಂಗ್ರೆಸ್ ಕಾರ್ಯಕರ್ತರು ಜಮಾವಣೆಗೊಳ್ಳಲು ಆರಂಭಿಸಿದರು. ಕೊನೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಲೆಕ್ಕಾಚಾರ ಉಲ್ಟಾ ಆಯಿತು.

ಕೊನೆಯಲ್ಲಿ ಚಿತ್ರಣವೇ ಬದಲು...: ಮಹದೇವಪುರ ವಿಧಾನಸಭಾ ಕ್ಷೇತ್ರದ ಎಣಿಕೆ ಆರಂಭವಾದ ಮೇಲೆ ಬಿಜೆಪಿ ಮತ್ತೆ ಮೇಲುಗೈ ಸಾಧಿಸಿತು. ಮೋಹನ್ ಅವರು ಮುನ್ನಡೆ ಪಡೆದುಕೊಂಡರು. ಮುನ್ನಡೆ ಮಾಹಿತಿ ತಿಳಿಯುತ್ತಿದ್ದಂತೆಯೇ ಹೊರಕ್ಕೆ ತೆರಳಿದ್ದ ಕಾರ್ಯಕರ್ತರು ಹಾಗೂ ಮುಖಂಡರು ಎಣಿಕೆ ಕೇಂದ್ರದ ಬಳಿಗೆ ವಾಪಸ್ಸಾದರು. ಮಹದೇವಪುರ ವಿಧಾನಸಭಾ ಕ್ಷೇತ್ರವು ಬಿಜೆಪಿಗೆ 1,18,046 ಮತಗಳ ಮುನ್ನಡೆ ತಂದು ಗೆಲುವಿನ ದಡ ಮುಟ್ಟಿಸಿತು. ಕೇಂದ್ರದಲ್ಲಿ ಮತ್ತೊಮ್ಮೆ ಕಮಲ ಅರಳುತ್ತಿದ್ದಂತೆ ಕಾರ್ಯಕರ್ತರು ಸಿಹಿ ಹಂಚಿದರು. 32,707 ಮತಗಳ ಅಂತರದಿಂದ ಗೆದ್ದ ಮೋಹನ್ ಅವರು ಕಾರ್ಯಕರ್ತರೊಂದಿಗೆ ಸಂಭ್ರಮಿಸಿದರು.

ಕೇಂದ್ರದ ಸುತ್ತಮುತ್ತ ಬಂದೋಬಸ್ತ್: ಮತ ಎಣಿಕೆ ಕೇಂದ್ರದ ಸುತ್ತಮುತ್ತ ಭಾರಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಅಧಿಕೃತ ಗುರುತಿನ ಚೀಟಿ ಹೊಂದಿದ್ದವರಿಗೆ ಮಾತ್ರ ಪ್ರವೇಶ ಎಣಿಕೆ ಕೇಂದ್ರಕ್ಕೆ ಪ್ರವೇಶ ಕಲ್ಪಿಸಲಾಯಿತು.



ನಗರದ ಮೌಂಟ್ ಕಾರ್ಮೆಲ್ ಕಾಲೇಜಿನ ಮತ ಎಣಿಕೆ ಕೇಂದ್ರದ ಬಳಿ ಮಂಗಳವಾರ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಪಿ.ಸಿ.ಮೋಹನ್ ಅವರು ತಮ್ಮ ಬೆಂಬಲಿಗರೊಂದಿಗೆ ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ

ಗೆಲುವಿನ ದಡ ತಲುಪಿಸಿದ ಮಹದೇವಪುರ

ಸಚಿವರಾದ ಕೆ.ಜೆ. ಜಾರ್ಜ್ ಪ್ರತಿನಿಧಿಸುವ ಸರ್ವಜ್ಞನಗರ (74,242), ಜಮೀರ್ ಅಹಮ್ಮದ್ ಪ್ರತಿನಿಧಿಸುವ ಚಾಮರಾಜಪೇಟೆಯಲ್ಲಿ (42,953) ತುಸು ದೊಡ್ಡ ಮುನ್ನಡೆ ಕಾಂಗ್ರೆಸ್‌ಗೆ ದೊರಕಿದೆ.

ಎನ್.ಎ. ಹ್ಯಾರಿಸ್ ಪ್ರತಿನಿಧಿಸುವ ಶಾಂತಿನಗರ (20,338) ಮತ್ತು ರಿಜ್ವಾನ್ ಅರ್ಷದ್ ಪ್ರತಿನಿಧಿಸುವ ಶಿವಾಜಿನಗರದಲ್ಲೂ (27,510) ಕಾಂಗ್ರೆಸ್‌ಗೆ ಅಲ್ಪ ಪ್ರಮಾಣದ ಮುನ್ನಡೆ ದೊರಕಿದೆ. ಆದರೆ, ಸಚಿವ ದಿನೇಶ್ ಗುಂಡೂರಾವ್ ಪ್ರತಿನಿಧಿಸುವ ಗಾಂಧಿನಗರ ಕ್ಷೇತ್ರದಲ್ಲಿ ಬಿಜೆಪಿ 23 ಸಾವಿರ ಮತಗಳಷ್ಟು ಮುನ್ನಡೆ ಪಡೆದಿದೆ.

ಬಿಜೆಪಿ ಶಾಸಕರಿರುವ ಕ್ಷೇತ್ರಗಳ ಪೈಕಿ ಎಸ್. ರಘು ಪ್ರತಿನಿಧಿಸುವ ಸಿ.ವಿ. ರಾಮನ್ ನಗರ (20,114), ಎಸ್. ಸುರೇಶ್ ಕುಮಾರ್ ಪ್ರತಿನಿಧಿಸುವ ರಾಜಾಜಿನಗರದಲ್ಲಿ (39,429) ಬಿಜೆಪಿ ಅಭ್ಯರ್ಥಿಗೆ ಅಲ್ಪ ಪ್ರಮಾಣದ ಮುನ್ನಡೆ ದೊರಕಿದ್ದರೆ, ಮಂಜುಳಾ ಲಿಂಬಾವಳಿ ಪ್ರತಿನಿಧಿಸುವ ಮಹದೇವಪುರ ಕ್ಷೇತ್ರದಲ್ಲಿನ ದೊರಕಿರುವ 1.18 ಲಕ್ಷ ಮತಗಳ ಭಾರಿ ಮುನ್ನಡೆಯೇ ಮೋಹನ್ ಅವರನ್ನು ಗೆಲುವಿನ ದಡ ತಲುಪಿಸಿದೆ. ಉತ್ತರ ಭಾರತೀಯರು, ಐ.ಟಿ ಉದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ ಬೆಂಬಲಕ್ಕೆ ನಿಂತಿರುವುದು ಮೋಹನ್ ಗೆಲುವಿಗೆ ಕಾರಣವಾಗಿದೆ.

ಗೆಲುವಿನ ದಾಖಲೆ ಬರೆದ ಮೋಹನ್

ಬೆಂಗಳೂರು: ಮೂವರು ಪ್ರಭಾವಿ ಸಚಿವರು ಮತ್ತು ‘ಗ್ಯಾರಂಟಿ’ ಯೋಜನೆಗಳ ಬಲದಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರವನ್ನು ‘ಕೈ’ವಶ ಮಾಡಿಕೊಳ್ಳುವ ಕಾಂಗ್ರೆಸ್ ಪ್ರಯತ್ನ ವಿಫಲವಾಗಿದೆ. ಸತತ ನಾಲ್ಕನೇ ಬಾರಿ ಗೆಲುವು ದಾಖಲಿಸುವ ಮೂಲಕ ಬಿಜೆಪಿಯ ಪಿ.ಸಿ. ಮೋಹನ್, ದಾಖಲೆ ಬರೆದಿದ್ದಾರೆ.

2008ರ ಕ್ಷೇತ್ರ ಪುನರ್ವಿಂಗಡಣೆ ಬಳಿಕ ಅಸ್ತಿತ್ವಕ್ಕೆ ಬಂದ ಈ ಕ್ಷೇತ್ರದಲ್ಲಿ 2009, 2014 ಮತ್ತು 2019ರ ಚುನಾವಣೆಗಳಲ್ಲಿ ಮೋಹನ್ ಜಯಭೇರಿ ಬಾರಿಸಿದ್ದರು. 2019ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ರಿಜ್ವಾನ್ ಅರ್ಷದ್ ಗೆಲುವಿನ ಸಮೀಪ ಬಂದು ಮುಗ್ಗರಿಸಿದ್ದರು. ಈ ಬಾರಿಯೂ ಸತತ ಹಾವು ಏಣಿ ಆಟದ ಬಳಿಕ ಕೊನೆಯ ಸುತ್ತುಗಳಲ್ಲಿ ಮೇಲುಗೈ ಸಾಧಿಸಿ ಮೋಹನ್, ನಾಲ್ಕನೇ ಬಾರಿ ಲೋಕಸಭೆ ಪ್ರವೇಶಿಸುವಲ್ಲಿ ಯಶಸ್ವಿಯಾಗಿದ್ದಾರೆ.

ರಾಜ್ಯದ ಆಡಳಿತದ ಶಕ್ತಿ ಕೇಂದ್ರದ ಸುತ್ತ ವ್ಯಾಪಿಸಿರುವ ಈ ಕ್ಷೇತ್ರದಲ್ಲಿ ಗೆಲುವಿಗಾಗಿ ಬೆವರು ಹರಿಸಿದ್ದ ಕಾಂಗ್ರೆಸ್‌ನ ಮನ್ಸೂರ್ ಅಲಿ ಖಾನ್, 32 ಸಾವಿರ ಮತಗಳ ಅಂತರದಿಂದ ಸೋಲು ಕಂಡಿದ್ದಾರೆ. ರಾಜ್ಯದಿಂದ ಅಲ್ಪಸಂಖ್ಯಾತರೊಬ್ಬರನ್ನು ಲೋಕಸಭೆಗೆ ಕಳುಹಿಸುವ ಕಾಂಗ್ರೆಸ್ ಪ್ರಯತ್ನ ಮತ್ತೊಮ್ಮೆ ವಿಫಲವಾಗಿದೆ.

ಬೆಂಗಳೂರು ಕೇಂದ್ರ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾಂಗ್ರೆಸ್‌ನ ಐವರು ಶಾಸಕರಿದ್ದರೆ, ಬಿಜೆಪಿಯ ಮೂವರು ಶಾಸಕರಿದ್ದಾರೆ. ಕಾಂಗ್ರೆಸ್ ಶಾಸಕರಲ್ಲಿ ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್ ಮತ್ತು ಜಮೀರ್ ಅಹಮ್ಮದ್ ಖಾನ್ ಸಚಿವರಾಗಿದ್ದಾರೆ. ಈ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮೂವರೂ ಸಚಿವರ ಪ್ರಭಾವ ಮತ್ತು ‘ಗ್ಯಾರಂಟಿ’ ಯೋಜನೆಗಳ ಕಾರಣದಿಂದ ಗೆಲುವು ಸಾಧಿಸುವ ತಂತ್ರಗಾರಿಕೆಯನ್ನು ಕಾಂಗ್ರೆಸ್ ಮಾಡಿತ್ತು.

ಅಲ್ಪಸಂಖ್ಯಾತ ಮತದಾರರು, ಅದರಲ್ಲೂ ವಿಶೇಷವಾಗಿ ಮುಸ್ಲಿಂ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸುವಂತೆ ಎಚ್ಚರ ವಹಿಸಿದ್ದ ‘ಕೈ’ ಪಡೆ, ಕ್ಷೇತ್ರವನ್ನು ‘ಕಮಲ’ದ ತೆಕ್ಕೆಯಿಂದ ಕಿತ್ತುಕೊಳ್ಳುವ ವಿಶ್ವಾಸದಲ್ಲಿತ್ತು. ರಾಜ್ಯದಲ್ಲಿ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದ ಏಕೈಕ ಕ್ಷೇತ್ರವೂ ಇದಾಗಿತ್ತು. ಇದರಿಂದಾಗಿ ಧರ್ಮದ ಆಧಾರದಲ್ಲಿ ಮತಗಳ ಧ್ರುವೀಕರಣವೂ ಜೋರಾಗಿತ್ತು. ಇಲ್ಲಿ ‘ಗ್ಯಾರಂಟಿ’ಗಳಿಗಿಂತಲೂ ಹೆಚ್ಚಾಗಿ ಧರ್ಮವೇ ನಿರ್ಣಾಯಕ ಪಾತ್ರ ವಹಿಸಿ ಬಿಜೆಪಿ ಅಭ್ಯರ್ಥಿಯನ್ನು ಗೆಲುವಿನ ದಡ ಮುಟ್ಟಿಸಿದಂತಿದೆ.

ಚುನಾವಣೆ ಫಲಿತಾಂಶ ಜನರು ಏನಂತಾರೆ ?

‘ಉದ್ಯೋಗಾವಕಾಶ ಆದ್ಯತೆಯಾಗಲಿ’



ಈ ಬಾರಿಯ ಫಲಿತಾಂಶವು ವಿಭಿನ್ನವಾಗಿದೆ. ಯಾವುದೇ ಮೈತ್ರಿಕೂಟ ಅಧಿಕಾರದ ಚುಕ್ಕಾಣಿ ಹಿಡಿದರೂ ಯುವಜನರಿಗೆ ಉದ್ಯೋಗಾವಕಾಶ ಒದಗಿಸಲು ಆದ್ಯತೆ ನೀಡಲಿ. ಶಿಕ್ಷಣ ಕ್ಷೇತ್ರದಲ್ಲಿಯೂ ಸಾಕಷ್ಟು ಸುಧಾರಣೆ ತರಬೇಕಿದೆ. ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಗೊಂದಲ ಉಂಟಾಗದಂತೆ ನೋಡಿಕೊಳ್ಳಬೇಕು. ಗುಣಮಟ್ಟದ ಶಿಕ್ಷಣ ಒದಗಿಸುವ ಕಡೆಗೂ ಸರ್ಕಾರವು ಗಮನಹರಿಸಬೇಕು.

ದಿವ್ಯಶ್ರೀ ಹೆಗಡೆ, ವಿದ್ಯಾರ್ಥಿನಿ

‘ಜನರ ಅಭಿಪ್ರಾಯ ಗೌರವಿಸಿ’



ಲೋಕಸಭಾ ಚುನಾವಣೆಯ ಫಲಿತಾಂಶವು ಜನರ ಮನಸ್ಸಿನ ಕನ್ನಡಿಯಾಗಿದೆ. ಸರ್ಕಾರಗಳು ತಮ್ಮ ಸಾಧನೆ ಬಗ್ಗೆ ಎಷ್ಟೇ ಹೇಳಿಕೊಂಡರೂ ಜನರು ತಮ್ಮದೇ ಆದ ಮಾನದಂಡಗಳನ್ನು ಹೊಂದಿರುತ್ತಾರೆ. ಈ ಚುನಾವಣೆಯಲ್ಲಿ ದೇಶದ ಮತದಾರ ವಿವೇಚನೆಯಿಂದ ಮತ ಚಲಾಯಿಸಿದ್ದು, ಹೊಸ ಸರ್ಕಾರ ಜನರ ಬೇಕು ಬೇಡಗಳಿಗೆ ಆದ್ಯತೆ ನೀಡಬೇಕು. ರಾಜಕೀಯ ಪಕ್ಷಗಳು ಜನರ ಅಭಿಪ್ರಾಯವನ್ನು ಗೌರವಿಸಿ, ಮುನ್ನಡೆಯಬೇಕು. ದೇಶದ ಜ್ವಲಂತ ಸಮಸ್ಯೆಗಳ ಕುರಿತಂತೆ ಚರ್ಚೆಗಳಾಗಬೇಕು.

ಶ್ರವಣ್, ವಿದ್ಯಾರ್ಥಿ


‘ಶಾಲಾ ಶುಲ್ಕಕ್ಕೆ ಕಡಿವಾಣ ಹಾಕಿ’



ವರ್ಷ ಕಳೆದಂತೆ ಶಾಲಾ-ಕಾಲೇಜುಗಳ ಶುಲ್ಕ ಏರುತ್ತಲೇ ಇದೆ. ಇದಕ್ಕೆ ಕಡಿವಾಣ ಹಾಕಬೇಕಿದೆ. ಈಗಿನ ಶುಲ್ಕವು ಬಡ ಮತ್ತು ಮಧ್ಯಮ ವರ್ಗದವರಿಗೆ ಆರ್ಥಿಕ ಹೊರೆಯಾಗುತ್ತಿದೆ. ಲಕ್ಷಾಂತರ ರೂಪಾಯಿ ಶುಲ್ಕವನ್ನು ನೀಡಿ, ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಉತ್ತಮ ವೇತನದ ಉದ್ಯೋಗಾವಕಾಶ ಸೃಷ್ಟಿಯಾಗುತ್ತಿಲ್ಲ. ಅಲ್ಲದೆ, ನಿರುದ್ಯೋಗದ ಭೀತಿ ವಿದ್ಯಾರ್ಥಿಗಳನ್ನು ಇನ್ನಿಲ್ಲದಂತೆ ಕಾಡುತ್ತಿದೆ. ಇದಕ್ಕೆ ಬೇಕಾದ ಅಗತ್ಯ ಕ್ರಮಗಳನ್ನು ತೆಗೆದುಕೊಂಡು, ಉದ್ಯೋಗ ಸೃಷ್ಟಿಸುವುದು ಸರ್ಕಾರದ ಆದ್ಯತೆಯಾಗಬೇಕು.

ಬಸವರಾಜ ಎಚ್.ಆರ್., ಖಾಸಗಿ ಕಂಪನಿ ಉದ್ಯೋಗಿ

‘ನಿರುದ್ಯೋಗ ಹೋಗಲಾಡಿಸಿ’



ಲೋಕಸಭಾ ಚುನಾವಣೋತ್ತರ ಸಮೀಕ್ಷೆಗಳನ್ನು ಬುಡಮೇಲು ಮಾಡುವ ಫಲಿತಾಂಶ ಬಂದಿದೆ. ಮತದಾರರು ಆಡಳಿತ ಪಕ್ಷಕ್ಕೆ ಎಚ್ಚರಿಕೆ ಮೂಲಕ ಬಹುಮತ ನೀಡಿದ್ದಾರೆ. ಹೊಸ ಸರ್ಕಾರ ಧರ್ಮ, ದೇವಸ್ಥಾನದ ಹೆಸರಿನಲ್ಲಿ ರಾಜಕೀಯ ಮಾಡದೇ ರೈತರು, ಬಡವರ ಪರವಾಗಿ ಶ್ರೇಯೋಭಿವೃದ್ಧಿಗೆ ಕೆಲಸ ಮಾಡಬೇಕು. ನಿರುದ್ಯೋಗ, ಬಡತನ ಹೋಗಲಾಡಿಸಲು ಕ್ರಮ ಕೈಗೊಳ್ಳಬೇಕು.

ಮುರಳೀಧರ, ಬನಶಂಕರಿ

‘ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಲಿ’



ಒಂದು ಚುನಾವಣೆ ನೀಡಬಹುದಾದ ಸಮಾಧಾನಕರ ಫಲಿತಾಂಶವಿದು. ಬಿಜೆಪಿ ಅಂಕಿ–ಅಂಶಗಳಲ್ಲಿ ಗೆದ್ದಿದ್ದರೂ ದೇಶದ ಜನ ಸರ್ಕಾರದ ಮೇಲಿನ ತಮ್ಮ ಅಸಮಾಧಾನವನ್ನು ಮತಪತ್ರದ ಮೂಲಕ ತೋರಿದ್ದಾರೆ. ಹೊಸ ಸರ್ಕಾರ ಈ ಚುನಾವಣೆಯ ತೀರ್ಪನ್ನು ಗೌರವಿಸಿ, ಧ್ರುವೀಕರಣ ರಾಜಕಾರಣವನ್ನು ಕೈಬಿಟ್ಟು, ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿದು, ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗಲಿ.

ತ್ರಿಲೋಚನ ಕೆ.ಆರ್., ಸಾಫ್ಟ್‌ವೇರ್ ಉದ್ಯೋಗಿ

‘ನಿರುದ್ಯೋಗ ನಿವಾರಿಸಲಿ’



ಲೋಕಸಭಾ ಚುನಾವಣೆಯ ಫಲಿತಾಂಶ ನಿರೀಕ್ಷೆಯಂತೆ ಬರದಿದ್ದರೂ ಹೊಸ ಸರ್ಕಾರದ ಮೇಲೆ ಜನರ ನಿರೀಕ್ಷೆಗಳು ಹೆಚ್ಚಾಗಿವೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ ತೀವ್ರವಾಗಿದ್ದು, ಅದನ್ನು ನಿವಾರಿಸುವಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು. ಕೇಂದ್ರ ಹಲವು ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ ಮಾಡಿಕೊಳ್ಳಬೇಕು. ಇದರಿಂದ, ನಿರುದ್ಯೋಗ ಪ್ರಮಾಣ ಕಡಿಮೆಯಾಗಲಿದೆ.

ಅರ್ಚನಾ ಆರ್, ಸಹಾಯಕ ಪ್ರಾಧ್ಯಾಪಕರು ಜಯನಗರ

‘ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಿ’



ಪ್ರಧಾನಿ ನರೇಂದ್ರ ಮೋದಿ ಅವರ ಕೆಲವು ಅವೈಜ್ಞಾನಿಕ ನೀತಿಗಳು ಮತ್ತು ತಲೆಬುಡವಿಲ್ಲದ ಹೇಳಿಕೆಗಳು ಬಿಜೆಪಿ ಹಿನ್ನಡೆಗೆ ಪ್ರಮುಖ ಕಾರಣವಾಗಿದೆ. ಹೊಸ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಏರಿಕೆ, ನಿರುದ್ಯೋಗ, ಬಡತನ ಮತ್ತು ಗುಣಮಟ್ಟದ ಶಿಕ್ಷಣ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಬೇಕು.

ದಿವ್ಯಾ ಶಿವಪುರ, ಚಂದ್ರಾ ಲೇಔಟ್

‘ಆಶ್ವಾಸನೆಗಳನ್ನು ಪೂರ್ಣಗೊಳಿಸಿ’



ಲೋಕಸಭಾ ಚುನಾವಣೆಯಲ್ಲಿ ಭರ್ಜರಿ ಜಯ ದಾಖಲಿಸಿರುವ ಎನ್‌ಡಿಎ ಮೈತ್ರಿಕೂಟ ನೀಡಿರುವ ಆಶ್ವಾಸನೆಗಳು ಪೂರ್ಣಗೊಳಿಸಬೇಕು. ಸರ್ವರ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಬಿಜೆಪಿ ನೀಡಿರುವ ಎಲ್ಲ ಭರವಸೆಗಳನ್ನು ಈಡೇರಿಸಬೇಕು. ಆರೋಗ್ಯ, ಬೆಲೆ ಏರಿಕೆ, ಪೆಟ್ರೋಲ್–ಡೀಸೆಲ್ ಮತ್ತು ಅಡುಗೆ ಅನಿಲದ ದರಗಳನ್ನು ನಿಯಂತ್ರಿಸುವುದರ ಜೊತೆಗೆ ಸಾರ್ವಜನಿಕರ ಜೀವನ ಗುಣಮಟ್ಟವನ್ನು ಉತ್ತಮಗೊಳಿಸಬೇಕು.

ಅನುರಾಧ ಎಚ್., ವಿನಾಯಕನಗರ

ದಕ್ಷಿಣ ಲೋಕಸಭಾ ಕ್ಷೇತ್ರ: ಗದ್ದಲವಿಲ್ಲದ ಸಂಭ್ರಮ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಮತ ಎಣಿಕೆ ಪ್ರಕ್ರಿಯೆ ಬೆಳಿಗ್ಗೆ 8 ಗಂಟೆಗೆ ಆರಂಭವಾದರೂ, ಕಾರ್ಯಕರ್ತರ ಹೆಚ್ಚೇನು ಗದ್ದಲವಿರಲಿಲ್ಲ. ಒಂದು ಲಕ್ಷ ಮತಗಳ ಅಂತರ ಬಂದ ನಂತರವಷ್ಟೇ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಮತ ಎಣಿಕೆ ಕೇಂದ್ರಕ್ಕೆ ಬಂದರು.

ಜಯನಗರ 9ನೇ ಬ್ಲಾಕ್‌ನಲ್ಲಿರುವ ಎಸ್ಎಸ್ಎಂಆರ್‌ವಿ ಕಾಲೇಜಿನಲ್ಲಿ ಮತ ಎಣಿಕೆ ನಡೆಯಿತು. ಎಂಟು ವಿಧಾನಸಭೆ ಕ್ಷೇತ್ರಗಳ ಮತ ಎಣಿಕೆ ಒಂದೊಂದು ಕೊಠಡಿಯಲ್ಲಿ 14 ಟೇಬಲ್‌ಗಳಲ್ಲಿ ಹಲವು ಸುತ್ತುಗಳಲ್ಲಿ ನಡೆಯಿತು. ಒಂಬತ್ತನೇ ಕೊಠಡಿಯಲ್ಲಿ ಅಂಚೆ ಮತಗಳನ್ನು ಎಣಿಕೆ ಮಾಡಲಾಯಿತು. ಜಯನಗರ ವಿಧಾನಸಭೆ ಕ್ಷೇತ್ರ ಮತ ಎಣಿಕೆ 15 ಸುತ್ತುಗಳಲ್ಲಿ ಮುಗಿದರೆ, ಬೊಮ್ಮನಹಳ್ಳಿ ವಿಧಾನಸಭೆ ಕ್ಷೇತ್ರ ಮತ ಎಣಿಕೆ 28 ಸುತ್ತುಗಳಲ್ಲಿ ನಡೆಯಿತು.

ಎಣಿಕೆ ಕೇಂದ್ರದ ಆವರಣದಲ್ಲಿ ಹಂತ ಹಂತವಾಗಿ ಬಿಜೆಪಿ ಕಾರ್ಯಕರ್ತರ ಸಂಖ್ಯೆ ಹೆಚ್ಚಾಗುತ್ತಿದ್ದರೆ, ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾರೆಡ್ಡಿ ಸೇರಿದಂತೆ ಪಕ್ಷದ ಕಾರ್ಯಕರ್ತರು ಹೆಚ್ಚಾಗಿ ಇತ್ತ ಸುಳಿಯಲೇ ಇಲ್ಲ.

ತೇಜಸ್ವಿ ಸೂರ್ಯ ಮತ ಎಣಿಕೆ ಕೇಂದ್ರಕ್ಕೆ ಬಂದಾಗ ಎಂಟು ಸುತ್ತುಗಳ ಮತ ಎಣಿಕೆ ಮುಗಿದಿತ್ತು. ಬೆರಳೆಣಿಕೆಯಷ್ಟು ಕಾರ್ಯಕರ್ತರು ಮಾತ್ರ ಜೊತೆಗಿದ್ದರು.

ಪ್ರತಿ ಸುತ್ತಿನಲ್ಲೂ ಬಿಜೆಪಿ ಮುನ್ನಡೆ ಸಾಧಿಸುತ್ತಿದ್ದಂತೆ ಮತ ಎಣಿಕೆ ಕೇಂದ್ರದ ಮುಂದೆ ಬಿಜೆಪಿ ಕಾರ್ಯಕರ್ತರು ಜಮಾಯಿಸುತ್ತಿದ್ದರು. ಕ್ಷೇತ್ರದಲ್ಲಿ ಗೆಲುವು ಖಚಿತವಾಗುತ್ತಿದ್ದಂತೆಯೇ ತೇಜಸ್ವಿ ಸೂರ್ಯ, ಶಾಸಕರಾದ ಸತೀಶ್ ರೆಡ್ಡಿ, ಸಿ.ಕೆ. ರಾಮಮೂರ್ತಿ ಅವರೊಂದಿಗೆ ಮತ ಎಣಿಕೆ ಕೇಂದ್ರ ಮುಂದೆ ಕಾರ್ಯಕರ್ತರೊಂದಿಗೆ ಸಂಭ್ರಮಿಸಿದರು. ಮಾಧ್ಯಮಗಳೊಂದಿಗೆ ಸಂತಸ ಹಂಚಿಕೊಂಡರು.

‘ತುಂಬಾ ಪೈಪೋಟಿ ಆಗುತ್ತದೆ ಎಂಬ ಸುದ್ದಿ ಇತ್ತು. ಆದರೆ, ಕೋವಿಡ್ ವೇಳೆ, ಬ್ಯಾಂಕ್ ಸಮಸ್ಯೆಯಂತಹ ಹಲವು ಸಂದರ್ಭದಲ್ಲಿ ಜನರ ಜೊತೆಗಿದ್ದೆ. ಕೇಂದ್ರದ ಯೋಜನೆಯನ್ನು ಜನರಿಗೆ ತಲುಪಿಸುವ ಕೆಲಸ ಮಾಡಿದೆ. ಇದೆಲ್ಲದರ ಕಾರಣ ಇಷ್ಟೊಂದು ಲೀಡ್ ನೀಡಿದ್ದಾರೆ. ಕಾಂಗ್ರೆಸ್‌ನವರು ನೀರಿನಂತೆ ಹಣ ಹಂಚಿದ್ದಾರೆ. ಆದರೆ ಒಂದೇ ಒಂದು ಮತಕ್ಕೂ ಹಣ ಕೊಡಬಾರದು ಎಂದು ನಿರ್ಧರಿಸಲಾಗಿತ್ತು. ಭ್ರಷ್ಟಾಚಾರ ಕೊನೆಗಾಣಿಸಬೇಕು, ಲೀಡ್ ಕಡಿಮೆ ಆದರೂ ಪರವಾಗಿಲ್ಲ ಎಂದು ನಿರ್ಧರಿಸಲಾಗಿತ್ತು’ ಎಂದು ತೇಜಸ್ವಿ ಸೂರ್ಯ ಹೇಳಿದರು.

‘ಬೆಂಗಳೂರಿಗೆ ಇನ್ನೊಂದು ವಿಮಾನನಿಲ್ದಾಣ, ಸೆಮಿಕಂಡಕ್ಟರ್ ಘಟಕ, ಮೆಟ್ರೊ ವಿಸ್ತರಣೆ, ಬಡವರ ಸೇವೆ ಮಾಡುವುದು ನನ್ನ ಉದ್ದೇಶ. ಬಿಬಿಎಂಪಿಯಲ್ಲಿ ಅಧಿಕಾರ ಹಿಡಿಯಲು ಇಂದಿನಿಂದಲೇ ಕೆಲಸ ಆರಂಭಿಸುವೆ’ ಎಂದರು.

‘ಕಾಂಗ್ರೆಸ್‌ನವರು ಮನೆ ಮನೆಗೆ ಗಿಫ್ಟ್ ಕೊಟ್ಟರು, ದುಡ್ಡೂ ಕೊಟ್ಟರು. ಆದರೆ ಜನರು ಇವತ್ತು ನಮಗೆ ಆಶೀರ್ವಾದ ಮಾಡಿದ್ದಾರೆ. ಸಚಿವರ ಕ್ಷೇತ್ರದಲ್ಲೇ ನಾವು ಮುಂದಿದ್ದೇವೆ. ನಮ್ಮೆಲ್ಲರ ಸಂಘಟನೆಯಿಂದ ಈ ಗೆಲುವು ಸಾಧ್ಯವಾಯಿತು’ ಎಂದು ಬಿಜೆಪಿಯ ಬೆಂಗಳೂರು ದಕ್ಷಿಣ ಘಟಕದ ಅಧ್ಯಕ್ಷ ಸಿ.ಕೆ. ರಾಮಮೂರ್ತಿ ಹೇಳಿದರು.



ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ ಬಿಜೆಪಿಯ ತೇಜಸ್ವಿ ಸೂರ್ಯ ವಿಜಯದ ಸಂಕೇತ ತೋರಿಸಿ ಕಾರ್ಯಕರ್ತರೊಂದಿಗೆ ಸಂಭ್ರಮಿಸಿದರು
–ಪ್ರಜಾವಾಣಿ ಚಿತ್ರ/ ರಂಜು ಪಿ

ತೇಜಸ್ವಿ ಪ್ರಭೆಗೆ ಮಂಕಾದ ಕಾಂಗ್ರೆಸ್

ಬೆಂಗಳೂರು: ಬೆಂಗಳೂರು ದಕ್ಷಿಣ ಕ್ಷೇತ್ರ ಬಿಜೆಪಿಯ ಭದ್ರಕೋಟೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಅವರು ತಮ್ಮ ಪ್ರತಿಸ್ಪರ್ಧಿ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾರೆಡ್ಡಿ ಅವರನ್ನು 2,77,083 ಮತಗಳ ಅಂತರದಿಂದ ಸೋಲಿಸಿದ್ದಾರೆ. ಬಿಜೆಪಿಯನ್ನು ಮಣಿಸುವಲ್ಲಿ ಕಾಂಗ್ರೆಸ್ ಈ ಬಾರಿಯೂ ವಿಫಲವಾಗಿದೆ.

ಈ ಕ್ಷೇತ್ರ ಪರಂಪರಾಗತವಾಗಿ ಕಾಂಗ್ರೆಸ್ಸೇತರ ಕ್ಷೇತ್ರವೆಂದು ಗುರುತಿಸಿಕೊಂಡಿದೆ. ಹಿಂದೆ ಜನತಾ ಪಕ್ಷ ಮತ್ತು ಜನತಾದಳದ ಭದ್ರಕೋಟೆಯಾಗಿತ್ತು. ಆ ಬಳಿಕ ಬಿಜೆಪಿ ತನ್ನ ತೆಕ್ಕೆಗೆ ತೆಗೆದುಕೊಂಡಿತು. ಅನಂತಕುಮಾರ್ ಅವರ ನಿಧನದ ಬಳಿಕ 2019 ರಲ್ಲಿ ಈ ಕ್ಷೇತ್ರಕ್ಕೆ ಬಿಜೆಪಿ ತೇಜಸ್ವಿಸೂರ್ಯ ಅವರನ್ನು ಅಭ್ಯರ್ಥಿಯನ್ನಾಗಿ ಕಣಕ್ಕೆ ಇಳಿಸಿತು. ತೇಜಸ್ವಿ ಸೂರ್ಯ ಅವರಿಗೆ ಇದು ಎರಡನೇ ಗೆಲುವು.

ಕಾಂಗ್ರೆಸ್‌ನಿಂದ ಈ ಕ್ಷೇತ್ರದಲ್ಲಿ ಯಾರೂ ಸ್ಪರ್ಧಿಸಲು ತಯಾರಿಲ್ಲದಿದ್ದಾಗ, ಸೌಮ್ಯಾರೆಡ್ಡಿ ಅವರು ಸ್ಪರ್ಧೆಗೆ ಆಸಕ್ತಿ ತೋರಿದರು. ಅದರ ಪರಿಣಾಮ ಪಕ್ಷ ಅವರಿಗೆ ಟಿಕೆಟ್ ನೀಡಿತು. ಕ್ಷೇತ್ರದ ಉದ್ದಗಲ ಓಡಾಡಿ ಮತದಾರರನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಿದ್ದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಮ್ಮ ಪುತ್ರಿಯ ಗೆಲುವಿಗಾಗಿ ಸಾಕಷ್ಟು ಶ್ರಮ ಹಾಕಿದ್ದರು ಆದರೆ, ಗೆಲುವಿನ ದಡ ಮುಟ್ಟಿಸಲು ಸಾಧ್ಯವಾಗಲಿಲ್ಲ. ಇಬ್ಬರ ಪ್ರಯತ್ನವೂ ಫಲ ನೀಡಲಿಲ್ಲ.

ಪ್ರಧಾನಿ ನರೇಂದ್ರ ಮೋದಿ ಅವರ ಅಭಿವೃದ್ಧಿ ಕೆಲಸಗಳು ಮತ್ತು ತಾವು ಐದು ವರ್ಷಗಳ ಅವಧಿಯಲ್ಲಿ ಕ್ಷೇತ್ರದಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸಗಳನ್ನು ಮುಂದಿಟ್ಟುಕೊಂಡು ಮತವನ್ನು ಯಾಚಿಸಿದರು. ಜೆಡಿಎಸ್ ಪಕ್ಷವೂ ಇವರ ಬೆಂಬಲಕ್ಕೆ ನಿಂತಿತು. ಇವೆಲ್ಲವೂ ಇವರನ್ನು ಅತಿ ಹೆಚ್ಚು ಮತಗಳ ಅಂತರದಿಂದ ಗೆಲ್ಲುವುದಕ್ಕೆ ಸಹಾಯವಾಯಿತು. ಕಾಂಗ್ರೆಸ್ ಕೂಡ ಈ ಬಾರಿ ಗೆದ್ದೇ ತಿರಬೇಕು ಎಂಬ ಕಾರಣಕ್ಕೆ ಜಿದ್ದಾಜಿದ್ದಿನ ಪೈಪೋಟಿ ನೀಡಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಾ ಕ್ಷೇತ್ರದಲ್ಲಿ ಎರಡೆರಡು ಬಾರಿ ಪ್ರಚಾರ ನಡೆಸಿದ್ದರು.

ತೇಜಸ್ವಿ ಸೂರ್ಯ 7,50,830 ಮತಗಳನ್ನು ಪಡೆದರೆ ಸೌಮ್ಯಾರೆಡ್ಡಿ 4,73,747 ಮತಗಳನ್ನು ಪಡೆದಿದ್ದಾರೆ. ಸಂಘಪರಿವಾರ ಮತ್ತು ಕಾರ್ಯಕರ್ತರ ಒಗ್ಗಟ್ಟಿನ ಹೋರಾಟ ತೇಜಸ್ವಿ ಅವರಿಗೆ ಬಲ ನೀಡಿದೆ. ಅಲ್ಲದೇ, ಯುವ ಮತದಾರರು ಕೈ ಹಿಡಿದಿದ್ದಾರೆ.

ನಿರೀಕ್ಷೆ ಮೀರಿದ ಗೆಲುವಿಗೆ ಮನದುಂಬಿದೆ

ರಾಮನಗರ: ‘ಮತದಾರರು ಇಷ್ಟೊಂದು ದೊಡ್ಡ ಗೆಲುವಿನ ಉಡುಗೊರೆ ನೀಡುತ್ತಾರೆಂದು ನಾನೂ ನಿರೀಕ್ಷಿರಲಿಲ್ಲ. ತೀವ್ರ ಪೈಪೋಟಿ ಇರುವುದರಿಂದ 50 ಸಾವಿರದಿಂದ ಒಂದು ಲಕ್ಷ ಮತಗಳ ಅಂತರದಲ್ಲಿ ಗೆಲ್ಲುವೆ. ಪಕ್ಷಾತೀತವಾಗಿ ಮತದಾರರು ಮನಸ್ಸು ಮಾಡಿದರೆ 2 ಲಕ್ಷ ಮತಗಳ ಮುನ್ನಡೆ ಬರಬಹುದು ಎಂದು ಊಹಿಸಿದ್ದೆ. ಆದರೆ, ಕ್ಷೇತ್ರದ ಜನರು ನನ್ನ ಊಹೆಯನ್ನು ಮೀರಿದ ಗೆಲುವನ್ನು ದಯಪಾಲಿಸಿದ್ದಾರೆ’ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ವಿಜೇತ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ್ ಹೇಳಿದರು.

ತಮ್ಮ ಗೆಲುವು ಖಚಿತವಾಗುತ್ತಿದ್ದಂತೆ ನಗರದ ಹೊರವಲಯದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಮತ ಎಣಿಕೆ ಕೇಂದ್ರಕ್ಕೆ ಪತ್ನಿ ಅನಸೂಯಾ ಅವರೊಂದಿಗೆ ಮಂಗಳವಾರ ಭೇಟಿ ನೀಡಿದ ಅವರು, ಸುದ್ದಿಗಾರರೊಂದಿಗೆ ಮಾತನಾಡಿದರು.

‘ಈ ನನ್ನ ಗೆಲುವು ಬಿಜೆಪಿ ಮತ್ತು ಜೆಡಿಎಸ್ ನಾಯಕರು, ಮುಖಂಡರು, ಕಾರ್ಯಕರ್ತರು ಹಾಗೂ ಮತದಾರರ ಶ್ರಮದ ಫಲವಾಗಿದೆ. ಹಾಗಾಗಿ, ಈ ಗೆಲುವನ್ನು ಅವರಿಗೆ ಅರ್ಪಿಸುವೆ. ನಾನು ಹೋದ ಕಡೆಯೆಲ್ಲಾ ಮೈತ್ರಿಕೂಟದ ಕಾರ್ಯಕರ್ತರಷ್ಟೇ ಅಲ್ಲದೆ, ಪಕ್ಷಾತೀತ ಬಂಧುಗಳು ಸಹ ನನ್ನನ್ನು ಕಂಡು ಬೆಂಬಲ ವ್ಯಕ್ತಪಡಿಸಿ ಮತ ಹಾಕಿದ್ದಾರೆ. ಅವರೆಲ್ಲರಿಗೂ ನಾನು ಋಣಿ’ ಎಂದರು.

> **ಈ ನನ್ನ ಗೆಲುವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಶಕ್ತಿಗಿಂತ ದೊಡ್ಡದು ಬೇರಾವ ಶಕ್ತಿಯೂ ಇಲ್ಲ ಎಂಬುದನ್ನು ಸಾಬೀತುಪಡಿಸಿದೆ.**
> **ಡಾ. ಸಿ.ಎನ್. ಮಂಜುನಾಥ್**
> ವಿಜೇತ ಬಿಜೆಪಿ ಅಭ್ಯರ್ಥಿ, ಬೆಂಗಳೂರು ಗ್ರಾಮಾಂತರ

‘ಕ್ಷೇತ್ರದಲ್ಲಿ ನನ್ನನ್ನು ಗೆಲ್ಲಿಸಲೇಬೇಕೆಂದು ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಗದರ್ಶನ ಮಾಡಿದರು. ಗೃಹ ಸಚಿವ ಅಮಿತ್ ಶಾ ಅವರು ಚನ್ನಪಟ್ಟಣಕ್ಕೆ ಬಂದು ರೋಡ್ ಷೋ ನಡೆಸಿ ಪ್ರಚಾರ ನಡೆಸಿದರು. ಜೆಡಿಎಸ್‌ನ ರಾಷ್ಟ್ರೀಯ ನಾಯಕ ಎಚ್.ಡಿ. ದೇವೇಗೌಡ ಅವರು ಪ್ರಚಾರ ಮಾಡಿದರು. ರಾಜ್ಯ ನಾಯಕರಾದ ಎಚ್.ಡಿ. ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ,ಬಿಜೆಪಿಯ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ, ಪಕ್ಷದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ನನಗೆ ಮಾರ್ಗದರ್ಶನ ಮಾಡಿ ಗೆಲುವಿಗೆ ಕಾರಣರಾಗಿದ್ದಾರೆ. ಎರಡೂ ಪಕ್ಷಗಳ ಹಾಲಿ ಮತ್ತ ಮಾಜಿ ಶಾಸಕರು, ಮುಖಂಡರ ಶ್ರಮವನ್ನು ಮರೆಯುವಂತಿಲ್ಲ’ ಎಂದು ನೆನೆದರು.

‘ಅಭ್ಯರ್ಥಿಯಾಗಿ ನನ್ನ ಹೆಸರು ಘೋಷಣೆಯಾದಾಗಿನಿಂದ ಎರಡೂ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರು ಹಗಲು–ರಾತ್ರಿ ನನ್ನ ಗೆಲುವಿಗಾಗಿ ಕೆಲಸ ಮಾಡಿದ್ದಾರೆ. ನಾನು ಪ್ರಚಾರಕ್ಕೆ ಹೋದಲ್ಲೆಲ್ಲಾ ಮತದಾರರು ನನಗೆ ತುಂಬು ಹೃದಯದ ಪ್ರೀತಿಯನ್ನು ಧಾರೆ ಎರೆದಿದ್ದಾರೆ. ಹೈ ವೋಲ್ಟೇಜ್ ಕ್ಷೇತ್ರದಲ್ಲಿ ನನಗೆ ಐತಿಹಾಸಿಕ ಗೆಲುವು ತಂದು ಕೊಟ್ಟಿದ್ದಾರೆ’ ಎಂದು ಕೃತಜ್ಞತೆ ಸಲ್ಲಿಸಿದರು.

‘ಬಂಡೆ’ ಒಡೆದ ಗೌಡರ ಅಳಿಯ!

• ಓದೇಶ ಸಕಲೇಶಪುರ

ರಾಮನಗರ: ರಾಜ್ಯವಷ್ಟೇ ಅಲ್ಲದೇ ದೇಶದ ಗಮನ ಸೆಳೆದಿದ್ದ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ್ ಅವರು ಮತದಾರರ ಹೃದಯ ಗೆಲ್ಲುವ ಮೂಲಕ, ಅಭೂತಪೂರ್ವ ಜಯ ದಾಖಲಿಸಿದ್ದಾರೆ. ಸತತ ನಾಲ್ಕನೇ ಗೆಲುವಿನ ನಿರೀಕ್ಷೆಯಲ್ಲಿದ್ದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ತೀವ್ರ ಮುಖಭಂಗ ಅನುಭವಿಸಿದ್ದಾರೆ.

ಸುರೇಶ್ ಅವರ ಈ ಸೋಲು ಉಪ ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ಅವರಿಗಾದ ಹಿನ್ನಡೆ ಎಂದೂ ವಿಶ್ಲೇಷಿಸ ಲಾಗುತ್ತಿದೆ. ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಮತ್ತು ಶಿವಕುಮಾರ್ ಕುಟುಂಬದ ನಡುವಣ ಪ್ರತಿಷ್ಠೆಯಾಗಿದ್ದ ಈ ಚುನಾವಣೆಯಲ್ಲಿ ಗೌಡರ ಅಳಿಯ ಮಂಜುನಾಥ್ ಸಂಸತ್ ಪ್ರವೇಶ ಕ್ಷೇತ್ರದ ಮೈತ್ರಿ ಪಕ್ಷಗಳಿಗೆ ಉತ್ಸಾಹ ತುಂಬಿದೆ.

ಚುನಾವಣೆಯುದ್ದಕ್ಕೂ ಮಂಜುನಾಥ್ ಕುರಿತು ‘ಹೃದಯವಂತ’ ಎಂಬ ಮಾತುಗಳು ಕಾರ್ಯಕರ್ತರು ಮತ್ತು ಜನಸಾಮಾನ್ಯರ ಬಾಯಲ್ಲಿ ಹರಿದಾಡಿದವು. ಈ ಬಾಯಿಂದ ಬಾಯಿಗೆ ನಡೆದ ಸ್ವಯಂಪ್ರೇರಿತ ಪ್ರಚಾರದ ಅಲೆಯಲ್ಲಿ ಸುರೇಶ್ ಮಾಡಿದ ಅಭಿವೃದ್ಧಿ ಕೆಲಸ, ಅವರ ಅಣ್ಣನ ಪ್ರಭಾವ ಹಾಗೂ ರಾಜ್ಯ ಸರ್ಕಾರದ ಗ್ಯಾರಂಟಿ ಸಾಧನೆಗಳು ಕೊಚ್ಚಿ ಹೋದವು. ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ಏಳುತ್ತಿದ್ದ ಮಂಜುನಾಥ್ ಪರವಾದ ಅಲೆಯು ಸುನಾಮಿಯಂತೆ ಮತದಾರರನ್ನು ಆವರಿಸಿತು. ಹಿಂದಿನ 3 ಚುನಾವಣೆಗಳಲ್ಲಿ ಮತ ಎಣಿಕೆಗೂ ಮುಂಚೆಯೇ ಸುರೇಶ್ ಗೆಲುವು ಖಚಿತ ಎನ್ನುವ ವಾತಾವರಣ ಇರುತ್ತಿತ್ತು. ಈ ಸಲ ಅವರಿಗೆ ಎದುರಾಳಿಯಾಗಿ ಮಂಜುನಾಥ್ ಹೆಸರು ಘೋಷಣ ಆಗುತ್ತಿದ್ದಂತೆಯೇ ಆ ವಾತಾವರಣದಲ್ಲಿ ಬದಲಾವಣೆ ಆಗತೊಡಗಿತು. ಸುರೇಶ್ ವಿರುದ್ಧ ವಿರೋಧ ಪಕ್ಷದವರು ಮಾಡಿದ ಅಧಿಕಾರ ದರ್ಪ, ದೌರ್ಜನ್ಯ ಹಾಗೂ ಒರಟು ವ್ಯಕ್ತಿತ್ವದ ಆರೋಪಗಳು ಮತದಾರರ ಮನಸ್ಸಿಗೆ ನಾಟಿದವು.

ಜಿಲ್ಲೆಯೊಳಗಿನ ಅಧಿಕಾರ ಮತ್ತು ರಾಜಕೀಯ ಸ್ಥಾನಮಾನಗಳನ್ನು ಡಿ.ಕೆ ಸಹೋದರರು ತಮ್ಮ ಒಕ್ಕಲಿಗ ಸಮುದಾಯದವರಿಗಷ್ಟೇ ನೀಡಿದ್ದು ಅಹಿಂದ ಸೇರಿದಂತೆ ಇತರ ಸಮುದಾಯಗಳಲ್ಲಿ ಅಸಮಾಧಾನದ ಹೊಗೆಯಾಗಿ ಒಳೇಟು ಕೊಟ್ಟಿತು. ಆದರೂ, ಕ್ಷೇತ್ರದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿರುವ ಒಕ್ಕಲಿಗರ ಒಲವು ಮಾತ್ರ ಮಂಜುನಾಥ್ ಪರವಾಗಿ ವ್ಯಕ್ತವಾಯಿತು.

ಪಂಚಾಯಿತಿ ಮಟ್ಟದಿಂದ ಹಿಡಿದು ಜಿಲ್ಲಾ ಹಂತದ ಮೈತ್ರಿ ಮುಖಂಡರನ್ನು ಪಕ್ಷಕ್ಕೆ ಸೇರಿಸಿಕೊಂಡರು. ಅಭ್ಯರ್ಥಿಯೊಬ್ಬರಿಂದ ನಾಮಪತ್ರ ಹಿಂಪಡೆಯುವಂತೆ ಮಾಡಿದರೂ ಸುರೇಶ್ ಗೆಲುವಿನ ಸನಿಹ ಬರಲಾಗಲಿಲ್ಲ. ರಾಮನಗರದ ವೈದ್ಯಕೀಯ ಕಾಲೇಜು ಸ್ಥಳಾಂತರ ಬೆಳವಣಿಗೆ, ಅದರ ವಿರುದ್ಧ ನಡೆದ ಹೋರಾಟ, ಜಿಲ್ಲೆಯ ಹೆಸರು ಬದಲಾವಣೆಯ ಮಾತು, ಕನಕಪುರ ಕೇಂದ್ರಿತ ಅಭಿವೃದ್ಧಿಗೆ ಆದ್ಯತೆ... ಮತದಾರರನ್ನು ಭಾವನಾತ್ಮಕವಾಗಿ ಪ್ರಭಾವಿಸಿ, ಸುರೇಶ್ ವಿರುದ್ಧದ ಮತಗಳಾಗಿ ಪರಿವರ್ತನೆ ಆಗಲು ಕಾರಣವಾದವು.



ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಜಯ ಗಳಿಸಿದ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ್ ಅವರು, ತಮ್ಮ ಗೆಲುವಿನ ಪ್ರಮಾಣಪತ್ರವನ್ನು ಬೆಂಬಲಿಗರತ್ತ ಪ್ರದರ್ಶಿಸಿದರು. ಪತ್ನಿ ಅನಸೂಯಾ ಮಂಜುನಾಥ್ ಇದ್ದಾರೆ
ಪ್ರಜಾವಾಣಿ ಚಿತ್ರ: ಚಂದ್ರೇಗೌಡ

ಅಧಿಕಾರ ರಾಜಕೀಯಕ್ಕಿಂತ ವಿಶ್ವಾಸ ರಾಜಕೀಯ ಗೆದ್ದಿದೆ– ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಅಧಿಕಾರ ರಾಜಕೀಯಕ್ಕಿಂತ ವಿಶ್ವಾಸ ರಾಜಕೀಯ ಗೆದ್ದಿದೆ. ಉತ್ತರ ಭಾರತದ ರಾಜ್ಯಗಳಲ್ಲೂ ಮೋದಿ ಹಾಗೂ ರಾಮಮಂದಿರದ ಅಲೆ ಇಲ್ಲ ಎಂಬುದನ್ನು ಫಲಿತಾಂಶ ಸಾಬೀತು ಪಡಿಸಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.


ಫಲಿತಾಂಶ ಕುರಿತಂತೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ರಾಜ್ಯದಲ್ಲಿ ನಾವು 9 ಸ್ಥಾನ ಗೆದ್ದಿದ್ದೇವೆ. ನಮಗೆ ಇನ್ನೂ ಹೆಚ್ಚಿನ ಸ್ಥಾನ ಬರಬೇಕಾಗಿತ್ತು. ಯಾಕೆ ಕಡಿಮೆ ಬಂದಿದೆ ಎಂದು ಚಿಂತನೆ ಮಾಡುತ್ತೇವೆ’ ಎಂದರು.

‘ಗ್ಯಾರಂಟಿ ಯೋಜನೆಗಳಿಂದ ಹೆಚ್ಚಿನ ಸೀಟು ನಿರೀಕ್ಷೆ ಮಾಡಿದ್ದೆವು. ಯಾವ ವರ್ಗ, ಯಾಕೆ ನಮ್ಮಿಂದ ದೂರವಾಗಿದೆ? ಯಾವ ವಿಚಾರದಲ್ಲಿ ಜನ ನಮ್ಮನ್ನು ಒಪ್ಪಿಲ್ಲ ಎಂಬುದನ್ನು ಪರಿಶೀಲಿಸಿ, ಸರಿಪಡಿಸಿಕೊಳ್ಳುತ್ತೇವೆ’ ಎಂದರು.

‘ಗ್ರಾಮಾಂತರ ಕ್ಷೇತ್ರದಲ್ಲಿ ಮಂಜುನಾಥ್ ಅವರ ಪಕ್ಷ ಗೆಲ್ಲುವುದಕ್ಕಿಂತ, ಅವರು ವ್ಯಕ್ತಿಯಾಗಿ ಗೆದ್ದಿದ್ದಾರೆ. ಅವರಿಗೆ ಅವಕಾಶ ನೀಡಬೇಕು ಎಂದು ಜನ ಅವರನ್ನು ಗೆಲ್ಲಿಸಿದ್ದಾರೆ. ನನ್ನ ಸಹೋದರ ಡಿ.ಕೆ. ಸುರೇಶ್‌ಗೆ ನನ್ನ ಕ್ಷೇತ್ರದಲ್ಲಿ (ಕನಕಪುರ) 60 ಸಾವಿರ ಮತಗಳ ಮುನ್ನಡೆ ನಿರೀಕ್ಷೆ ಇತ್ತು. ಆದರೆ, 26 ಸಾವಿರ ಮಾತ್ರ ಬಂದಿದೆ. ಇದರಿಂದ ನಾವು ಪಾಠ ಕಲಿಯುತ್ತೇವೆ’ ಎಂದರು.


‘ಮೋದಿ ಅವರ ಜನಪ್ರಿಯತೆ ಕುಗ್ಗಿರುವುದು ಸಾಬೀತಾಗಿದೆ. ಬಿಜೆಪಿಗೆ ಸಂಪೂರ್ಣ ಬಹುಮತ ಇಲ್ಲ ಎಂಬುದನ್ನು ಎಲ್ಲರೂ ಒಪ್ಪಬೇಕು. ನನ್ನ ಕ್ಷೇತ್ರದಲ್ಲಿ ನನ್ನ ಸಹೋದರನಿಗೆ ಹಿನ್ನಡೆಯಾದಂತೆ, ಅಯೋಧ್ಯೆಯಲ್ಲೂ ಬಿಜೆಪಿ ಹಿನ್ನಡೆ ಅನುಭವಿಸಿದೆ’ ಎಂದರು.

‘10 ವರ್ಷಗಳ ನಂತರ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ 100ರ ಗಡಿ ದಾಟಿದ್ದು, ಜನರು ಮತ್ತೆ ಕಾಂಗ್ರೆಸ್ ಪಕ್ಷದ ಮೇಲೆ ಭರವಸೆ ಇಟ್ಟಿದ್ದಾರೆ. ಕಾಂಗ್ರೆಸ್ ಮುಕ್ತ ಭಾರತ ಮಾಡಲು ಸಾಧ್ಯವಿಲ್ಲ ಎಂಬುದನ್ನು ಈ ಚುನಾವಣೆ ತೋರಿಸಿದೆ’ ಎಂದೂ ಹೇಳಿದರು.



ಜೀವರಚನೆಯ ಸೂತ್ರಕ್ಕೊಂದು ಕತ್ತರಿ ಗೋಂದು

ಐನ್‌ಸ್ಟೈನ್‌ನಂತಹ ಬುದ್ಧಿಶಕ್ತಿಯ ಮಗು ಬೇಕು ಎಂದು ಆರ್ಡರ್ ಕೊಟ್ಟು ಪಡೆಯಬಹುದೆ? ಹೀಗೊಂದು ತಂತ್ರಜ್ಞಾನದ ಸಾಧ್ಯತೆ ಇದೆಯೆಂದಿದ್ದಾರೆ, ವಿಜ್ಞಾನಿಗಳು...



ಗಣೇಶ್ ಭಟ್ ನೆಲಮಾವ್

ಪ್ರಕೃತಿಯಿಂದ ಪ್ರೇರಣೆ ಪಡೆದು ಹೊಸ ಹೊಸ ತಂತ್ರಜ್ಞಾನಗಳನ್ನು ಮನುಷ್ಯ ಕಂಡುಕೊಳ್ಳುವುದು ಮೊದಲಿಂದಲೂ ನಡೆದು ಬಂದ ಪ್ರಕ್ರಿಯೆ. ದೋಣಿಯಿಂದ ವಿಮಾನದವರೆಗೂ, ವೆಲ್ಕ್ರೋದಿಂದ ಸೌರಶಕ್ತಿ ಪ್ಯಾನೆಲ್‌ಗಳವರೆಗೂ ನಮ್ಮ ಸುತ್ತಮುತ್ತಲಿನ ಹತ್ತಾರು ವಸ್ತುಗಳ ಮೂಲ ಇರುವುದು ಪ್ರಕೃತಿಯಲ್ಲಿಯೇ. ಇದನ್ನು ಕೇವಲ ಬಾಹ್ಯಸ್ವರೂಪದ ವಿಷಯದಲ್ಲಿ ನಿಲ್ಲಿಸದೆ, ಇನ್ನೂ ಒಂದು ಹೆಜ್ಜೆ ಮುಂದುವರೆದು, ಜೀವಿಗಳ ರಚನೆಯ ಮೂಲಸೂತ್ರದಲ್ಲಿಯೇ ಕತ್ತರಿಯನ್ನು ಆಡಿಸುವ ಹಂತಕ್ಕೆ ವಿಜ್ಞಾನಿಗಳು ಕೊಂಡೊಯ್ದಿದ್ದಾರೆ. ಅದುವೇ 'ಕ್ರಿಸ್ಪರ್' (CRISPR) ತಂತ್ರಜ್ಞಾನ. ಈ ತಂತ್ರಜ್ಞಾನಕ್ಕೆ ಮೂಲಪ್ರೇರಣೆ ಸಿಕ್ಕಿದ್ದು ಬ್ಯಾಕ್ಟೀರಿಯಾಗಳಿಂದ. ಈ ತಂತ್ರಜ್ಞಾನವನ್ನು ಅರ್ಥ ಮಾಡಿಕೊಳ್ಳುವ ಮೊದಲು ಜೀವಿಗಳ ಡಿಎನ್‌ಎ ಹೇಗೆ ಕೆಲಸ ಮಾಡುತ್ತದೆ ಎಂದು ತಿಳಿದುಕೊಳ್ಳಬೇಕು.

'ಡಿಎನ್‌ಎ' ಎಂಬುದು ಪ್ರತಿಯೊಂದು ಜೀವಿಯ ರಚನೆಯ ಬ್ಲೂಪ್ರಿಂಟ್. ಜೀವಿಯ ಆಕಾರ, ಗಾತ್ರ, ಮೈಬಣ್ಣ, ಕಣ್ಣಿನ ಬಣ್ಣ, ಇತ್ಯಾದಿಯಾಗಿ ಪ್ರತಿಯೊಂದು ವಿವರವೂ ಡಿಎನ್‌ಎ ಒಳಗಿರುವ ಸೂತ್ರಗಳಲ್ಲಿ ಅಡಕವಾಗಿರುತ್ತದೆ. ಡಿಎನ್‌ಎಯಲ್ಲಿ ಅಡಿನೈನ್ (Adenine), ಸೈಟೋಸಿನ್ (cytosine), ಗ್ವಾನೈನ್ (guanine), ಮತ್ತು ಥೈಮಿನ್ (thymine) ಎಂಬ ನಾಲ್ಕು ಬಗೆಯ ರಾಸಾಯನಿಕ ರಚನೆಗಳ ಸರಣಿಯು ಇದ್ದು, (ಇವುಗಳನ್ನು ಸಂಕ್ಷಿಪ್ತವಾಗಿ 'A, C, G, T' ಎಂದು ಸೂಚಿಸಲಾಗುತ್ತದೆ), ಈ ನಾಲ್ಕು ರಾಸಾಯನಿಕಗಳು ಇರುವ ಕ್ರಮವನ್ನು ಆಧರಿಸಿಯೇ ಶರೀರದ ಎಲ್ಲ ರಚನೆಗಳೂ ಉಂಟಾಗುವುದು. ಅಂದರೆ ಡಿಎನ್‌ಎಯಲ್ಲಿ ಈ ನಾಲ್ಕು ರಾಸಾಯನಿಕಗಳು ಯಾವ ಕ್ರಮದಲ್ಲಿ ಕಂಡು ಬರುತ್ತವೋ, ಅದನ್ನು ಆಧರಿಸಿ ಜೀವಕೋಶಗಳು ಕಾರ್ಯನಿರ್ವಹಿಸುತ್ತವೆ. ಒಟ್ಟಾರೆಯಾಗಿ ನ್ಯೂಕ್ಲಿಯೋಬೇಸ್ ಎಂದು ಕರೆಯಲ್ಪಡುವ ಈ A, C, G, T ಎಂಬ ನಾಲ್ಕೇ ನಾಲ್ಕು ಅಕ್ಷರಗಳಿಂದ ಉಂಟಾದ ಅಕ್ಷರಮಾಲೆಯು, ಜೀವಿಯ ಇಡೀ ಶರೀರದ ಮಾಹಿತಿಯನ್ನು ಸೂತ್ರರೂಪದಲ್ಲಿ ಹಿಡಿದಿಟ್ಟಿರುತ್ತದೆ. ಜೀವಕೋಶಗಳು ಈ ಮಾಹಿತಿಯನ್ನು ಓದಿ ಅದನ್ನು ಆಧರಿಸಿ ಪ್ರೊಟೀನುಗಳನ್ನು ರಚಿಸುತ್ತವೆ. ಕೆಲವೊಮ್ಮೆ ಈ ನ್ಯೂಕ್ಲಿಯೋಬೇಸ್ ಸರಣಿಗಳು ದೋಷಪೂರಿತವಾಗಿರುತ್ತವೆ. ಆಗ ಶರೀರದಲ್ಲಿ ನ್ಯೂನತೆಗಳು ಅಥವಾ ಕಾಯಿಲೆಗಳು ಉಂಟಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಈ ದೋಷಪೂರಿತ ನ್ಯೂಕ್ಲಿಯೋಬೇಸ್ ಸರಣಿಗಳನ್ನು ಚಿಕಿತ್ಸೆಯ ಮೂಲಕ ಸರಿಪಡಿಸಲು ಸಾಧ್ಯವಾಗುತ್ತದೆ. ಆದರೆ ಇದರಲ್ಲಿ ಬಳಸುತ್ತಿದ್ದ ವಿಧಾನ ಅಷ್ಟೊಂದು ದಕ್ಷವಾಗೇನೂ ಇರಲಿಲ್ಲ.

1987ರಲ್ಲಿ ಎಸ್ಚರೀಶಿಯ ಕೊಲಿ (Escherichia coli) ಎಂಬ ಬ್ಯಾಕ್ಟೀರಿಯಾವನ್ನು ಅಧ್ಯಯನ ಮಾಡುತ್ತಿದ್ದ ವಿಜ್ಞಾನಿಗಳಿಗೆ ಅದರ ಡಿಎನ್‌ಎಯಲ್ಲಿ ಕೆಲವು ವಿಚಿತ್ರ ನ್ಯೂಕ್ಲಿಯೋಬೇಸ್ ಸರಣಿಗಳು ಕಂಡುಬಂದವು. ನಿರ್ದಿಷ್ಟ ಅಂತರಗಳಲ್ಲಿದ್ದ ಈ ಸರಣಿಗಳಿಗೆ 'Clustered Regularly Interspaced Short Palindromic Repeats' ಅಥವಾ ಸಂಕ್ಷೇಪವಾಗಿ 'CRISPR' ಎಂದು ಹೆಸರಿಡಲಾಯಿತು.

ಇದೇ ರೀತಿ ಇತರ ಕೆಲವು ಬ್ಯಾಕ್ಟೀರಿಯಾಗಳಲ್ಲಿಯೂ ನ್ಯೂಕ್ಲಿಯೋಬೇಸ್ ಸರಣಿಗಳು ಪತ್ತೆಯಾದವು. ಅಧ್ಯಯನದ ಬಳಿಕ ತಿಳಿದು ಬಂದುದೇನೆಂದರೆ, ಈ ಬ್ಯಾಕ್ಟೀರಿಯಾಗಳು ತಮ್ಮ ಮೇಲೆ ದಾಳಿ ಮಾಡುತ್ತಿದ್ದ ವೈರಸ್‌ಗಳ ಡಿಎನ್‌ಎನಿಂದ ಪ್ರಮುಖ ಭಾಗಗಳನ್ನು ತುಣುಕುಗಳಾಗಿ ಕತ್ತರಿಸಿ ಸಂಗ್ರಹಿಸಿ ಇಟ್ಟುಕೊಳ್ಳುತ್ತಿದ್ದವು. ನಂತರ ಭವಿಷ್ಯದಲ್ಲಿ ಎಂದಾದರೂ ಅದೇ ವೈರಸ್ ದಾಳಿಗೆ ಮತ್ತೆ ಒಳಗಾದರೆ, ಈ ಹಿಂದೆ ಕತ್ತರಿಸಿ ಇಟ್ಟುಕೊಂಡಿದ್ದ ಡಿಎನ್‌ಎ ತುಣುಕಿಯೊಂದಿಗೆ ಹೋಲಿಸಿ ಆ ವೈರಸ್‌ನ ಡಿಎನ್‌ಎಯನ್ನು ಅದರ ಮುಖ್ಯಭಾಗದಲ್ಲಿ ಕತ್ತರಿಸಿ ನಿಷ್ಕ್ರಿಯಗೊಳಿಸುತ್ತಿದ್ದವು. ಅಂದರೆ ಒಂದು ರೀತಿಯಲ್ಲಿ, ತಮ್ಮ ಶತ್ರು ಮೊದಲ ಬಾರಿಗೆ ದಾಳಿ ಮಾಡಿದಾಗ ಆ ಶತ್ರುವಿನ ಬಗೆಗಿನ ಎಲ್ಲಾ ಮಾಹಿತಿಗಳನ್ನು, ಆತನ ಕಾರ್ಯವಿಧಾನ, ದೌರ್ಬಲ್ಯಗಳನ್ನು ಒಂದು ಕಡತದಲ್ಲಿ ಸಂಗ್ರಹಿಸಿ ಇಟ್ಟುಕೊಂಡು ಮುಂದೆ ಎಂದಾದರೂ ಮತ್ತೆ ಅದೇ ಶತ್ರು ದಾಳಿ ಮಾಡಿದರೆ, ಆ ಹಿಂದಿನ ಮಾಹಿತಿಯನ್ನು ಬಳಸಿಕೊಂಡು ಶತ್ರುವನ್ನು ಸೋಲಿಸುವ ತಂತ್ರ. ಇಲ್ಲಿ ಬ್ಯಾಕ್ಟೀರಿಯಾಗಳು ವೈರಸ್‌ಗಳ ಡಿಎನ್‌ಎಯನ್ನು ಕತ್ತರಿಸಲು ಬಳಸುತ್ತಿದ್ದ ತಂತ್ರ ವಿಜ್ಞಾನಿಗಳ ಗಮನ ಸೆಳೆಯಿತು. Cas9 ಎಂಬ ಹೆಸರಿನ ಪ್ರೊಟೀನ್ ಅನ್ನು ಬ್ಯಾಕ್ಟೀರಿಯಾಗಳು ಒಂದು ಕತ್ತರಿಯಂತೆ ಬಳಸುತ್ತಿದ್ದವು. ಇದೇ ರೀತಿ CRISPR ಮತ್ತು Cas9 ಪ್ರೊಟೀನನ್ನು ಬಳಸಿ, ಡಿಎನ್‌ಎಯಿಂದ ನಮಗೆ ಬೇಡದ ಗುಣಗಳನ್ನು ಉಂಟುಮಾಡುವ ನ್ಯೂಕ್ಲಿಯೋಬೇಸ್ ಸರಣಿಯನ್ನು ಕತ್ತರಿಸಿ ತೆಗೆದು ಹಾಕಿ, ನಮಗೆ ಬೇಕಾದ ಗುಣಗಳನ್ನು ಕೊಡುವ ನ್ಯೂಕ್ಲಿಯೋಬೇಸ್ ಸರಣಿಯನ್ನು ಜೋಡಿಸುವ ತಂತ್ರಜ್ಞಾನ ಅಭಿವೃದ್ಧಿಪಡಿಸುವಲ್ಲಿ ವಿಜ್ಞಾನಿಗಳು ಯಶಸ್ವಿಯಾದರು. ಇದರಿಂದ ಹಲವಾರು ಅನುವಂಶಿಯ ಕಾಯಿಲೆಗಳ, ಕ್ಯಾನ್ಸರ್ ರೋಗದ ಚಿಕಿತ್ಸೆಗಳಲ್ಲಿ ಗಣನೀಯ ಪ್ರಗತಿ ಕಾಣಬಹುದು. ಎಚ್‌ಐವಿಯಂತಹ ಸಾಂಕ್ರಾಮಿಕ ರೋಗಗಳ ವಿರುದ್ಧ ರೋಗನಿರೋಧಕಶಕ್ತಿಯನ್ನು ಹೆಚ್ಚಿಸಲು ಕೂಡ ಸಾಧ್ಯವಾಗಬಹುದು. ಕೃಷಿಯಲ್ಲಿ ಇಳುವರಿ ಹೆಚ್ಚು ಕೊಡುವಂತಹ ತಳಿಗಳನ್ನು, ರೋಗನಿರೋಧಕ ಸಾಮರ್ಥ್ಯ ಹೆಚ್ಚಿರುವ ತಳಿಗಳನ್ನು ಅಭಿವೃದ್ಧಿಪಡಿಸಬಹುದು. ಮುಂದೊಮ್ಮೆ ಸುದೂರಭವಿಷ್ಯದಲ್ಲಿ 'ಡಿಸೈನರ್ ಬೇಬಿ' ಕೂಡ ಸಾಧ್ಯವಾಗಬಹುದು. ಅಂದರೆ, ನಮಗೆ ಎಸ್. ಜಾನಕಿಯಂತಹ ಧ್ವನಿ ಇರುವ ಮಗು ಬೇಕು ಎಂತಲೋ, ಐನ್‌ಸ್ಟೈನ್‌ನಂತಹ ಬುದ್ಧಿಶಕ್ತಿ ಇರುವ ಮಕ್ಕಳು ಬೇಕು ಎಂದೋ ಆರ್ಡರ್ ಕೊಟ್ಟು ಮಕ್ಕಳನ್ನು ಪಡೆಯುವಂತಹ ಸೌಲಭ್ಯ ಕಂಡುಬಂದರೂ ಆಶ್ಚರ್ಯವಿಲ್ಲ. ❖

ಎಕ್ಸ್–ರೇ ಲೇಸರ್ ಅಣುಶಕ್ತಿಗಿಂತಲೂ ಶಕ್ತಿಶಾಲಿ



ನೇಸರ ಕಾಡನಕುಪ್ಪೆ

ಒಂದು ಪ್ರಬಲ ಅಣುಶಕ್ತಿ ಸ್ಥಾವರವು ಒಂದು ವರ್ಷವಿಡೀ ಉತ್ಪಾದಿಸುವ ವಿದ್ಯುತ್ತನ್ನು ಒಂದು ಎಕ್ಸ್–ರೇ ಲೇಸರ್ ಕಿರಣವು ಕ್ಷಣಾರ್ಧದಲ್ಲಿ ಉತ್ಪಾದಿಸಿಬಿಟ್ಟರೆ ಹೇಗಿರುತ್ತದೆ? ಇದು ಪವಾಡವಲ್ಲ; ಇದು ವಿಜ್ಞಾನ. ಕ್ಯಾಲಿಫೋರ್ನಿಯಾದ ಎಸ್‌ಲ್ಯಾಕ್ (ಸ್ಟ್ಯಾನ್‌ಫೋರ್ಡ್ ಲೀನಿಯರ್ ಆಕ್ಸಲರೇಟರ್ ಸೆಂಟರ್) ರಾಷ್ಟ್ರೀಯ ಅಣುಸಂಶೋಧನಾ ಪ್ರಯೋಗಾಲಯದಲ್ಲಿ ಇಂಥದ್ದೊಂದು ವಿಸ್ಮಯ ನಡೆದಿದೆ. ಇಲ್ಲಿನ ವಿಜ್ಞಾನಿಗಳು ಹೊಸ ಬಗೆಯ ಲೇಸರ್ ಕಿರಣವೊಂದನ್ನು ಅನ್ವೇಷಿಸಿದ್ದು, ವಿದ್ಯುತ್ ಉತ್ಪಾದನೆಯ ಸಿದ್ಧಾಂತಗಳನ್ನೇ ಇದು ಬುಡಮೇಲು ಮಾಡಲಿದೆ ಎಂದು ವ್ಯಾಖ್ಯಾನಿಸಲಾಗಿದೆ.

ಸದ್ಯಕ್ಕೆ ಲಭ್ಯವಿರುವ ಅತಿ ಸಮರ್ಥ ವಿದ್ಯುತ್ ಉತ್ಪಾದನಾ ವಿಧಾನವೆಂದರೆ ಅದು ಅಣುಶಕ್ತಿ. ಯುರೇನಿಯಂ ಅನ್ನು ಬಳಸಿಕೊಂಡು ಅಣುವಿಭಜನೆ ಪ್ರಕ್ರಿಯೆಯ ಮೂಲಕ ವಿದ್ಯುತ್ ತಯಾರಿಸುವ ವಿಧಾನವಿದು. ಇತರೇ ವಿದ್ಯುತ್ ಉತ್ಪಾದನಾ ವಿಧಾನಗಳಾದ ಜಲವಿದ್ಯುತ್ ಸ್ಥಾವರಗಳು, ಶಾಖವಿದ್ಯುತ್ ಸ್ಥಾವರಗಳಿಗಿಂತ ಅಣುಶಕ್ತಿ ಸ್ಥಾವರಗಳು ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ತಯಾರಿಸುತ್ತವೆ. ಆದರೆ, ಅಣುಶಕ್ತಿ ಸ್ಥಾವರಗಳ ಅಡ್ಡ ಪರಿಣಾಮಗಳು ಹೆಚ್ಚು. ಅತಿ ಅಪಾಯಕಾರಿ ವಿಕಿರಣ ಸೋಸುವ ರಾಸಾಯನಿಕಗಳ ಬಳಕೆಯಾಗುವ ಕಾರಣ, ಭೂಮಿಯ ಪರಿಸರ ಹಾಗೂ ಜೀವಿಗಳ ಆರೋಗ್ಯದ ಮೇಲೆ ಅತಿ ಕೆಟ್ಟ ಪರಿಣಾಮ ಬೀರುತ್ತವೆ.

ಈ ಮಿತಿಗಳನ್ನು ಗಮನದಲ್ಲಿಟ್ಟುಕೊಂಡು ಕ್ಯಾಲಿಫೋರ್ನಿಯಾದ ಎಸ್‌ಲ್ಯಾಕ್ ರಾಷ್ಟ್ರೀಯ ಅಣುಸಂಶೋಧನಾ ಪ್ರಯೋಗಾಲಯದ ಆಗಸ್ಟಿನೋ ಮಾರಿನೆಲ್ಲಿ ಅವರ ನೇತೃತ್ವದ ತಂಡವು ಈ ಹೊಸ ಪ್ರಯೋಗವನ್ನು ಮಾಡಿದೆ. ಜಲವಿದ್ಯುತ್ ವಿದ್ಯುತ್ ಸ್ಥಾವರವನ್ನು ಹೊರತುಪಡಿಸಿದರೆ, ಮಿಕ್ಕೆಲ್ಲ ಬಗೆಯ ವಿದ್ಯುತ್ ಸ್ಥಾವರಗಳಲ್ಲೂ ಶಾಖವನ್ನು ಪ್ರಧಾನವಾಗಿ ಇರಿಸಿಕೊಂಡು ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ. ವಿಜ್ಞಾನಿಗಳು ಇಲ್ಲಿಯೂ ಇದೇ ತತ್ವವನ್ನು ಆಧರಿಸಿ ವಿದ್ಯುತ್ ತಯಾರಿಸಿದ್ದಾರೆ. ಎಕ್ಸ್–ರೇ ಆಧಾರಿತ ಲೇಸರ್ ಕಿರಣವೊಂದು ಅದೆಷ್ಟು ಶಕ್ತಿಶಾಲಿಯಾಗಿ ಇರುತ್ತದೆ ಎಂದರೆ, ಒಂದು ಶತಕೋಟಿ ಸೆಕೆಂಡ್‌ನ 440 ಶತಕೋಟಿ ಭಾಗವೊಂದರಷ್ಟು ಸಮಯದಲ್ಲಿ ಸರಿಸುಮಾರು 1 ಟೆರಾವ್ಯಾಟ್ ವಿದ್ಯುತ್ ಉತ್ಪತ್ತಿಯಾಗುತ್ತದೆ. ಇದು ಒಂದು ಪ್ರಬಲ ಅಣುಶಕ್ತಿ ಸ್ಥಾವರವು ಒಂದು ವರ್ಷವಿಡೀ ಉತ್ಪಾದಿಸುವ ವಿದ್ಯುತ್ತಿಗೆ ಸಮ (1 ಗಿಗಾ ವ್ಯಾಟ್- 1 ಸಾವಿರ ಗಿಗಾ ವ್ಯಾಟ್‌ಗೆ ಒಂದು ಟೆರಾವ್ಯಾಟ್). ಇನ್ನು ವರ್ಷವಿಡೀ ಈ ಲೇಸರ್ ಮೂಲಕ ವಿದ್ಯುತ್ ಉತ್ಪಾದಿಸಿದರೆ ಅದೆಷ್ಟು ಪ್ರಮಾಣದ ಶಕ್ತಿ ಸಿಗಬಹುದು ಎಂದು ಅಂದಾಜಿಸಿ.

ಕಾರ್ಯವೈಖರಿ ಹೇಗೆ?

ಕೊಂಚ ಕ್ಲಿಷ್ಟವಾದ ಕಾರ್ಯವೈಖರಿ ಇದು ಎನ್ನಬಹುದು. ಲೇಸರ್ ಕಿರಣವನ್ನು ಮೊದಲು ಬೆಳಕಿನ ವೇಗದಲ್ಲಿ ಚಲಿಸುವಂತೆ ಮಾಡಬೇಕು. ಒಮ್ಮೆ ಅದು ಬೆಳಕಿನ ವೇಗವನ್ನು ತಲುಪಿದ ಮೇಲೆ ಹಲವು ಆಯಸ್ಕಾಂತೀಯ ವಲಯಗಳ ಮೂಲಕ ಅದನ್ನು ಸಂಚರಿಸುವಂತೆ ಮಾಡಬೇಕು. ಈ ಪ್ರಕ್ರಿಯೆಗೆ ಒಳಗಾದ ಕೂಡಲೇ ಲೇಸರ್ ಕಿರಣವು ಬೆಳಕಿಗಿಂತ ಸುಮಾರು 10 ಸಾವಿರ ಪಟ್ಟು ಹೆಚ್ಚು ಪ್ರಕಾಶಮಾನವಾಗಿ ಬೆಳಗುತ್ತದೆ. ಜೊತೆಗೆ, ಅಪಾರ ಪ್ರಮಾಣವಾದ ಶಾಖವನ್ನು ಹೊರಸೂಸುತ್ತದೆ. ಈ ಬೆಳಕು ಹಾಗೂ ಶಾಖವನ್ನು ವಿದ್ಯುತ್ತಾಗಿ ಪರಿವರ್ತಿಸಿದರೆ ಆಯಿತು. ಮೊದಲು ಉಲ್ಲೇಖಿಸಿದಷ್ಟು ವಿದ್ಯುತ್ ಕ್ಷಣ ತುಣುಕಿನಲ್ಲಿ ಸಿಗುತ್ತದೆ. ಈ ಪ್ರಯೋಗವನ್ನು ಈಗ ಯಶಸ್ವಿಯಾಗಿ ನಿರೂಪಿಸಿರುವ ವಿಜ್ಞಾನಿಗಳು ದೊಡ್ಡ ಪ್ರಮಾಣದಲ್ಲಿ, ಉತ್ಪಾದನಾ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಬಹುದಾಗಿದೆ ಎಂದು ಆಗಸ್ಟಿನೋ ನೇತೃತ್ವದ ತಂಡದ ವಿಜ್ಞಾನಿಗಳು ಹೇಳಿದ್ದಾರೆ.

ಎಲ್ಲೆಲ್ಲಿ ಬಳಕೆ ಸಾಧ್ಯ?

ಪ್ರಮುಖವಾಗಿ ವಿದ್ಯುತ್ ಉತ್ಪಾದನೆಯಲ್ಲಿ ಇದರ ಬಳಕೆ ಆಗಲಿದೆ. ಇದು ಪರಿಸರಪ್ರಿಯ ವಿಧಾನವೂ ಆಗಿದೆ. ಇಲ್ಲಿ ಯಾವುದೇ ಬಗೆಯ ವಿಕಿರಣವನ್ನು ಸೂಸುವ ಅಥವಾ ಪರಿಸರ ಮಾಲಿನ್ಯವನ್ನು ಉಂಟುಮಾಡುವ ರಾಸಾಯನಿಕಗಳ ಬಳಕೆ ಇಲ್ಲವೇ ಇಲ್ಲ. ಲೇಸರ್ ಎನ್ನುವುದು ಒಂದು ಬೆಳಕಿನ ಬಗೆ. ಈ ಬೆಳಕನ್ನು ಕೃತಕವಾಗಿ ಸೃಷ್ಟಿಸಬೇಕಾದರೂ, ಅದರಿಂದ ಯಾವುದೇ ರೀತಿಯ ವಿಕಿರಣ ಸಂಬಂಧಿತ ಸಮಸ್ಯೆಗಳಿಲ್ಲ. ಲೇಸರ್ ಮೂಲಕ ಉತ್ಪಾದನೆಯಾಗುವ ಬೆಳಕು, ಶಾಖ ಅಪಾಯಕಾರಿ ನಿಜ. ಆದರೆ, ಅದನ್ನು ನಿಯಂತ್ರಿಸಲು ಸಾಧ್ಯವಿದೆ. ಕೈಗಾರಿಕೆಗಳಲ್ಲಿ ಸೂಕ್ತವಾದ ನಿಯಮಗಳನ್ನು ರೂಪಿಸಿ ಅವನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವಂತಹ ಸನ್ನಿವೇಶವನ್ನು ಸೃಷ್ಟಿಸಿದರೆ ಈ ಹೊಸ ಸಂಶೋಧನೆಯು ಮಾನವ ಲೋಕಕ್ಕೆ ವರದಾನವಾಗಲಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ವಿದ್ಯುತ್ ಉತ್ಪಾದನೆ ಮಾತ್ರವೇ ಅಲ್ಲದೇ ರಕ್ಷಣಾ ಕ್ಷೇತ್ರದಲ್ಲೂ ಇದರ ಬಳಕೆ ಸಾಧ್ಯ. ವಿವಿಧ ಬಗೆಯ ಕ್ಷಿಪಣಿಗಳು, ಸಬ್ ಮರೀನ್ ಬಗೆಯ ವಾಹನಗಳು, ಅವುಗಳಿಗೆ ಇಂಧನ – ಈ ಬಗೆಯ ಕ್ಷೇತ್ರಗಳಲ್ಲೂ ಈ ತಂತ್ರಜ್ಞಾನ ಸಹಾಯಕ್ಕೆ ಬರಲಿದೆ. ಅಲ್ಲದೇ, ವಿವಿಧ ಬಗೆಯ ಕೈಗಾರಿಕೆಗಳಿಗೆ ವಿದ್ಯುತ್ ಪೂರೈಸುವಲ್ಲಿ ಇದು ಮಹತ್ವದ ಪಾತ್ರ ವಹಿಸುವ ಕಾರಣ, ವಿದ್ಯುತ್ ಕೊರತೆ ಸಮಸ್ಯೆಯು ನೀಗಲಿದೆ ಎಂದು ವ್ಯಾಖ್ಯಾನಿಸಲಾಗಿದೆ.

ಹಲವು ಮಿತಿಗಳು

ಈ ಸಂಶೋಧನೆಯನ್ನು ಪ್ರಯೋಗಿಕವಾಗಿ ಯಶಸ್ವಿಯಾಗಿ ನಡೆಸಲಾಗಿದೆಯಾದರೂ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸುವಾಗ ಎದುರಾಗುವ ಸವಾಲುಗಳನ್ನು ಪರೀಕ್ಷಿಸಿಲ್ಲ. ಈಗ ಉತ್ಪಾದಿಸಿರುವ ವಿದ್ಯುತ್ ಕೇವಲ ಕೆಲವೇ ಮಿಲಿ ಸೆಕೆಂಡ್‌ಗಳ ವರೆಗೆ ಲೇಸರ್ ಬಳಸಿರುವುದು. ಹೆಚ್ಚಿನ ಸಮಯದವರೆಗೆ ಲೇಸರ್ ಬಳಕೆಯಾದಾಗ ಉತ್ಪತ್ತಿಯಾಗುವ ಅಗಾಧ ಪ್ರಮಾಣದ ಶಾಖ, ಬೆಳಕನ್ನು ನಿಯಂತ್ರಿಸುವುದು, ಉತ್ಪಾದನೆಯಾಗುವ ವಿದ್ಯುತ್ತನ್ನು ಸಂಗ್ರಹಿಸುವುದು, ಮತ್ತೊಂದೆಡೆಗೆ ಸಾಗಿಸುವುದು, ಶಾಖನಿಯಂತ್ರಣಕ್ಕೆ ಬಳಸುವ ವಿಧಾನಗಳು ದೊಡ್ಡ ಸವಾಲೊಡ್ಡುತ್ತದೆ. ಉದಾಹರಣೆಗೆ, ಈಗ ಇರುವ ಉಷ್ಣ ವಿದ್ಯುತ್ ಸ್ಥಾವರ, ಅಣುಶಕ್ತಿ ಸ್ಥಾವರಗಳಲ್ಲಿ ಶಾಖನಿಯಂತ್ರಣಕ್ಕೆ ಅತಿ ದೊಡ್ಡ ಚಿಮಣಿಗಳನ್ನು ಬಳಸಲಾಗುತ್ತಿದೆ. ಇವು ಆಕ್ರಮಿಸುವ ಬೃಹತ್ ಜಾಗ, ಅವುಗಳ ನಿರ್ವಹಣೆ ಸಾಧಾರಣದ್ದಲ್ಲ. ಇನ್ನು ವಿಜ್ಞಾನಿಗಳು ಇಲ್ಲಿ ಉಲ್ಲೇಖಿಸಿರುವ ಪ್ರಮಾಣದ ಶಾಖನಿಯಂತ್ರಣಕ್ಕೆ ಎಂತಹ ಬಗೆಯ ಮೂಲಸೌಕರ್ಯ ಬೇಕಾಗುವುದು, ಅದಕ್ಕೆ ಬೇಕಾಗುವ ವೆಚ್ಚ ಇತ್ಯಾದಿ ಅಗತ್ಯಗಳನ್ನು ಪಟ್ಟಿ ಮಾಡಬೇಕಿದೆ; ಕಾರ್ಯಸಾಧ್ಯತೆಯನ್ನು ಪರೀಕ್ಷಿಸಬೇಕಾಗಿದೆ. ❖


ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ಜೀವ ಕ್ರಿಯೆಗಳು

19) ಮಾನವನ ಶ್ವಾಸಕೋಶ ಚಿತ್ರ ಬರೆದು, ಅದರ ರಚನೆ ಮತ್ತು ಕಾರ್ಯ ನಿರ್ವಹಣೆಯನ್ನು ವಿವರಿಸಿ

ಉತ್ತರ:– ಮನುಷ್ಯರಲ್ಲಿ (ಚಿತ್ರ ನೋಡಿ) ಮೂಗಿನ ಹೊಳ್ಳೆಗಳ ಮೂಲಕ ಗಾಳಿ ಒಳ ತೆಗೆದುಕೊಳ್ಳಲ್ಪಡುತ್ತದೆ. ಮೂಗಿನ ಹೊಳ್ಳೆಯೊಳಗೆ ಹಾದು ಹೋಗುವ ಗಾಳಿಯು ಹೊಳ್ಳೆಯ ಒಳದಾರಿಯಲ್ಲಿರುವ ಸೂಕ್ಷ್ಮ ಕೂದಲುಗಳಿಂದ ಸೋಸಲ್ಪಡುತ್ತದೆ. ಹೊಳ್ಳೆಯ ಒಳದಾರಿಯು ಲೋಳೆಯಿಂದ ಕೂಡಾ ಆವರಿಸಿದೆ. ಇದೂ ಈ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.



ಇಲ್ಲಿಂದ ಗಾಳಿಯು ಗಂಟಲಿನ ಮೂಲಕ ಶ್ವಾಸಕೋಶದೊಳಗೆ ಚಲಿಸುತ್ತದೆ. ಗಂಟಲಿನಲ್ಲಿ ಮೃದ್ವಸ್ಥಿಯ ಉಂಗುರಗಳಂಥ ರಚನೆಗಳಿವೆ. ಇವುಗಳು ಗಾಳಿ ಹಾದುಹೋಗುವ ರಚನೆ ಕುಸಿಯದಂತೆ ನೋಡಿಕೊಳ್ಳುತ್ತವೆ. ಚಿತ್ರದಲ್ಲಿರುವಂತೆ ಮಾನವನ ಶ್ವಾಸಾಂಗವ್ಯೂಹ ಶ್ವಾಸನಾಳವು ಶ್ವಾಸಕೋಶದೊಳಗೆ ಅತಿಸಣ್ಣ ನಳಿಕೆಗಳಾಗಿ ವಿಭಜನೆ ಹೊಂದಿ ಅಂತಿಮವಾಗಿ ಬಲೂನಿನಂತಹ ರಚನೆಗಳಾಗಿ ಬದಲಾಗುತ್ತವೆ. ಅವುಗಳನ್ನು ಗಾಳಿಗೂಡುಗಳು ಎನ್ನುವರು. ಈ ಗಾಳಿಗೂಡುಗಳು ಒಂದು ಮೇಲ್ಮೈಯನ್ನು ಒದಗಿಸುತ್ತವೆ. ಅಲ್ಲಿ ಅನಿಲಗಳ ವಿನಿಮಯ ನಡೆಯುತ್ತದೆ. ಗಾಳಿಗೂಡುಗಳ ಗೋಡೆಯು ವಿಶಾಲ ವ್ಯಾಪ್ತಿಯ ರಕ್ತನಾಳಗಳ ಜಾಲವನ್ನು ಹೊಂದಿವೆ. ನಾವು ಗಾಳಿಯನ್ನು ಒಳತೆಗೆದುಕೊಂಡಾಗ ನಮ್ಮ ಪಕ್ಕೆಲುಬುಗಳು ಮೇಲಕ್ಕೆ ಏರುತ್ತವೆ ಮತ್ತು ವಪೆಯು ಚಪ್ಪಟೆಗೊಳ್ಳುತ್ತದೆ. ಇದರ ಪರಿಣಾಮವಾಗಿ ಎದೆಗೂಡು ದೊಡ್ಡದಾಗುತ್ತದೆ. ಇದರಿಂದಾಗಿ ಗಾಳಿಯು ಶ್ವಾಸಕೋಶದೊಳಗೆ ಹೀರಲ್ಪಡುತ್ತದೆ ಮತ್ತು ಹಿಗ್ಗಿದ ಗಾಳಿಗೂಡುಗಳನ್ನು ತುಂಬುತ್ತದೆ. ರಕ್ತವು ದೇಹದ ಇತರ ಭಾಗಗಳಿಂದ ಕಾರ್ಬನ್ ಡೈಆಕ್ಸೈಡ್‌ಅನ್ನು ಗಾಳಿಗೂಡುಗಳಲ್ಲಿ ಬಿಡುಗಡೆ ಮಾಡಲು ತರುತ್ತದೆ ಮತ್ತು ಆಲ್ವಿಯೋಲಾರ್ ಗಾಳಿಯಲ್ಲಿರುವ ಆಕ್ಸಿಜನ್‌ಅನ್ನು ಆಲ್ವಿಯೋಲಾರ್ ರಕ್ತನಾಳಗಳಲ್ಲಿರುವ ರಕ್ತವು ದೇಹದ ಎಲ್ಲಾ ಜೀವಕೋಶಗಳಿಗೆ ಸರಬರಾಜು ಮಾಡಲು ಪಡೆದುಕೊಳ್ಳುತ್ತದೆ. ಉಸಿರಾಟ ಚಕ್ರದ ಸಮಯದಲ್ಲಿ ಗಾಳಿಯನ್ನು ಒಳತೆಗೆದುಕೊಂಡು ಹೊರಬಿಡುವಾಗ ಶ್ವಾಸಕೋಶಗಳು ಯಾವಾಗಲೂ ಸ್ವಲ್ಪ ಪ್ರಮಾಣದ ಗಾಳಿಯನ್ನು ಉಳಿಸಿಕೊಂಡಿರುತ್ತವೆ. ಆದ್ದರಿಂದ, ಆಕ್ಸಿಜನ್‌ಅನ್ನು ಹೀರಿಕೊಳ್ಳಲು ಮತ್ತು ಕಾರ್ಬನ್ ಡೈಆಕ್ಸೈಡ್‌ಅನ್ನು ಬಿಡುಗಡೆ ಮಾಡಲು ಸಾಕಷ್ಟು ಸಮಯ ಇರುತ್ತದೆ.

ಪ್ರಾಣಿಗಳ ದೇಹದ ಗಾತ್ರವು ದೊಡ್ಡದಾಗಿದ್ದಾಗ ವಿಸರಣಾ ಒತ್ತಡವೊಂದೇ ದೇಹದ ಎಲ್ಲಾ ಭಾಗಗಳಿಗೆ ಆಕ್ಸಿಜನ್ ಪೂರೈಸುವ ಜವಾಬ್ದಾರಿಯನ್ನು ನಿರ್ವಹಿಸಲಾರದು. ಬದಲಾಗಿ ಉಸಿರಾಟದ ವರ್ಣಕಗಳು ಶ್ವಾಸಕೋಶದಲ್ಲಿನ ಗಾಳಿಯಿಂದ ಆಕ್ಸಿಜನ್‌ಅನ್ನು ಪಡೆಯುತ್ತವೆ ಮತ್ತು ಬಿಡುಗಡೆ ಮಾಡುವ ಮೊದಲು ಆಕ್ಸಿಜನ್ ಕೊರತೆಯಿರುವ ಅಂಗಾಂಶಗಳಿಗೆ ಕೊಂಡೊಯ್ಯುತ್ತವೆ. ಮನುಷ್ಯರಲ್ಲಿ ಹಿಮೋಗ್ಲೋಬಿನ್ ಉಸಿರಾಟದ ವರ್ಣಕವಾಗಿದ್ದು ಅದು ಆಕ್ಸಿಜನ್‌ನೆಡೆಗೆ ಹೆಚ್ಚಿನ ಆಕರ್ಷಣೆಯನ್ನು ಹೊಂದಿದೆ. ಈ ವರ್ಣಕವು ಕೆಂಪು ರಕ್ತ ಕಣಗಳಲ್ಲಿರುತ್ತದೆ. ಆಕ್ಸಿಜನ್‌ಗಿಂತ ಕಾರ್ಬನ್ ಡೈಆಕ್ಸೈಡ್ ಹೆಚ್ಚಾಗಿ ನೀರಿನಲ್ಲಿ ಕರಗುತ್ತದೆ ಮತ್ತು ಬಹುತೇಕ ಇದರಿಂದಾಗಿ ನಮ್ಮ ರಕ್ತದಲ್ಲಿ ವಿಲೀನಗೊಂಡ ರೂಪದಲ್ಲಿ ಸಾಗಿಸಲ್ಪಡುತ್ತದೆ.

20) ಉಭಯವಾಸಿಗಳು ಮತ್ತು ಬಹುತೇಕ ಸರೀಸೃಪಗಳಂಥ ಪ್ರಾಣಿಗಳು ಎಷ್ಟು ಕೋಣೆಗಳ ಹೃದಯವನ್ನು ಹೊಂದಿವೆ ?

ಉತ್ತರ:– ಮೂರು

21) ಮೀನುಗಳು ಎಷ್ಟು ಕೋಣೆಗಳ ಹೃದಯವನ್ನು ಹೊಂದಿವೆ?

ಉತ್ತರ:– ಎರಡು

23) ರಕ್ತದೊತ್ತಡದ ಬಗ್ಗೆ ಬರೆಯಿರಿ

ಉತ್ತರ:– ಒಂದು ರಕ್ತನಾಳದ ಗೋಡೆಯ ಮೇಲೆ ರಕ್ತವು ಉಂಟುಮಾಡುವ ಬಲವನ್ನು ರಕ್ತದೊತ್ತಡ ಎನ್ನುವರು. ಈ ಒತ್ತಡವು ಅಭಿಧಮನಿಗಳಿಗಿಂತ ಅಪಧಮನಿಗಳಲ್ಲಿ ಸಾಕಷ್ಟು ಅಧಿಕವಾಗಿರುತ್ತದೆ. ಹೃತ್ಕುಕ್ಷಿಗಳ ಸಂಕುಚನದಿಂದಾದ ಅಪಧಮನಿಗಳಲ್ಲಿನ ರಕ್ತದ ಒತ್ತಡವನ್ನು ಸಂಕುಚನದ (systolic) ಒತ್ತಡ ಎನ್ನುವರು ಮತ್ತು ಹೃತ್ಕುಕ್ಷಿಗಳ ವಿಕಸನದಿಂದ ಉಂಟಾಗುವ ಅಪಧಮನಿಗಳಲ್ಲಿನ ಒತ್ತಡವನ್ನು ವ್ಯಾಕೋಚನದ (diastolic) ಒತ್ತಡ ಎನ್ನುವರು. ಸಾಮಾನ್ಯ ಸಂಕುಚನದ ಒತ್ತಡವು ಸುಮಾರು 120mm ಪಾದರಸ ಮತ್ತು ವ್ಯಾಕೋಚನದ ಒತ್ತಡವು 80mm ಪಾದರಸಗಳಷ್ಟಿರುತ್ತದೆ.

24) ಯಾವುದನ್ನು ಲೋಮನಾಳಗಳು ಎನ್ನುವರು?

ಉತ್ತರ:– ಅಪಧಮನಿಯು ಒಂದು ಅಂಗವನ್ನು ಅಥವಾ ಅಂಗಾಂಶವನ್ನು ತಲುಪಿದ ನಂತರ, ರಕ್ತವನ್ನು ಪ್ರತಿಯೊಂದು ಜೀವಕೋಶದ ಸಂಪರ್ಕಕ್ಕೆ ತರಲು ಸಣ್ಣ ಸಣ್ಣ ನಾಳಗಳಾಗಿ ವಿಭಜಿಸುತ್ತದೆ. ಅತ್ಯಂತ ಸಣ್ಣ ನಾಳಗಳು ಒಂದು ಜೀವಕೋಶದಷ್ಟು ದಪ್ಪ ಭಿತ್ತಿಯನ್ನು ಹೊಂದಿದ್ದು ಅದನ್ನು ಲೋಮನಾಳ ಎಂದು ಕರೆಯುವರು.

25) ಒಂದುವೇಳೆ ಈ ನಾಳವ್ಯವಸ್ಥೆಯಲ್ಲಿ ಸೋರಿಕೆ ಉಂಟಾದರೆ ಏನಾಗುತ್ತದೆ? ಗಾಯಗೊಂಡು ರಕ್ತಸ್ರಾವವಾಗುತ್ತದೆ. ಪರಿಸ್ಥಿತಿ ನಿಯಂತ್ರಿಸಲು ಗಾಯವಾದ ಪ್ರದೇಶಗಳಲ್ಲಿ ರಕ್ತವು ಹೆಪ್ಪುಗಟ್ಟುವಂತೆ ಮಾಡಿ ಈ ಸೋರಿಕೆಗಳನ್ನು ನಿಲ್ಲಿಸಲಾಗುತ್ತದೆ. ಹಾಗಾದರೆ ಈ ಕಾರ್ಯದಲ್ಲಿ ಯಾವುದು ಪ್ರಧಾನ ಪಾತ್ರ ನೀಡುತ್ತದೆ?

ಉತ್ತರ:– ಕಿರುತಟ್ಟೆ

26) ದುಗ್ಧರಸದ ಬಗ್ಗೆ ಬರೆಯಿರಿ

ಉತ್ತರ:– ಮಾನವನ ದೇಹದಲ್ಲಿ ಸಾಗಾಣಿಕೆಯಲ್ಲಿ ತೊಡಗಿಸಿಕೊಂಡಿರುವದ್ರವಗಳಲ್ಲಿ ಒಂದು ದುಗ್ಧರಸ (lymph) ಇದನ್ನು ಅಂಗಾಂಶದ್ರವ ಎಂದು ಸಹಾ ಕರೆಯುತ್ತಾರೆ. ಲೋಮನಾಳಗಳ ಭಿತ್ತಿಯಲ್ಲಿ ಕಂಡುಬರುವ ರಂಧ್ರಗಳ ಮೂಲಕ ಸ್ವಲ್ಪ ಪ್ರಮಾಣದ ಪ್ಲಾಸ್ಮ, ಪ್ರೋಟೀನ್‌ಗಳು ಮತ್ತು ರಕ್ತ ಜೀವಕೋಶಗಳು ಅಂಗಾಂಶಗಳಲ್ಲಿನ ಅಂತರಕೋಶೀಯ ಅವಕಾಶಗಳೊಳಗೆ ಪ್ರವೇಶಿಸಿ ಅಂಗಾಂಶದ್ರವ ಅಥವಾ ದುಗ್ದರಸವನ್ನು ಉಂಟುಮಾಡುತ್ತವೆ. ಇದು ರಕ್ತದಲ್ಲಿನ ಪ್ಲಾಸ್ಮಾದಂತೆಯೇ ಇರುತ್ತದೆ ಆದರೆ ಬಣ್ಣರಹಿತವಾಗಿದ್ದು ಕಡಿಮೆ ಪ್ರೋಟೀನನ್ನು ಹೊಂದಿರುತ್ತದೆ. ಅಂತರಕೋಶೀಯ ಅವಕಾಶಗಳ ಮೂಲಕ ದುಗ್ದರಸವು ದುಗ್ದಲೋಮನಾಳಗಳಲ್ಲಿ ಹರಿಯುತ್ತದೆ, ಅವುಗಳು ಒಂದುಗೂಡಿ ದೊಡ್ಡ ದುಗ್ದನಾಳಗಳನ್ನು ಉಂಟುಮಾಡುತ್ತವೆ. ಅವು ಅಂತಿಮವಾಗಿ ದೊಡ್ಡದಾದ ಅಭಿಧಮನಿಗಳಿಗೆ ತೆರೆಯುತ್ತವೆ.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

Chapter -3
ELECTROCHEMISTRY

30. Write a brief note on the Electrical protection method of preventing corrosion.


Ans:- **(......Contd)**

Thus, in case an underground iron pipe is connected to a block of magnesium, then the latter will be corroded due to its lesser reduction potential than iron. Therefore, it will protect iron against rusting. It is also a case of sacrificial protection.

31. Write a note on Daniell Cell.

Ans:- Daniell cell is a modified electrochemical cell in which Zn-$CuSO_4$ reaction takes place.


The cell contains a porous pot in place of a salt bridge. It helps in separating the two electrolytes present in their respective half cells and also allows the migration of ions from one half cell to the other in order to maintain the neutral character of the electrolytes.



Daniell Cell

In the Daniell cell, a zinc rod immersed in $ZnSO_4$ solution acts as the oxidation half cell. In the reduction half cell, the copper vessel itself acts as the cathode while the saturated solution of copper sulphate acts as the electrolyte. A few crystals of copper sulphate are also added to maintain the concentration of the electrolyte. The chemical reactions involved are the same as in the electrochemical cell.

The electrochemical cell for the above redox reaction may be shown as follows:



Cu—AgNO₃ indirect redox reaction in an electrochemical cell.

Electrochemical cell representing Redox Reaction between Copper and silver Nitrate Solution

The redox reaction may be represent as:

$Cu(s) \rightarrow Cu^{2+} + (aq) + 2e^-$

(oxidation half reaction)

$2Ag^+(aq) + 2NO_3^-(aq) + 2e^- \rightarrow 2Ag(S) + 2NO_3^-(aq)$

(Reduction half reaction)

$Cu(s) + 2Ag^+(aq) \rightarrow Cu^{2+}(aq) + 2Ag(s)$

The electrochemical cell may also be represented with the help of cell notation as follows:

$Cu(s) \mid Cu^{2+}(aq) \parallel Ag^+(aq) \mid Ag(s)$

32. Distinguish between emf and potential difference.

Ans:-

Emf	*Potential difference*
It is the difference in the electrode potentials when no current flows through the cell.	It is the difference in the electrode potentials when current is flowing through the cell.
It is the maximum voltage which can be obtained from the cell.	It is less than the maximum voltage which can be obtained from the cell.
It is responsible for the flow of steady current.	It is not responsible for the flow of steady current.
It can be measured by a potentiometer.	It can be measured by a voltmeter.

33. Write a note on the function of the Salt Bridge


Ans:- A salt bridge is an inverted U-shaped glass tube which contains in it a suitable salt in the form of a thick paste made in agar-agar.

A salt bridge has the following functions to perform:

(i) A salt bridge completes the inner cell circuit.
(ii) A salt bridge prevents the transference of electrolyte from one half cell to the other.
(iii) A salt bridge maintains the electrical neutrality of the electrolytes in the two half cells.

34. Write a note on Standard Hydrogen Electrode.

Ans:- In a standard hydrogen electrode, a platinum wire coated with finely divided platinum called platinum black is sealed in a glass tube. It carries a platinum foil at one end as in the fig. The wire is dipped in an aqueous solution containing 1 molar H^+ ion connection (normally 1 M HCl is used). Pure hydrogen gas under a pressure of 1 bar is constantly bubbled through the solution. The temperature of the solution is maintained at 298 K.



Standard hydrogen electrode

(Contd.......)

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ: ಸೊಸೈಟಿ ಅಧ್ಯಕ್ಷನ ಬಂಧನ

‘ಫಸ್ಟ್ ಫೈನಾನ್ಸ್’ಗೆ ₹94.73 ಕೋಟಿ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಗರಣದ ತನಿಖೆ ಚುರುಕುಗೊಳಿಸಿರುವ ಎಸ್ಐಟಿ ಅಧಿಕಾರಿಗಳು, ಹೈದರಾಬಾದ್‌ನಲ್ಲಿರುವ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ (ಎಫ್ಎಫ್‌ಸಿಸಿಎಸ್ಎಲ್) 18 ಖಾತೆಗಳಿಗೆ ₹ 94.73 ಕೋಟಿ ಜಮೆ ಆಗಿರುವ ಸಂಗತಿಯನ್ನು ಪತ್ತೆ ಹಚ್ಚಿದ್ದಾರೆ.



ಸತ್ಯನಾರಾಯಣ್

ಹಣ ಅಕ್ರಮ ವರ್ಗಾವಣೆಗೆ ಸಂಬಂಧಪಟ್ಟಂತೆ ಪುರಾವೆಗಳನ್ನು ಸಂಗ್ರಹಿಸಿರುವ ಎಸ್ಐಟಿ ಅಧಿಕಾರಿಗಳು, ಎಫ್ಎಫ್‌ಸಿಸಿಎಸ್ಎಲ್ ಅಧ್ಯಕ್ಷ ಸತ್ಯನಾರಾಯಣ್ ಅವರನ್ನು ಮಂಗಳವಾರ ಬಂಧಿಸಿದ್ದಾರೆ. ಈ ಮೂಲಕ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಮೂರಕ್ಕೆ ಏರಿದೆ.

‘ಹೈದರಾಬಾದ್‌ನ ಸತ್ಯನಾರಾಯಣ್, ಹಣ ಅಕ್ರಮ ವರ್ಗಾವಣೆ ಕೃತ್ಯದಲ್ಲಿ ಭಾಗಿಯಾಗಿದ್ದ ಬಗ್ಗೆ ಹಲವು ಪುರಾವೆಗಳು ಲಭ್ಯವಾಗಿವೆ. ಇವುಗಳನ್ನು ಆಧರಿಸಿ ಸತ್ಯನಾರಾಯಣನನ್ನು ಹೈದರಾಬಾದ್‌ನಲ್ಲಿ ಸೆರೆ ಹಿಡಿದು ನಗರಕ್ಕೆ ಕರೆತರಲಾಗಿದೆ. ಇವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಕೋರಲಾಗುವುದು’ ಎಂದು ಎಸ್ಐಟಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಮುಖ್ಯಾಂಶಗಳು

- 2013ರಲ್ಲಿ ಸ್ಥಾಪನೆಯಾಗಿದ್ದ ಸೊಸೈಟಿ
- 13 ಶಾಖೆಯಲ್ಲಿ 7 ಸಾವಿರ ಗ್ರಾಹಕರು
- ಕೆಲ ಮುಖಂಡರ ಜೊತೆ ಅಧ್ಯಕ್ಷನ ಒಡನಾಟ

ಸೊಸೈಟಿಯ 18 ಖಾತೆಗಳಿಗೆ ಹಣ: ‘ಹೈಗ್ರೌಂಡ್ಸ್ ಠಾಣೆಗೆ ದೂರು ನೀಡಿದ್ದ ಪ್ರಧಾನ ವ್ಯವಸ್ಥಾಪಕ ರಾಜಶೇಖರ್, ಹಣ ಅಕ್ರಮ ವರ್ಗಾವಣೆ ಸಂಬಂಧ ಕೆಲ ದಾಖಲೆಗಳನ್ನು ಒದಗಿಸಿದ್ದರು. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಎಂ.ಜಿ. ರಸ್ತೆ ಶಾಖೆಯಿಂದ ಕೆಲ ದಾಖಲೆಗಳನ್ನೂ ಸಂಗ್ರಹಿಸಲಾಗಿತ್ತು. ಇವುಗಳನ್ನು ಪರಿಶೀಲಿಸಿದಾಗ, 18 ಖಾತೆಗಳಿಗೆ ಹಣ ವರ್ಗಾವಣೆ ಆಗಿರುವ ಮಾಹಿತಿ ಲಭ್ಯವಾಗಿತ್ತು’ ಎಂದು ಎಸ್ಐಟಿ ಮೂಲಗಳು ತಿಳಿಸಿವೆ.

‘ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿರುವ (ಎಫ್ಎಫ್‌ಸಿಸಿಎಸ್ಎಲ್) ಒಂದು ಖಾತೆಗೆ ಆರಂಭದಲ್ಲಿ ನೇರವಾಗಿ ₹5 ಕೋಟಿ ಜಮೆ ಆಗಿತ್ತು. ಇದಾದ ನಂತರ, ಬೇರೆ ಬ್ಯಾಂಕ್ ಖಾತೆಗಳ ಮೂಲಕ ಸೊಸೈಟಿಯ 17 ಖಾತೆಗಳಿಗೆ ₹89.73 ಕೋಟಿ ಜಮೆ ಆಗಿರುವುದಕ್ಕೆ ಪುರಾವೆಗಳು ಸಿಕ್ಕಿದ್ದವು. ಇವುಗಳನ್ನು ಆಧರಿಸಿ ಹೈದರಾಬಾದ್‌ಗೆ ಹೋಗಿದ್ದ ಎಸ್ಐಟಿ ತಂಡ, ಸೊಸೈಟಿ ಬಗ್ಗೆ ಮಾಹಿತಿ ಸಂಗ್ರಹಿಸಿತ್ತು. ನಂತರವೇ, ಅಧ್ಯಕ್ಷ ಸತ್ಯನಾರಾಯಣನನ್ನು ಬಂಧಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಸಚಿವರ ಆಪ್ತ ನಾಗರಾಜು ವಿಚಾರಣೆ?

ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ಅವರ ಆಪ್ತ ಎನ್ನಲಾದ ಕಾಂಗ್ರೆಸ್ ಮುಖಂಡ ನೆಕ್ಕಂಟಿ ನಾಗರಾಜ್ ಅವರನ್ನು ಎಸ್ಐಟಿ ಅಧಿಕಾರಿಗಳು ವಿಚಾರಣೆ ನಡೆಸಿರುವುದಾಗಿ ಗೊತ್ತಾಗಿದೆ. ಆದರೆ, ಈ ಮಾಹಿತಿಯನ್ನು ಎಸ್ಐಟಿ ಅಧಿಕಾರಿಗಳು ಖಚಿತಪಡಿಸಿಲ್ಲ. ‘ಪ್ರಕರಣದಲ್ಲಿ ನಾಗರಾಜ್ ಭಾಗಿಯಾಗಿರುವ ಆರೋಪವಿದೆ. ಸೂಕ್ತ ಪುರಾವೆಗಳನ್ನು ಆಧರಿಸಿ ಅವರ ವಿಚಾರಣೆ ಬಗ್ಗೆ ತೀರ್ಮಾನಿಸಲಾಗುವುದು’ ಎಂದು ಮೂಲಗಳು ಹೇಳಿವೆ.

‘ಬಂಧನ ಭೀತಿ: ನಿರೀಕ್ಷಣಾ ಜಾಮೀನಿಗೆ ಅರ್ಜಿ’

‘ಪ್ರಕರಣದ ಆರೋಪಿಗಳಾಗಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಸಿಇಒ ಮಣಿಮೇಖಲೈ, ನಿತೇಶ್ ರಂಜನ್, ರಾಮಸುಬ್ರಹ್ಮಣ್ಯಂ, ಸಂಜಯ್ ರುದ್ರ, ಪಂಕಜ್ ದ್ವಿವೇದಿ ಹಾಗೂ ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕ ಸುಚಿಸ್ಮಿತಾ ರಾವಲ್ ಅವರಿಗೆ ಎಸ್ಐಟಿ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ. ವಿಚಾರಣೆಗೆ ಗೈರಾಗುತ್ತಿರುವ ಅವರಿಗೆ ಬಂಧನ ಭೀತಿಯಿದೆ. ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

ಪ್ರಭಾವಿಗಳ ಜೊತೆ ಒಡನಾಟ: ‘ಆರೋಪಿ ಸತ್ಯನಾರಾಯಣ ಹಾಗೂ ಇತರರು ಸೇರಿಕೊಂಡು 2013ರಲ್ಲಿ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಸ್ಥಾಪಿಸಿದ್ದರು. ಆರಂಭದಲ್ಲಿ 10 ಗ್ರಾಹಕರು ಮಾತ್ರ ಇದ್ದರು. ಇದೀಗ 7,000 ಗ್ರಾಹಕರಿದ್ದು, 13 ಶಾಖೆಗಳಿವೆ. ಹೈದರಾಬಾದ್‌ನ ನಲ್ಲಕುಂಟದಲ್ಲಿ ಸೊಸೈಟಿಯ ಪ್ರಧಾನ ಕಚೇರಿ ಇದೆ. ವರ್ಷದಿಂದ ವರ್ಷಕ್ಕೆ ಸೊಸೈಟಿ ವಹಿವಾಟು ಹೆಚ್ಚಳ ಆಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

‘ರಾಜ್ಯದ ಕೆಲ ರಾಜಕಾರಣಿಗಳು, ಉದ್ಯಮಿಗಳು, ವ್ಯಾಪಾರಿಗಳು ಹಾಗೂ ಬ್ಯಾಂಕ್ ಅಧಿಕಾರಿಗಳ ಜೊತೆ ಸತ್ಯನಾರಾಯಣ್ ಉತ್ತಮ ಒಡನಾಟ ಇಟ್ಟುಕೊಂಡಿದ್ದಾರೆ. ಹೀಗಾಗಿಯೇ, ರಾಜ್ಯದ ಹಲವು ಖಾತೆಗಳಿಂದ ಆಗಾಗ ಸೊಸೈಟಿಯ ಖಾತೆಗಳಿಗೆ ಹಣ ವರ್ಗಾವಣೆ ಆಗುತ್ತಿರುವ ಶಂಕೆಯಿದೆ.’ ಎಂದು ಮೂಲಗಳು ಹೇಳಿವೆ.

‘ಈಗಾಗಲೇ ಪ್ರಕರಣದಲ್ಲಿ ಬಂಧಿಸಲಾಗಿರುವ ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಜೆ.ಜಿ. ಪದ್ಮನಾಭ (55) ಮತ್ತು ಲೆಕ್ಕಾಧಿಕಾರಿಯಾಗಿದ್ದ ಪರಶುರಾಮ್ ಜಿ. ದುರ್ಗಣ್ಣನವರ ಸಹಿಯುಳ್ಳ ಚೆಕ್‌ಗಳ ಮೂಲಕವೇ ಸೊಸೈಟಿ ಖಾತೆಗಳಿಗೆ ಹಣ ವರ್ಗಾವಣೆ ಆಗಿದೆ. ಆದರೆ, ತಮ್ಮ ಸಹಿ ಹಾಗೂ ಮೊಹರು ನಕಲು ಮಾಡಿರುವುದಾಗಿ ಇಬ್ಬರೂ ಆರೋಪಿಗಳು ಹೇಳುತ್ತಿದ್ದಾರೆ. ಅಸಲಿ ಹಾಗೂ ನಕಲಿ ಸಹಿ-ಮೊಹರುಗಳನ್ನು ಪರೀಕ್ಷೆಗೆಂದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ತಿಳಿಸಿವೆ.

ಖಾತೆಗಳಿಂದ ಹಣ ಡ್ರಾ: ‘ಸೊಸೈಟಿ ಖಾತೆಯಲ್ಲಿದ್ದ ಹಣವನ್ನು, ಖಾತೆದಾರರು ಡ್ರಾ ಮಾಡಿಕೊಂಡಿದ್ದಾರೆ. ಒಬ್ಬ ಖಾತೆದಾರರು ಮಾತ್ರ, ಹಣವನ್ನು ವಾಪಸ್ ಖಾತೆಗೆ ಪಾವತಿಸಿದ್ದಾರೆ. ಉಳಿದವರ ಖಾತೆಗಳಲ್ಲಿ ಸ್ವಲ್ಪ ಹಣ ಮಾತ್ರ ಇದೆ. ನಿಗಮದ ಹಣ ಎಲ್ಲಿದೆ? ಎಂಬುದರ ಬಗ್ಗೆ ಸದ್ಯಕ್ಕೆ ಮಾಹಿತಿ ಲಭ್ಯವಿಲ್ಲ. ಖಾತೆದಾರರ ವಿವರಗಳನ್ನು ಸಂಗ್ರಹಿಸಲಾಗುತ್ತಿದ್ದು, ಅದಷ್ಟು ಬೇಗ ಅವರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು’ ಎಂದು ಎಸ್ಐಟಿ ಮೂಲಗಳು ಹೇಳಿವೆ.

ಸಿಇಟಿ: ಅಂಗವಿಕಲರಿಗೆ ವೈದ್ಯಕೀಯ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಅಂಗವಿಕಲ ಕೋಟಾದಲ್ಲಿ ಮೀಸಲಾತಿ ಬಯಸಿರುವ ಅಭ್ಯರ್ಥಿಗಳಿಗೆ ಜೂನ್ 10ರಿಂದ 12ರವರೆಗೆ ವೈದ್ಯಕೀಯ ತಪಾಸಣೆ ನಡೆಯಲಿದೆ.

ಮಲ್ಲೇಶ್ವರದ ಕೆಇಎ ಕಚೇರಿಯಲ್ಲಿ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ತಪಾಸಣೆ ಮಾಡುವರು. 783 ಅಭ್ಯರ್ಥಿಗಳು ಅಂಗವಿಕಲ ಕೋಟಾದಲ್ಲಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಮೂರು ದಿನ ತಪಾಸಣೆ ನಡೆಸಲಾಗುತ್ತದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಮಾಹಿತಿ ನೀಡಿದ್ದಾರೆ.

ತಪಾಸಣೆಗೆ ಹಾಜರಾಗಬೇಕಾದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅವರ ಹೆಸರಿನ ಮುಂದೆ ಸೂಚಿಸಿದ ದಿನ ವೈದ್ಯಕೀಯ ತಪಾಸಣೆಗೆ ಹಾಜರಾಗಬೇಕು.

ಸಿಇಟಿ ಅರ್ಜಿಯ ಪ್ರತಿ, ಪ್ರವೇಶ ಪತ್ರ, ಅಭ್ಯರ್ಥಿಯ ಭಾವಚಿತ್ರ ಇರುವ ಗುರುತಿನ ಚೀಟಿ, ವೈದ್ಯಕೀಯ ಪ್ರಮಾಣಪತ್ರ, ಶ್ರವಣ ದೋಷ ಸಮಸ್ಯೆ ಇರುವ ವಿದ್ಯಾರ್ಥಿಗಳು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಿಂದ ಪಡೆದ ಪ್ರಮಾಣ ಪತ್ರಗಳನ್ನು ತರಬೇಕು. ವೈದ್ಯಕೀಯ ಸಮಿತಿ ನಿರ್ಧಾರವೇ ಅಂತಿಮ ಎಂದು ಅವರು ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಾಯಕರು ಹಿಂಬಾಲಕರನ್ನು ಸೃಷ್ಟಿಸುವುದಿಲ್ಲ, ಅವರು ಹೆಚ್ಚು ಹೆಚ್ಚು ನಾಯಕರನ್ನು ಸೃಷ್ಟಿಸುತ್ತಾರೆ.

-ಟಾಮ್ ಪೀಟರ್ಸ್

ಲೋಕಸಭೆ ಚುನಾವಣೆ ಫಲಿತಾಂಶ ಪ್ರಜಾಪ್ರಭುತ್ವಕ್ಕೆ ಸಂದ ಗೆಲುವು

ಹದಿನೆಂಟನೇ ಲೋಕಸಭೆ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಬಿಜೆಪಿ ನೇತೃತ್ವದ ನ್ಯಾಷನಲ್ ಡೆಮಾಕ್ರಟಿಕ್ ಅಲಯನ್ಸ್ (ಎನ್‌ಡಿಎ) ಸತತ ಮೂರನೇ ಅವಧಿಗೆ ಅಧಿಕಾರಕ್ಕೆ ಏರುವ ಸಾಧ್ಯತೆ ಇದೆ. ಆದರೆ, ಈಗಿನ ಸಂದರ್ಭವನ್ನು ಚಾರಿತ್ರಿಕ ಎಂದು ಪರಿಗಣಿಸಬೇಕಾಗುತ್ತದೆ. ಈ ಹಿಂದೆ ಪಕ್ಷವೊಂದು ಒಂದು ಬಾರಿ ಮಾತ್ರ ಸತತ ಮೂರನೇ ಅವಧಿಗೆ ಕೇಂದ್ರದಲ್ಲಿ ಅಧಿಕಾರ ಹಿಡಿದಿತ್ತು. 1962ರಲ್ಲಿ ಜವಾಹರಲಾಲ್ ನೆಹರೂ ಅವರು ಸತತ ಮೂರನೇ ಬಾರಿ ಅಧಿಕಾರಕ್ಕೆ ಏರಿದ್ದರು. ಆಗ, ಸ್ವಲ್ಪ ದುರ್ಬಲವಾಗಿದ್ದ ಕಾಂಗ್ರೆಸ್ ಮತ್ತು ನೆಹರೂ ಚುನಾವಣೆ ಎದುರಿಸಿ, ಗೆದ್ದಿದ್ದರು. ಆದರೆ, ಈ ಬಾರಿ ಭಾರಿ ಪ್ರಬಲ ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಚುನಾವಣೆ ಎದುರಿಸಿತ್ತು. ಎನ್‌ಡಿಎ 400 ಕ್ಷೇತ್ರಗಳಲ್ಲಿ ಗೆಲ್ಲಲಿದೆ, ಬಿಜೆಪಿಯೊಂದಕ್ಕೇ ಮೂರನೇ ಎರಡರಷ್ಟು ಬಹುಮತ ಬರಲಿದೆ ಎಂದು ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ನಾಯಕರು ಹೇಳಿಕೊಂಡಿದ್ದರು. ಆದರೆ, ಬಿಜೆಪಿಗೆ ಸರಳ ಬಹುಮತವೂ ಬಂದಿಲ್ಲ. ಹಾಗಾಗಿ, ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಗೆ ನೈತಿಕವಾಗಿ ಮತ್ತು ರಾಜಕೀಯವಾಗಿ ಸೋಲು ಉಂಟಾಗಿದೆ. ನರೇಂದ್ರ ಮೋದಿ ಅವರಿಗೆ ಇದು ವೈಯಕ್ತಿಕವಾದ ಸೋಲು. ಬಿಜೆಪಿ ಮತ್ತೆ ಅಧಿಕಾರಕ್ಕೆ ಏರಲಿದೆ ಎಂಬುದಕ್ಕಿಂತ ವಿರೋಧ ಪಕ್ಷವಾಗಿ ಕಾಂಗ್ರೆಸ್ ಪಕ್ಷವು ಪುನಶ್ಚೇತನಗೊಂಡ ರೀತಿಯನ್ನು ಚಾರಿತ್ರಿಕ ಎಂದು ಬಣ್ಣಿಸಬಹುದು. ಅತ್ಯಂತ ದುರ್ಬಲವಾಗಿದ್ದ ಕಾಂಗ್ರೆಸ್ ಈಗಿನ ಪುನಶ್ಚೇತನಕ್ಕಾಗಿ ಕಠಿಣ ಹೋರಾಟವನ್ನೇ ನಡೆಸಿದೆ. ಕಾಂಗ್ರೆಸ್ ಅಲ್ಲದೆ ಇತರ ವಿರೋಧ ಪಕ್ಷಗಳು ಕೂಡ ಏಟು ತಿಂದು, ಜಾರಿ ನಿರ್ದೇಶನಾಲಯ, ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಯಂತಹ ಕೇಂದ್ರೀಯ ಸಂಸ್ಥೆಗಳ ಕಿರುಕುಳಕ್ಕೆ ಒಳಗಾಗಿ ದಿಕ್ಕು ತೋಚದಂತಿದ್ದವು. ಕೆಲವು ನಾಯಕರು ಜೈಲುಪಾಲಾಗಿದ್ದರು. ಇಂತಹ ದಯನೀಯ ಸ್ಥಿತಿಯಿಂದ ಈ ಪಕ್ಷಗಳು ಮೇಲೆದ್ದು ಬಂದ ರೀತಿ ಚಾರಿತ್ರಿಕ. ಈಗಿನ ಚುನಾವಣೆ ಮಾತ್ರವಲ್ಲ ಮುಂದಿನ ಚುನಾವಣೆಗಳಲ್ಲೂ ಗೆಲುವು ತನ್ನದೇ ಎಂದು ಅತಿಯಾದ ಆತ್ಮವಿಶ್ವಾಸದಲ್ಲಿದ್ದ ಆಡಳಿತ ಪಕ್ಷಕ್ಕೆ ದೊಡ್ಡ ಸವಾಲು ಒಡ್ಡಲು ಈ ಪಕ್ಷಗಳು ಈಗ ಸಜ್ಜಾಗಿವೆ. 'ಇಂಡಿಯಾ' ಮೈತ್ರಿಕೂಟ ದೊಡ್ಡ ಸಾಧನೆಯನ್ನೇ ಮಾಡಿದೆ.




ಈ ಚುನಾವಣೆಯಲ್ಲಿ ಮತದಾರ ಸ್ಪಷ್ಟ ಸಂದೇಶವನ್ನು ಸಾರಿದ್ದಾನೆ. ಅದರಲ್ಲಿ ಎಲ್ಲ ಪಕ್ಷಗಳಿಗೂ ಪಾಠ ಇದೆ. ಅದನ್ನು ಅರಿತರೆ ಪಕ್ಷಗಳಿಗೆ ಒಳಿತಾಗಲಿದೆ

ಕಾಂಗ್ರೆಸ್‌ಮುಕ್ತ ಮತ್ತು ವಿರೋಧ ಪಕ್ಷ ಮುಕ್ತ ಭಾರತ ತನ್ನ ಗುರಿ ಎಂದು ಬಿಜೆಪಿ ಘೋಷಿಸಿಕೊಂಡಿತ್ತು. ಆದರೆ, ಈಗ ವಿರೋಧ ಪಕ್ಷಗಳು ಸಂಸತ್ತಿನಲ್ಲಿ ಬಲವಾಗಿ ನಿಲ್ಲಲಿವೆ. ಕಾಂಗ್ರೆಸ್ ಪಕ್ಷವು ಪಡೆದ ಸ್ಥಾನಗಳ ಸಂಖ್ಯೆಯು ಈ ಹಿಂದಿಗಿಂತ ದುಪ್ಪಟ್ಟಾಗಿದೆ. ಹಿಂದೆಂದಿಗಿಂತಲೂ ಕಡಿಮೆ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರೂ ಆ ಪಕ್ಷವು ಪಡೆದ ಮತ ಪ್ರಮಾಣದಲ್ಲಿಯೂ ಏರಿಕೆ ಆಗಿದೆ. 'ಇಂಡಿಯಾ' ಮೈತ್ರಿಕೂಟವು ಸುಸಂಬದ್ಧವಾಗಿ, ಸುಸಂಘಟಿತವಾಗಿ ಇರಲಿಲ್ಲ. ಮೈತ್ರಿಕೂಟದೊಳಗಿನ ಕೆಲವು ಪಕ್ಷಗಳು ಪರಸ್ಪರ ಸ್ಪರ್ಧೆಗಿಳಿದಿದ್ದವು. ಹಾಗಿದ್ದರೂ ಹೆಚ್ಚಿನ ಪಕ್ಷಗಳು ಲಾಭ ಮಾಡಿಕೊಂಡಿವೆ. ಇದಕ್ಕೆ ವ್ಯತಿರಿಕ್ತವಾಗಿ, ಬಿಜೆಪಿ ಅನೇಕ ಕಡೆ ಕ್ಷೇತ್ರಗಳನ್ನು ಕಳೆದುಕೊಂಡಿದೆ ಮತ್ತು ಹೆಚ್ಚು ಸ್ಥಾನಗಳನ್ನು ಗಳಿಸಿಕೊಳ್ಳುವ ನಿರೀಕ್ಷೆ ಇದ್ದಲ್ಲಿಯೂ ಆ ನಿರೀಕ್ಷೆ ಈಡೇರಿಲ್ಲ. ಮಿತ್ರಪಕ್ಷಗಳ ಅದರಲ್ಲೂ ಮುಖ್ಯವಾಗಿ ನಾರಾ ಚಂದ್ರಬಾಬು ನಾಯ್ಡು ನೇತೃತ್ವದ ಟಿಡಿಪಿ ಮತ್ತು ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಬೆಂಬಲದಲ್ಲಿ ಮಾತ್ರ ಬಿಜೆಪಿಯು ಸರ್ಕಾರ ರಚಿಸಲು ಸಾಧ್ಯ.

ಬಿಜೆಪಿ ನಡೆಸಿದ ಚುನಾವಣಾ ಪ್ರಚಾರವು ದೇಶ ಮತ್ತು ಸಮಾಜವನ್ನು ಒಗ್ಗೂಡಿಸುವ ಬದಲಿಗೆ ವಿಭಜಿಸುವ ರೀತಿಯಲ್ಲಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಧಾರ್ಮಿಕ ನೆಲೆಯಲ್ಲಿ ಧ್ರುವೀಕರಿಸಲು ತಮ್ಮಿಂದಾದ ಎಲ್ಲ ಪ್ರಯತ್ನಗಳನ್ನೂ ಮಾಡಿದ್ದರು. ಮುಸ್ಲಿಮರನ್ನು ಗುರಿಯಾಗಿಸಿ ಹಲವು ಆರೋಪಗಳನ್ನು ಮಾಡಿದ್ದರು. ವಿರೋಧ ಪಕ್ಷಗಳ ನಾಯಕರನ್ನು ಖಳರು ಎಂಬಂತೆ ಚಿತ್ರಿಸಿದ್ದರು. ಕಾಂಗ್ರೆಸ್ ಪಕ್ಷವು ಮುಸ್ಲಿಮರ ಹಿತಾಸಕ್ತಿಯನ್ನು ಮಾತ್ರ ಕಾಯುತ್ತದೆ ಎಂದಿದ್ದರು. ಬಿಜೆಪಿ ನಡೆಸಿದ ದ್ವೇಷ ರಾಜಕಾರಣವು ಮತದಾರನಿಗೆ ಒಪ್ಪಿಗೆ ಆಗಿಲ್ಲ ಎಂಬುದನ್ನು ಫಲಿತಾಂಶವು ಹೇಳುತ್ತದೆ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಮತ್ತು ಬಾಲರಾಮ ಮೂರ್ತಿಯ ಪ್ರತಿಷ್ಠಾಪನೆಯು ಬಿಜೆಪಿ ನಿರೀಕ್ಷಿಸಿದ ರೀತಿಯಲ್ಲಿ ಫಲ ಕೊಟ್ಟಿಲ್ಲ. ವಿರೋಧ ಪಕ್ಷಗಳು ಮುಖ್ಯವಾಗಿ ಇರಿಸಿಕೊಂಡಿದ್ದ ಬೆಲೆ ಏರಿಕೆ ಮತ್ತು ನಿರುದ್ಯೋಗದಂತಹ ವಿಚಾರಗಳೇ ಮುನ್ನೆಲೆಯಲ್ಲಿ ಉಳಿದವು. ಈ ಫಲಿತಾಂಶವು ಪ್ರಜಾಪ್ರಭುತ್ವದ ಗೆಲುವು. ಪ್ರಜಾಪ್ರಭುತ್ವ ಮತ್ತು ಅದರ ಸಾಂವಿಧಾನಿಕ ಸಂಸ್ಥೆಗಳ ಮೇಲೆ ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ಪ್ರಹಾರ ನಡೆಯುತ್ತಲೇ ಇದೆ. ಜನಾದೇಶವನ್ನು, ಸರ್ಕಾರಗಳನ್ನು ಬುಡಮೇಲು ಮಾಡುವ ಕೃತ್ಯಗಳು ಸಾಮಾನ್ಯವಾಗಿದ್ದವು. ಸಾಂವಿಧಾನಿಕ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ಎಗ್ಗಿಲ್ಲದೆ ನಡೆದಿತ್ತು. ಟೀಕಾಕಾರರು ಮತ್ತು ಭಿನ್ನಮತ ಹೊಂದಿದವರನ್ನು ನಿರ್ದಯವಾಗಿ ದಮನ ಮಾಡುವ ಕೆಲಸ ನಡೆದಿತ್ತು. ಸಂಸತ್ತಿನಲ್ಲಿ ವಿರೋಧ ಪಕ್ಷಗಳ ಧ್ವನಿಯನ್ನು ಅಡಗಿಸಲಾಗಿತ್ತು. ಈಗ ಬಂದಿರುವ ಜನಾದೇಶವು ಪ್ರಜಾಪ್ರಭುತ್ವದ ನಿರ್ಲಕ್ಷ್ಯ, ಅಧಿಕಾರದ ದುರುಪಯೋಗ, ಅಧಿಕಾರದ ಅಹಂ ವಿರುದ್ಧದ ಎಚ್ಚರಿಕೆಯಾಗಿದೆ. ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಮೊಟಕುಗೊಳಿಸುವುದನ್ನು ಭಾರತದ ಮತದಾರ ಯಾವತ್ತೂ ಸಹಿಸುವುದಿಲ್ಲ. ಸರ್ವಾಧಿಕಾರವನ್ನೂ ಒಪ್ಪುವುದಿಲ್ಲ. ಒಬ್ಬ ವ್ಯಕ್ತಿಯು ಪಕ್ಷ, ಸಮಾಜ, ದೇಶ ಎಲ್ಲವನ್ನೂ ಮೀರಿ ಬೆಳೆದಿದ್ದಾನೆ ಎಂಬಂತೆ ಬಿಂಬಿಸುವ ವ್ಯಕ್ತಿಪೂಜೆಯನ್ನೂ ಮತದಾರ ಸಹಿಸುವುದಿಲ್ಲ ಎಂಬುದರ ಉದಾಹರಣೆ ಈಗಿನ ಫಲಿತಾಂಶ. ಪ್ರಜಾಪ್ರಭುತ್ವಕ್ಕೆ ನಾಯಕರು ಬೇಕೇ ವಿನಾ ಅತಿಮಾನವರು, ದೇವಮಾನವರು ಬೇಕಾಗಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಮತದಾರ ನೀಡಿದ್ದಾನೆ.

ದಿನದ ಟ್ವೀಟ್


ಆತ್ಮವಿಮರ್ಶೆ ನಡೆಯಲಿ



ಭಾರತದ ರಾಜಕಾರಣದಲ್ಲಿನ ಎರಡು ಸುವರ್ಣ ನಿಯಮಗಳು: ನಿಯಮ 1. ಫಲಿತಾಂಶದಲ್ಲಿ ಆದ ನಷ್ಟಕ್ಕಾಗಿ ಮತದಾರರನ್ನು ಎಂದಿಗೂ ದೂರದಿರಿ. ನಿಯಮ 2. ಮೊದಲಿನ ನಿಯಮವನ್ನು ಎಂದಿಗೂ ಮರೆಯದಿರಿ. ನೆನಪಿಸಿಕೊಳ್ಳಿ, ಇದೇ ಉತ್ತರಪ್ರದೇಶವು 2014 ಮತ್ತು 2019ರಲ್ಲಿ ಬಿಜೆಪಿಗೆ ಕ್ರಮವಾಗಿ 72 ಮತ್ತು 62 ಸೀಟುಗಳನ್ನು ನೀಡಿತ್ತು. ಎಲ್ಲಿ ತಪ್ಪಾಯಿತು ಎಂಬ ಬಗ್ಗೆ ಪಕ್ಷವು ಆತ್ಮವಿಮರ್ಶೆ ಮಾಡಿಕೊಳ್ಳಬೇಕು ಮತ್ತು ಕಾಲಮಿತಿಯೊಳಗೆ ಅದನ್ನು ಸರಿಪಡಿಸಿಕೊಳ್ಳಬೇಕು.

ರಿಷಿ ಬಾಗರೀ, ಹಣಕಾಸು ವಿಶ್ಲೇಷಕ

ಕಿಡಿನುಡಿ



ಷೇರುಗಳನ್ನು ಖರೀದಿಸುವಂತೆ ಈ ಸರ್ಕಾರದ ಸಂಪುಟ ದರ್ಜೆಯ ಪ್ರಮುಖ ಸಚಿವರೊಬ್ಬರು ಬಹಿರಂಗವಾಗಿ ಜನರನ್ನು ಒತ್ತಾಯಿಸಿದ್ದು ನಾಚಿಕೆಗೇಡು. ಮತಗಟ್ಟೆ ಸಮೀಕ್ಷೆಗಳು ಇದಕ್ಕೆ ಇನ್ನಷ್ಟು ಪ್ರೋತ್ಸಾಹ ನೀಡಿದವು. ಇಂದು ಮಾರುಕಟ್ಟೆ ಮಹಾಪತನ ಕಂಡಿದೆ. ಸಣ್ಣ ಪ್ರಮಾಣದ ಹೂಡಿಕೆದಾರರಿಗೆ ಆಗಿರುವ ನಷ್ಟಕ್ಕೆ ಯಾರು ಹೊಣೆ?

ಎಂ.ಕೆ.ವೇಣು, ಪತ್ರಕರ್ತ

25 ವರ್ಷಗಳ ಹಿಂದೆ

ಶನಿವಾರ, 5-6-1999

• **ನಚಿಕೇತಗೆ ತಾಯ್ನಾಡಿನಲ್ಲಿ ಹೃದಯಸ್ಪರ್ಶಿ ಸ್ವಾಗತ**

ನವದೆಹಲಿ, ಜೂನ್ 4 (ಪಿಟಿಐ)- ಅದೊಂದು ಹೃದಯಸ್ಪರ್ಶಿ ಸಂದರ್ಭ. ಪಾಕಿಸ್ತಾನದ ಬಂಧನದಲ್ಲಿ ಎಂಟು ದಿನಗಳನ್ನು ಕಳೆದ ನಂತರ ಇಂದು ಇಲ್ಲಿನ ಪಾಲಂ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಭಾರತದ ಸುಪುತ್ರ ಫ್ಲೈಟ್ ಲೆಫ್ಟಿನೆಂಟ್ ನಚಿಕೇತ ಅವರನ್ನು ಅವರ ತಾಯಿ-ತಂದೆ, ಕುಟುಂಬದ ಸದಸ್ಯರು ಭಾವೋದ್ವೇಗದಿಂದ ಅಪ್ಪಿಕೊಂಡಾಗ ಸುತ್ತಲಿದ್ದವರ ಕಣ್ಣುಗಳು ಒದ್ದೆಯಾದವು.

ಪಾಕಿಸ್ತಾನದ ಬಂಧನದಿಂದ ಗುರುವಾರ ರಾತ್ರಿ ಬಿಡುಗಡೆಯಾದ 26 ವರ್ಷದ ನಚಿಕೇತ ಅವರು ವಿಶೇಷ ವಿಮಾನದಲ್ಲಿ ಅಮೃತಸರದಿಂದ ಇಲ್ಲಿಗೆ ಬಂದಿಳಿದಾಗ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್, ಏರ್ ಚೀಫ್ ಮಾರ್ಷಲ್ ಎ.ವೈ. ಟಿಪ್ನಿಸ್ ಹಾಗೂ ಇತರ ಹಿರಿಯ ಅಧಿಕಾರಿಗಳು ಬರಮಾಡಿಕೊಂಡರು.

ಮಗನಿಗಾಗಿ ವಿಮಾನ ನಿಲ್ದಾಣದಲ್ಲಿ ಕಾದಿದ್ದ ನಚಿಕೇತ ಅವರ ತಾಯಿ ಲಕ್ಷ್ಮಿ ಹಾಗೂ ತಂದೆ ಕೆ.ಆರ್.ಕೆ. ಶಾಸ್ತ್ರಿ ಅವರು ಉಕ್ಕಿ ಬಂದ ಉದ್ವೇಗವನ್ನು ತಡೆಯಲಾಗದೆ ಮಗನನ್ನು ಅಪ್ಪಿಕೊಂಡರು.

50 ವರ್ಷಗಳ ಹಿಂದೆ

ಬುಧವಾರ, 5-6-1974

• **'ಲೈಸೆನ್ಸ್ ದುರುಪಯೋಗ ತಡೆಗೆ ಕಾಂಟ್ರಾಕ್ಟ್ ಬಸ್ಸು ರಾಷ್ಟ್ರೀಕರಣ'**

ಬೆಂಗಳೂರು, ಜೂನ್ 4- ಖಾಸಗಿ ಬಸ್ಸು ಮಾಲೀಕರು ಕಾಂಟ್ರಾಕ್ಟ್ ಬಸ್ಸು ಪರವಾನಗಿಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಸಾರಿಗೆ ಸಚಿವ ಕೆ.ಎಚ್.ರಂಗನಾಥ್ ಅವರು ಇಂದು ವಿಧಾನಪರಿಷತ್ತಿನಲ್ಲಿ ತಿಳಿಸಿದರು.

ಗೋವಿಂದ ಪಿ. ಒಡೆಯರಾಜ್ ಅವರ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, ಅದಕ್ಕಾಗಿ ಕಾಂಟ್ರಾಕ್ಟ್ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡುವ ಯೋಚನೆ ಇದೆ ಎಂದರು.

• **'ಪೂರ್ವನಿಯೋಜಿತ ನಾಟಕ': ವ್ಯಂಗ್ಯ**

ಬೆಂಗಳೂರು, ಜೂನ್ 4- ನೂತನ ಮೇಯರ್ ಮತ್ತು ಉಪಮೇಯರ್ ಚುನಾವಣೆ ನಡೆಸದೆ ನಿನ್ನೆ ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ಸಭೆಯನ್ನು ಮುಂದೂಡಿರುವುದು 'ಪೂರ್ವ ನಿಯೋಜಿತ' ಎಂದು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಆಪಾದಿಸಿದರು.

ಜನಸಮೂಹದ ಮೇಲಾಗುವ ದುಷ್ಪರಿಣಾಮದ ತೀವ್ರತೆ ತಗ್ಗಿಸಲು ಬೇಕು ಕಟ್ಟುನಿಟ್ಟಿನ ಕ್ರಮ

ಹವಾಮಾನ ತುರ್ತುಸ್ಥಿತಿ: ಮೆಟ್ಟಬೇಕಿದೆ ಸವಾಲು



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಚುನಾವಣೆ ಫಲಿತಾಂಶ ಹೊರಬಿದ್ದಿದೆ. ಮುಂದಿನ ಐದು ವರ್ಷಗಳ ಅವಧಿಗೆ ದೇಶದ ಆಡಳಿತದ ಚುಕ್ಕಾಣಿ ಹಿಡಿಯಲು ರಾಜಕೀಯ ಪಕ್ಷಗಳಿಂದ ಕಸರತ್ತು ನಡೆದಿದೆ. ಈ ಹೊತ್ತಿನಲ್ಲೇ ವಿಶ್ವ ಪರಿಸರ ದಿನ (ಜೂನ್ 5), ನಮ್ಮ ಮುಂದೆ ಇರುವ ಸವಾಲುಗಳನ್ನು ನೆನಪಿಸುತ್ತಿದೆ. ಹವಾಮಾನ ತುರ್ತು ಪರಿಸ್ಥಿತಿಯ ಹೊತ್ತಿನಲ್ಲಿ, ಜನಸಾಮಾನ್ಯರ ಬದುಕನ್ನು ಸಹ್ಯಗೊಳಿಸಲು ತೆಗೆದುಕೊಳ್ಳಬೇಕಾದ ಪಾರಿಸರಿಕ ಸಂರಕ್ಷಣಾ ಕ್ರಮಗಳು ನಿಜಕ್ಕೂ ಸವಾಲಿನವೇ ಆಗಿವೆ. ಆದ್ಯತೆಗಳನ್ನು ಗುರುತಿಸುವಲ್ಲಿ ಸೋತಿದ್ದರಿಂದ ದೇಶದ ಎಲ್ಲೆಡೆ ಅರಣ್ಯ ಪ್ರದೇಶಗಳು ಕ್ಷೀಣಿಸಿವೆ. ಅದರಲ್ಲೂ ಕಾನೂನುಬದ್ಧವಾಗಿ ಕಾಯ್ದಿಟ್ಟುಕೊಂಡ ಅರಣ್ಯಗಳನ್ನು ಅನ್ಯ ಉದ್ದೇಶಕ್ಕೆ ಬಳಸುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ.

ಹಿಂದಿನ 24 ವರ್ಷಗಳಲ್ಲಿ ದೇಶವು 23 ಲಕ್ಷ ಹೆಕ್ಟೇರ್‌ನಷ್ಟು ಹಸಿರು ಕವಚವನ್ನು ಕಳೆದುಕೊಂಡಿದೆ. ಇದನ್ನು ಗಂಭೀರವಾಗಿ ಪರಿಗಣಿಸಿದ ಕೇಂದ್ರ ಹಸಿರು ನ್ಯಾಯಮಂಡಳಿಯು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು, ಕೇಂದ್ರ ಸರ್ಕಾರಕ್ಕೆ ವಿವರಣೆ ಕೇಳಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರ ಕಾಳಜಿ ಮರೆತ ಸರ್ಕಾರಕ್ಕೆ ಸಮಜಾಯಿಷಿ ನೀಡುವುದು ಕಷ್ಟದ ಕೆಲಸವೇ ಆಗಲಿದೆ. ಜೀವಿವೈವಿಧ್ಯ ನೆಲೆಗಳು, ಅಭಯಾರಣ್ಯಗಳು, ರಾಷ್ಟ್ರೀಯ ಉದ್ಯಾನಗಳು ಸೇರಿದಂತೆ ವಿವಿಧ ಸ್ವರೂಪದ ಅರಣ್ಯ ಪ್ರದೇಶಗಳಲ್ಲಿ 2014- 20ರ ನಡುವಿನ ಆರು ವರ್ಷಗಳಲ್ಲಿ 270 ಮಹಾಯೋಜನೆಗಳಿಗೆ ಕೇಂದ್ರ ಪರಿಸರ ಸಚಿವಾಲಯ ಅನುಮತಿ ನೀಡಿದೆ.

ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ, ದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇಕಡ 33ರಷ್ಟು ಪ್ರದೇಶದಲ್ಲಿ ಅರಣ್ಯ ಇರಬೇಕು. ಆದರೆ, ಈ ಪ್ರಮಾಣ ಶೇ 22ಕ್ಕೆ ಇಳಿದಿರುವುದು ಹವಾಮಾನ ತುರ್ತು ಪರಿಸ್ಥಿತಿಗೆ ಪ್ರಮುಖ ಕಾರಣವಾಗಿದೆ. ಪರಿಸರ ಸಂರಕ್ಷಣೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಸುಪ್ರೀಂ ಕೋರ್ಟ್ ಕೂಡ, ರಾಷ್ಟ್ರೀಯ ಸಂಪತ್ತಾಗಿರುವ ಅರಣ್ಯಗಳು ದೇಶದ ಆರ್ಥಿಕ ಸಂಪತ್ತಿನ ಮೂಲಗಳೂ ಆಗಿವೆ ಎಂದು ಪ್ರತಿಪಾದಿಸಿದೆ. ಇದೇ ಹೊತ್ತಿನಲ್ಲಿ 'ಡೌನ್ ಟು ಅರ್ಥ್' ನಿಯತಕಾಲಿಕ ಹಾಗೂ ವಿಜ್ಞಾನ ಮತ್ತು ಪರಿಸರ ಕೇಂದ್ರ ಜಂಟಿಯಾಗಿ 'ಭಾರತದ ಪರಿಸರದ ಸ್ಥಿತಿಗತಿ- 2024' ವರದಿಯನ್ನು ಬಿಡುಗಡೆ ಮಾಡಿವೆ. ಹವಾಮಾನದ ಮೇಲೆ ಗಂಭೀರ ವ್ಯತಿರಿಕ್ತ ಪರಿಣಾಮ ಬೀರಬಲ್ಲ ಆರು ಮುಖ್ಯ ಕ್ಷೇತ್ರಗಳ ಸ್ಥಿತಿಗತಿಗಳನ್ನು ಈ ವರದಿಯಲ್ಲಿ ವಿಶ್ಲೇಷಿಸಲಾಗಿದೆ.

2023ರಲ್ಲಿ ಹವಾಮಾನ ವೈಪರೀತ್ಯ ಬಾಧಿಸಿದ ಒಟ್ಟು ಅವಧಿ, ಹವಾಮಾನ ತುರ್ತು ಪರಿಸ್ಥಿತಿಯ ಪರಿಣಾಮಕ್ಕೆ ಬಲಿಯಾದವರು, ಫಸಲು ನಾಶ, ಭಾರತ ಹೊರಕಕ್ಕಿದ ಇಂಗಾಲಾಮ್ಲದ ಪ್ರಮಾಣ ಈ ಎಲ್ಲದರ ಬಗ್ಗೆಯೂ ವಿವರಿಸಲಾಗಿದೆ. ಇಂಗಾಲಾಮ್ಲ ಹೊರಸೂಸುವಿಕೆಯಲ್ಲಿ ವಿದ್ಯುತ್ ಕ್ಷೇತ್ರ ಸಿಂಹಪಾಲನ್ನು ಹೊಂದಿದೆ. ಶೇ 20ರಷ್ಟು ಪ್ರಮಾಣದ ಇಂಗಾಲಾಮ್ಲವನ್ನು ನಿಯಮಿತವಾಗಿ ಹೀರಿಕೊಳ್ಳುವ ಅರಣ್ಯ, ಇತರ ಭೂಪ್ರದೇಶಗಳು ಕ್ರಮೇಣ ಕ್ಷೀಣಿಸುತ್ತಿವೆ. 2021ನೇ ಸಾಲಿನಲ್ಲಿ ಭಾರತದಲ್ಲಿ ಸಂಭವಿಸಿದ ಒಟ್ಟು ಮರಣ ಪ್ರಮಾಣದಲ್ಲಿ ಹೆಚ್ಚಿನವುಗಳಿಗೆ ಹೃದಯ ಸಂಬಂಧಿ ಕಾಯಿಲೆ, ಶ್ವಾಸಕೋಶದ ಸೋಂಕು, ಕ್ಷಯರೋಗ ಹಾಗೂ ದೀರ್ಘಕಾಲದ ಉಸಿರಾಟದ ತೊಂದರೆಯು ಕಾರಣಗಳಾಗಿವೆ. ಕಲುಷಿತ ನೀರು ಸೇವನೆ ಕೂಡ ಮತ್ತೊಂದು ಪ್ರಧಾನ ಕಾರಣವಾಗಿದೆ. ದೇಶದ ಉತ್ತರ ಹಾಗೂ ಪೂರ್ವ ಭಾಗದ ಪ್ರದೇಶಗಳು ಅತ್ಯಂತ ಹೆಚ್ಚು ವಾಯುಮಾಲಿನ್ಯ ಹೊಂದಿದ್ದು, ದೆಹಲಿ ಸೇರಿದಂತೆ ಹರಿಯಾಣ, ಉತ್ತರಪ್ರದೇಶ, ರಾಜಸ್ಥಾನವು ಅತಿ ಹೆಚ್ಚು ವಾಯುಮಾಲಿನ್ಯ ಸೂಚ್ಯಂಕವನ್ನು ದಾಖಲಿಸಿವೆ. ಬದಲಿಗೆ, ದೇಶದ ದಕ್ಷಿಣ ಪ್ರದೇಶಗಳು ಕಡಿಮೆ ವಾಯುಮಾಲಿನ್ಯವನ್ನು ಹೊಂದಿದ್ದು, ಕರ್ನಾಟಕದ ಮೈಸೂರು ದೇಶದಲ್ಲೇ ಅತ್ಯಂತ ಶುದ್ಧವಾದ ಹವೆ ಹೊಂದಿದ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಮಹಾನಗರಗಳು ಮತ್ತು ನಗರಗಳು ತಮ್ಮ ಹಸಿರುಕವಚವನ್ನು ಕಳೆದುಕೊಂಡ ಕಾರಣಕ್ಕೆ ಅತಿಬಿಸಿಯಿಂದ ಬಳಲುತ್ತಿವೆ. ವಾತಾವರಣವನ್ನು ತಂಪಾಗಿಡುವ ಸಾಮರ್ಥ್ಯ ಹೊಂದಿರುವ ಮರಗಿಡಗಳ ಬದಲಿಗೆ ರಸ್ತೆ, ರೈಲು ಮಾರ್ಗ ಹಾಗೂ ಕಟ್ಟಡಗಳನ್ನು ಅನಿಯಮಿತವಾಗಿ ನಿರ್ಮಿಸಿದ್ದೇ ಈ ವಿದ್ಯಮಾನಕ್ಕೆ ಕಾರಣ. ಈ ವರ್ಷದ ಮೇ 22ರಂದು ದೆಹಲಿಯು 8,000 ಮೆಗಾವಾಟ್ ವಿದ್ಯುತ್ತನ್ನು ಬಳಸಿದ್ದು, ಒಂದೇ ದಿನದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ವಿದ್ಯುತ್ ಬಳಕೆಯಾಗಿರುವುದು ಸಾರ್ವಕಾಲಿಕ ದಾಖಲೆಯಾಗಿದೆ.

ಸಾರ್ವಜನಿಕ ಸಾರಿಗೆಯ ಮೇಲಿನ ಅವಲಂಬನೆ ಕಡಿಮೆಯಾಗಿದೆ. ಮುಖ್ಯವಾಗಿ ಹೊಸ ಬಸ್ಸುಗಳ ನೋಂದಣಿ ಪ್ರಮಾಣ ಇಳಿಕೆಯಾಗಿದೆ. ವಿದ್ಯುತ್‌ಚಾಲಿತ ವಾಹನಗಳ ನೋಂದಣಿ ಸಂಖ್ಯೆಯಲ್ಲಿ ತುಸು ಏರಿಕೆ ಕಂಡರೂ, ಡೀಸೆಲ್ ವಾಹನಗಳು ಎಂದಿನಂತೆ ಹೆಚ್ಚು ಮಾಲಿನ್ಯವನ್ನು ಕಕ್ಕುತ್ತಿವೆ. ಅವಧಿ ಮೀರಿದ ಭಾರಿ ವಾಹನಗಳು ಸಹ ಮಾಲಿನ್ಯದ ಪ್ರಮಾಣ ಹೆಚ್ಚಾಗಲು ಮತ್ತೊಂದು ಕಾರಣವಾಗಿವೆ. ಪ್ರಯಾಣಿಕರು ಸಂಚರಿಸುವ ವಿದ್ಯುತ್‌ಚಾಲಿತ ಭಾರಿ ವಾಹನಗಳನ್ನು ನೋಂದಾಯಿಸಿರುವುದರಲ್ಲಿ ದೆಹಲಿ, ಕರ್ನಾಟಕ ಮತ್ತು ಮಹಾರಾಷ್ಟ್ರ ಮುಂಚೂಣಿಯಲ್ಲಿವೆ. ದೇಶದಲ್ಲಿ ವಿದ್ಯುತ್‌ಚಾಲಿತ ಭಾರಿ ವಾಹನಗಳಲ್ಲಿ ಶೇ 75ರಷ್ಟು ಈ ಮೂರು ರಾಜ್ಯಗಳಲ್ಲಿವೆ.

ಭಾರತದಲ್ಲಿ ಪ್ರತಿನಿತ್ಯ 30 ಸಾವಿರ ಟನ್ ಘನತ್ಯಾಜ್ಯ ಸರಿಯಾಗಿ ವಿಲೇವಾರಿಯಾಗದೆ ಭೂಪ್ರದೇಶ ಹಾಗೂ ತನ್ಮೂಲಕ ಜಲಮೂಲಗಳನ್ನು ಕಲುಷಿತಗೊಳಿಸುತ್ತಿದೆ. ಗೊಬ್ಬರವಾಗಬಲ್ಲ ಹಸಿತ್ಯಾಜ್ಯ ಕೂಡ ನಿರ್ವಹಣೆ ಮತ್ತು ವಿಲೇವಾರಿ ಕೊರತೆಯನ್ನು ಎದುರಿಸುತ್ತಿದೆ. ಸರ್ಕಾರಗಳ ನಿರ್ಲಕ್ಷ್ಯ, ನೈರ್ಮಲ್ಯ ಕಾಮಗಾರಿಗಳನ್ನು ನಿಯಮಿತವಾಗಿ ಕೈಗೊಳ್ಳದಿರುವುದು, ನಿರ್ವಹಣೆಯಲ್ಲಿನ ವೈಫಲ್ಯದಿಂದಾಗಿ ಪ್ಲಾಸ್ಟಿಕ್ ತ್ಯಾಜ್ಯವು ವಿವಿಧ ಮಾಲಿನ್ಯಗಳಿಗೆ ನೇರವಾಗಿ ಕಾರಣವಾಗಿದೆ.

ಹವಾಮಾನ ಸಂಬಂಧಿ ಕಾರಣಗಳಿಂದ ಆಂತರಿಕ ವಲಸೆಯ ಪ್ರಮಾಣ ಹೆಚ್ಚುತ್ತಿದೆ. 'ಆಂತರಿಕ ವಲಸೆ-2024' ಜಾಗತಿಕ ವರದಿಯ ಪ್ರಕಾರ, 2023ನೇ ಸಾಲಿನಲ್ಲಿ ಪ್ರಪಂಚದ 45 ದೇಶಗಳ ಸುಮಾರು 4.5 ಕೋಟಿ ಜನರು ಆಂತರಿಕವಾಗಿ ವಲಸೆ ಕೈಗೊಂಡಿದ್ದಾರೆ. ಈ ಪಟ್ಟಿಯಲ್ಲಿ ಭಾರತವು 20ನೇ ಸ್ಥಾನದಲ್ಲಿದೆ. ಇದಕ್ಕೂ ಹವಾಮಾನ ವೈಪರೀತ್ಯದ ದುಷ್ಪರಿಣಾಮಗಳಾದ ಬರ, ನೆರೆ ಮತ್ತು ಚಂಡಮಾರುತ ಮುಖ್ಯ ಕಾರಣಗಳಾಗಿವೆ. 2022-23ನೇ ಸಾಲಿನಲ್ಲಿ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಿದ ರಾಜ್ಯಗಳಲ್ಲಿ ಒಡಿಶಾ, ಮಧ್ಯಪ್ರದೇಶ, ಗುಜರಾತ್, ಉತ್ತರಾಖಂಡ ಮತ್ತು ಉತ್ತರಪ್ರದೇಶ ಮುಂಚೂಣಿಯಲ್ಲಿವೆ.

ಮಾನವಕೇಂದ್ರಿತ ಚಟುವಟಿಕೆಗಳ ಕಾರಣಕ್ಕೆ ವನ್ಯಜೀವಿಗಳ ಆವಾಸಸ್ಥಾನ ಮತ್ತು ಆಹಾರ ಲಭ್ಯತೆ ವೇಗವಾಗಿ ಕ್ಷೀಣಿಸುತ್ತಿದ್ದು, ಇದು ಮಾನವ-ವನ್ಯಜೀವಿ ಸಂಘರ್ಷಕ್ಕೆ ಕಾರಣವಾಗಿದೆ. 2022ನೇ ಸಾಲಿನಲ್ಲಿ ಪ್ರತಿ ಗಂಟೆಗೊಬ್ಬರಂತೆ ರೈತ ಅಥವಾ ರೈತ ಕಾರ್ಮಿಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದೇ ಹೊತ್ತಿನಲ್ಲಿ 195 ರೈತ ಪ್ರತಿಭಟನೆಗಳು ದಾಖಲಾಗಿವೆ. ಪ್ರತಿಭಟನೆಗೆ ಮುಖ್ಯ ಕಾರಣ, ಕೃಷಿ ಭೂಮಿ ಭೂಸ್ವಾಧೀನ ಪ್ರಕ್ರಿಯೆ ಹಾಗೂ ಕನಿಷ್ಠ ಬೆಂಬಲ ಬೆಲೆ ಬೇಡಿಕೆಯಾಗಿದೆ. ಜೊತೆಗೆ ರೈತರ ಹಿತಾಸಕ್ತಿಗೆ ವಿರುದ್ಧವಾದ ಕಾನೂನು ಸಹ ಕಾರಣವಾಗಿದೆ. ಉದಾಹರಣೆಗೆ, ಕೆಲವು ಕೃಷಿ ಉತ್ಪನ್ನಗಳಿಗೆ ರಫ್ತು ನಿಷೇಧ ಹೇರುತ್ತಿರುವುದು. ಸಾವಯವ ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿದಂತೆ, ವಿವಿಧ ಸರ್ಕಾರಿ ಮತ್ತು ಸ್ವಯಂಸೇವಾ ಸಂಸ್ಥೆಗಳಿಂದ ಪ್ರಮಾಣೀಕರಿಸಿದ ಕೃಷಿ ಜಮೀನಿನ ವ್ಯಾಪ್ತಿ ಹೆಚ್ಚಿದೆಯಾದರೂ, ಸಾವಯವ ಕೃಷಿ ಹಾಗೂ ತೋಟಗಾರಿಕಾ ಉತ್ಪಾದನಾ ಮಟ್ಟ ಇಳಿಕೆಯಾಗಿದೆ.

ಹದಿನೈದಕ್ಕಿಂತ ಹೆಚ್ಚು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಂತರ್ಜಲವನ್ನು ನಿಗದಿತ ಮಾನದಂಡಕ್ಕಿಂತ ಹೆಚ್ಚು ಬಳಸಲಾಗಿದೆ. ಕೋವಿಡ್ ಉಲ್ಬಣಿಸಿದ ಅವಧಿಯ ನಂತರದಲ್ಲಿ ಉದ್ಯೋಗಾವಕಾಶ ಗಣನೀಯವಾಗಿ ಕಡಿಮೆಯಾಗಿರುವುದು, ವಾರಾಣಸಿಯಂತಹ ಸೌರ ನಗರದಲ್ಲೇ ಸೌರ ವಿದ್ಯುತ್ ಉತ್ಪಾದನೆ ಗುರಿ ಮುಟ್ಟದೇ ಕುಂಟುತ್ತಿರುವಂತಹ ವಿಚಾರಗಳನ್ನು ವರದಿಯು ತೆರೆದಿಟ್ಟಿದೆ.

ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿಯುವವರು ಈ ಎಲ್ಲಾ ಅಂಶಗಳನ್ನು ಗಂಭೀರವಾಗಿ ಗಮನಿಸಿ, ಹವಾಗುಣ ತುರ್ತು ಪರಿಸ್ಥಿತಿ ಮತ್ತು ಅದರಿಂದ ಜನರ ಮೇಲಾಗುವ ದುಷ್ಪರಿಣಾಮಗಳ ತೀವ್ರತೆಯನ್ನು ತಗ್ಗಿಸಲು ಮತ್ತು ನಿಯಂತ್ರಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಅವು ಕಟ್ಟುನಿಟ್ಟಾಗಿ ಅನುಷ್ಠಾನ ಆಗುವಂತೆ ನೋಡಿಕೊಳ್ಳಬೇಕು.



ಚುರುಮುರಿ



ಪಾರ್ಲಿಮೆಂಟ್ ಪಾಸ್

• ಮಣ್ಣೆ ರಾಜು

'ಪಾರ್ಲಿಮೆಂಟ್ ಪರೀಕ್ಷೆ ಫಲಿತಾಂಶ ಪ್ರಕಟವಾಗಿ ಟಾಪರ್‌ಗಳು ಪಾಸಾದರು, ಉಳಿದವರು ಫೇಲಾದರು...' ಎಂದ ಶಂಕ್ರಿ.

'ಚುನಾವಣೆಯಲ್ಲಿ ಮತ ಚಲಾಯಿಸದೆ ನಿರ್ಲಕ್ಷ್ಯ ಮಾಡಿದ ಮತದಾರರನ್ನೂ ನಿರ್ದಾಕ್ಷಿಣ್ಯವಾಗಿ ಫೇಲ್ ಮಾಡಿಬಿಡಬೇಕು' ಸುಮಿಗೆ ಸಿಟ್ಟು.

'ಥಿಯೇಟರ್‌ನಲ್ಲೇ ಸಿನಿಮಾ ನೋಡಿ ಎನ್ನುವಂತೆ, ಮತಗಟ್ಟೆಗೇ ಬಂದು ಮತದಾನ ಮಾಡಿ ಎಂದರೆ ಮತದಾರರಿಗೆ ಕಷ್ಟ ಆಗೋದಿಲ್ವೇನ್ರೀ? ವೋಟ್ ಫ್ರಂ ಹೋಂ ವ್ಯವಸ್ಥೆ ಮಾಡಿ ಮರು ಮತದಾನಕ್ಕೆ ಅವಕಾಶ ಮಾಡಿಕೊಟ್ಟರೆ ಮತದಾರರು ಡಿಸ್ಟಿಂಕ್ಷನ್‌ನಲ್ಲಿ ಪಾಸಾಗ್ತಾರೆ'.

'ಮತ ಮರೆತವರ ಬಗ್ಗೆ ಮರುಕ ತೋರಿಸಬೇಡಿ, ಹಾರ್ಡ್‌ವರ್ಕ್ ಮಾಡಿಯೂ ಚುನಾವಣೆಯಲ್ಲಿ ಫೇಲಾಗಿ ಸಂಕಟಪಡುತ್ತಿರುವ ಅಭ್ಯರ್ಥಿಗಳ ಬಗ್ಗೆ ಸಿಂಪಥಿ ತೋರಿಸಿ'.

'ಫೇಲೇ ಪಾಸಿನ ಮೆಟ್ಟಿಲು ಎಂದುಕೊಂಡು ಫೇಲಾದ ಅಭ್ಯರ್ಥಿಗಳು ಮುಂದಿನ ಎಲೆಕ್ಷನ್‌ವರೆಗೂ ಸಮಾಧಾನ ಮಾಡಿಕೊಳ್ಳಲೇಬೇಕು'.

'ಪ್ರಬಲ ಪಕ್ಷದವರು ಸುಲಭವಾಗಿ ಪಾಸಾಗಿ ಪಾರ್ಲಿಮೆಂಟ್ ಪ್ರವೇಶ ಮಾಡಿಬಿಡ್ತಾರೆ, ಅದೆಷ್ಟೋ ದುರ್ಬಲ ಪಕ್ಷಗಳಿಗೆ ಇವತ್ತಿಗೂ ಪಾರ್ಲಿಮೆಂಟ್ ಫ್ಲೈಟ್ ಹತ್ತಲು ಸಾಧ್ಯವಾಗಿಲ್ಲ. ದೊಡ್ಡ ಪಕ್ಷಗಳು ಸಣ್ಣಪುಟ್ಟ ಪಕ್ಷಗಳ ಕೈ ಹಿಡಿದು ತಮ್ಮ ಜೊತೆ ಪಾರ್ಲಿಮೆಂಟಿಗೆ ಕರೆದೊಯ್ಯುವ ದೊಡ್ಡತನ ತೋರಬೇಕು'.

'ಅಂತಹ ದೊಡ್ಡತನದಿಂದಲೇ ಎನ್‌ಡಿಎ ಗ್ರೂಪ್, 'ಇಂಡಿಯಾ' ಟ್ರೂಪ್ ಮಾಡಿಕೊಂಡು ಸಣ್ಣ ಪಕ್ಷಗಳೊಂದಿಗೆ ಸೀಟು, ಶಕ್ತಿ ಹಂಚಿಕೆ ಮಾಡಿಕೊಂಡು ಅವರೂ ಪಾರ್ಲಿಮೆಂಟ್ ಪ್ರವೇಶಿಸಲು ನೆರವಾಗಿದ್ದಾರೆ'.

'ಕೂಟ, ಒಕ್ಕೂಟಗಳೂ ಕಡೆಗಣಿಸಿರುವ ಅನೇಕ ಶಕ್ತಿಹೀನ ಪಕ್ಷಗಳು ನಮ್ಮಲ್ಲಿವೆ. ಸಂಸತ್ ಸದಸ್ಯರ ಸಂಖ್ಯೆ ಹೆಚ್ಚಳ ಮಾಡಿ, ಚುನಾವಣೆಯಲ್ಲಿ 35 ಪರ್ಸೆಂಟ್ ಮತ ಪಡೆದವರನ್ನು ಪಾಸ್ ಮಾಡುವ ವ್ಯವಸ್ಥೆ ಜಾರಿಯಾದರೆ ದುರ್ಬಲ ಪಕ್ಷಗಳೂ ಪಾರ್ಲಿಮೆಂಟ್‌ಗೆ ಪ್ರವೇಶ ಪಡೆಯಬಹುದು'.

'35 ಪರ್ಸೆಂಟೂ ಪಡೆಯಲಾಗದವರು ಒಂದಷ್ಟು ಗ್ರೇಸ್ ಮತ ಕೊಟ್ಟು ಪಾಸ್ ಮಾಡಿ ಅಂತ ಒತ್ತಾಯಿಸಿದರೆ ವ್ಯವಸ್ಥೆಯು ಅವ್ಯವಸ್ಥೆ ಆಗಿಬಿಡುತ್ತದೆ...' ಅಂದ ಶಂಕ್ರಿ.

ಸಂಗತ

'ಕಾಯ್ದಿರಿಸದವರ' ಕಾಯಬೇಕಿದೆ!

ರೈಲಿನ ಜನರಲ್ ಬೋಗಿಗಳಲ್ಲಿ ಟಿಕೆಟ್ ಕಾಯ್ದಿರಿಸದೆ ಪ್ರಯಾಣಿಸುವವರ ಅತೀವ ಬವಣೆ ತಪ್ಪಿಸಲು ಸರ್ಕಾರ ತುರ್ತು ಕ್ರಮಗಳನ್ನು ಕೈಗೊಳ್ಳಬೇಕಿದೆ

• ಎಚ್.ಕೆ.ಶರತ್

ವಿಜಯಪುರ- ಮಂಗಳೂರು ಎಕ್ಸ್‌ಪ್ರೆಸ್ ರೈಲು ಹತ್ತಲು ಇತ್ತೀಚೆಗೆ ಅರಸೀಕೆರೆ ಜಂಕ್ಷನ್‌ನಲ್ಲಿ ಟಿಕೆಟ್ ಖರೀದಿಸಿ ಕಾಯುತ್ತಿದ್ದೆ. ವೇಳಾಪಟ್ಟಿ ಪ್ರಕಾರ ರಾತ್ರಿ 2.20ಕ್ಕೆ ಅಲ್ಲಿಗೆ ತಲುಪಬೇಕಿದ್ದ ರೈಲು ಬೆಳಗಿನ ಜಾವ 4.30ಕ್ಕೆ ನಿಲ್ದಾಣವನ್ನು ಪ್ರವೇಶಿಸಿತು. ನಾನು ತೆರಳಬೇಕಿದ್ದ ಹಾಸನಕ್ಕೆ ಅರಸೀಕೆರೆಯಿಂದ ಮುಕ್ಕಾಲು ಗಂಟೆ ಪ್ರಯಾಣವಾದ್ದರಿಂದ ಟಿಕೆಟ್ ಕಾಯ್ದಿರಿಸುವ ಅಗತ್ಯ ಕಂಡುಬಂದಿರಲಿಲ್ಲ. ಹಾಗೊಂದು ವೇಳೆ ಕಾಯ್ದಿರಿಸಲು ಮುಂದಾಗಿದ್ದರೆ, ಅದಕ್ಕೆ ತೀರಾ ದುಬಾರಿ ಮೊತ್ತ ಪಾವತಿಸಬೇಕಿದ್ದ ಕಾರಣದಿಂದಲೂ ಅದರ ಉಸಾಬರಿಗೆ ಹೋಗಿರಲಿಲ್ಲ.

ರೈಲು ನಿಲ್ದಾಣವನ್ನು ಪ್ರವೇಶಿಸಿದ ಕೂಡಲೇ ಜನರಲ್ ಬೋಗಿಗಳತ್ತ ತೆರಳಿ ಒಳಹೋಗಲು ಪ್ರಯತ್ನಿಸಿದೆ. ಮೊದಲು ಸಿಕ್ಕ ಎರಡು ಬೋಗಿಗಳ ಬಾಗಿಲನ್ನು ತೆರೆಯಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಮೊದಲೇ ತುಂಬಿ ತುಳುಕುತ್ತಿದ್ದ ಈ ಬೋಗಿಗಳಿಗೆ ಹೊಸದಾಗಿ ಪ್ರವೇಶ ಪಡೆಯಲು ಯಾರಿಗೂ ಅವಕಾಶ ನೀಡಲೇಬಾರದೆಂದು ನಿರ್ಧರಿಸಿದಂತಿದ್ದ ಆ ಬೋಗಿಗಳ ಒಳಗಿದ್ದ ಕೆಲ ಪ್ರಯಾಣಿಕರು, ಬಾಗಿಲುಗಳನ್ನು ತೆರೆಯದ ಹಾಗೆ ನೋಡಿಕೊಂಡರು. ಬಾಗಿಲು ಮುಚ್ಚಲು ಕೂಡ ಸಾಧ್ಯವಾಗದಷ್ಟು ಜನರನ್ನು ತುಂಬಿಕೊಂಡಿದ್ದ ಮತ್ತೊಂದು ಬೋಗಿಯತ್ತ ಓಡಿದೆ. ಹೇಗೋ ಹರಸಾಹಸ ಮಾಡಿ, ಎರಡು ಪಾದ ಊರಿ ನಿಲ್ಲುವಷ್ಟು ಜಾಗ ದಕ್ಕಿಸಿಕೊಂಡೆ. ನನ್ನ ಹಾಗೆ ಒಳ ಪ್ರವೇಶಿಸಲು ಬಂದ ಇನ್ನಷ್ಟು ಪ್ರಯಾಣಿಕರಿಗೆ ಒಳಗೆ ಕಾಲಿಡಲು ಕೂಡ ಜಾಗ ಸಿಗದೇಹೋಯಿತು. ಅವರು ಬೇರೆ ಬೋಗಿಗಳತ್ತ ಮುಖ ಮಾಡಿದರು.

ರೈಲು ಅರಸೀಕೆರೆ ನಿಲ್ದಾಣವನ್ನು ಬಿಟ್ಟು ಹಾಸನದತ್ತ ಪ್ರಯಾಣ ಆರಂಭಿಸಿತು. ಎಲ್ಲರೂ ಹೇಗೋ ಸಿಕ್ಕ ಜಾಗದಲ್ಲಿ ಕೂರಲು, ನಿಲ್ಲಲು ಅಥವಾ ಮಲಗಲು ನೆಲೆ ಕಲ್ಪಿಸಿಕೊಂಡರು. ಸೀಟಿನ ಅಡಿ, ಓಡಾಡಲು ಇರುವ ಜಾಗ ಹೀಗೆ ಎಲ್ಲೆಂದರಲ್ಲಿ ಬಿದ್ದುಕೊಂಡು ಹಲವರು ನಿದ್ರಿಸುತ್ತಿದ್ದರು. ಪ್ರವೇಶ ದ್ವಾರದ ಮೆಟ್ಟಿಲುಗಳನ್ನೂ ಒಳಗೊಂಡು ಕೂರುವಷ್ಟು ಜಾಗ ಹಿಡಿಯಲು ಶಕ್ತರಾದವರು ಕೂತಿದ್ದರು. ಕೆಲವರು ನಿಲ್ಲಲು ಜಾಗ ಸಿಕ್ಕಿದ್ದಕ್ಕೇ ತೃಪ್ತಿಪಟ್ಟುಕೊಂಡು ತೂಕಡಿಸುತ್ತಲೇ ನಿಂತಿದ್ದರು. ಪುಟ್ಟ ಮಕ್ಕಳೊಂದಿಗೆ ಪ್ರಯಾಣಿಸುತ್ತಿದ್ದವರ ಪರಿಸ್ಥಿತಿಯಂತೂ ಅಸಹನೀಯ ವಾಗಿತ್ತು. ರೈಲಿನ ಕಾಯ್ದಿರಿಸದ ಬೋಗಿಗಳು ಒಂದು ರೀತಿಯಲ್ಲಿ ಸಾಮಾನು-ಸರಂಜಾಮುಗಳನ್ನು ತುಂಬಿಕೊಳ್ಳುವ ಲಗೇಜ್ ಗಾಡಿಗಳಂತೆ ಮನುಷ್ಯರನ್ನು ತುಂಬಿಕೊಂಡಿದ್ದವು.

ಇದು ಬರೀ ನಾನು ಪ್ರಯಾಣಿಸುತ್ತಿದ್ದ ರೈಲಿನ ಜನರಲ್ ಬೋಗಿಗಳಲ್ಲಿನ ಪ್ರಯಾಣಿಕರ ಪಾಡಷ್ಟೇ ಆಗಿರಲಿಲ್ಲ. ರಾತ್ರಿ ವೇಳೆ ಪ್ರಯಾಣಿಸುವ ಬಹುತೇಕ ಎಕ್ಸ್‌ಪ್ರೆಸ್ ಮತ್ತು ಸೂಪರ್ ಫಾಸ್ಟ್ ರೈಲುಗಳಲ್ಲಿನ ಕಾಯ್ದಿರಿಸದ ಬೋಗಿಗಳ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಯೇನೂ ಇರುವುದಿಲ್ಲ. ರಾತ್ರಿ ವೇಳೆ ಯಾವುದಾದರೂ ರೈಲು ನಿಲ್ದಾಣದಲ್ಲಿ ನಿಂತು, ಅಲ್ಲಿ ಓಡಾಡುವ ರೈಲುಗಳ ಜನರಲ್ ಬೋಗಿಗಳತ್ತ ದಿಟ್ಟಿಸಿದರೂ ಸಾಕು, ಭಾರತೀಯ ರೈಲ್ವೆ ಮತ್ತು ಅದನ್ನು ನಿಯಂತ್ರಿಸುವ ಹೊಣೆ ಹೊತ್ತಿರುವ ಸರ್ಕಾರಕ್ಕೆ ಜನರಲ್ ಬೋಗಿಗಳಲ್ಲಿ ಪ್ರಯಾಣಿಸುವ ಜನಸಾಮಾನ್ಯರ ಕುರಿತು ಯಾವ ಪರಿ ಕಾಳಜಿ ಇದೆ ಎಂಬುದು ಅರಿವಾಗುತ್ತದೆ.

'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲುಗಳ ಸಂಚಾರಕ್ಕೆ ಚಾಲನೆ ನೀಡಲು ಹೆಚ್ಚು ಉತ್ಸುಕತೆ ತೋರಿದ ಸರ್ಕಾರಕ್ಕೆ, ಹೆಚ್ಚಿನ ಸಂಖ್ಯೆಯ ಜನಸಾಮಾನ್ಯರನ್ನು ಒಳಗೊಂಡ ಜನರಲ್ ಬೋಗಿಗಳಲ್ಲಿನ ಪ್ರಯಾಣಿಕರ ಹಿತ ಮುಖ್ಯವಾದಂತೆ ತೋರುವುದಿಲ್ಲ. ಬೇಡಿಕೆಗೆ ಅನುಗುಣವಾಗಿ ರೈಲುಗಳು ಮತ್ತು ಅವುಗಳಲ್ಲಿನ ಜನರಲ್ ಬೋಗಿಗಳ ಸಂಖ್ಯೆಯನ್ನು ಹೆಚ್ಚಿಸದೇ ಹೋದಲ್ಲಿ ಈಗ ಪ್ರಯಾಣಿಕರು ಅನುಭವಿಸುತ್ತಿರುವ ಯಾತನೆ ಮತ್ತಷ್ಟು ತೀವ್ರ ಸ್ವರೂಪ ಪಡೆಯಲಿದೆ.



ರಾಜ್ಯ ಸರ್ಕಾರ 'ಶಕ್ತಿ' ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಜಾರಿಗೆ ತಂದ ನಂತರ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ನೂಕುನುಗ್ಗಲು ಉಂಟಾಗಿ, ಪ್ರಯಾಣಿಕರು ಅನುಭವಿಸಿದ ಮತ್ತು ಇಂದಿಗೂ ಅನುಭವಿಸುತ್ತಲೇ ಇರುವ ಪಡಿಪಾಟಲುಗಳ ಸುತ್ತಲಿನ ಚರ್ಚೆ ಮುಂದುವರಿದೇ ಇದೆ. ಇದಕ್ಕೆ ಮಾಧ್ಯಮಗಳಲ್ಲಿ ಕೂಡ ಪ್ರಾಮುಖ್ಯ ದೊರೆಯುತ್ತಿದೆ. ಬೇಡಿಕೆಗೆ ಅನುಗುಣವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬಸ್‌ಗಳನ್ನು ಸಂಚಾರಕ್ಕೆ ಬಿಡಬೇಕೆನ್ನುವ ಒತ್ತಡ ಸರ್ಕಾರದ ಮೇಲಿದೆ. ಇಂತಹುದೇ ಪರಿಸ್ಥಿತಿಯು ರೈಲುಗಳ ಕಾಯ್ದಿರಿಸದ ಬೋಗಿಗಳಲ್ಲಿ ಕೂಡ ಇದೆ. ಆದರೂ ಈ ಕುರಿತು ಸಾರ್ವಜನಿಕ ವಲಯದಲ್ಲಿ ಹೆಚ್ಚಿನ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿಲ್ಲ. ರಾಜಕಾರಣಿಗಳಾಗಲಿ, ಮಾಧ್ಯಮಗಳಾಗಲಿ ಒಕ್ಕೂಟ ಸರ್ಕಾರದ ಮೇಲೆ ಒತ್ತಡ ಹೇರುವ ಕೆಲಸ ಮಾಡುತ್ತಿಲ್ಲ. ಹೀಗೇಕೆ?

ಸಾರ್ವಜನಿಕ ಬಸ್‌ಗಳಿಗೆ ಹೋಲಿಸಿದರೆ, ರಾತ್ರಿ ವೇಳೆ ಸುದೀರ್ಘ ಅವಧಿ ಪ್ರಯಾಣಿಸುವವರನ್ನು ಒಳಗೊಂಡ ರೈಲುಗಳ ಕಾಯ್ದಿರಿಸದ ಬೋಗಿಗಳಲ್ಲಿ ದನಿ ಇಲ್ಲದ ದಮನಿತರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಇಂತಹ ನಿರ್ಲಕ್ಷ್ಯಕ್ಕೆ ಕಾರಣವೇ? ರೈಲುಗಳ ಸ್ಲೀಪರ್, ಹವಾನಿಯಂತ್ರಿತ ಬೋಗಿಗಳಲ್ಲಿ ಶುಚಿತ್ವದ ಕೊರತೆ ಮತ್ತು ಸೌಲಭ್ಯಗಳಲ್ಲಿ ವ್ಯತ್ಯಯವಾದರೆ ಆ ಕುರಿತು ದನಿ ಎತ್ತುವವರು ಮತ್ತು ಅದಕ್ಕೆ ಸ್ಪಂದಿಸುವ ವ್ಯವಸ್ಥೆ ತಕ್ಕಮಟ್ಟಿಗಾದರೂ ಅಸ್ತಿತ್ವದಲ್ಲಿದೆ. ಆದರೆ, ಸಾಮಾನ್ಯ ಪ್ರಯಾಣಿಕರ ಗೋಳು ಕೇಳುವವರು ಯಾರು?

ವಾಚಕರ ವಾಣಿ

ನಡೆಯದ ಲೆಕ್ಕಾಚಾರ, ಬೇಕು ಎಚ್ಚರದ ನಡೆ

ಸಮೀಕ್ಷೆ, ಟ್ರೆಂಡ್, ಲೀಡ್ಸ್ ಇವುಗಳನ್ನೆಲ್ಲ ದಾಟಿ ಘೋಷಿತ ಪರಿಣಾಮಗಳೆಲ್ಲ ಸೇರಿದಾಗ ಹೊಸ ಲೋಕಸಭೆ, ಸರ್ಕಾರದ ಸ್ವರೂಪ ತಿಳಿಯುತ್ತದೆ. ಇಷ್ಟಂತೂ ನಿಜ: 'ಚಾರ್ ಸೌ ಪಾರ್' ಸಾಧಿತವಾಗಿಲ್ಲ. ಉತ್ತರಪ್ರದೇಶದಲ್ಲಿ ಬಿಜೆಪಿಯ ಲೆಕ್ಕಾಚಾರ ವರ್ಕ್‌ಔಟ್ ಆಗಿಲ್ಲ, ತಮಿಳುನಾಡಿನ ಬಗೆಗಿನ ಆಶಾಭಾವವೂ. ನರೇಂದ್ರ ಮೋದಿ ಅವರು ಮತ್ತೆ ಪ್ರಧಾನ ಮಂತ್ರಿ ಆಗಬಹುದು, ಆದರೆ ಹಿಂದಿನಷ್ಟು ಮುಕ್ತವಾಗಿ ಕಠಿಣ ನಿರ್ಧಾರಗಳನ್ನು ಕೈಗೊಳ್ಳಲಾರರು. ಎಪ್ಪತ್ತೈದು ವರ್ಷದ ನಿಯಮಕ್ಕೆ ಒಳಪಟ್ಟರೆ, ಪ್ರಧಾನಿಯಾಗಬಲ್ಲ ಒಬ್ಬರನ್ನು ಮಧ್ಯದಲ್ಲೇ ಗುರುತಿಸಬೇಕಾಗುತ್ತದೆ. ಸಾಮರ್ಥ್ಯಕ್ಕಿಂತ 'ವಿಶ್ವಾಸಾರ್ಹತೆ' ಒರೆಗಲ್ಲಾದರೆ?

'ಇಂಡಿಯಾ' ಮೈತ್ರಿಕೂಟಕ್ಕೂ ಈ ಫಲಿತಾಂಶದಿಂದ ಕಲಿಯುವುದು ಬಹಳಷ್ಟಿದೆ. ಪ್ರಾದೇಶಿಕ ನಾಯಕರಾಗಿಯೂ ಬೇರೆ ರಾಜ್ಯದ ಸಮಸ್ಯೆಗಳನ್ನು ಅರಿತುಕೊಳ್ಳಬೇಕಾದುದು ಅದರಲ್ಲಿ ಒಂದು. ಸ್ಟಾಲಿನ್, ಮಮತಾ ಬ್ಯಾನರ್ಜಿ, ಅಖಿಲೇಶ್ ಯಾದವ್ ರಾಜಕಾರಣದಲ್ಲಿ ಹಳಬರೇ. ಮತದಾರನ ದೃಷ್ಟಿಯಿಂದ ಒಂದು ಸಂವೇದನಾಶೀಲ, ನಿಷ್ಪಕ್ಷಪಾತಿ ಸರ್ಕಾರ ರಚನೆಯಾಗಿ, ಬೇಗ ಪೂರ್ಣಗಾತ್ರದ ಬಜೆಟ್ ಮಂಡಿಸಬೇಕು. ಸಂಖ್ಯೆಯಲ್ಲಿ ವೃದ್ಧಿ ಕಂಡಿರುವ ವಿರೋಧಪಕ್ಷವನ್ನು ವಿಶ್ವಾಸಕ್ಕೆ ತೆಗೆದುಕೊಂಡು, ತನ್ನ ನಿರ್ಧಾರಗಳು ಅತಿ ಎನಿಸದಂತೆ ಎಚ್ಚರ ವಹಿಸಬೇಕು. 'ಸಬ್ ಕಾ ಸಾಥ್' ಸಾಕಾರವಾಗುವುದು ಆಗಲೇ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಕಚ್ಚಾ ರಸ್ತೆಯಲ್ಲಿ ಸಾಗಿದರೂ ಟೋಲ್!

ವೈಯಕ್ತಿಕ ಕೆಲಸದ ನಿಮಿತ್ತ, ವಾರದ ಹಿಂದೆ ಬೆಂಗಳೂರಿನಿಂದ ರಾಣೆಬೆನ್ನೂರಿಗೆ ಕಾರಿನಲ್ಲಿ ಪ್ರಯಾಣಿಸಿದೆ. ಈ ಮಾರ್ಗದ ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ ಒಂದಿಲ್ಲೊಂದು ರಸ್ತೆ ಕಾಮಗಾರಿಗಳು ನಡೆಯುತ್ತಲೇ ಇವೆ. ಇದರಿಂದ ಕಚ್ಚಾ ರಸ್ತೆಯಲ್ಲಿ ಸಾಗಬೇಕಾದ ಅನಿವಾರ್ಯ ಸ್ಥಿತಿ ವಾಹನ ಸವಾರರದ್ದಾಗಿದೆ. ಕಾಮಗಾರಿ ನಡೆಯುತ್ತಿರುವ ಈ ಸಂದರ್ಭದಲ್ಲೂ ವಾಹನಗಳಿಗೆ ಟೋಲ್ ಸಂಗ್ರಹ ಮಾಡುತ್ತಿರುವುದರ ಔಚಿತ್ಯ ಸರಿ ಕಾಣುತ್ತಿಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಇತ್ತ ಗಮನಹರಿಸಿ, ನಮ್ಮಂತಹ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲಿ.

ಎಂ.ಜೆ.ಅಭಿಷೇಕ್, ಬೆಂಗಳೂರು

ಜನಪ್ರತಿನಿಧಿಗಳ ಅಗತ್ಯದ ಅರಿವಾಯಿತೇ?

'ಕಾರ್ಪೊರೇಟರ್‌ಗಳು ಏನು ಮಾಡುತ್ತಾರೆ? ಅಧಿಕಾರ ಇರಲಿ, ಇಲ್ಲದಿರಲಿ ಜನರಿಗಾಗಿ ಅವರು ಯಾವಾಗಲೂ ಕೆಲಸ ಮಾಡಬೇಕು. ಪಂಚಾಯಿತಿಯಿಂದ ಪಾರ್ಲಿಮೆಂಟ್‌ತನಕ ಜನಪ್ರತಿನಿಧಿಗಳು ಇರಬೇಕು' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. 'ವಾರ್ಡ್‌ಗಳಲ್ಲಿ ಸಮಸ್ಯೆ ನಿವಾರಣೆಗೆ ಕಾರ್ಪೊರೇಟರ್‌ಗಳು ಇಲ್ಲದಿರುವುದರಿಂದ ತೊಂದರೆಯಾಗುತ್ತಿದೆಯೇ?' ಎಂಬ ಮಾಧ್ಯಮದವರ ಪ್ರಶ್ನೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದ್ದಾರೆ. ಅಧಿಕಾರ ಇದ್ದಾಗಲೇ ಕಾರ್ಪೊರೇಟರ್‌ಗಳು ಜನರ ಕೆಲಸ ಮಾಡುವುದು ಕಡಿಮೆ. ಇನ್ನು, ಅಧಿಕಾರ ಇಲ್ಲದಾಗ ಕೆಲಸ ಮಾಡುವರೇ? ನೊಣಗಳು ಸಿಹಿತಿಂಡಿ ಇದ್ದಾಗ ಮುತ್ತುತ್ತವೆಯೇ ವಿನಾ ಖಾಲಿ ತಟ್ಟೆಗೆ ಮುತ್ತುತ್ತವೆಯೇ? ಈ ಮಧ್ಯೆ ಕೆಲವು ಮಾಜಿ ಕಾರ್ಪೊರೇಟರ್‌ಗಳು ಮಳೆ ಹಾನಿಗೆ ತಕ್ಷಣ ಸ್ಪಂದಿಸಿ ಕೆಲಸ ಮಾಡಿಸಿದ್ದು ಮಾನವೀಯತೆಯ ದ್ಯೋತಕ.

ಸಾರ್ವಜನಿಕ ಕಾರ್ಯಗಳಿಗೆ ಸ್ಪಂದಿಸುವಲ್ಲಿ ಜನಪ್ರತಿನಿಧಿಗಳ ಅಗತ್ಯದ ಅರಿವಿರುವ ಉಪಮುಖ್ಯಮಂತ್ರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಕೂಡಲೇ ಆದ್ಯತೆಯ ಮೇರೆಗೆ ಚುನಾವಣೆ ನಡೆಸಿ, ಪಾಲಿಕೆಯಲ್ಲಿ ಜನಪ್ರತಿನಿಧಿಗಳು ಇರುವಂತೆ ಮಾಡಲಿ. ಈ ವಿಚಾರದಲ್ಲಿ ನ್ಯಾಯಾಲಯವೇ ಹಲವು ಬಾರಿ ಆದೇಶ ನೀಡಿದೆಯಾದರೂ ಸರ್ಕಾರ ಕುಂಟುನೆಪಗಳನ್ನು ಹೇಳಿ ಚುನಾವಣೆಯನ್ನು ಮುಂದೂಡುತ್ತಲೇ ಬಂದಿದೆ. ಇನ್ನಾದರೂ ಪಾಲಿಕೆಗೆ ಸರ್ಕಾರ ಚುನಾವಣೆ ನಡೆಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಪ್ರಬುದ್ಧ ಮತದಾರನ ಗೋಪ್ಯ ನಡೆ

ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟಣೆಗೆ ಎರಡು ದಿನಗಳ ಮೊದಲೇ ಮಾಧ್ಯಮಗಳಲ್ಲಿ ಒಂದೇ ಸಮನೆ ಹರಿದಾಡಿದ ಚುನಾವಣಾ ಸಮೀಕ್ಷೆಗಳ ಮಹಾಪೂರ, ಪರಿಣತರ ವಿಶ್ಲೇಷಣೆ, ವಿವಿಧ ಪಕ್ಷಗಳ ಅಭ್ಯರ್ಥಿಗಳ ಸೋಲು, ಗೆಲುವಿನ ಸಂಖ್ಯೆಯ ಅಂದಾಜು ಎಲ್ಲವೂ ಮಂಗಳವಾರದ ನಿಜದ ಫಲಿತಾಂಶದಲ್ಲಿ ಕೊಚ್ಚಿಹೋಗಿವೆ. ದೇಶದ ಮತದಾರ ಇತ್ತೀಚೆಗೆ ಜಾಣ್ಮೆ ಪ್ರದರ್ಶಿಸುತ್ತಿದ್ದಾನೆ. ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗಳಿಗೆ ಸಮಯೋಚಿತವಾಗಿ ಸಿದ್ಧ ಉತ್ತರ ನೀಡಿ, ಮತದಾನದ ಗೋಪ್ಯತೆಯನ್ನು ಕಾಪಾಡಿಕೊಳ್ಳುತ್ತಿರುವ ಮತದಾರ ಅಭಿನಂದನಾರ್ಹ. ಒಂದು ರೀತಿಯಲ್ಲಿ ಮತದಾರನು ಮಾಧ್ಯಮಗಳನ್ನೇ ಪೇಚಿಗೆ ಸಿಲುಕಿಸಿ ಹಾದಿ ತಪ್ಪುವಂತೆ ಮಾಡುತ್ತಿದ್ದಾನೆ ಎನ್ನಬಹುದು. ಚುನಾವಣಾ ಆಯೋಗವು ಮತಗಟ್ಟೆ ಸಮೀಕ್ಷೆಗಳನ್ನು ನಿಷೇಧಿಸಿದರೆ ದೇಶದ ನಾಗರಿಕರು ನಿಜಕ್ಕೂ ನೆಮ್ಮದಿಯಿಂದ ಇರುತ್ತಾರೆ.

ಶಾಂತಕುಮಾರ್, ಸರ್ಜಾಪುರ

ಅರ್ಥಹೀನ ಮೀಸಲಾತಿ

ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಪ್ರಯಾಣಿಸುವ ಅಂಗವಿಕಲರು, ಅಂಧರು, ಸ್ವಾತಂತ್ರ್ಯ ಹೋರಾಟಗಾರರು, ಹಿರಿಯ ನಾಗರಿಕರು, ವಿಧಾನಸಭಾ ಸದಸ್ಯರಿಗಾಗಿ ಕೆಲವು ಸೀಟುಗಳನ್ನು ಮೀಸಲಿರಿಸಲಾಗಿರುತ್ತದೆ. ಆಯಾ ವರ್ಗದ ಪ್ರಯಾಣಿಕರ ಮೀಸಲಾತಿಯನ್ನು ಕಿಟಕಿಯ ಮೇಲ್ಭಾಗದಲ್ಲಿ ನಮೂದಿಸಲಾಗಿರುತ್ತದೆ. ಸಮಯಾಭಾವ ಅಥವಾ ಸುರಕ್ಷತೆಯ ದೃಷ್ಟಿಯಿಂದ ಶಾಸಕರು ಸ್ವಂತ ವಾಹನದಲ್ಲಿ ಅಥವಾ ಸರ್ಕಾರಿ ವಾಹನದಲ್ಲಿ ಪ್ರಯಾಣಿಸುತ್ತಾರೆ. ಅದೇರೀತಿ, ಸ್ವಾತಂತ್ರ್ಯ ಬಂದು 75 ವರ್ಷ ಕಳೆದಿರುವುದರಿಂದ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದವರು ಬದುಕುಳಿದಿರುವ ಸಾಧ್ಯತೆ ಕಡಿಮೆ. ಒಂದುವೇಳೆ ಬದುಕಿದ್ದರೂ ವಯೋಸಹಜ ಅನಾರೋಗ್ಯದಂತಹ ಕಾರಣದಿಂದ ಬಸ್‌ನಲ್ಲಿ ಪ್ರಯಾಣಿಸಲು ಶಕ್ತರಾಗಿರುವುದಿಲ್ಲ. ಆದ್ದರಿಂದ ಈ ಎರಡೂ ವರ್ಗಗಳ ಪ್ರಯಾಣಿಕರಿಗೆ ಸೀಟುಗಳನ್ನು ಮೀಸಲಿರಿಸಿರುವುದು ಅರ್ಥಹೀನ ಎನಿಸುತ್ತದೆ.

'ಶಕ್ತಿ' ಯೋಜನೆಯ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಪುರುಷರಿಗಾಗಿ ಶೇ 50ರಷ್ಟು ಸೀಟುಗಳನ್ನು ಮೀಸಲಿರಿಸಲು ಸರ್ಕಾರ ಮುಂದಾಗಿಲ್ಲ. ಇದರಿಂದ ಪುರುಷ ಅಂಗವಿಕಲರು, ಅಂಧರು, ಹಿರಿಯ ನಾಗರಿಕರಿಗೆ ತೊಂದರೆಯಾಗುತ್ತಿದೆ. ಹೀಗಾಗಿ, ಈ ಮೀಸಲಾತಿಯನ್ನು ಜಾರಿಗೊಳಿಸುವ ಮೂಲಕ ಅರ್ಹರು ವಂಚಿತರಾಗದಂತೆ ನೋಡಿಕೊಳ್ಳಬೇಕಾಗಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.





ಆಡಳಿತವಿರೋಧಿ ಅಲೆಗೆ ಸಿಕ್ಕ ಜಗನ್‌ಮೋಹನ್ ರೆಡ್ಡಿ ನೇತೃತ್ವದ ವೈಎಸ್‌ಆರ್‌ಸಿಪಿ ದೂಳೀಪಟ

ಆಂಧ್ರಪ್ರದೇಶ: ತೆಲುಗುದೇಶಂ ಜಯಭೇರಿ

ಅಮರಾವತಿ (ಪಿಟಿಐ): ನೆರೆಯ ಆಂಧ್ರಪ್ರದೇಶ ವಿಧಾನಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ನೇತೃತ್ವದ ತೆಲುಗುದೇಶಂ ಜಯಭೇರಿ ಬಾರಿಸಿದೆ.


ಈ ಚುನಾವಣೆಯಲ್ಲಿ ನಾಯ್ಡು ಅಕ್ಷರಶಃ ಪುಟಿದೆದ್ದು ನಿಂತಿದ್ದಾರೆ. 175 ಸದಸ್ಯ ಬಲದ ವಿಧಾನಸಭೆಯಲ್ಲಿ ತೆಲುಗುದೇಶಂ ಪಕ್ಷ 133 ಸ್ಥಾನ ಗೆದ್ದಿದ್ದು, ಸ್ಪಷ್ಟಬಹುಮತ ಪಡೆದಿದೆ. ಸರ್ಕಾರ ರಚನೆಗೆ ಪಕ್ಷ ಸಜ್ಜಾಗಿದೆ.

ರಾಷ್ಟ್ರಮಟ್ಟದಲ್ಲಿ ಎನ್‌ಡಿಎ ಜೊತೆಗೆ ಗುರುತಿಸಿಕೊಂಡಿದ್ದ ತೆಲುಗುದೇಶಂ ರಾಜ್ಯದಲ್ಲಿ ನಟ ಪವನ್ ಕಲ್ಯಾಣ್ ನೇತೃತ್ವದ ಜನಸೇನಾ, ಬಿಜೆಪಿ ಜೊತೆಗೂಡಿ ಮೈತ್ರಿಹೊಂದಿತ್ತು. ಆಡಳಿತವಿರೋಧಿ ಅಲೆಯೊಂದಿಗೆ, ವಿರೋಧ ಪಕ್ಷಗಳ ಧ್ರುವೀಕರಣವೂ ವೈಎಸ್‌ಆರ್‌ಸಿಪಿಯನ್ನು ನೇಪಥ್ಯಕ್ಕೆ ಸರಿಸಿದೆ.

ವಿಧಾನಸಭೆ ಚುನಾವಣೆಯಲ್ಲಿ ಭಾರಿ ಗೆಲುವಿನ ಜೊತೆಗೆ ರಾಷ್ಟ್ರಮಟ್ಟದಲ್ಲೂ ನಿರ್ಣಾಯಕ ಪಾತ್ರ ವಹಿಸುವ 'ಶಕ್ತಿ'ಯನ್ನು ನಾಯ್ಡು ಈ ಫಲಿತಾಂಶದಿಂದ ಪಡೆದುಕೊಂಡಿದ್ದಾರೆ. ತೆಲುಗುದೇಶಂ ಹಾಗೂ ನಟ ಪವನ್ ಕಲ್ಯಾಣ್ ನೇತೃತ್ವದ ಜನಸೇನಾ ಪಕ್ಷದ ಮೈತ್ರಿಕೂಟ ಒಟ್ಟು 162 ಸ್ಥಾನವನ್ನು ಗೆದ್ದುಕೊಂಡಿವೆ.

ಸೀಟು ಹಂಚಿಕೆ ಒಪ್ಪಂದದಂತೆ ತೆಲುಗುದೇಶಂ ವಿಧಾನಸಭೆಯ 144, ಲೋಕಸಭೆಯ 17 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಜನಸೇನಾ ಪಕ್ಷ ವಿಧಾನಸಭೆಯ 21, ಲೋಕಸಭೆಯ 2 ಕ್ಷೇತ್ರಗಳಲ್ಲಿ ಕಣಕ್ಕಿಳಿದಿತ್ತು. ಚಂದ್ರಬಾಬು ನಾಯ್ಡು ಈ ಗೆಲುವಿನೊಂದಿಗೆ ನಾಲ್ಕನೇ ಬಾರಿಗೆ ರಾಜ್ಯದ ಮುಖ್ಯಮಂತ್ರಿ ಗಾದಿಗೇರುವುದು ನಿಚ್ಚಳವಾಗಿದೆ.

ಈ ಫಲಿತಾಂಶದ ಮೂಲಕ ಸಾರ್ವತ್ರಿಕ ಚುನಾವಣೆಯಲ್ಲಿಯೂ ಆಡಳಿತ ಪಕ್ಷವನ್ನು ಬದಲಿಸುವ ಸಂಪ್ರದಾಯವು ಆಂಧ್ರಪ್ರದೇಶದಲ್ಲಿ ಆರಂಭವಾದಂತಿದೆ. 2019ರಲ್ಲಿ ವೈಎಸ್‌ಆರ್‌ಸಿಪಿ ಒಟ್ಟು 151 ಕ್ಷೇತ್ರಗಳಲ್ಲಿ ಗೆದ್ದಿದ್ದು, ಭಾರಿ ಬಹುಮತದೊಂದಿಗೆ ಅಧಿಕಾರ ಗಳಿಸಿತ್ತು. ಈ ಚುನಾವಣೆಯಲ್ಲಿ ಅದರ ಬಲ 10 ಸ್ಥಾನಕ್ಕೆ ಇಳಿದಿದೆ.



ಆಂಧ್ರಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಜನಸೇನಾ –ತೆಲುಗುದೇಶಂ –ಬಿಜೆಪಿ ಮೈತ್ರಿಕೂಟದ ಗೆಲುವಿನ ರೂವಾರಿಗಳಾದ ನಟ ಪವನ್ ಕಲ್ಯಾಣ್, ಟಿಡಿಪಿ ಮುಖ್ಯಸ್ಥ ಎನ್‌.ಚಂದ್ರಬಾಬು ನಾಯ್ಡು. (ಸಂಗ್ರಹ ಚಿತ್ರ –ಪಿಟಿಐ)

ಆಂಧ್ರಪ್ರದೇಶ ವಿಧಾನಸಭೆ	
ಒಟ್ಟು ಸ್ಥಾನಗಳು	175
ಸರಳ ಬಹುಮತದ ಸ್ಥಾನ	88
ಪಕ್ಷ	ಗೆದ್ದಸ್ಥಾನಗಳು
ತೆಲುಗುದೇಶಂ	135
ಜನಸೇನಾ	21
ವೈಎಸ್‌ಆರ್‌ಸಿಪಿ	11
ಬಿಜೆಪಿ	08

> **ಹಲವು ಕಲ್ಯಾಣ ಕಾರ್ಯಕ್ರಮಗಳ ಜಾರಿಯ ನಂತರವೂ ಪಕ್ಷದ ಹಿನ್ನಡೆ ಕಾರಣ ತಿಳಿಯಲು ವಿಫಲನಾಗಿದ್ದೇನೆ. ಸವಾಲುಗಳನ್ನು ಎದುರಿಸಲು ಸಿದ್ಧನಿದ್ದೇನೆ. ವೈಎಸ್‌ಆರ್‌ಸಿಪಿ ಇನ್ನು ಧ್ವನಿ ಇಲ್ಲದವರ ಧ್ವನಿಯಾಗಿ ಕಾರ್ಯನಿರ್ವಹಿಸಲಿದೆ. ಗೆಲುವಿಗಾಗಿ ಚಂದ್ರಬಾಬುನಾಯ್ಡು, ಪವನ್ ಕಲ್ಯಾಣ್ ಅವರಿಗೆ ಅಭಿನಂದನೆಗಳು**
> **ವೈ.ಎಸ್.ಜಗನ್ ಮೋಹನ ರೆಡ್ಡಿ**
> ನಿರ್ಗಮಿತ ಮುಖ್ಯಮಂತ್ರಿ, ಆಂಧ್ರಪ್ರದೇಶ

ಕಳೆದ ಚುನಾವಣೆಯಲ್ಲಿನ ಸೋಲಿನ ಬಳಿಕ, ವಯಸ್ಸಿನಲ್ಲಿ ಕಿರಿಯರಾಗಿದ್ದ ಜಗನ್‌ಮೋಹನ್ ರೆಡ್ಡಿ ಅವರಿಂದ ತೀವ್ರ ಅಪಮಾನಕ್ಕೀಡಾಗಿದ್ದ ನಾಯ್ಡು, ಧೃತಿಗೆಟ್ಟಿದ್ದರು. ನಿರ್ಮಾಣ ನಿಯಮ ಉಲ್ಲಂಘನೆ ಆರೋಪದಡಿ, ಅಮರಾವತಿಯಲ್ಲಿ ಅವರು ನಿರ್ಮಿಸಿದ್ದ 'ಪ್ರಜಾವೇದಿಕಾ' ಕಟ್ಟಡ ನೆಲಸಮಗೊಳಿಸಲಾಗಿತ್ತು. ಭ್ರಷ್ಟಾಚಾರದ ಆರೋಪದಡಿ ನಾಯ್ಡು ಜೈಲು ಸೇರಿದ್ದರು. ತೀವ್ರ ಅಪಮಾನಿತರಾಗಿ ವಿಧಾನಸಭೆಯಲ್ಲಿಯೇ ಕಣ್ಣೀರು ಹಾಕಿದ್ದರು. ಸ್ಪಷ್ಟ ಅಧಿಕಾರ ಸಿಗುವವರೆಗೆ ಸದನಕ್ಕೆ ಪ್ರವೇಶಿಸುವುದಿಲ್ಲ ಎಂದೂ ಶಪಥ ಮಾಡಿದ್ದರು.

ನಾಯ್ಡು 1995ರಲ್ಲಿ ಮೊದಲ ಬಾರಿಗೆ ಅವಿಭಜಿತ ಆಂಧ್ರಪ್ರದೇಶದ ಮುಖ್ಯಮಂತ್ರಿಯಾದರು. ಆನಂತರ ಮತ್ತೊಂದು ಅವಧಿಗೆ ಅವಿಭಜಿತ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ರಾಜ್ಯ ವಿಭಜನೆಯ 10 ವರ್ಷದ ನಂತರ ಮತ್ತೆ ಮುಖ್ಯಮಂತ್ರಿಯಾಗಿದ್ದು, ರಾಜಧಾನಿಯಾಗಿ ಅಮರಾವತಿ ನಗರ ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. 90ರ ದಶಕದಲ್ಲಿ ಕೇಂದ್ರದಲ್ಲಿ ಸರ್ಕಾರ ರಚಿಸಲು ಹಾಗೂ ಎ.ಬಿ.ವಾಜಪೇಯಿ ಅವರು ಪ್ರಧಾನಿಯಾಗಿ, ಎನ್‌ಡಿಎ ಸರ್ಕಾರ ಸ್ಥಾಪನೆಯಲ್ಲಿ ನಿರ್ಣಾಯಕ ಹೊಣೆಗಾರಿಕೆಯನ್ನೂ ನಿಭಾಯಿಸಿದ್ದರು.

ರಾಜ್ಯದ ಕೌಶಲ ಅಭಿವೃದ್ಧಿ ನಿಗಮದ ಅಕ್ರಮಕ್ಕೆ ಸಂಬಂಧಿಸಿ ವೈಎಸ್‌ಆರ್‌ಸಿಪಿ ಸರ್ಕಾರ ನಾಯ್ಡು ಅವರನ್ನು 2023ರಲ್ಲಿ ಬಂಧಿಸಿತ್ತು. 2 ತಿಂಗಳು ಜೈಲಿನಲ್ಲಿದ್ದರು. ಅವು ಅವರ ರಾಜಕೀಯ ಬದುಕಿನ ಕಷ್ಟದ ದಿನಗಳು. ಕಳೆದ ವರ್ಷ ಅ. 31ರಂದು ಮಧ್ಯಂತರ ಜಾಮೀನು ಪಡೆದು ಹೊರಬಂದರು. ಈಗ ಪುಟಿದೆದ್ದು ನಿಂತಿದ್ದಾರೆ.

ಜಗನ್ ಮೋಹನ್ ರೆಡ್ಡಿಗೆ ಮುಖಭಂಗ

ಕಳೆದ ಚುನಾವಣೆಯಲ್ಲಿ ಭಾರಿ ಬಹುಮತದೊಂದಿಗೆ ಅಧಿಕಾರದ ಗದ್ದುಗೆಗೇರಿದ್ದ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಅವರಿಗೆ ಈ ಬಾರಿ ತೀವ್ರ ಮುಖಭಂಗವಾಗಿದೆ. ವೈಎಸ್‌ಆರ್‌ಸಿಪಿ ಈ ಬಾರಿ 10 ಸ್ಥಾನವಷ್ಟೇ ಗೆದ್ದಿದೆ.

ಈ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸಿದ್ದ ವೈ.ಎಸ್.ಜಗನ್ ಮೋಹನ್ ರೆಡ್ಡಿ ಅವರು ಪುಲಿವೆಂದುಲ ವಿಧಾನಸಭೆ ಕ್ಷೇತ್ರದಲ್ಲಿ, ಸಮೀಪದ ಪ್ರತಿಸ್ಪರ್ಧಿ, ತೆಲುಗುದೇಶಂ ಪಕ್ಷದ ಬಿ.ರವಿ ವಿರುದ್ಧ ಕೇವಲ – ಮತಗಳ ಅಂತರದಿಂದ ಪ್ರಯಾಸದ ಗೆಲುವು ಕಂಡಿದ್ದಾರೆ.

ಇನ್ನೊಂದೆಡೆ, ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಹಾದಿಯಲ್ಲಿರುವ ಚಂದ್ರಬಾಬು ನಾಯ್ಡು ಮತ್ತು ಅವರ ಪುತ್ರ ಲೋಕೇಶ್ ಕ್ರಮವಾಗಿ ಕುಪ್ಪಂ ಮತ್ತು ಮಂಗಳಗಿರಿ ಕ್ಷೇತ್ರದಿಂದ ಗೆದ್ದು ವಿಧಾನಸಭೆಗೆ ಪ್ರವೇಶಿಸಿದ್ದಾರೆ.

ಮೈತ್ರಿಪಕ್ಷ ಜನಸೇನಾದ ಮುಖ್ಯಸ್ಥ ಪವನ್ ಕಲ್ಯಾಣ್ ಅವರು ಪೀತಪುರಂ ಕ್ಷೇತ್ರದಲ್ಲಿ, ಪ್ರತಿಸ್ಪರ್ಧಿ ವೈಎಸ್‌ಆರ್‌ಸಿಪಿಯ ವಿ.ಗೀತಾ ವಿರುದ್ಧ 61 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಜಯಗಳಿಸಿದ್ದಾರೆ.

ಮಂತ್ರಿಗಳಿಗೆ ಸೋಲು: ವೈಎಸ್‌ಆರ್‌ಸಿಪಿ ಸರ್ಕಾರದಲ್ಲಿ ಸಚಿವರಾಗಿದ್ದ ಆರ್.ಕೆ.ರೋಜಾ, ಬೋಚಾ ಸತ್ಯನಾರಾಯಣ, ಸಿ.ಗೋಪಾಲಕೃಷ್ಣ, ಎಸ್.ಅಪ್ಪಾಲರಾಜು, ಅಂಬಟಿ ರಾಮಬಾಬು, ವಿ.ರಜಿನಿ, ಟಿ.ವನಿತಾ, ಅಮರನಾಥ್, ಅಮ್ಜದ್ ಭಾಷಾ ಆಡಳಿತವಿರೋಧಿ ಅಲೆಯಿಂದಾಗಿ ಪರಾಭವಗೊಂಡಿದ್ದಾರೆ.

ಬಿಜೆಪಿ: ಜಯಭೇರಿ ಬಾರಿಸಿದ ರಾಜಮನೆತನಗಳ ಸದಸ್ಯರು

ನವದೆಹಲಿ (ಪಿಟಿಐ): ಹಲವಾರು ರಾಜಮನೆತಗಳ ಸದಸ್ಯರನ್ನು ಬಿಜೆಪಿಯು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಸಿತ್ತು. ಅವರೆಲ್ಲರೂ ಚುನಾವಣೆಯಲ್ಲಿ ಉತ್ತಮ ಪ್ರದರ್ಶನ ತೋರಿದ್ದಾರೆ.

ಮಧ್ಯಪ್ರದೇಶದ ಗ್ವಾಲಿಯರ್ ರಾಜಮನೆತನದ ಸದಸ್ಯ ಜ್ಯೋತಿರಾದಿತ್ಯ ಸಿಂದಿಯಾ ಅವರು ಕಾಂಗ್ರೆಸ್ ಜೊತೆಗಿನ ತಮ್ಮ 18 ವರ್ಷಗಳ ನಂಟನ್ನು ಕಡಿದುಕೊಂಡು 2020ರಲ್ಲಿ ಬಿಜೆಪಿ ಸೇರ್ಪಡೆಯಾಗಿದ್ದರು. ಗುನಾ ಕ್ಷೇತ್ರದಲ್ಲಿ ಅವರು ಕಾಂಗ್ರೆಸ್ ಅಭ್ಯರ್ಥಿಯೆದುರು ಅವರು ಭಾರಿ ಅಂತರದ ಜಯ ಸಾಧಿಸಿದ್ದಾರೆ.

ರಾಜಸ್ಥಾನದ ಢೋಲ್‌ಪುರ ರಾಜಮನೆತನದ ಅಭ್ಯರ್ಥಿ ದುಶ್ಯಂತ್ ಸಿಂಗ್ ಅವರು ಐದನೇ ಬಾರಿಗೆ ಸಂಸದರಾಗಿ ಆಯ್ಕೆ ಆಗಿದ್ದಾರೆ.

ರಾಜಸ್ಥಾನದ ರಾಜ್‌ಸಮಂದ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮೇವಾಢ್ ರಾಜಮನೆತನದ ಸದಸ್ಯೆ ಮಹಿಮಾ ಕುಮಾರಿ ಮೇವಾಢ್ ಅವರು ತಮ್ಮ ಎದುರಾಳಿ, ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ 4 ಲಕ್ಷ ಮತಗಳ ಅಂತರದಲ್ಲಿ ಗೆದ್ದಿದ್ದಾರೆ.

ತ್ರಿಪುರಾದ ಎನ್‌ಡಿಎ ಅಭ್ಯರ್ಥಿ (ಟಿಪ್ರಮೋಥ ಮತ್ತು ಬಿಜೆಪಿ) ಕೃತಿ ಸಿಂಗ್ ದೇಬಬರ್ಮಾ ಅವರು 5.5 ಲಕ್ಷ ಮತಗಳ ಅಂತರದಲ್ಲಿ ಸಿಪಿಐ ಅಭ್ಯರ್ಥಿಯನ್ನು ಸೋಲಿಸಿದ್ದಾರೆ. ಅವರೂ ರಾಜಮನೆತನದ ಸದಸ್ಯೆ.

ಒಡಿಶಾ, ಕರ್ನಾಟಕದಲ್ಲೂ ರಾಜಮನೆತಗಳ ಸದಸ್ಯರು ಗೆಲುವು ಸಾಧಿಸಿದ್ದಾರೆ.



ಕೇರಳದ ತಿರುವನಂತಪುರ ಕ್ಷೇತ್ರದಿಂದ ಗೆದ್ದ ಕಾಂಗ್ರೆಸ್ ಅಭ್ಯರ್ಥಿ ಶಶಿ ತರೂರ್ ಅವರು ಬೆಂಬಲಿಗರ ಜೊತೆ ಸಂತಸ ಹಂಚಿಕೊಂಡರು –ಪಿಟಿಐ ಚಿತ್ರ

ಬಿಜೆಡಿ ಸರ್ಕಾರದ ವಿರುದ್ಧ ಆಡಳಿತ ವಿರೋಧಿ ಅಲೆ • 8 ಸಚಿವರಿಗೆ ಸೋಲು

ಒಡಿಶಾ: ಬಿಜೆಪಿಗೆ ಜನಾದೇಶ

ಭುವನೇಶ್ವರ (ಪಿಟಿಐ): ಒಡಿಶಾದಲ್ಲಿ ಆಡಳಿತವಿರೋಧಿ ಅಲೆಗೆ ಸಿಕ್ಕ ಆಡಳಿತರೂಢ ಬಿಜು ಜನತಾದಳ (ಬಿಜೆಡಿ) ಅಧಿಕಾರ ಕಳೆದುಕೊಂಡಿದೆ. ಬಿಜೆಪಿ ಸರಳ ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದೆ.

147 ಸದಸ್ಯ ಬಲದ ರಾಜ್ಯ ವಿಧಾನಸಭೆಯಲ್ಲಿ ಬಿಜೆಪಿ 80 ಸ್ಥಾನ ಗೆದ್ದುಕೊಂಡಿದ್ದು, ಸರಳ ಬಹುಮತ ಪಡೆದಿದೆ. ಅಧಿಕಾರ ಕಳೆದುಕೊಂಡರೂ ಬಿಜೆಡಿ 49 ಕ್ಷೇತ್ರಗಳಲ್ಲಿ ಜಯಗಳಿಸಿದ್ದು, ಗೌರವವನ್ನು ಉಳಿಸಿಕೊಂಡಿದೆ.



ಆದರೆ, ಬಿಜೆಡಿ ಸರ್ಕಾರದ ಕನಿಷ್ಠ ಎಂಟು ಸಚಿವರು ಆಡಳಿತ ವಿರೋಧಿ ಅಲೆಗೆ ಸಿಕ್ಕು ಪರಾಭವಗೊಂಡಿದ್ದಾರೆ.

ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರೇ ಎರಡು ಕ್ಷೇತ್ರಗಳಲ್ಲಿ ಕಣಕ್ಕಿಳಿದಿದ್ದರು. ಈ ಪೈಕಿ ಬೊಲಾಂಗೀರ್ ಜಿಲ್ಲೆಯ ಕಾಂತಾಬಂಜಿ ಕ್ಷೇತ್ರದಲ್ಲಿ ಬಿಜೆಪಿಯ ಲಕ್ಷ್ಮಣ್ ಬಾಗ್ ಅವರ ವಿರುದ್ಧ ಸೋತರು.

ಆದರೆ, ಕಣಕ್ಕಿಳಿದಿದ್ದ ಮತ್ತೊಂದು ಕ್ಷೇತ್ರ ಗಂಜಾಂ ಜಿಲ್ಲೆಯ ಹಿಂಜಿಲಿಯಲ್ಲಿ ಬಿಜೆಪಿ ಅಭ್ಯರ್ಥಿ ಸಿಸಿರ್ ಕುಮಾರ್ ಮಿಶ್ರಾ ವಿರುದ್ಧ ಜಯಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನವೀನ್ ಪಟ್ನಾಯಕ್ ಸಚಿವ ಸಂಪುಟದ ಹಲವು ಸಚಿವರು, ಬಿಜೆಡಿಯ ಹಲವು ಹಿರಿಯ ಮುಖಂಡರು ಗೆಲುವಿನ ದಡ ಮುಟ್ಟುವಲ್ಲಿ ವಿಫಲರಾಗಿದ್ದಾರೆ.

ಉಳಿದಂತೆ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ 14 ಕ್ಷೇತ್ರಗಳಲ್ಲಿ ಗೆದ್ದುಕೊಂಡಿದ್ದು, ತನ್ನ ಬಲ ವೃದ್ಧಿಸಿಕೊಂಡಿದೆ. 2019ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು 9 ಸ್ಥಾನವನ್ನು ಗೆದ್ದುಕೊಂಡಿತ್ತು. ಸಿಪಿಎಂ 1ಕ್ಷೇತ್ರದಲ್ಲಿಗೆದ್ದಿದ್ದರೆ, ಮೂರುಕ್ಷೇತ್ರಗಳಲ್ಲಿ ಪಕ್ಷೇತರ ಅಭ್ಯರ್ಥಿಗಳು ಯಶಸ್ಸು ಕಂಡಿದ್ದಾರೆ.

ಒಡಿಶಾ ವಿಧಾನಸಭೆ
- ಒಟ್ಟು ಸ್ಥಾನಗಳು: 147
- ಸರಳ ಬಹುಮತದ ಸ್ಥಾನ: 74
- ಬಿಜೆಪಿ: 78
- ಬಿಜು ಜನತಾದಳ (ಬಿಜೆಡಿ): 51
- ಕಾಂಗ್ರೆಸ್: 14
- ಸಿಪಿಎಂ: 01
- ಪಕ್ಷೇತರರು: 03

ಸುರಪುರ–ಉಪ ಚುನಾವಣೆ

ಕಾಂಗ್ರೆಸ್ ಅಭ್ಯರ್ಥಿ ಗೆಲುವು

ಪ್ರಜಾವಾಣಿ ವಾರ್ತೆ

ಯಾದಗಿರಿ: ಜಿಲ್ಲೆಯ ಸುರಪುರ ವಿಧಾನಸಭಾ ಮತಕ್ಷೇತ್ರದ ಶಾಸಕರಾಗಿದ್ದ ರಾಜಾ ವೆಂಕಟಪ್ಪ ನಾಯಕ ನಿಧನದಿಂದ ತೆರವಾಗಿದ್ದರಿಂದ ನಡೆದಿದ್ದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಾಜಾ ವೇಣುಗೋಪಾಲ ನಾಯಕ ಜಯಗಳಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ರಾಜಾ ವೇಣುಗೋಪಾಲ ನಾಯಕ 1,14,886 ಮತಗಳನ್ನು ಪಡೆದರೆ, ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ನರಸಿಂಹ ನಾಯಕ (ರಾಜೂಗೌಡ) 96,566 ಮತಗಳನ್ನು ಪಡೆದಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ 18,320 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ರಾಜಾ ವೆಂಕಟಪ್ಪ ನಾಯಕ ಅವರ ಪುತ್ರ ರಾಜಾ ವೇಣುಗೋಪಾಲ ನಾಯಕ ಅವರನ್ನು ಅನುಕಂಪದ ಅಲೆ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಗೆಲುವಿನ ದಡ ವನ್ನು ಸೇರಿಸಿತು.

ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಮಂಗಳವಾರ ನಡೆದ 23 ಸುತ್ತಿನ ಮತ ಎಣಿಕೆಯಲ್ಲಿ ಮೊದಲ ಸುತ್ತಿನಲ್ಲಿ ಮಾತ್ರ ಬಿಜೆಪಿ 14 ಮತಗಳ ಮುನ್ನಡೆ ಸಾಧಿಸಿತ್ತು. ಆ ನಂತರ ನಡೆದ 22 ಸುತ್ತಿನ ಮತ ಎಣಿಕೆಯಲ್ಲಿ ಕಾಂಗ್ರೆಸ್ ಮುನ್ನಡೆ ಕಾಪಾಡಿಕೊಂಡಿತ್ತು.

ಮೇ 7ರಂದು ಲೋಕಸಭೆ ಚುನಾವಣೆ ಜೊತೆಗೆ ಸುರಪುರ ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ನಡೆದಿತ್ತು. ಉಪ ಚುನಾವಣೆಯಲ್ಲಿ 2,15,515 ಮತಗಳು ಚಲಾವಣೆಗೊಂಡಿದ್ದವು. 216 ಅಂಚೆ ಮತಗಳು ತಿರಸ್ಕೃತಗೊಂಡಿವೆ.



ರಾಜಾ ವೇಣು ಗೋಪಾಲ ನಾಯಕ

ಬಿಜೆಪಿ ಗೆಲುವು ತಡೆಯಲು ವಿಫಲರಾದ ಕೇಜ್ರಿವಾಲ್

ನವದೆಹಲಿ(ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧಿತರಾಗಿರುವ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಮಧ್ಯಂತರ ಜಾಮೀನು ಪಡೆದು ಜೈಲಿನಿಂದ ಹೊರಬಂದಿದ್ದರು. ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ದೆಹಲಿಯಲ್ಲಿ ರ‍್ಯಾಲಿ, ರೋಡ್ ಶೋ ನಡೆಸಿದರೂ, ರಾಷ್ಟ್ರ ರಾಜಧಾನಿಯಲ್ಲಿ ಬಿಜೆಪಿಯನ್ನು ಸೋಲಿಸಲು ವಿಫಲರಾಗಿದ್ದಾರೆ.

ಸುಪ್ರೀಂ ಕೋರ್ಟ್‌ನಿಂದ ಮಧ್ಯಂತರ ಜಾಮೀನು ಪಡೆದ ಬಳಿಕ, ಮೇ 10ರಂದು ತಿಹಾರ್ ಜೈಲಿನಿಂದ ಬಿಡುಗಡೆಯಾಗಿದ್ದ ಅವರು, ಚುನಾವಣೆ ಮುಗಿದ ನಂತರ ಜೂನ್ 2ರಂದು ಮತ್ತೆ ಜೈಲು ಸೇರಿದ್ದಾರೆ.

ದೆಹಲಿಯಲ್ಲಿ ಮಾತ್ರವಲ್ಲದೇ, ಮಹಾರಾಷ್ಟ್ರ, ಜಾರ್ಖಂಡ್, ಉತ್ತರ ಪ್ರದೇಶ, ಹರಿಯಾಣ ಹಾಗೂ ಪಂಜಾಬ್ ರಾಜ್ಯಗಳಲ್ಲಿ ಪ್ರಚಾರ ನಡೆಸಿದ್ದ ಕೇಜ್ರಿವಾಲ್, ತಮ್ಮ ಆಮ್ ಆದ್ಮಿ ಪಕ್ಷದ (ಎಎಪಿ) ಜೊತೆಗೆ 'ಇಂಡಿಯಾ' ಒಕ್ಕೂಟದ ಅಭ್ಯರ್ಥಿಗಳ ಪರವಾಗಿಯೂ ಮತಯಾಚನೆ ಮಾಡಿದ್ದರು.

ಅವರ ರ‍್ಯಾಲಿಯಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರೂ, ಅವು ಮತಗಳಾಗಿ ಪರಿವರ್ತನೆಯಾಗಲಿಲ್ಲ. ಹೀಗಾಗಿ, ದೆಹಲಿಯ ಎಲ್ಲ ಏಳು ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ದಾಖಲಿಸಿದೆ.

ನೆರೆಯ ಪಂಜಾಬ್‌ನ 13 ಲೋಕಸಭಾ ಕ್ಷೇತ್ರಗಳ ಪೈಕಿ, ಎಎಪಿ ಮೂರರಲ್ಲಿ ಗೆದ್ದಿದೆ. ಇಲ್ಲಿ ಮಿತ್ರಪಕ್ಷವಾದ ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿತ್ತು. ಕಾಂಗ್ರೆಸ್ ಪಕ್ಷವೇ ಎಎಪಿ ಅಭ್ಯರ್ಥಿ ಗೆಲುವು ಅಡ್ಡಿಯಾಗಿದ್ದು ಗಮನಾರ್ಹ.

ದೆಹಲಿ ಸೇರಿದಂತೆ, ಎಎಪಿ ಒಟ್ಟು 22 ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು.

ಈಶಾನ್ಯ ರಾಜ್ಯಗಳಲ್ಲಿ ಬಿಜೆಪಿ ಪ್ರಾಬಲ್ಯ

ಅಸ್ಸಾಂನ 14ರಲ್ಲಿ 9, ಅರುಣಾಚಲ ಪ್ರದೇಶದಲ್ಲಿ ಎರಡೂ ಕ್ಷೇತ್ರಗಳು ಬಿಜೆಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಸ್ಸಾಂ, ಮಣಿಪುರ ಸೇರಿದಂತೆ ಎಂಟು ಈಶಾನ್ಯ ರಾಜ್ಯಗಳ ಒಟ್ಟು 25 ಲೋಕಸಭಾ ಕ್ಷೇತ್ರಗಳ ಪೈಕಿ 13 ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ದಾಖಲಿಸಿದ್ದರೆ, ಕಾಂಗ್ರೆಸ್ 7 ಕ್ಷೇತ್ರಗಳಲ್ಲಿ ಜಯ ಗಳಿಸಿದೆ. ಉಳಿದ ಐದು ಕ್ಷೇತ್ರಗಳು ಸ್ಥಳೀಯ ಪಕ್ಷಗಳ ಪಾಲಾಗಿವೆ.

ಈಶಾನ್ಯ ರಾಜ್ಯಗಳ ಪೈಕಿ ಅಸ್ಸಾಂನಲ್ಲಿ ಅತಿ ಹೆಚ್ಚು ಅಂದರೆ 14 ಲೋಕಸಭಾ ಕ್ಷೇತ್ರಗಳಿದ್ದು, ಅದರಲ್ಲಿ ಎನ್‌ಡಿಎ ತೆಕ್ಕೆಗೆ 11 ಬಂದಿವೆ. ಈ ಪೈಕಿ 9ರಲ್ಲಿ ಬಿಜೆಪಿ, ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್ (ಯುಪಿಪಿಎಲ್) ಮತ್ತು ಅಸ್ಸಾಂ ಗಣ ಪರಿಷತ್ (ಎಜಿಪಿ) ತಲಾ ಒಂದು ಕ್ಷೇತ್ರಗಳಲ್ಲಿ ಜಯಿಸಿವೆ. ಕಾಂಗ್ರೆಸ್ ಪಕ್ಷ 3ರಲ್ಲಿ ಗೆದ್ದಿದೆ. ಕಳೆದ ಬಾರಿ ಎನ್‌ಡಿಎ ಮೈತ್ರಿಕೂಟ ಇಲ್ಲಿ 9 ಕ್ಷೇತ್ರಗಳಲ್ಲಿ ವಿಜಯ ಸಾಧಿಸಿತ್ತು. ಈ ಬಾರಿ ಎರಡು ಹೆಚ್ಚುವರಿ ಕ್ಷೇತ್ರಗಳನ್ನು ಪಡೆದಿದೆ. ಬಿಜೆಪಿ ಆಡಳಿತ ಇರುವ ಅಸ್ಸಾಂನಲ್ಲಿ ಅತಿ ಹೆಚ್ಚು ಸ್ಥಾನಗಳನ್ನು ಹೊಂದುವ ಗುರಿಯನ್ನು ಅಲ್ಲಿನ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮ ಹೊಂದಿದ್ದರು.

ಅರುಣಾಚಲ ವಿಧಾನಸಭಾ ಚುನಾವಣೆಯಲ್ಲಿ 'ಹ್ಯಾಟ್ರಿಕ್' ಗೆಲುವು ಸಾಧಿಸಿರುವ ಬಿಜೆಪಿ, ರಾಜ್ಯದ ಎರಡು ಲೋಕಸಭಾ ಕ್ಷೇತ್ರಗಳನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಲೋಕಸಭಾ ಚುನಾವಣೆಯ ಜತೆಗೇ ನಡೆದ ಇಲ್ಲಿನ ವಿಧಾನಸಭಾ ಚುನಾವಣೆಯಲ್ಲಿ 60 ಕ್ಷೇತ್ರಗಳ ಪೈಕಿ 46ರಲ್ಲಿ ಜಯಿಸಿರುವ ಬಿಜೆಪಿ ಸತತ ಮೂರನೇ ಬಾರಿ ಅಧಿಕಾರ ರಚಿಸಲು ಸಜ್ಜಾಗಿದೆ.

ಕೇಂದ್ರ ಸಚಿವ ರಿಜಿಜುಗೆ ಜಯ: ಅರುಣಾಚಲ ಪಶ್ಚಿಮ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಕೇಂದ್ರ ಸಚಿವ ಕಿರಣ್ ರಿಜಿಜು ಅವರು ತನ್ನ ಸಮೀಪದ ಅಭ್ಯರ್ಥಿ ಕಾಂಗ್ರೆಸ್‌ನ ನಬಮ್ ತುಕಿ ಅವರ ಎದುರು ಭಾರಿ ಅಂತರದಿಂದ ಗೆಲುವಿನ ನಗೆ ಬೀರಿದ್ದಾರೆ.

ಮೇಘಾಲಯದಲ್ಲಿನ ಎರಡು ಕ್ಷೇತ್ರಗಳ ಪೈಕಿ 'ವಾಯ್ಸ್ ಆಫ್ ದಿ ಪೀಪಲ್ಸ್ ಪಾರ್ಟಿ' (ವಿಒಟಿಪಿಪಿ) ಮತ್ತು ಕಾಂಗ್ರೆಸ್ ಪಕ್ಷಗಳು ತಲಾ ಒಂದರಲ್ಲಿ ಜಯಗಳಿಸಿವೆ. ಮಿಜೋರಾಂ ಆಡಳಿತ ಪಕ್ಷವಾದ ಜೋರಾಂ ಪೀಪಲ್ಸ್ ಮೂವ್‌ಮೆಂಟ್ (ಜಡ್‌ಪಿಎಂ) ರಾಜ್ಯದ ಏಕೈಕ ಕ್ಷೇತ್ರದಲ್ಲಿ ವಿಜಯ ಸಾಧಿಸಿದೆ. ನ್ಯಾಷನಲಿಸ್ಟ್ ಡೆಮಾಕ್ರಟಿಕ್ ಪ್ರೋಗ್ರೆಸಿವ್ ಪಾರ್ಟಿ (ಎನ್‌ಡಿಪಿಪಿ) ಅಧಿಕಾರದಲ್ಲಿರುವ ನಾಗಾಲ್ಯಾಂಡ್ ರಾಜ್ಯದ ಏಕೈಕ ಕ್ಷೇತ್ರವನ್ನು ಕಾಂಗ್ರೆಸ್ ತನ್ನದಾಗಿಸಿಕೊಂಡಿದೆ.

ತ್ರಿಪುರದಲ್ಲಿನ ಆಡಳಿತ ಪಕ್ಷ ಬಿಜೆಪಿಯು ರಾಜ್ಯದ ಎರಡೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದರೆ, ಸಿಕ್ಕಿಂನಲ್ಲಿ ಅಧಿಕಾರದಲ್ಲಿ ಇರುವ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ (ಎಸ್‌ಕೆಎಂ) ರಾಜ್ಯದಲ್ಲಿನ ಏಕೈಕ ಕ್ಷೇತ್ರವನ್ನು ತನ್ನದಾಗಿಸಿಕೊಂಡಿದೆ.



ಮೇಘಾಲಯದ ತುರಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಲೆಂಗ್ ಎ.ಸಂಗ್ಮಾ ಅವರು ಸಾಂಪ್ರದಾಯಿಕ ಉಡುಗೆ ತೊಟ್ಟು ಅಭಿಮಾನಿಗಳ ಜತೆ ಗೆಲುವಿನ ಸಂಭ್ರಮ ಆಚರಿಸಿದರು –ಪಿಟಿಐ ಚಿತ್ರ

ಮಣಿಪುರ ಕಾಂಗ್ರೆಸ್ ತೆಕ್ಕೆಗೆ

ಜನಾಂಗೀಯ ಸಂಘರ್ಷ ಪೀಡಿತ ಮಣಿಪುರದಲ್ಲಿ ಆಡಳಿತಾರೂಢ ಬಿಜೆಪಿ ಮತ್ತು ಅದರ ಮಿತ್ರ ಪಕ್ಷವಾದ ನಾಗಾ ಪೀಪಲ್ಸ್ ಫ್ರಂಟ್‌ಗೆ (ಎನ್‌ಪಿಎಫ್) ಮುಖಭಂಗವಾಗಿದೆ. ಎನ್‌ಡಿಎ ಮೈತ್ರಿಕೂಟದ ತೆಕ್ಕೆಯಲ್ಲಿದ್ದ ಎರಡೂ ಲೋಕಸಭಾ ಕ್ಷೇತ್ರಗಳು ಕಾಂಗ್ರೆಸ್ ಪಾಲಾಗಿವೆ. ಬಿಜೆಪಿ ನೇತೃತ್ವದ ಸರ್ಕಾರ ಇದ್ದರೂ ಎರಡೂ ಕ್ಷೇತ್ರಗಳನ್ನು ಉಳಿಸಿಕೊಳ್ಳುವಲ್ಲಿ ಎನ್‌ಡಿಎ ವಿಫಲವಾಗಿದೆ.

ವರ್ಷದ ಹಿಂದಿನಿಂದ ಮಣಿಪುರದಲ್ಲಿ ನಡೆಯುತ್ತಿರುವ ಗಲಭೆಯಲ್ಲಿ 200ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಹಲವು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ. ಸಹಸ್ರಾರು ಜನರು ಮನೆಗಳನ್ನು ಕಳೆದುಕೊಂಡು ನಿರಾಶ್ರಿತ ಶಿಬಿರಗಳಲ್ಲಿ ವಾಸವಾಗಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಮಣಿಪುರ ರಾಜ್ಯದಲ್ಲಿ ಯಾವುದೇ ರೀತಿಯ ಅಬ್ಬರದ ಪ್ರಚಾರ ನಡೆದಿರಲಿಲ್ಲ. 2019ರಲ್ಲಿ ಒಂದು ಕ್ಷೇತ್ರದಲ್ಲಿ ಬಿಜೆಪಿ, ಮತ್ತೊಂದರಲ್ಲಿ ಎನ್‌ಪಿಎಫ್ ಗೆದ್ದಿತ್ತು.

'ಇಂಡಿಯಾ' ಒಕ್ಕೂಟದ ನಾಯಕರ ಸಭೆ ಇಂದು

ನವದೆಹಲಿ(ಪಿಟಿಐ): ಲೋಕಸಭಾ ಚುನಾವಣಾ ಫಲಿತಾಂಶದ ಬೆನ್ನಲ್ಲೇ ಮುಂದಿನ ಕಾರ್ಯತಂತ್ರ ರೂಪಿಸಲು 'ಇಂಡಿಯಾ' ಒಕ್ಕೂಟದ ನಾಯಕರು ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಅವರ ನಿವಾಸಲ್ಲಿ ಬುಧವಾರ ಸಂಜೆ ಸಭೆ ಸೇರಲಿದ್ದಾರೆ.

ಮಹಿಳಾ ಅಭ್ಯರ್ಥಿಗಳ ಸೋಲು–ಗೆಲುವು

ನವದೆಹಲಿ: 2024ರ ಲೋಕಸಭಾ ಚುನಾವಣೆಯಲ್ಲಿ ದೇಶಾದ್ಯಂತ ಒಟ್ಟು 797 ಮಹಿಳಾ ಅಭ್ಯರ್ಥಿಗಳು ಕಣಕ್ಕಿಳಿದಿದ್ದರು. ಅವರ ಪೈಕಿ ಹಲವರು ಖ್ಯಾತನಾಮರ ವಿರುದ್ಧ ಗೆಲುವು ಸಾಧಿಸುವ ಮೂಲಕ ಗಮನ ಸೆಳೆದಿದ್ದಾರೆ.

ಇದೇ ಮೊದಲ ಬಾರಿಗೆ ರಾಜಕೀಯ ಪ್ರವೇಶಿಸಿ ಹಿಮಾಚಲ ಪ್ರದೇಶದ ಮಂಡಿಯಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ನಟಿ ಕಂಗನಾ ರನೌತ್, ತ್ರಿಪುರಾದಲ್ಲಿ ಪೂರ್ವ ತ್ರಿಪುರಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೃತಿ ಸಿಂಗ್ ದೇಬ್‌ಬರ್ಮಾ ಗೆಲುವು ಸಾಧಿಸಿದ್ದಾರೆ.

ಉತ್ತರ ಪ್ರದೇಶ ಮಥುರಾದ ಬಿಜೆಪಿ ಅಭ್ಯರ್ಥಿ ನಟಿ ಹೇಮಾ ಮಾಲಿನಿ, ಹರ್ಯಾಣದ ಸಿರ್ಸಾದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್ ಅಭ್ಯರ್ಥಿ ಸೆಲ್ಜಾ, ದೆಹಲಿಯ ಬಿಜೆಪಿ ಅಭ್ಯರ್ಥಿ ಸುಷ್ಮಾ ಸ್ವರಾಜ್ ಪುತ್ರಿ ಬಾನ್ಸುರಿ ಸ್ವರಾಜ್, ಮಣಿಪುರದ ಮೈನ್‌ಪುರಿಯ ಡಿಂಪಲ್ ಯಾದವ್, ಆರ್‌ಜೆಡಿ ನಾಯಕ ಲಾಲು ಪ್ರಸಾದ್ ಯಾದವ್ ಪುತ್ರಿ ಮಿಸಾ ಭಾರ್ತಿ ಗೆಲುವು ಸಾಧಿಸಿದ್ದಾರೆ.

ಲೋಕಸಭೆಯಲ್ಲಿ ಮೋದಿ ಸರ್ಕಾರವನ್ನು ಟೀಕಿಸುವುದರ ಮೂಲಕ ಗಮನ ಸೆಳೆದಿದ್ದ ಟಿಎಂಸಿಯ ಮಹುವಾ ಮೊಯಿತ್ರಾ ಅವರು ಪಶ್ಚಿಮ ಬಂಗಾಳದ ಕೃಷ್ಣ ನಗರ ಕ್ಷೇತ್ರದಿಂದ ಗೆಲುವು ಸಾಧಿಸಿದ್ದಾರೆ. ಡಿಎಂಕೆಯ ಕನಿಮೊಳಿ ಕರುಣಾನಿಧಿ ಅವರು ತಮಿಳುನಾಡಿನ ತೂತ್ತುಕುಡಿಯಲ್ಲಿ ಎಐಡಿಎಂಕೆಯ ಶಿವಸಾಮಿ ವೇಲುಮಣಿ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ್ದಾರೆ. ಮಹಾರಾಷ್ಟ್ರದ ಬಾರಾಮತಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಶರದ್ ಪವಾರ್ ಪುತ್ರಿ, ಎನ್‌ಸಿಪಿ ಅಭ್ಯರ್ಥಿ ಸುಪ್ರಿಯಾ ಸುಳೆ ಅವರು ಅಜಿತ್ ಪವಾರ್ ಪತ್ನಿ ಸುನೇತ್ರಾ ಪವಾರ್ ವಿರುದ್ಧ ಗೆಲುವು ಸಾಧಿಸಿದ್ದಾರೆ.

ತೆಲಂಗಾಣದ ಹೈದರಾಬಾದ್ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಬಿಜೆಪಿ ಅಭ್ಯರ್ಥಿ ಮಾಧವಿ ಲತಾ ಅವರು ಅಸಾದುದ್ದೀನ್ ಒವೈಸಿ ವಿರುದ್ಧ ಪರಾಭವಗೊಂಡಿದ್ದಾರೆ. ಜಮ್ಮು ಕಾಶ್ಮೀರದ ರಾಜೌರಿ– ಅನಂತನಾಗ್ ಕ್ಷೇತ್ರದಿಂದ ಪಿಡಿಪಿಯ ಮೆಹಬೂಬಾ ಮುಫ್ತಿ ಗೆಲುವು ಸಾಧಿಸಿದ್ದಾರೆ.

ಸೋತ ಪ್ರಮುಖ ಮಹಿಳಾ ಅಭ್ಯರ್ಥಿಗಳು: ಉತ್ತರ ಪ್ರದೇಶದ ಅಮೇಠಿಯಿಂದ ಸ್ಪರ್ಧಿಸಿದ್ದ ಬಿಜೆಪಿ ನಾಯಕಿ ಸ್ಮೃತಿ ಇರಾನಿ, ಉತ್ತರ ಪ್ರದೇಶದ ಸುಲ್ತಾನ್‌ಪುರಿಯಿಂದ ಸ್ಪರ್ಧಿಸಿದ್ದ ಮೇನಕಾ ಗಾಂಧಿ ಸೋಲನುಭವಿಸಿದ್ದಾರೆ.



ಅಸ್ಸಾಂನ ಗುವಾಹಟಿಯ ಬಿಜೆಪಿ ಅಭ್ಯರ್ಥಿ ಬಿಜುಲಿ ಕಲಿತಾ ಮೇಧಿ ಅವರು ತಮ್ಮ ಬೆಂಬಲಿಗರೊದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಸಂದೇಶ್‌ಖಾಲಿ: ಬಿಜೆಪಿಗೆ ಸೋಲು

ಇತ್ತೀಚೆಗೆ ದೇಶದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದ್ದು ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ಮಹಿಳೆಯರ ಮೇಲೆ ನಡೆದಿದ ಎನ್ನಲಾದ ದೌರ್ಜನ್ಯ ಹಾಗೂ ಭೂಹಗರಣ ಪ್ರಕರಣ. ಸಂದೇಶ್‌ಖಾಲಿಯನ್ನು ಒಳಗೊಂಡಿರುವ ಬಸೀರ್‌ಹಟ್ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಬಿಜೆಪಿ ಅಭ್ಯರ್ಥಿ ರೇಖಾ ಪಾತ್ರಾ ಅವರು ಪರಾಭವಗೊಂಡಿದ್ದಾರೆ. ಸರಿ ಸುಮಾರು 2 ಲಕ್ಷ ಮತಗಳ ಅಂತರದಿಂದ ರೇಖಾ ವಿರುದ್ಧ ಟಿಎಂಸಿ ನಾಯಕ ಹಾಜಿ ನೂರುಲ್ ಇಸ್ಲಾಂ ಗೆಲುವು ಸಾಧಿಸಿದ್ದಾರೆ.

ಇಲ್ಲಿನ ಟಿಎಂಸಿ ನಾಯಕ ಶಹಜಾನ್ ಶೇಕ್ ಅವರ ಕಾರ್ಯಕರ್ತರು ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ್ದಾರೆ ಮತ್ತು ಬಲವಂತವಾಗಿ ಸ್ಥಳೀಯರ ಭೂಮಿಯನ್ನು ಅತಿಕ್ರಮಿಸಿಕೊಂಡಿದ್ದಾರೆ ಎಂದು ಸಂದೇಶ್‌ಖಾಲಿ ಮಹಿಳೆಯರು ಆರೋಪ ಮಾಡಿದ್ದರು.

ಟಿಎಂಸಿ ವಿರುದ್ಧ ರೇಖಾ ಅವರನ್ನು ಬಿಜೆಪಿ ಕಣಕ್ಕಿಳಿಸಿ ಭರ್ಜರಿ ಪ್ರಚಾರ ನಡೆಸಿತ್ತು. ಪ್ರಧಾನಿ ನರೇಂದ್ರ ಮೋದಿಯವರು ರೇಖಾ ಅವರನ್ನು ದುರ್ಗಿ ಎಂದು ಕೊಂಡಾಡಿದ್ದರು. ಕುತೂಹಲ ಕೆರಳಿಸಿದ್ದ ಕ್ಷೇತ್ರದಲ್ಲಿಮತದಾರ ಮತ್ತೆ ಟಿಎಂಸಿಗೆ ಜೈಕಾರ ಹಾಕಿದ್ದಾನೆ.

ದೇಶದ ಕಿರಿಯ ಸಂಸದೆ

ಎಲ್‌ಜೆಪಿಯ ಶಾಂಭವಿ ಕುನಾಲ್ ಚೌಧರಿ ದೇಶದ ಅತ್ಯಂತ ಕಿರಿಯ ಸಂಸದೆ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಬಿಹಾರದ ಸಮಷ್ಟಿಪುರ ಲೋಕಸಭಾ ಕ್ಷೇತ್ರದ ಎಲ್‌ಜೆಪಿ ಪಕ್ಷದ ಅಭ್ಯರ್ಥಿಯಾಗಿ 25 ವರ್ಷದ ಶಾಂಭವಿ ಕುನಾಲ್ ಚೌಧರಿ ಕಣಕ್ಕಿಳಿದಿದ್ದರು. ಅವರು ಚುನಾವಣೆಯಲ್ಲಿ ಗೆಲುವು ಸಾಧಿಸುವ ಮೂಲಕ ಕಿರಿಯ ಸಂಸದೆ ಎಂಬ ದಾಖಲೆ ನಿರ್ಮಿಸಿದ್ದಾರೆ.



ಗೆಲುವಿನ ಸಂಭ್ರಮ

ಹೈದರಾಬಾದ್‌ನ ಬಿಜೆಪಿ ಕಚೇರಿಯಲ್ಲಿ ಪಕ್ಷದ ಕಾರ್ಯಕರ್ತರ ಸಂಭ್ರಮ –ಎಎಫ್‌ಪಿ ಚಿತ್ರ

ಉಪಚುನಾವಣೆ ಕಾಂಗ್ರೆಸ್‌ಗೆ ನಾಲ್ಕು ಸ್ಥಾನ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಆರು ವಿಧಾನಸಭಾ ಕ್ಷೇತ್ರಗಳಿಗೆ ನಡೆದಿದ್ದ ಉಪಚುನಾವಣೆಯಲ್ಲಿ ಕಾಂಗ್ರೆಸ್ ನಾಲ್ಕು ಸ್ಥಾನ ಗೆದ್ದಿದೆ. ಬಿಜೆಪಿ ಎರಡು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ.

ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ಬಜೆಟ್ ಅಧಿವೇಶನದ ವೇಳೆ ಬಿಜೆಪಿಯನ್ನು ಬೆಂಬಲಿಸಿದ್ದಕ್ಕಾಗಿ ಆರು ಕಾಂಗ್ರೆಸ್ ಶಾಸಕರನ್ನು ಅನರ್ಹಗೊಳಿಸಲಾಗಿತ್ತು. ರಾಜ್ಯಸಭಾ ಚುನಾವಣೆಯಲ್ಲಿ ಅವರು ಬಿಜೆಪಿ ಅಭ್ಯರ್ಥಿಗೆ ಮತ ಚಲಾಯಿಸಿದ್ದರು. ನಂತರ ಅವರು ಬಿಜೆಪಿ ಸೇರಿದ್ದರು. ಅವರು ಉಪಚುನಾವಣೆಯಲ್ಲಿ ಅವರ ಕ್ಷೇತ್ರಗಳಿಂದಲೇ ಬಿಜೆಪಿ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದರು.

ಎಂಜಿನಿಯರ್ ರಶೀದ್ ಎದುರು ಒಮರ್ ಅಬ್ದುಲ್ಲಾಗೆ ಸೋಲು

ನವದೆಹಲಿ: ಜಮ್ಮು–ಕಾಶ್ಮೀರದ ಬಾರಾಮುಲ್ಲಾ ಲೋಕಸಭಾ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರನ್ನು ಪಕ್ಷೇತರ ಅಭ್ಯರ್ಥಿಯಾದ ಶೇಖ್ ಅಬ್ದುಲ್ ರಶೀದ್ ಅಲಿಯಾಸ್ ಎಂಜಿನಿಯರ್ ರಶೀದ್ ಅವರು ಪರಾಭವಗೊಳಿಸಿದ್ದಾರೆ.

ಭಯೋತ್ಪಾದನೆಗೆ ಹಣಕಾಸಿನ ನೆರವು ನೀಡಿದ ಆರೋಪದ ಮೇರೆಗೆ ರಶೀದ್ ಅವರನ್ನು ತಿಹಾರ್ ಜೈಲಿನಲ್ಲಿಡಲಾಗಿದೆ.

ಎಂಜಿನಿಯರ್ ರಶೀದ್ ಯಾರು

- ಅವಾಮಿ ಇತ್ತೇಹಾದ್ ಪಕ್ಷದ ಮುಖ್ಯಸ್ಥ ಮತ್ತು ಎರಡು ಬಾರಿ ಶಾಸಕರಾಗಿದ್ದ ಶೇಖ್ ರಶೀದ್ ಅವರು ಬಾರಾಮುಲ್ಲಾ ಕ್ಷೇತ್ರದ 22 ಅಭ್ಯರ್ಥಿಗಳಲ್ಲಿ ಒಬ್ಬರಾಗಿದ್ದಾರೆ.
- ಭಯೋತ್ಪಾದನೆಗೆ ಹಣಕಾಸು ನೆರವು ನೀಡಿದ ಆರೋಪದ ಮೇರೆಗೆ 2019ರಲ್ಲಿ ರಶೀದ್ ಅವರನ್ನು ರಾಷ್ಟ್ರೀಯ ತನಿಖಾ ಏಜೆನ್ಸಿ (ಎನ್‌ಐಎ) ಬಂಧಿಸಿತ್ತು. ಈ ಮೂಲಕ ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯಡಿ ಬಂಧನಕ್ಕೊಳಗಾದ ಮೊದಲ ಪ್ರಮುಖ ನಾಯಕ ಎನಿಸಿದ್ದರು.
- ರಶೀದ್ ಅವರ ಅನುಪಸ್ಥಿತಿಯಿಂದಾಗಿ ಅವರ ಇಬ್ಬರು ಪುತ್ರರಾದ ಅಬ್ರಾರ್ ರಶೀದ್ ಮತ್ತು ಅಸ್ರಾರ್ ರಶೀದ್ ಅವರು, ಚುನಾವಣಾ ರ‍್ಯಾಲಿಯ ನೇತೃತ್ವ ವಹಿಸಿದ್ದರು. ಅಲ್ಲದೆ, ತಮ್ಮ ತಂದೆಯ ಕುರಿತು ಜನರಲ್ಲಿ ವಿಶ್ವಾಸ ಮೂಡಿಸಿದ್ದರು.

ಪ್ರಮುಖ ನಾಯಕರ ಅಭಿಪ್ರಾಯ



‘ಬಿಜೆಪಿ- ಜೆಡಿಎಸ್ ಪಕ್ಷಗಳ ಕಾರ್ಯಕರ್ತರ ಶ್ರಮ ಸಾರ್ಥಕವಾಗಿದೆ. ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ರಾಜ್ಯದಲ್ಲಿ 20ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುವ ಕಾಂಗ್ರೆಸ್ ಕನಸು ಭಗ್ನವಾಗಿದೆ. ಪ್ರಧಾನಿ ಮೋದಿ ಅವರ ವಿರುದ್ಧ ಆಧಾರ ರಹಿತ ಅಪಪ್ರಚಾರಗಳ ನಡುವೆ ಹಾಗೂ ಕರ್ನಾಟಕದಲ್ಲಿ ಮತ ಬ್ಯಾಂಕ್ ಹೆಸರಿನಲ್ಲಿ ಮತದಾರರನ್ನು ದಿಕ್ಕು ತಪ್ಪಿಸುವ ಕುತಂತ್ರದ ನಡುವೆಯೂ ಮೈತ್ರಿ ಪಕ್ಷಗಳು ಉತ್ತಮ ಸಾಧನೆ ತೋರಿವೆ’

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ



‘ರಾಜ್ಯದ ಜನರು ಬಿಜೆಪಿಯನ್ನು ಬೆಂಬಲಿಸಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇರಬಹುದು. ನಮ್ಮ ಬಳಿ ಜನ ಶಕ್ತಿ ಇದೆ. ಜನಶಕ್ತಿ–ರಾಜಶಕ್ತಿ ನಡುವೆ ಸಂಘರ್ಷ ಬಂದಾಗ ಜನಶಕ್ತಿ ಗೆಲ್ಲುತ್ತದೆ. ಅಧಿಕಾರಿಗಳು ಕಾನೂನು ಪ್ರಕಾರ ಕೆಲಸ ಮಾಡದಿದ್ದರೆ ಸುಮ್ಮನೆ ಬಿಡುವುದಿಲ್ಲ. ಪಕ್ಷದ ಕಾರ್ಯಕರ್ತರಿಗೆ ವಿನಾಕಾರಣ ತೊಂದರೆ ಕೊಟ್ಟರೆಸುಮ್ಮನಿರುವುದಿಲ್ಲ’

ಬಸವರಾಜ ಬೊಮ್ಮಾಯಿ, ವಿಜೇತ ಅಭ್ಯರ್ಥಿ, ಹಾವೇರಿ



‘ಲೋಕಸಭೆ ಚುನಾವಣೆಯಲ್ಲಿ ಭಾವನೆಗಿಂತ ಬದುಕು, ಅಧಿಕಾರ ರಾಜಕೀಯಕ್ಕಿಂತ ವಿಶ್ವಾಸ ರಾಜಕೀಯ ಗೆದ್ದಿದೆ. ಮೋದಿ ಹಾಗೂ ರಾಮಮಂದಿರದ ಅಲೆ ಇಲ್ಲವಾಗಿದೆ ಎಂಬುದನ್ನು ಚುನಾವಣೆ ಫಲಿತಾಂಶ ಸಾಬೀತುಪಡಿಸಿದೆ. ಬೆಂಗಳೂರು ಗ್ರಾಮಾಂತರ ದಲ್ಲಿ ಪಕ್ಷಕ್ಕಿಂತ ವ್ಯಕ್ತಿ ಗೆದ್ದಿದ್ದಾರೆ. ಬಹಳ ಲೆಕ್ಕಾಚಾರದಲ್ಲಿ ಅವರನ್ನು ಸ್ಪರ್ಧಿಸುವಂತೆ ಮಾಡಿದ್ದರು. ದೊಡ್ಡ ಅಂತರದ ಸೋಲಿನ ನಿರೀಕ್ಷೆ ಮಾಡಿರಲಿಲ್ಲ’

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ



‘ವಿಧಾನಸಭಾ ಚುನಾವಣೆಯಲ್ಲಿ 136 ಸ್ಥಾನ ಗೆದಿದ್ದೇವೆ ಎಂದು ಅಹಂಕಾರದಿಂದ ನಡೆದುಕೊಳ್ಳುತ್ತಿದ್ದ ಕಾಂಗ್ರೆಸ್ ನಾಯಕರಿಗೆ ರಾಜ್ಯದ ಜನರು ತಕ್ಕ ಪಾಠ ಕಲಿಸಿದ್ದಾರೆ. ಅಭಿವೃದ್ಧಿ ಕೆಲಸ ಮಾಡದೇ ಗ್ಯಾರಂಟಿ ನಂಬಿಕೊಂಡಿದ್ದ ಕಾಂಗ್ರೆಸ್ ದುಡ್ಡು ಖರ್ಚು ಮಾಡಿ ಗೆಲ್ಲಬಹುದು ಎಂದು ಭಾವಿಸಿತ್ತು. ಉಪ ಮುಖ್ಯಮಂತ್ರಿ ತಮ್ಮನೇ ಸೋಲು ಕಂಡಿರುವುದು ಮೈತ್ರಿ ಕೂಟದ ಪರ ನೀಡಿರುವ ತೀರ್ಪು’

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ.



ಪ್ರಜಾ ಮತ 2024

ಜನತಂತ್ರದ ಹಬ್ಬ



ಒಕ್ಕಲಿಗರ ‘ನೆಲೆ’ ಮತ್ತೆ ಜೆಡಿಎಸ್ ತೆಕ್ಕೆಗೆ

• ವಿ.ಎಸ್. ಸುಬ್ರಹ್ಮಣ್ಯ

ವಿಶ್ಲೇಷಣೆ

ಬೆಂಗಳೂರು: ವರ್ಷದ ಹಿಂದಷ್ಟೇ ನಡೆದಿದ್ದ ವಿಧಾನಸಭಾ ಚುನಾವಣೆಯಲ್ಲಿ ಒಕ್ಕಲಿಗ ಮತದಾರರ ಪ್ರಾಬಲ್ಯದ ಕ್ಷೇತ್ರಗಳಲ್ಲೇ ಹೀನಾಯವಾಗಿ ಸೋತಿದ್ದ ಜೆಡಿಎಸ್, ಲೋಕಸಭಾ ಚುನಾವಣೆಯಲ್ಲಿ ತನ್ನ ಭದ್ರ ನೆಲೆಯ ಮೇಲೆ ಪುನಃ ಹಿಡಿತ ಸಾಧಿಸುವಲ್ಲಿ ಯಶಸ್ವಿಯಾಗಿದೆ. ಎರಡು ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಜತೆಯಲ್ಲೇ ಎಂಟಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮಿತ್ರಪಕ್ಷ ಬಿಜೆಪಿಯ ಗೆಲುವಿಗೆ ಗಣನೀಯ ಪಾತ್ರ ವಹಿಸಿರುವುದು ಚುನಾವಣಾ ಫಲಿತಾಂಶದಲ್ಲಿ ಎದ್ದು ಕಾಣುತ್ತಿದೆ.



ಎಚ್.ಡಿ. ಕುಮಾರಸ್ವಾಮಿ

ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನ ಬಲ ಕುಗ್ಗಿತ್ತು. ಬಿಜೆಪಿಯ ಮೈತ್ರಿಯ ಆಹ್ವಾನವನ್ನು ಜೆಡಿಎಸ್ ನಾಯಕರು ಅಳೆದು– ತೂಗಿ ಸ್ವೀಕರಿಸಿದ್ದರು. ಕ್ಷೇತ್ರ ಹಂಚಿಕೆ ವಿಚಾರದಲ್ಲಿ ಬಿಜೆಪಿ ನಿಲುವಿನ ವಿರುದ್ಧ ಬಹಿರಂಗ ಅಸಮಾಧಾನ ಹೊರಹಾಕಿದ್ದ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ, ಪಕ್ಷದ ನೆಲೆಯ ಮೇಲಿನ ಹಿಡಿತ ಕಳೆದುಕೊಳ್ಳುವ ಆತಂಕ ಹೊರಹಾಕಿದ್ದರು.

ಒಕ್ಕಲಿಗ ಮತದಾರರ ಪ್ರಾಬಲ್ಯದ ವಿಧಾನಸಭಾ ಕ್ಷೇತ್ರಗಳಲ್ಲಿ ತನ್ನ ಶಾಸಕರನ್ನು ಹೊಂದಿರುವ ಕಾಂಗ್ರೆಸ್ ಪಕ್ಷ, ಲೋಕಸಭಾ ಚುನಾವಣೆಯಲ್ಲೂ ಹಳೆ ಮೈಸೂರು ಭಾಗದ ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಜೆಡಿಎಸ್ ಪಕ್ಷದ ಬಲವನ್ನು ಮತ್ತಷ್ಟು ಕುಗ್ಗಿಸಲು ಭಾರಿ ತಂತ್ರಗಾರಿಕೆ ಮಾಡಿತ್ತು. ಆದರೆ, ಸ್ಪರ್ಧಿಸಿದ್ದ ಮೂರು ಕ್ಷೇತ್ರಗಳ ಪೈಕಿ ಎರಡರಲ್ಲಿ ಗೆಲುವು ಸಾಧಿಸಿರುವ ಜೆಡಿಎಸ್, ಒಕ್ಕಲಿಗರ ಮೇಲೆ ರಾಜಕೀಯವಾಗಿ ಪ್ರಬಲ ಹಿಡಿತ ಸಾಧಿಸುವ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಸೆಗೆ ತಣ್ಣೀರು ಎರಚಿದೆ.

ಮಂಡ್ಯದಲ್ಲಿ ಭಾರಿ ಅಂತರದ ಗೆಲುವು ಸಾಧಿಸಿರುವ ಕುಮಾರಸ್ವಾಮಿ ಒಕ್ಕಲಿಗರು ತಮ್ಮ ಕುಟುಂಬದ ಪರವಾಗಿದ್ದಾರೆ ಎಂಬ ಸಂದೇಶ ರವಾನಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೋಲಾರದಲ್ಲಿ ಮಲ್ಲೇಶ್ ಬಾಬು ಗೆಲುವು ಜೆಡಿಎಸ್‌ನ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ. ಹಾಸನದಲ್ಲಿ ಪ್ರಜ್ವಲ್ ರೇವಣ್ಣ ಅವರನ್ನು ಮತ್ತೊಮ್ಮೆ ಕಣಕ್ಕಿಳಿಸಿದ ಜೆಡಿಎಸ್ ನಾಯಕರ ನಿರ್ಧಾರವೇ ಸೋಲಿಗೆ ಕಾರಣ ಎಂಬುದನ್ನು ಫಲಿತಾಂಶದ ಬಳಿಕ ಕುಮಾರಸ್ವಾಮಿ ಒಪ್ಪಿಕೊಂಡಿದ್ದಾರೆ. ಅಭ್ಯರ್ಥಿ ಆಯ್ಕೆಯಲ್ಲಿ ಕುಟುಂಬದ ಒತ್ತಡಕ್ಕೆ ಮಣಿದ ಜೆಡಿಎಸ್, ಮೂರನೇ ಸ್ಥಾನದ ಅವಕಾಶ ಕಳೆದುಕೊಂಡಿದೆ.

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಅಳಿಯ ಡಾ.ಸಿ.ಎನ್. ಮಂಜುನಾಥ್ ಅವರು ಕೆಪಿಸಿಸಿ ಅಧ್ಯಕ್ಷರ ತಮ್ಮ ಡಿ.ಕೆ. ಸುರೇಶ್ ಅವರನ್ನು 2.68 ಲಕ್ಷ ಮತಗಳ ಅಂತರದಿಂದ ಸೋಲಿಸಿದ್ದಾರೆ. ಈ ಗೆಲುವಿನಲ್ಲಿ ಬಿಜೆಪಿಗಿಂತಲೂ ಜೆಡಿಎಸ್ ಪ್ರಭಾವವೇ ಹೆಚ್ಚು ಕೆಲಸ ಮಾಡಿದೆ. ತಮ್ಮ ಕುಟುಂಬದ ವಿರುದ್ಧ ನೇರ ಸಮರಕ್ಕೆ ಇಳಿದಿದ್ದ ಶಿವಕುಮಾರ್ ಅವರನ್ನು ಈ ಸೋಲಿನ ಮೂಲಕ ಕಟ್ಟಿಹಾಕುವ ತಂತ್ರಗಾರಿಕೆಯಲ್ಲಿ ಜೆಡಿಎಸ್ ನಾಯಕರು ಯಶಸ್ವಿಯಾಗಿದ್ದಾರೆ.

ಬೆಂಗಳೂರು ಗ್ರಾಮಾಂತರ, ಬೆಂಗಳೂರು ಉತ್ತರ, ಚಿಕ್ಕಬಳ್ಳಾಪುರ, ಮೈಸೂರು, ತುಮಕೂರು ಮತ್ತು ಚಿತ್ರದುರ್ಗ ಕ್ಷೇತ್ರಗಳಲ್ಲಿ ಜೆಡಿಎಸ್ ಜತೆಗಿನ ಮೈತ್ರಿಯಿಂದಾಗಿಯೇ ಬಿಜೆಪಿ ನಿರಾಯಾಸವಾಗಿ ಗೆಲುವಿನ ದಡ ಸೇರಿದೆ ಎಂಬುದು ಸ್ಪಷ್ಟ. ಈ ಕ್ಷೇತ್ರಗಳಲ್ಲಿ ಒಕ್ಕಲಿಗರು ಜೆಡಿಎಸ್ ಕಾರಣಕ್ಕಾಗಿ ಬಿಜೆಪಿಯತ್ತ ವಾಲಿರುವುದು ಫಲಿತಾಂಶದಲ್ಲಿ ಗೋಚರಿಸುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ನೆಲೆ ಹೊಂದಿರುವ ಸಮುದಾಯದ ‘ಪ್ರಭಾವಿ’ಯೊಬ್ಬರು ಒಕ್ಕಲಿಗ ಸಮುದಾಯದ ಮತಗಳನ್ನು ಬಿಜೆಪಿ– ಜೆಡಿಎಸ್‌ಗೆ ವರ್ಗಾಯಿಸುವಲ್ಲಿ ತಮ್ಮದೇ ಆದ ಪ್ರಭಾವ ಬೀರಿದ್ದಾರೆ ಎನ್ನಲಾಗುತ್ತಿದೆ.

ಉಡುಪಿ– ಚಿಕ್ಕಮಗಳೂರು, ಶಿವಮೊಗ್ಗ ಸೇರಿದಂತೆ ಕೆಲವು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವಿನ ಅಂತರ ಹಿಗ್ಗುವುದಕ್ಕೂ ಜೆಡಿಎಸ್ ಕಾರಣವಾಗಿದೆ. ಲೋಕಸಭಾ ಚುನಾವಣೆಯ ಫಲಿತಾಂಶವು ಜೆಡಿಎಸ್ ಪಕ್ಷಕ್ಕೆ ಮರುಜನ್ಮ ನೀಡುವುದರ ಜತೆಯಲ್ಲೇ, ಬಿಜೆಪಿ ಜತೆಗಿನ ಮೈತ್ರಿ ಮತ್ತಷ್ಟು ಗಟ್ಟಿಯಾಗಲು ಕಾರಣವಾಗುವ ಸಾಧ್ಯತೆ ಇದೆ.

ಜೆಡಿಎಸ್ ಮೈತ್ರಿಯಿಂದ ಸಂಖ್ಯಾಬಲ ವೃದ್ಧಿ • ಎರಡೂ ಪಕ್ಷಗಳಿಗೂ ಅನುಕೂಲ

ದಳದ ನೆರವಿನಡಿ 17 ಗೆದ್ದ ಕಮಲ

ಬಿಜೆಪಿಯ ಈ ಬಾರಿಯ ಸಾಧನೆಗೆ ಜೆಡಿಎಸ್ ಜತೆಗಿನ ಮೈತ್ರಿಯೇ ಪ್ರಮುಖ ಕಾರಣ. ಬಿಜೆಪಿ ಅಭ್ಯರ್ಥಿಗಳು ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ಜೆಡಿಎಸ್ ಮತಗಳು ವರ್ಗಾವಣೆ ಆಗಿವೆ. ಹೀಗಾಗಿ ಬಿಜೆಪಿ ಬಲವರ್ಧನೆ ಆಗಿದೆ. ಮುಂದಿನ ಎಲ್ಲ ಚುನಾವಣೆಗಳಲ್ಲೂ ಜೆಡಿಎಸ್ ಜತೆಗಿನ ಮೈತ್ರಿ ಬಿಜೆಪಿಗೆ ಅನಿವಾರ್ಯ. ಎರಡೂ ಪಕ್ಷಗಳು ಸೇರಿದರೆ ಸ್ಥಳೀಯ ಸಂಸ್ಥೆ, ಬಿಬಿಎಂಪಿ ಮತ್ತು ವಿಧಾನಸಭಾ ಚುನಾವಣೆಯಲ್ಲೂ ಪ್ರಬಲ ಪೈಪೋಟಿ ನೀಡಲು ಸಾಧ್ಯ

• ಎಸ್. ರವಿಪ್ರಕಾಶ್

ಬೆಂಗಳೂರು: ರಾಜ್ಯದ ಲೋಕಸಭಾ ಚುನಾವಣಾ ಇತಿಹಾಸದಲ್ಲೇ ಕಳೆದ ಬಾರಿ (2019) ಗರಿಷ್ಠ ಸಾಧನೆ ಮಾಡಿದ್ದ ಬಿಜೆಪಿ ಈ ಬಾರಿ ಜೆಡಿಎಸ್ ಜತೆಗಿನ ಮೈತ್ರಿಯಿಂದಾಗಿ ಮುಖ ಉಳಿಸಿಕೊಂಡಿದೆ. ಜೆಡಿಎಸ್ ಊರುಗೋಲಾಗದಿದ್ದರೆ, ಬಿಜೆಪಿ ಸಂಖ್ಯಾಬಲ ಒಂದಂಕಿಗೆ ಕುಸಿಯುವ ಸಾಧ್ಯತೆ ಇತ್ತು. ಈ ಮೈತ್ರಿಯಿಂದ ಜೆಡಿಎಸ್‌ಗೂ ಅನುಕೂಲವಾಗಿದೆ.

ಬಣ ರಾಜಕೀಯದಿಂದ ವಿಧಾನಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋತಿದ್ದ ಬಿಜೆಪಿ ಈ ಚುನಾವಣೆಯಲ್ಲಿ ಅತಿ ಹೆಚ್ಚು ಸ್ಥಾನ ಗೆಲ್ಲುವ ಗುರಿ ಹಾಕಿಕೊಂಡಿತ್ತು. ಆದರೆ, 20 ರ ಗಡಿ ದಾಟಲು ಸಾಧ್ಯವಾಗಲಿಲ್ಲ. ಈ ಚುನಾವಣೆಯಲ್ಲೂ ಕೆಲ ಕ್ಷೇತ್ರಗಳಲ್ಲಿ ಒಳ ಏಟು ಮತ್ತು ಟಿಕೆಟ್ ಹಂಚಿಕೆಯಲ್ಲಿ ಮಾಡಿದ ಎಡವಟ್ಟುಗಳ ಕಾರಣ ಈ ಹಿಂದೆ ಗೆಲ್ಲುತ್ತಿದ್ದ ದಾವಣಗೆರೆ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿಯಂತಹ ಕ್ಷೇತ್ರಗಳೂ ಬಿಜೆಪಿ ಕೈತಪ್ಪಿ ಹೋಗಿವೆ. ಆದರೂ 2014 ರಲ್ಲಿ ಮಾಡಿದ್ದ ಸಾಧನೆ ಮರುಕಳಿಸಿದೆ. ಆ ಚುನಾವಣೆಯಲ್ಲಿ ಬಿಜೆಪಿ 17 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಈ ಬಾರಿಯೂ ಅಷ್ಟೇ ಸ್ಥಾನಗಳನ್ನು ಬುಟ್ಟಿಗೆ ಹಾಕಿಕೊಂಡಿದೆ. ಮಿತ್ರ ಪಕ್ಷ ಜೆಡಿಎಸ್ 2 ಸ್ಥಾನ ಗೆದ್ದಿದೆ. ಒಟ್ಟು 19 ಗೆದ್ದಂತಾಗಿದೆ. 2019ರ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿದ್ದ ಬಿಜೆಪಿ 25 ಸ್ಥಾನಗಳನ್ನು ಗೆದ್ದು ಬೀಗಿತ್ತು. ಎಂಟು ಸ್ಥಾನ ಕಳೆದುಕೊಂಡಿದೆ.

ಟಿಕೆಟ್ ಹಂಚಿಕೆಯಲ್ಲಿ ಮಾಡಿದ ಕೆಲವು ಪ್ರಯೋಗಗಳು ಫಲ ನೀಡಿದೆ. ಆಡಳಿತ ವಿರೋಧಿ ಅಲೆ ಎದುರಿಸುತ್ತಿದ್ದ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಬದಲಾವಣೆ ಮತ್ತು ಹೊಸಬರಿಗೆ ಅವಕಾಶ ನೀಡಿದ್ದು ಅನುಕೂಲವಾಗಿದೆ. ಚಿಕ್ಕಮಗಳೂರು–ಉಡುಪಿ, ಮಂಗಳೂರು, ಉತ್ತರ ಕನ್ನಡ, ಮೈಸೂರು, ಬೆಂಗಳೂರು ಉತ್ತರ, ಬೆಂಗಳೂರು ಗ್ರಾಮಾಂತರ ಕ್ಷೇತ್ರಗಳಲ್ಲಿ ಪ್ರಯೋಗ ಫಲ ನೀಡಿದೆ.



ಲೋಕಸಭಾ ಚುನಾವಣೆ ಫಲಿತಾಂಶ ಪ್ರಕಟವಾದ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಕಾರ್ಯಕರ್ತರೊಂದಿಗೆ ಮಂಗಳವಾರ ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ

ಅಲ್ಲದೇ, ಒಕ್ಕಲಿಗ, ಲಿಂಗಾಯತ ಮತಗಳು ಬಿಜೆಪಿಯ ಕೈ ಹಿಡಿದಿವೆ. ವಿಧಾನಸಭಾ ಚುನಾವಣೆಯಲ್ಲಿ ಈ ಎರಡೂ ಸಮುದಾಯಗಳು ಕಾಂಗ್ರೆಸ್‌ನತ್ತ ಮುಖ ಮಾಡಿದ್ದವು. ಪಕ್ಷದ ಭದ್ರಕೋಟೆ ಎನಿಸಿರುವ ದಕ್ಷಿಣ ಕನ್ನಡ, ಉತ್ತರ ಕನ್ನಡ, ಮಲೆನಾಡು ಮತ್ತು ಬೆಂಗಳೂರಿನ ಮೂರು ಕ್ಷೇತ್ರಗಳಲ್ಲೂ ತನ್ನ ಪ್ರಾಬಲ್ಯವನ್ನು ಬಿಜೆಪಿ ಉಳಿಸಿಕೊಂಡಿದೆ. ಬಿ.ಎಸ್.ಯಡಿಯೂರಪ್ಪ ಅವರಿಗೆ ಪುನಃ ಆದ್ಯತೆ ನೀಡಿದ್ದು ಹಾಗೂ ಬಿ.ವೈ.ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನ ತಂದಿದ್ದು, ಈ ಚುನಾವಣೆಯಲ್ಲಿ ಅನುಕೂಲವೂ ಆಗಿದೆ. ಪಕ್ಷದೊಳಗಿನ ಅಸಮಾಧಾನ ಮತ್ತು ಅತೃಪ್ತಿಯ ಮಧ್ಯೆಯೂ ಯಡಿಯೂರಪ್ಪ ಮತ್ತು ವಿಜಯೇಂದ್ರ ಪಕ್ಷಕ್ಕೆ ಕೊಂಚ ಮಟ್ಟಿಗೆ ಶಕ್ತಿ ತುಂಬುವಲ್ಲಿ ಯಶಸ್ವಿಯಾಗಿದ್ದಾರೆ.

ಶಿವಮೊಗ್ಗ ಕ್ಷೇತ್ರದಲ್ಲಿ ಬಂಡಾಯವಾಗಿ ಸ್ಪರ್ಧಿಸಿದ ಕೆ.ಎಸ್.ಈಶ್ವರಪ್ಪ ಅವರು ಬಿಜೆಪಿ ಅಭ್ಯರ್ಥಿ ರಾಘವೇಂದ್ರ ಅವರ ಗೆಲುವನ್ನು ತಡೆಯುವಲ್ಲಿ ಯಶಸ್ವಿ ಆಗಲಿಲ್ಲ. ಕೊಪ್ಪಳ ಕ್ಷೇತ್ರದಲ್ಲಿ ಕರಡಿ ಸಂಗಣ್ಣ ಅವರ ರಾಜೀನಾಮೆ ಪಕ್ಷದ ಹಿನ್ನಡೆಗೆ ಕಾರಣವಾಯಿತು. ಬೆಳಗಾವಿಯಲ್ಲಿ ಜಗದೀಶ ಶೆಟ್ಟರ್ ಅವರಿಗೆ ಪ್ರಬಲ ಪೈಪೋಟಿ ಇದ್ದರೂ ಗೆಲುವಿನ ದಡ ದಾಟಿದರು. ಹಾವೇರಿಯಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಳೆದ ಮೂರು– ನಾಲ್ಕು ತಿಂಗಳಿಂದ ಕಠಿಣ ಪರಿಶ್ರಮ ಹಾಕಿದರೂ ಪ್ರಯಾಸದ ಗೆಲುವು ಕಂಡಿದ್ದಾರೆ.

ಆದರೆ, ಲೋಕಸಭಾ ಚುನಾವಣೆ ಬಳಿಕ ಪಕ್ಷದಲ್ಲಿ ಬಹಳಷ್ಟು ಬದಲಾವಣೆಗಳು ಆಗುತ್ತವೆ ಎಂದು ಭವಿಷ್ಯ ನುಡಿದಿದ್ದ ನಾಯಕರು ಮುಂದೆ ಏನು ಮಾಡುತ್ತಾರೆ ಎಂಬುದನ್ನು ಕಾದು ನೋಡಬೇಕು. ರಾಷ್ಟ್ರ ಮಟ್ಟದಲ್ಲಿ ಬಿಜೆಪಿ ನಿರೀಕ್ಷಿತ ಮಟ್ಟದಲ್ಲಿ ಗೆಲುವು ಸಾಧಿಸದೇ ಸಂಕಷ್ಟದಲ್ಲಿ ಇರುವುದರಿಂದ ಯಡಿಯೂರಪ್ಪ ವಿರೋಧಿಗಳ ಮುಂದಿನ ನಡೆಯ ಬಗ್ಗೆಯೂ ಕುತೂಹಲ ಮೂಡಿಸಿದೆ. ಪಕ್ಷಕ್ಕೆ ಸವಾಲುಗಳು ಸಾಕಷ್ಟಿವೆ. ಈ ಹಿಂದಿನಂತೆ ಕೇಂದ್ರದಲ್ಲಿ ಬಿಜೆಪಿಯ ಪ್ರಬಲ ಸರ್ಕಾರವೂ ಇರುವುದಿಲ್ಲ. ರಾಷ್ಟ್ರೀಯ ಮಟ್ಟದಲ್ಲೂ ಪಕ್ಷದಲ್ಲಿ ಹಿಂದಿನಂತೆ ಮೋದಿ– ಶಾ ಅವರ ಹಿಡಿತ ಮುಂದುವರೆಯುತ್ತದೆ ಎಂಬುದು ಯಕ್ಷ ಪ್ರಶ್ನೆ. ಇದು ರಾಜ್ಯದ ಮೇಲೂ ಪ್ರಭಾವ ಬೀರಲಿದೆ.

ದುಬಾರಿಯಾದ ಅನಂತಕುಮಾರ್ ಹೆಗಡೆ ಹೇಳಿಕೆ



ಸಂವಿಧಾನ ಬದಲಾವಣೆ ಕುರಿತು ಅನಂತಕುಮಾರ್ ಹೆಗಡೆ ಅವರು ನೀಡಿದ ಹೇಳಿಕೆ ಬಿಜೆಪಿಗೆ ರಾಷ್ಟ್ರ ಮಟ್ಟದಲ್ಲಿ ಹಿನ್ನಡೆಗೆ ಕಾರಣವಾಗಿರಬಹುದೇ ಎಂಬ ಚರ್ಚೆ ಆರಂಭವಾಗಿದೆ.

‘ಚುನಾವಣೆಗೂ ಮೊದಲೇ ಸಕ್ರಿಯರಾದ ಅನಂತಕುಮಾರ್ ಹೆಗಡೆ ಅವರು ಪಕ್ಷ ಈ ಬಾರಿ 400 ಸ್ಥಾನಗಳನ್ನು ಗೆದ್ದರೆ ಸಂವಿಧಾನವನ್ನು ಬದಲಿಸಲಿದೆ ಎಂಬುದಾಗಿ ಹೇಳಿದ್ದಾರೆ ಎಂದು ಮಾಧ್ಯಮಗಳಲ್ಲಿ ದೊಡ್ಡ ಪ್ರಚಾರ ಪಡೆದುಕೊಂಡಿತು. ಇದನ್ನು ಕಾಂಗ್ರೆಸ್ ಪ್ರಬಲ ಅಸ್ತ್ರವಾಗಿ ಬಳಸಿಕೊಂಡಿತು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಈ ಕುರಿತು ಪತ್ರಿಕಾಗೋಷ್ಠಿ ಮಾಡಿ ಬಿಜೆಪಿ ಮೇಲೆ ಹರಿಹಾಯ್ದರು. ರಾಹುಲ್‌ಗಾಂಧಿ ತಮ್ಮ ಪ್ರಚಾರದ ಉದ್ದಕ್ಕೂ ಇದನ್ನು ಪ್ರಸ್ತಾಪಿಸಿದರು. ಇದರ ಪರಿಣಾಮ ಪರಿಶಿಷ್ಟ ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿ ಹೆಚ್ಚಿನ ಸಂಖ್ಯೆಯಲ್ಲಿ ಸೋಲು ಅನುಭವಿಸಿದೆ’ ಎಂಬ ವ್ಯಾಖ್ಯಾನ ಬಿಜೆಪಿ ವಲಯದಲ್ಲಿ ನಡೆದಿದೆ.

ಪಾಳೇಗಾರಿಕೆಗೆ ಮತದಾರರ ಪೆಟ್ಟು



ಹಾಸನ: ‘ಜೆಡಿಎಸ್‌ನ ಭದ್ರಕೋಟೆ’ಯಲ್ಲಿ ಕಾಂಗ್ರೆಸ್ ಎರಡು ದಶಕಗಳ ನಂತರ ಗೆದ್ದಿದೆ. ಹೆಚ್ಚು ಸದ್ದು ಮಾಡಿದ್ದ ಪೆನ್‌ಡ್ರೈವ್‌ಗಿಂತ, ಪಾಳೇಗಾರಿಕೆ, ಮೈತ್ರಿಯ ಆರಂಭದಲ್ಲೇ ಬಿಜೆಪಿ ನಾಯಕರಿಂದ ವ್ಯಕ್ತವಾಗಿದ್ದ ವಿರೋಧವೇ ಪ್ರಜ್ವಲ್ ರೇವಣ್ಣ ಸೋಲಿಗೆ ಕಾರಣವಾಗಿದೆ.

ಮತದಾನಕ್ಕಿಂತ ಮೊದಲು ಹರಿದಾಡಿದ್ದ ಪೆನ್‌ಡ್ರೈವ್ ಪರಿಣಾಮ ಬೀರಿದ್ದರೆ, ಆರಂಭದಿಂದಲೇ ಪ್ರಜ್ವಲ್ ಹಿನ್ನಡೆ ಅನುಭವಿಸಬೇಕಿತ್ತು. ಆದರೆ, ಆರಂಭಿಕ ಸುತ್ತಿನಿಂದಲೇ ಒಮ್ಮೆ ಅವರು, ಮತ್ತೊಮ್ಮೆ ಶ್ರೇಯಸ್ ಮುನ್ನಡೆ ಸಾಧಿಸಿದ್ದರು. ಈ ನಡುವೆ, ‘ರೇವಣ್ಣ ಕುಟುಂಬದ ಪಾಳೇಗಾರಿಕೆಗೆ’ ಪೆಟ್ಟು ನೀಡಿರುವುದಂತೂ ಸ್ಪಷ್ಟ. ಬಿಜೆಪಿ ಶಾಸಕರಿರುವ ಕ್ಷೇತ್ರಗಳಲ್ಲಿ ಪ್ರಜ್ವಲ್ ಹೆಚ್ಚು ಮತ ಗಳಿಸಿದ್ದರೆ, ಜೆಡಿಎಸ್ ಶಾಸಕರಿರುವೆಡೆ ಕಡಿಮೆ ಮತ ಗಳಿಸಿದ್ದಾರೆ.

ವಿಧಾನಸಭೆ ಚುನಾವಣೆಯಲ್ಲಿ ಪ್ರಜ್ವಲ್ ತಂದೆ ಎಚ್.ಡಿ. ರೇವಣ್ಣ ಎದುರು ಅನುಭವಿಸಿದ್ದ ಸಣ್ಣ ಅಂತರದ ಸೋಲಿಗೆ ಶ್ರೇಯಸ್ ಪಟೇಲ್ ಈಗ ಸೇಡು ತೀರಿಸಿಕೊಂಡಿದ್ದಾರೆ.

ಅರಸು ಕುಡಿಗೆ ಒಲಿದ ಮೈಸೂರು



ಯದುವೀರ್

ಮೈಸೂರು: ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಯಾಗಿದ್ದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರಥಮ ಪ್ರಯತ್ನದಲ್ಲೇ ಭರ್ಜರಿ ಗೆಲುವು ಸಾಧಿಸಿದ್ದಾರೆ.

ಯದುವೀರ್ ತಂದೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ನಾಲ್ಕು ಬಾರಿ ಸಂಸದರಾಗಿದ್ದರು. ಎರಡು ಬಾರಿ ಸೋತಿದ್ದರು. ಬಳಿಕ ಚುನಾವಣಾ ರಾಜಕಾರಣದಿಂದ ಹಿಂದೆ ಸರಿದಿದ್ದರು. ಈಗ ಯದುವೀರ್ ಗೆಲುವಿನೊಂದಿಗೆ ‘ರಾಜಪರಿವಾರ’ದ ರಾಜಕಾರಣ ಮತ್ತೆ ಪ್ರಾರಂಭವಾದಂತಾಗಿದೆ.

ಸತತ ಎರಡು ಬಾರಿ ಆಯ್ಕೆಯಾಗಿದ್ದ ಪ್ರತಾಪ ಸಿಂಹ ಅವರ ಬದಲು, ಹೊಸ ಮುಖಕ್ಕೆ ಮಣೆ ಹಾಕಿದ್ದ ಬಿಜೆಪಿ ‘ಪ್ರಯೋಗ’ ಯಶಸ್ವಿಯಾಗಿದೆ. ‘ರಾಜಕಾರಣಕ್ಕೂ ನನಗೂ ಆಗಿ ಬರುವುದಿಲ್ಲ’ ಎನ್ನುತ್ತಲೇ ಕೊನೆ ಕ್ಷಣದಲ್ಲಿ ಬಿಜೆಪಿಗೆ ಸೇರಿ ಸ್ಪರ್ಧಿಸಿದ್ದ ‘ಅರಸು ಕುಡಿ’, ಯದುವೀರ್ ಅವರಿಗೆ ಮತದಾರರು ‘ಬಹುಪರಾಕ್’ ಹೇಳಿದ್ದಾರೆ. ಇದರೊಂದಿಗೆ, ಬಿಜೆಪಿ ‘ಹ್ಯಾಟ್ರಿಕ್’ ಗೆಲುವು ಸಾಧಿಸಿ ಬೀಗಿದೆ.

ಕಾಂಗ್ರೆಸ್‌ನ ‘ಸಾಮಾನ್ಯ ಕಾಯಕರ್ತ’ ಎಂ.ಲಕ್ಷ್ಮಣ ಅವರನ್ನು ಗೆಲ್ಲಿಸಿಕೊಳ್ಳಲು ಸಾಧ್ಯವಾಗದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತವರಿನಲ್ಲೇ ತೀವ್ರ ಮುಖಭಂಗವಾಗಿದೆ. ‘ಒಕ್ಕಲಿಗಾಸ್ತ್ರ’ವೂ ಕೈಹಿಡಿದಿಲ್ಲ.

ಹೊಸ ಕ್ಷೇತ್ರದಲ್ಲೂ ಹಸನಾದ ಭವಿಷ್ಯ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಕ್ಷೇತ್ರ ಬದಲಿಸಿದ್ದ ಹಲವು ಅಭ್ಯರ್ಥಿಗಳು ಹೊಸ ಕ್ಷೇತ್ರದಲ್ಲೂ ತಮ್ಮ ರಾಜಕೀಯ ಭವಿಷ್ಯ ಹಸನಾಗಿಸಿಕೊಂಡಿದ್ದಾರೆ.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ವಿರೋಧದ ಅಲೆಯ ಕಾರಣ ಉಡುಪಿ–ಚಿಕ್ಕಮಗಳೂರು ತೊರೆದು ಬೆಂಗಳೂರು ಉತ್ತರದಿಂದ ಸ್ಪರ್ಧಿಸಿ ಯಶಸ್ಸು ಕಂಡಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ನಿರಾಕರಿಸಿದ್ದನ್ನು ಖಂಡಿಸಿ ಪಕ್ಷ ತೊರೆದಿದ್ದ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ ಮತ್ತೆ ಪಕ್ಷಕ್ಕೆ ಮರಳಿದ್ದರು. ಬೆಳಗಾವಿ ಲೋಕಸಭಾ ಟಿಕೆಟ್ ನೀಡಲಾಗಿತ್ತು. ಕ್ಷೇತ್ರ ಬದಲಿಸಿದರೂ ವಿಜಯಲಕ್ಷ್ಮಿ ಕೈಹಿಡಿದಿದ್ದಾಳೆ. ಬಾಗಲಕೋಟೆಯ ಮುಧೋಳ ವಿಧಾನಸಭಾ ಕ್ಷೇತ್ರದವರಾದ ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರು ಚಿತ್ರದುರ್ಗದಿಂದ ಕಣಕ್ಕೆ ಇಳಿದಿದ್ದರು. ಅವರು ಕಾಂಗ್ರೆಸ್‌ನ ಮಾಜಿ ಸಂಸದ ಚಂದ್ರಪ್ಪ ವಿರುದ್ಧ ಗೆಲುವು ಸಾಧಿಸಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಪುತ್ರ ನಿಖಿಲ್ ಸೋಲಿನ ಬಳಿಕ ಬೇಸರಗೊಂಡಿದ್ದ ಎಚ್.ಡಿ. ಕುಮಾರಸ್ವಾಮಿ ಈ ಬಾರಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡು ಮಂಡ್ಯದಿಂದ ತಾವೇ ಸ್ಪರ್ಧೆಗೆ ಇಳಿದಿದ್ದರು. ಕಾಂಗ್ರೆಸ್‌ನ ವೆಂಕಟರಮಣೇಗೌಡ ವಿರುದ್ಧ ಗೆಲುವು ದಾಖಲಿಸಿದ್ದಾರೆ.

ಕುತೂಹಲದ ಕ್ಷೇತ್ರಗಳ ಸವಾಲು ಗೆದ್ದಿದ್ದು ಹೇಗೆ?

ಕಾಗೇರಿಗೆ 3.37 ಲಕ್ಷ ಮತಗಳ ಅಂತರದ ಭರ್ಜರಿ ಗೆಲುವು



ವಿಶ್ವೇಶ್ವರ ಹೆಗಡೆ ಕಾಗೇರಿ

ಕಾರವಾರ: ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿಶ್ವೇಶ್ವರ ಹೆಗಡೆ ಕಾಗೇರಿ 3,37,428 ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಡಾ. ಅಂಜಲಿ ನಿಂಬಾಳ್ಕರ್ ಅವರನ್ನು ಸೋಲಿಸುವ ಮೂಲಕ ರಾಜ್ಯದಲ್ಲೇ ಅತಿ ಹೆಚ್ಚು ಅಂತರದ ಗೆಲುವಿನ ದಾಖಲೆ ಬರೆದರು.


ಚಲಾವಣೆಯಾದ ಒಟ್ಟು ಮತಗಳ ಪೈಕಿ ಶೇ 61ರಷ್ಟನ್ನು ಪಡೆದ ಅವರು 7,82,495 ಮತಗಳನ್ನು ಗಳಿಸಿದರೆ, ಅವರ ಪ್ರತಿಸ್ಪರ್ಧಿ ಕಾಂಗ್ರೆಸ್ ಪಕ್ಷದ ಡಾ.ಅಂಜಲಿ ನಿಂಬಾಳ್ಕರ್ 4,43,296 ಮತ ಪಡೆದರು.

ವರ್ಷದ ಹಿಂದಷ್ಟೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಶಿರಸಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಗೇರಿ 8 ಸಾವಿರ ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಸೋತಿದ್ದರು.

ಜೆಡಿಎಸ್ ನೆಚ್ಚಿಕೊಂಡೇ ಗೆದ್ದ ಡಾ.ಕೆ.ಸುಧಾಕರ್

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ. ಸುಧಾಕರ್ ತಮ್ಮ ಪಕ್ಷಕ್ಕಿಂತಲೂ ಹೆಚ್ಚಾಗಿ ಜೆಡಿಎಸ್ ನಾಯಕರನ್ನು ನೆಚ್ಚಿಕೊಂಡೇ ಗೆಲುವು ಸಾಧಿಸಿದ್ದಾರೆ. ಬಿಜೆಪಿಯವರೇ ಆದ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅವರು ಸುಧಾಕರ್ ಸ್ಪರ್ಧೆಯನ್ನು ಬಹಿರಂಗವಾಗಿಯೇ ವಿರೋಧಿಸಿದ್ದರು. ಬಿ.ಎಸ್. ಯಡಿಯೂರಪ್ಪ ಮಧ್ಯಪ್ರವೇಶದ ಬಳಿಕ ಪರಿಸ್ಥಿತಿ ತಿಳಿಯಾಗಿತ್ತು. ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಚಿಕ್ಕಬಳ್ಳಾಪುರದಲ್ಲಿ ಜೆಡಿಎಸ್ ಮತಬ್ಯಾಂಕ್ ದೊಡ್ಡ ಪ್ರಮಾಣದಲ್ಲಿದೆ. ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರನ್ನು ಪ್ರಚಾರಕ್ಕೆ ಕರೆತಂದ ಸುಧಾಕರ್, ಒಕ್ಕಲಿಗ ಮತ ಬ್ಯಾಂಕ್ ಸೆಳೆಯುವಲ್ಲಿ ಯಶಸ್ವಿಯಾದರು. ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಹಿಂದುಳಿದ ವರ್ಗಗಳ ಬಲಿಜ ಸಮುದಾಯದ ರಕ್ಷಾ ರಾಮಯ್ಯ ಎದುರು ಜೆಡಿಎಸ್ ನಾಯಕರನ್ನು ಮುಂದಿಟ್ಟುಕೊಂಡು ಒಕ್ಕಲಿಗ ಮತಗಳನ್ನು ಒಗ್ಗೂಡಿಸುವ ಮಾಜಿ ಸಚಿವರ ಪ್ರಯತ್ನದಿಂದ ಬಿಜೆಪಿಯನ್ನು ಗೆಲುವಿನ ದಡ ತಲುಪಿಸಿದೆ.


ರಾಜಕೀಯ ಭವಿಷ್ಯ ಕಂಡುಕೊಂಡ ಸೋಮಣ್ಣ



ವಿ.ಸೋಮಣ್ಣ

ತುಮಕೂರು: ರಾಜಕೀಯ ಭವಿಷ್ಯಕ್ಕಾಗಿ ಹೆಣಗಾಡಿ ಮೈಸೂರು, ಚಾಮರಾಜನಗರ ಸುತ್ತಿ ಬಂದ ವಿ.ಸೋಮಣ್ಣ ಕೊನೆಗೂ ತುಮಕೂರಿನಿಂದ ಆಯ್ಕೆಯಾಗುವ ಮೂಲಕ ನೆಲೆ ಕಂಡುಕೊಂಡಿದ್ದಾರೆ. ಬೆಂಗಳೂರಿನ ಗೋವಿಂದರಾಜನಗರ ಟಿಕೆಟ್ ಸಿಗದೆ ವರುಣಾ, ಚಾಮರಾಜನಗರಕ್ಕೆ ಹೋಗಿ ಎರಡೂ ಕಡೆಯೂ ಸೋತರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ, ರಾಜ್ಯಸಭೆ ಸ್ಥಾನ ಬಯಸಿದ್ದರು. ಸಿಗದ ಕಾರಣ ಪಕ್ಷದ ವರಿಷ್ಠರ ವಿರುದ್ಧ ಅಸಮಾಧಾನಗೊಂಡಿದ್ದರು. ಪಕ್ಷ ತೊರೆಯುವ ಹಂತ ತಲುಪಿದ್ದರು. ಕೊನೆಗೆ ತುಮಕೂರು ಲೋಕಸಭೆ ಕ್ಷೇತ್ರದ ಬಿಜೆಪಿ ಟಿಕೆಟ್ ಪಡೆದು ಯಶ ಕಂಡಿದ್ದಾರೆ.

7ನೇ ಬಾರಿಗೆ ಸಂಸದರಾದ ರಮೇಶ ಜಿಗಜಿಣಗಿ



ರಮೇಶ ಜಿಗಜಿಣಗಿ

ವಿಜಯಪುರ: ವಿಜಯಪುರ ಪರಿಶಿಷ್ಟ ಜಾತಿ ಮೀಸಲು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ ರಮೇಶ ಜಿಗಜಿಣಗಿ ಸತತ ಏಳನೇ ಬಾರಿಗೆ ಸಂಸದರಾಗಿದ್ದಾರೆ. ಚಿಕ್ಕೋಡಿ ಎಸ್‌ಸಿ ಮೀಸಲು ಲೋಕಸಭಾ ಕ್ಷೇತ್ರದಿಂದ ಈ ಹಿಂದೆ ಮೂರು ಸಲ ಮತ್ತು ವಿಜಯಪುರ ಎಸ್‌ಸಿ ಮೀಸಲು ಲೋಕಸಭಾ ಕ್ಷೇತ್ರದಿಂದ ನಾಲ್ಕು ಸಲ ಆಯ್ಕೆಯಾಗಿದ್ದಾರೆ.

ಮೂವರು ಸಚಿವರ ಮಕ್ಕಳಿಗೆ ಸೋಲು–ಮೂವರಿಗೆ ಗೆಲುವು

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಆರು ಸಚಿವರ ಮಕ್ಕಳಿಗೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ನೀಡಲಾಗಿತ್ತು. ಅರಣ್ಯ ಸಚಿವ ಈಶ್ವರ ಖಂಡ್ರೆ ಪುತ್ರ ಸಾಗರ್ ಬೀದರ್‌ನಲ್ಲಿ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕಾ ಚಿಕ್ಕೋಡಿಯಲ್ಲಿ, ಸಮಾಜ ಕಲ್ಯಾಣ ಸಚಿವ ಮಹದೇವಪ್ಪ ಪುತ್ರ ಸುನಿಲ್ ಬೋಸ್ ಚಾಮರಾಜನಗರದಿಂದ ಗೆಲುವು ಕಂಡಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪುತ್ರ ಮೃಣಾಲ್ ಹೆಬ್ಬಾಳಕರ ಬೆಳಗಾವಿ ಕ್ಷೇತ್ರದಲ್ಲಿ, ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವ ಶಿವಾನಂದ ಪಾಟೀಲ ಪುತ್ರಿ ಸಂಯುಕ್ತಾ ಪಾಟೀಲ ಬಾಗಲಕೋಟೆಯಲ್ಲಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪುತ್ರಿ ಸೌಮ್ಯಾರೆಡ್ಡಿ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಸೋಲು ಕಂಡಿದ್ದಾರೆ. ತೋಟಗಾರಿಕಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪತ್ನಿ ಪ್ರಭಾ ಅವರು ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಗೆಲುವು ಸಾಧಿಸಿದರೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ಡಿ.ಕೆ. ಸುರೇಶ್ ಬೆಂಗಳೂರು ಗ್ರಾಮಾಂತರದಲ್ಲಿ, ಶಿಕ್ಷಣ ಸಚಿವ ಮಧು ಬಂಗಾರಪ್ಪನವರ ಅಕ್ಕ ಗೀತಾ ಶಿವರಾಜ್‌ಕುಮಾರ್ ಶಿವಮೊಗ್ಗದಲ್ಲಿ ಸೋಲು ಕಂಡಿದ್ದಾರೆ.

‘ಗ್ಯಾರಂಟಿ’ಗಳಿಗೆ ಸಿಗದ ಮನ್ನಣೆ; ‘ಜಾತಿ’ಗೆ ಮಣೆ

• ರಾಜೇಶ್ ರೈ ಚಟ್ಲ


ಬೆಂಗಳೂರು: ಲೋಕಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಎರಡಂಕಿ ದಾಟುವ ನಿರೀಕ್ಷೆಯಲ್ಲಿದ್ದ ಕಾಂಗ್ರೆಸ್ ನಾಯಕರಿಗೆ ಅದರ ಸನಿಹ ಬಂದು ನಿಂತ ಸಮಾಧಾನ.



ವರ್ಷದ ಹಿಂದೆ ನಡೆದ ವಿಧಾನಸಭೆ ಚುನಾವಣೆಯನ್ನು ಎದುರಿಸಿದಂತೆ, ಹೆಗಲಿಗೆ ಹೆಗಲು ಕೊಟ್ಟು ‘ಲೋಕಾ’ ಸಮರ ಎದುರಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರಿಗೆ ಗೆದ್ದರೂ ಸೋತ ಅನುಭವ. ಸರ್ಕಾರ ಬೀಳಿಸುವ ಉಮೇದಿನಲ್ಲಿದ್ದ ವಿರೋಧ ಪಕ್ಷದವರಿಗೆ ಈ ಫಲಿತಾಂಶ ನಿರಾಶೆ ತಂದಿದ್ದು, ಕಾಂಗ್ರೆಸ್ ಸರ್ಕಾರಕ್ಕೆ ಭದ್ರತೆಯ ಅನುಭವವನ್ನೂ ನೀಡಿದೆ.

‘ಗ್ಯಾರಂಟಿ’ಗಳ ಅನುಷ್ಠಾನ– ವಾಗ್ದಾನ, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಅನ್ಯಾಯ, ಜೆಡಿಎಸ್‌ನಿಂದ ಅವಕಾಶವಾದಿ ರಾಜಕಾರಣ ಹೀಗೆ ಟೀಕಿಸುತ್ತಲೇ ಕಾಂಗ್ರೆಸ್ ಚುನಾವಣೆ ಎದುರಿಸಿತ್ತು. ಆದರೆ, ಅವು ನಿರೀಕ್ಷಿತ ಪ್ರಮಾಣದಲ್ಲಿ ‘ಕೈ’ ಹಿಡಿದಿಲ್ಲ. ಅದಕ್ಕೂ ಮಿಗಿಲಾಗಿ ‘ಜಾತಿ’ ರಾಜಕಾರಣ ಕೆಲಸ ಮಾಡಿದೆ. ಅಲ್ಪಸಂಖ್ಯಾತರು, ಪರಿಶಿಷ್ಟರು, ಹಿಂದುಳಿದ ವರ್ಗದ ಮತಗಳು, 10 ವರ್ಷಗಳ ಬಳಿಕ ಕಾಂಗ್ರೆಸ್‌ಗೆ ತೃಪ್ತಿದಾಯಕ ಫಲಿತಾಂಶ ತಂದುಕೊಟ್ಟಿದೆ. ಅದರಲ್ಲೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಿಡಿತ ಸಾಧಿಸುವಂತೆ ಮಾಡಿದೆ.

ಆದರೆ, ಬಿಜೆಪಿ–ಜೆಡಿಎಸ್ ಪರವಾದ ‘ಒಕ್ಕಲಿಗ–ಲಿಂಗಾಯತ’ ಸಮೀಕರಣ ಕಾಂಗ್ರೆಸ್‌ಗೆ ಮುಳುವಾಗಿದೆ. ಒಕ್ಕಲಿಗರ ಪ್ರಾಬಲ್ಯದ ಕ್ಷೇತ್ರಗಳ ಪೈಕಿ, ಹಾಸನ ಕ್ಷೇತ್ರವನ್ನು ಹೊರತುಪಡಿಸಿದರೆ ಉಳಿದ ಕಡೆಗಳಲ್ಲಿನ ಸೋಲು ಒಕ್ಕಲಿಗರ ನಾಯಕನೆಂದು ಬಿಂಬಿಸಲು ಹೊರಟಿದ್ದ ಡಿ.ಕೆ. ಶಿವಕುಮಾರ್ ಅವರಿಗೆ ಹಿನ್ನಡೆ ತಂದಿದೆ.



ಅದರಲ್ಲೂ, 2019ರಲ್ಲಿ ಏಕೈಕ ಕಾಂಗ್ರೆಸ್ ಸಂಸದರಾಗಿದ್ದ ಸಹೋದರ ಡಿ.ಕೆ. ಸುರೇಶ್ ಅವರ ಹೀನಾಯ ಸೋಲನ್ನು ಅವರಿಗೆ ಅರಗಿಸಿಕೊಳ್ಳುವುದೇ ಕಷ್ಟವಾಗಿದೆ. ಆ ಮೂಲಕ, ಹಳೆ ಮೈಸೂರು ಭಾಗದಲ್ಲಿ ಪಕ್ಷಕ್ಕೆ ಭಾರಿ ಸೋಲಾಗಿರುವುದು ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿ ಕೊಡುವ ಅವರ ಬಯಕೆಗೂ ತಿರುಗುಬಾಣವಾಗಿದೆ.

ಸಚಿವರ ಮಕ್ಕಳಿಗೆ ಆರು (ಮೃಣಾಲ್ ಹೆಬ್ಬಾಳಕರ, ಪ್ರಿಯಾಂಕಾ ಜಾರಕಿಹೊಳಿ, ಸಂಯುಕ್ತಾ ಪಾಟೀಲ, ಸಾಗರ್ ಖಂಡ್ರೆ, ಸುನೀಲ್ ಬೋಸ್, ಸೌಮ್ಯಾರೆಡ್ಡಿ), ಪತ್ನಿಗೆ ಒಂದು (ಪ್ರಭಾ ಮಲ್ಲಿಕಾರ್ಜುನ್), ಸಹೋದರಿಗೆ ಒಂದು (ಗೀತಾ ಶಿವರಾಜ್‌ಕುಮಾರ್), ಸಹೋದರನಿಗೆ ಒಂದು (ಡಿ.ಕೆ. ಸುರೇಶ್) ಹೀಗೆ ‘ಪರಿವಾರ’ದವರಿಗೆ ಟಿಕೆಟ್ ಹಂಚು ಮೂಲಕ, ಆ ಸಚಿವರಿಗೇ ಗೆಲ್ಲಿಸುವ ಹೊಣೆಯನ್ನೂ ಕಾಂಗ್ರೆಸ್ ಹೈಕಮಾಂಡ್ ನೀಡಿತ್ತು. ಆ ಪೈಕಿ, ಪ್ರಿಯಾಂಕಾ ಜಾರಕಿಹೊಳಿ, ಸಾಗರ್ ಖಂಡ್ರೆ, ಸುನೀಲ್ ಬೋಸ್, ಪ್ರಭಾ ಮಲ್ಲಿಕಾರ್ಜುನ್ ಗೆಲುವಿನ ದಡ ಸೇರುವ ಮೂಲಕ ಈ ‘ತಂತ್ರ’ಗಾರಿಕೆ ಭಾಗಶಃ ಫಲ ಕೊಟ್ಟಿದೆ.

ತಮ್ಮ ಕಾರ್ಯಕೇತ್ರದ ಜಿಲ್ಲೆ ಮೈಸೂರನ್ನು ಗೆಲ್ಲಿಸಿಕೊಳ್ಳಲು ಸಿದ್ದರಾಮಯ್ಯ ವಿಫಲರಾದರೂ, ಹಿಂದುಳಿದವರು, ಮುಸ್ಲಿಮರು ಹಾಗೂ ಪರಿಶಿಷ್ಟ ಸಮುದಾಯಗಳ ಬಾಹುಳ್ಯವಿರುವ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಮತ ಸೆಳೆಯುವಲ್ಲಿ ಸಫಲರಾಗಿದ್ದಾರೆ. ಜೊತೆಗೆ, ದಲಿತ ಮತಗಳೂ ಕೈಹಿಡಿದಿವೆ. ಆ ಕಾರಣದಿಂದಲೇ ಬಳ್ಳಾರಿ, ಕಲಬುರಗಿ, ಕೊಪ್ಪಳ, ರಾಯಚೂರು, ಚಿಕ್ಕೋಡಿ, ಬೀದರ್, ಚಾಮರಾಜನಗರ ಕ್ಷೇತ್ರಗಳು ಕಾಂಗ್ರೆಸ್ ಪಾಲಾಗಿವೆ. ಇನ್ನು ದಾವಣಗೆರೆಯಲ್ಲಿ ತಮ್ಮ ಸಮುದಾಯದ ವಿನಯ್ ಕುಮಾರ್ ಬಂಡುಕೋರ ಅಭ್ಯರ್ಥಿಯಾಗಿ ಕಣದಲ್ಲಿದ್ದರೂ ಕುರುಬರು ತಮ್ಮ ನಾಯಕ ಸಿದ್ದರಾಮಯ್ಯನವರ ಬೆನ್ನಿಗೆ ನಿಂತಿರುವುದು ಸ್ಪಷ್ಟ. ಅಲ್ಲದೆ, ಬಿಜೆಪಿ ಸಂಸದ ಸಿದ್ದೇಶ್ವರ ವಿರುದ್ಧದ ಸ್ವಪಕ್ಷೀಯರ ಅಸಮಾಧಾನ ಲಿಂಗಾಯತರಾದ ಕಾಂಗ್ರೆಸ್‌ನ ಪ್ರಭಾ ಮಲ್ಲಿಕಾರ್ಜುನ್ ಗೆಲುವಿನ ನಗೆ ಬೀರಲು ಕಾರಣವಾಗಿದೆ. ಪ್ರಜ್ವಲ್ ವಿರುದ್ಧದ ಜನಾಕ್ರೋಶ ಹಾಸನದಲ್ಲಿ ಕಾಂಗ್ರೆಸ್‌ನ ಶ್ರೇಯಸ್ ಪಟೇಲ್ ಅವರನ್ನು ಗೆಲ್ಲಿಸಿದೆ.

ಭಾರಿ ಬಹುಮತ ಪಡೆದು ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಗದ್ದುಗೆ ಏರಿದರೆ, ರಾಜ್ಯ ಸರ್ಕಾರವನ್ನು ಪತನಗೊಳಿಸುವ ಷಡ್ಯಂತ್ರ ರೂಪಿಸಬಹುದೆಂಬ ಆತಂಕ ಕೆಲವು ಕಾಂಗ್ರೆಸ್ ನಾಯಕರಲ್ಲಿಯೇ ಇತ್ತು. ಆದರೆ, ಈಗ ಆ ಪರಿಸ್ಥಿತಿ ಇಲ್ಲ. ಎನ್‌ಡಿಎಯಲ್ಲಿರುವ ಪಕ್ಷಗಳನ್ನು ವಿಶ್ವಾಸದಲ್ಲಿ ಜೊತೆಯಲ್ಲಿ ಇಟ್ಟುಕೊಳ್ಳುವುದೇ ಬಿಜೆಪಿಗೆ ಸವಾಲಾಗಲಿದೆ. ಹೀಗಾಗಿ, ರಾಜ್ಯ ಕಾಂಗ್ರೆಸ್ ಮತ್ತಷ್ಟು ಸ್ಥಿರ ಆಡಳಿತ ನೀಡಲು ಸಾಧ್ಯವಾಗಲಿದೆ.




“ರಾಜ್ಯದಲ್ಲಿ ನಮ್ಮ ನಿರೀಕ್ಷೆಗೆ ತಕ್ಕಂತೆ ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗಿಲ್ಲ. 15ರಿಂದ 20 ಸ್ಥಾನಗಳು ನಮ್ಮ ನಿರೀಕ್ಷೆಯಾಗಿತ್ತು. ಆದರೆ, 2019ರಲ್ಲಿ ಕೇವಲ ಒಂದು ಸ್ಥಾನದಲ್ಲಿ ಗೆದ್ದಿದ್ದೆವು. ಈಗ 9ಕ್ಕೆ ಏರಿದ್ದೇವೆ., ಈ ಬಾರಿ ನಮಗೆ ಶೇ 45.34, ಬಿಜೆಪಿ ಶೇ 46.04ರಷ್ಟು ಮತ ಬಂದಿದೆ. 2019ರಲ್ಲಿ ಬಿಜೆಪಿ ಶೇ 51.38 ರಷ್ಟು ಮತ ಗಳಿಸಿತ್ತು. ನಮಗೆ ಶೇ 31.88ರಷ್ಟು ಮಾತ್ರ ಮತ ಬಂದಿದ್ದವು”

ಸಿದ್ದರಾಮಯ್ಯ
ಮುಖ್ಯಮಂತ್ರಿ

“ಪ್ರಧಾನಿ ಮೋದಿ ಗಾಳಿ ಎಷ್ಟೇ ಬಲವಾಗಿ ಬೀಸಿದರೂ ಅದನ್ನು ಮತವಾಗಿ ಪರಿವರ್ತಿಸಲು ಪಕ್ಷದ ಸಂಘಟನೆ ಅಗತ್ಯ. ತಾನು ಕೂಗಿದರೆ ಮಾತ್ರ ಬೆಳಗಾಗುತ್ತದೆ ಎಂಬ ಕೋಳಿಯ ಭ್ರಮೆ ಉತ್ತರ ಕನ್ನಡ ಕ್ಷೇತ್ರದಲ್ಲಿ ಚುನಾವಣೆಯಲ್ಲಿ ಸುಳ್ಳಾಗಿದೆ. ಬಿಜೆಪಿ ವ್ಯಕ್ತಿ ಆಧಾರಿತ ಪಕ್ಷವಲ್ಲ. ನನ್ನ ಗೆಲುವಿನಲ್ಲಿ ಜೆಡಿಎಸ್ ಸಹಕಾರ ಮತ್ತು ಆರ್‌ಎಸ್‌ಎಸ್ ಪ್ರಯತ್ನ ಮರೆಯಲಾರೆ.”

ವಿಶ್ವೇಶ್ವರ ಹೆಗಡೆ ಕಾಗೇರಿ
ಸಂಸದ, ಉತ್ತರ ಕನ್ನಡ





“ಎನ್‌ಡಿಎ ಅಭ್ಯರ್ಥಿಗಳು 19 ಕ್ಷೇತ್ರಗಳಲ್ಲಷ್ಟೇ ಗೆದ್ದಿರುವುದು ನೋವು ತಂದಿದೆ. 25 ಕ್ಷೇತ್ರಗಳಲ್ಲಿ ಗೆಲ್ಲುತ್ತಾರೆಂಬ ನಿರೀಕ್ಷೆ ಇತ್ತು. ಬುಧವಾರ ಎನ್‌ಡಿಎ ನಾಯಕರ ಸಭೆ ಇದ್ದು, ದೆಹಲಿಗೆ ತೆರಳುತ್ತಿದ್ದೇನೆ. ಜಿಲ್ಲೆಯ ಜನ ನನ್ನನ್ನು ಪಕ್ಷಾತೀತವಾಗಿ ಬೆಂಬಲಿಸಿದ್ದಾರೆ, ಬೇರೆ ಪಕ್ಷಗಳ ಮುಖಂಡರೂ ಗೆಲುವಿಗೆ ಸಹಕರಿಸಿದ್ದಾರೆ. ಅವರ ನಿರೀಕ್ಷೆಗಳು ಸುಳ್ಳಾಗಲಿಲ್ಲ”

ಎಚ್.ಡಿ.ಕುಮಾರಸ್ವಾಮಿ
ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ




“ರಾಷ್ಟ್ರ ಮಟ್ಟದಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಹಿನ್ನಡೆಯಾಗಿರುವುದು ನಿಜ. ಆದರೂ, ಬಿಜೆಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಮೈತ್ರಿಕೂಟಕ್ಕೆ ನಿರೀಕ್ಷಿತ ಸ್ಥಾನ ಯಾಕೆ ಲಭಿಸಲಿಲ್ಲ ಎಂಬುದನ್ನು ಪರಿಶೀಲಿಸುತ್ತೇವೆ”

ಪ್ರಲ್ಹಾದ ಜೋಶಿ
ವಿಜೇತ ಅಭ್ಯರ್ಥಿ, ಧಾರವಾಡ ಲೋಕಸಭಾ ಕ್ಷೇತ್ರ






ಕ್ಷೇತ್ರ 28: ಯಾರಿಗೆ ಗೆಲುವಿನ ಗಂಟು



ರಾಜ್ಯದ ಲೋಕಸಭಾ ಕ್ಷೇತ್ರಗಳ ಚುನಾವಣಾ ಫಲಿತಾಂಶದ ಚಿತ್ರಣ ಇಲ್ಲಿದೆ

ಯಾವ ಕ್ಷೇತ್ರದಲ್ಲಿ ಯಾವ ಪಕ್ಷದ ಅಭ್ಯರ್ಥಿಗೆ ಮತದಾರ ಮಣೆ ಹಾಕಿದ್ದಾನೆ, ಯಾರು ಸೋಲಿನ ಸುಳಿಗೆ ಸಿಲುಕಿದ್ದಾರೆ, ಗೆದ್ದ ಅಭ್ಯರ್ಥಿ ಪಡೆದ ಮತಗಳ ಅಂತರವೆಷ್ಟು ಎಂಬ ಮಾಹಿತಿಯ ಜೊತೆಗೆ, ಗೆಲುವಿಗೆ ಕಾರಣವಾದ ಅಂಶಗಳ ನೋಟವೂ ಇದೆ

2019ರಲ್ಲಿ ರಾಜ್ಯದಲ್ಲಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಕಾಂಗ್ರೆಸ್ ಸರ್ಕಾರ ಅಸ್ತಿತ್ವದಲ್ಲಿತ್ತು. ಎರಡೂ ಪಕ್ಷಗಳು ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸಿದ್ದವು. ವಿರೋಧ ಪಕ್ಷದಲ್ಲಿದ್ದ ಬಿಜೆಪಿ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಚುನಾವಣೆ ಎದುರಿಸಿತ್ತು. 28 ಕ್ಷೇತ್ರಗಳ ಪೈಕಿ 25 ರಲ್ಲಿ ಬಿಜೆಪಿ ಗೆದ್ದಿದ್ದರೆ, ತಲಾ ಒಂದು ಸ್ಥಾನದಲ್ಲಿ ಕಾಂಗ್ರೆಸ್, ಜೆಡಿಎಸ್ ಗೆದ್ದು ಪಕ್ಷದ ನಾಯಕರು ಮುಖಭಂಗ ಅನುಭವಿಸಿದ್ದರು. ಮೈತ್ರಿಕೂಟದ ಅಭ್ಯರ್ಥಿಯಾಗಿ ಮಂಡ್ಯದಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ನಿಖಿಲ್ ಕುಮಾರಸ್ವಾಮಿ, ಪಕ್ಷೇತರ ಅಭ್ಯರ್ಥಿ ಸುಮಲತಾ ಅಂಬರೀಷ್ ಎದುರು ಸೋಲು ಕಂಡಿದ್ದರು. ಐದು ವರ್ಷದ ರಾಜಕೀಯ ಚಿತ್ರಣ ಇಲ್ಲಿದೆ.



1. ಬೀದರ್
ಸಾಗರ್ ಖಂಡ್ರೆ **6,66,317**
ಗೆಲುವಿನ ಅಂತರ 1,28,875
ಪ್ರತಿಸ್ಪರ್ಧಿ: ಭಗವಂತ ಖೂಬಾ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)




- ಕಾಂಗ್ರೆಸ್ ಒಗ್ಗಟ್ಟಿನಿಂದ ಚುನಾವಣೆ ಎದುರಿಸಿತು
- ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳ ಪರಿಣಾಮ
- ಬಿಜೆಪಿಯ ಭಿನ್ನಮತ ಕಾಂಗ್ರೆಸ್‌ಗೆ ವರವಾಯಿತು

2. ಕಲಬುರಗಿ (ಎಸ್.ಸಿ.)
ರಾಧಾಕೃಷ್ಣ ದೊಡ್ಡಮನಿ **6,52,321**
ಗೆಲುವಿನ ಅಂತರ 27,205
ಪ್ರತಿಸ್ಪರ್ಧಿ: ಡಾ.ಉಮೇಶ ಜಾಧವ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಎಐಸಿಸಿ ಅಧ್ಯಕ್ಷರ ತವರು ಜಿಲ್ಲೆಯಾದ್ದರಿಂದ ಸಂಘಟಿತವಾಗಿ ಕೆಲಸ ಮಾಡಿರುವುದು
- ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು
- ಅಭ್ಯರ್ಥಿಯ ಸರಳ–ಸಜ್ಜನಿಕೆಯ ವ್ಯಕ್ತಿತ್ವ

3. ವಿಜಯಪುರ
ರಮೇಶ ಜಿಗಜಿಣಗಿ **6,72,781**
ಗೆಲುವಿನ ಅಂತರ 77,229
ಪ್ರತಿಸ್ಪರ್ಧಿ: ಪ್ರೊ.ರಾಜು ಆಲಗೂರ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಸರಳ, ಸಜ್ಜನ, ಜನರೊಂದಿಗೆ ಒಡನಾಟ, ಸುಲಭವಾಗಿ ಸಿಗುವ ಸಂಸದ
- ಕ್ಷೇತ್ರವು ಬಿಜೆಪಿಯ ಭದ್ರಕೋಟೆ, ಮೋದಿ ನಾಮಬಲ, ಹಿಂದುತ್ವ
- ಕ್ಷೇತ್ರದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯ, ಎಲ್ಲ ಸಮಾಜದ ಮತಗಳ ಕ್ರೋಡೀಕರಣ

4. ಚಿಕ್ಕೋಡಿ
ಪ್ರಿಯಾಂಕಾ ಜಾರಕಿಹೊಳಿ **7,13,461**
ಗೆಲುವಿನ ಅಂತರ 90,834
ಪ್ರತಿಸ್ಪರ್ಧಿ: ಅಣ್ಣಾಸಾಹೇಬ ಜೊಲ್ಲೆ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ತಂದೆ, ಸಚಿವ ಸತೀಶ ಜಾರಕಿಹೊಳಿ ಮತ್ತು ಪಕ್ಷದ ಕಾರ್ಯಕರ್ತರ ಸಾಂಘಿಕ ಪ್ರಯತ್ನ
- ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು
- ಕ್ಷೇತ್ರದಲ್ಲಿ ಒಂದುಗೂಡಿದ ಅಹಿಂದ ಮತಗಳು

5. ಬಾಗಲಕೋಟೆ
ಪಿ.ಸಿ ಗದ್ದಿಗೌಡರ **6,71,039**
ಗೆಲುವಿನ ಅಂತರ 68,399
ಪ್ರತಿಸ್ಪರ್ಧಿ: ಸಂಯುಕ್ತಾ ಪಾಟೀಲ(ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಸರಳ ವ್ಯಕ್ತಿತ್ವ, ಎಲ್ಲ ಪಕ್ಷಗಳ ನಾಯಕರೊಂದಿಗೆ ಉತ್ತಮ ಸಂಬಂಧ
- ಪ್ರಧಾನಿ ನರೇಂದ್ರ ಮೋದಿ ಅಲೆ
- ಜಿಲ್ಲೆಯ ಬಿಜೆಪಿ ನಾಯಕರ ಸಂಘಟಿತ ಯತ್ನ

6. ರಾಯಚೂರು
ಜಿ.ಕುಮಾರ ನಾಯಕ **6,70,966**
ಗೆಲುವಿನ ಅಂತರ 79,781
ಪ್ರತಿಸ್ಪರ್ಧಿ: ರಾಜಾ ಅಮರೇಶ್ವರ ನಾಯಕ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಕ್ಷೇತ್ರದಲ್ಲಿ ಬಿಜೆಪಿ ವಿರೋಧಿ ಅಲೆ, ಹೊಸ ಮುಖ ಬಯಸಿದ್ದ ಮತದಾರರು
- ಬಿರುಸಿನ ಪ್ರಚಾರ, ಕಾಂಗ್ರೆಸ್ ನಾಯಕರ ಒಗ್ಗಟ್ಟಿನ ಮಂತ್ರ
- ಕಾಂಗ್ರೆಸ್‌ಗೆ ಬಲ ನೀಡಿದ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು

7. ಬೆಳಗಾವಿ
ಜಗದೀಶ ಶೆಟ್ಟರ್ **7,56,471**
ಗೆಲುವಿನ ಅಂತರ 1,75,574
ಪ್ರತಿಸ್ಪರ್ಧಿ: ಮೃಣಾಲ್ ಹೆಬ್ಬಾಳಕರ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಪ್ರಧಾನಿ ನರೇಂದ್ರ ಮೋದಿ ಅಲೆ
- ಮುಖ್ಯಮಂತ್ರಿಯಾಗಿ, 2 ಬಾರಿ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೆಲಸ
- ಬಿಜೆಪಿ ನಾಯಕರ ಸಾಂಘಿಕ ಯತ್ನ

8. ಧಾರವಾಡ
ಪ್ರಲ್ಹಾದ ಜೋಶಿ **7,16,231**
ಗೆಲುವಿನ ಅಂತರ 97,324
ಪ್ರತಿಸ್ಪರ್ಧಿ: ವಿನೋದ ಕೆ.ಅಸೂಟಿ, (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ನಾಲ್ಕು ಅವಧಿಯಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯ
- ಕ್ಷೇತ್ರದಲ್ಲಿ ಅಬ್ಬರದ ಮತ್ತು ಬಿರುಸಿನ ಪ್ರಚಾರ
- ಆರ್‌ಎಸ್‌ಎಸ್ ಮತ್ತು ಮೋದಿ ಜೊತೆಗಿನ ಒಡನಾಟ

9. ಕೊಪ್ಪಳ
ಕೆ. ರಾಜಶೇಖರ ಹಿಟ್ನಾಳ **6,63,511**
ಗೆಲುವಿನ ಅಂತರ 46,357
ಪ್ರತಿಸ್ಪರ್ಧಿ: ಡಾ. ಬಸವರಾಜ ಕ್ಯಾವಟರ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು
- ಎಂಟು ವಿಧಾನಸಭಾ ಕ್ಷೇತ್ರದಲ್ಲಿ ಆರರಲ್ಲಿ ಕಾಂಗ್ರೆಸ್ ಶಾಸಕರು ಇರುವುದು
- ಸಂಗಣ್ಣ ಕರಡಿಗೆ ಟಿಕೆಟ್ ಕೈ ತಪ್ಪಿದ್ದು ಕಾಂಗ್ರೆಸ್‌ಗೆ ವರವಾಯಿತು

10. ಬಳ್ಳಾರಿ
ಇ. ತುಕಾರಾಂ **7,25,379**
ಗೆಲುವಿನ ಅಂತರ 98,407
ಪ್ರತಿಸ್ಪರ್ಧಿ: ಬಿ. ಶ್ರೀರಾಮುಲು (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿದ್ದ ಗ್ಯಾರಂಟಿ ಯೋಜನೆಗಳು
- ಕ್ಷೇತ್ರ ವ್ಯಾಪ್ತಿಯ 6 ಮಂದಿ ಕಾಂಗ್ರೆಸ್ ಶಾಸಕರ ಸಾಂಘಿಕ ಪ್ರಯತ್ನ
- ತುಕಾರಾಂ ಅವರ ‘ಕ್ಲೀನ್ ಇಮೇಜ್’, ಕೆಲಸಗಾರ ಎಂಬ ಅಭಿಪ್ರಾಯ

11. ಹಾವೇರಿ
ಬಸವರಾಜ ಬೊಮ್ಮಾಯಿ **7,05,538**
ಗೆಲುವಿನ ಅಂತರ 43,513
ಪ್ರತಿಸ್ಪರ್ಧಿ: ಆನಂದಸ್ವಾಮಿ ಗಡ್ಡದೇವರಮಠ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಕ್ಷೇತ್ರದಾದ್ಯಂತ ಪ್ರಧಾನಿ ನರೇಂದ್ರ ಮೋದಿ ಪರ ಅಲೆ
- ಹಾವೇರಿ ಜಿಲ್ಲೆಗೆ ನೀಡಿದ ನೀರಾವರಿ ಯೋಜನೆಗಳು
- ಜಲಸಂಪನ್ಮೂಲ ಸಚಿವ ಮತ್ತು ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಣೆ

12. ಉತ್ತರ ಕನ್ನಡ
ವಿಶ್ವೇಶ್ವರ ಹೆಗಡೆ ಕಾಗೇರಿ **7,82,495**
ಗೆಲುವಿನ ಅಂತರ 3,37,428
ಪ್ರತಿಸ್ಪರ್ಧಿ: ಡಾ.ಅಂಜಲಿ ನಿಂಬಾಳ್ಕರ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಕ್ಷೇತ್ರದಲ್ಲಿ ಬಿಜೆಪಿ ಸಂಘಟನೆ ಪ್ರಬಲ
- ಪ್ರಧಾನಿ ನರೇಂದ್ರ ಮೋದಿ ಅಲೆ
- ಪ್ರಚಾರದ ಭಾಗವಾಗಿ ಕ್ಷೇತ್ರಕ್ಕೆ ಮೋದಿ ಭೇಟಿ

13. ಶಿವಮೊಗ್ಗ
ಬಿ.ವೈ.ರಾಘವೇಂದ್ರ, **7,78,721**
ಗೆಲುವಿನ ಅಂತರ 2,43,715
ಪ್ರತಿಸ್ಪರ್ಧಿ: ಗೀತಾ ಶಿವರಾಜಕುಮಾರ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಬಿಜೆಪಿ ಸಂಘಟನಾ ಬಲ, ಬಿ.ವೈ.ರಾಘವೇಂದ್ರ ಹಿಂದಿನ ಎರಡು ಅವಧಿಯಲ್ಲಿ ಮಾಡಿದ್ದ ಅಭಿವೃದ್ಧಿ ಕಾರ್ಯಗಳನ್ನು ಮತದಾರರಿಗೆ ಪರಿಣಾಮಕಾರಿಯಾಗಿ ಪರಿಚಯಿಸಿದ್ದು. ಬಿಜೆಪಿಯ ವ್ಯವಸ್ಥಿತ ಪ್ರಚಾರ ಕಾರ್ಯ.

14. ದಾವಣಗೆರೆ
ಡಾ.ಪ್ರಭಾ ಮಲ್ಲಿಕಾರ್ಜುನ್ **6,33,059**
ಗೆಲುವಿನ ಅಂತರ 26,094
ಪ್ರತಿಸ್ಪರ್ಧಿ: ಗಾಯತ್ರಿ ಸಿದ್ದೇಶ್ವರ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಕಾಂಗ್ರೆಸ್‌ನ 6 ಹಾಗೂ ಪಕ್ಷೇತರ ಶಾಸಕಿಯ ಬೆಂಬಲ, ಕಾಂಗ್ರೆಸ್‌ನ ಗ್ಯಾರಂಟಿ ಹಾಗೂ ಪತಿ ಎಸ್.ಎಸ್.ಮಲ್ಲಿಕಾರ್ಜುನ್ ಹಾಗೂ ಮಾವ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಮಾಡಿದ ಅಭಿವೃದ್ಧಿ ಕಾರ್ಯಗಳು ಕೈಹಿಡಿದಿವೆ

15. ಚಿತ್ರದುರ್ಗ (ಎಸ್.ಸಿ.)
ಗೋವಿಂದ ಎಂ.ಕಾರಜೋಳ **6,84,890**
ಗೆಲುವಿನ ಅಂತರ 48,121
ಪ್ರತಿಸ್ಪರ್ಧಿ: ಬಿ.ಎನ್.ಚಂದ್ರಪ್ಪ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಕೇಂದ್ರ ಸಚಿವರೂ ಆಗಿದ್ದ ಎ.ನಾರಾಯಣಸ್ವಾಮಿ ಬದಲಾಗಿ ಗೋವಿಂದ ಕಾರಜೋಳ ಅವರನ್ನು ಕಣಕ್ಕೆ ಇಳಿಸಿದ ಬಿಜೆಪಿಯ ಕಾರ್ಯತಂತ್ರ ಫಲಿಸಿದೆ. ಜೆಡಿಎಸ್ ಜೊತೆಗಿನ ಮೈತ್ರಿ ಗೆಲುವಿನ ದಡ ಸೇರಿಸಲು ಸಹಕಾರಿಯಾಗಿದೆ

16. ತುಮಕೂರು
ವಿ.ಸೋಮಣ್ಣ **7,20,946**
ಗೆಲುವಿನ ಅಂತರ 1,75,594
ಪ್ರತಿಸ್ಪರ್ಧಿ: ಮುದ್ದಹನುಮೇಗೌಡ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಮೈತ್ರಿಯಿಂದ ಲಾಭ
- ಬಿಜೆಪಿ, ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರ ಒಗ್ಗಟ್ಟು.
- ಒಕ್ಕಲಿಗ, ಲಿಂಗಾಯತರ ಮತಗಳು ಒಗ್ಗೂಡಿರುವುದು

17. ಉಡುಪಿ- ಚಿಕ್ಕಮಗಳೂರು
ಕೋಟ ಶ್ರೀನಿವಾಸ ಪೂಜಾರಿ **7,32,234**
ಗೆಲುವಿನ ಅಂತರ 2,59,175
ಪ್ರತಿಸ್ಪರ್ಧಿ: ಜಯಪ್ರಕಾಶ್ ಹೆಗ್ಡೆ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಹಾಲಿ ಸಂಸದೆಯೂ ಆಗಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಬದಲಿಸಿ ಆಡಳಿತ ವಿರೋಧಿ ಅಲೆಯನ್ನು ತಣ್ಣಗಾಗಿಸಿದ್ದು. ಹಿಂದುತ್ವವಾದಿಗಳ ಭದ್ರ ನೆಲೆ ಹಾಗೂ ಅಭ್ಯರ್ಥಿ ಬಗ್ಗೆ ಕ್ಷೇತ್ರದಲ್ಲಿ ಒಳ್ಳೆಯ ಅಭಿಪ್ರಾಯ

18. ದಕ್ಷಿಣ ಕನ್ನಡ
ಕ್ಯಾಪ್ಟನ್ ಬ್ರಿಜೇಶ್ ಚೌಟ **7,64,132**
ಗೆಲುವಿನ ಅಂತರ 1,49,208
ಪ್ರತಿಸ್ಪರ್ಧಿ: ಆರ್. ಪದ್ಮರಾಜ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಹಿಂದುತ್ವವಾದಿಗಳ ಭದ್ರ ನೆಲೆ. ಮೋದಿ ಅಲೆ ಮತ್ತು ಕಾರ್ಯಕರ್ತರ ಬಲ
- ಸಂಸದ ನಳಿನ್ ಕುಮಾರ್ ಕಟೀಲ್ ಅವರನ್ನು ಬದಲಿಸಿ, ಹೊಸ ಮುಖ ಕಣಕ್ಕಿಳಿಸಿದ್ದು

19. ಹಾಸನ
ಶ್ರೇಯಸ್ ಪಟೇಲ್ **6,70,599**
ಗೆಲುವಿನ ಅಂತರ 43,756
ಪ್ರತಿಸ್ಪರ್ಧಿ: ಪ್ರಜ್ವಲ್ ರೇವಣ್ಣ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)



- ಜಿ.ಪುಟ್ಟಸ್ವಾಮಿಗೌಡರ ನಂತರ ಕುಟುಂಬ ಎದುರಿಸಿದ ಸತತ ಸೋಲುಗಳ ಬಗ್ಗೆ ಜನರಿಗಿದ್ದ ಅನುಕಂಪ. ಪ್ರಜ್ವಲ್ ವಿರುದ್ಧ ಕೇಳಿಬಂದಿದ್ದ ಲೈಂಗಿಕ ದೌರ್ಜನ್ಯದ ಪೆನ್‌ಡ್ರೈವ್, ರೇವಣ್ಣ ಕುಟುಂಬ ಪಾಳೆಗಾರಿಕೆಯ ವಿರುದ್ಧ ಜನಾಕ್ರೋಶ

20. ಮಂಡ್ಯ
ಎಚ್.ಡಿ.ಕುಮಾರಸ್ವಾಮಿ **8,51,881**
ಗೆಲುವಿನ ಅಂತರ 2,84,620
ಪ್ರತಿಸ್ಪರ್ಧಿ: ವೆಂಕಟರಮಣೇಗೌಡ (ಸ್ಟಾರ್ ಚಂದ್ರು) , ಕಾಂಗ್ರೆಸ್
ಕಳೆದ ಬಾರಿ ಗೆದ್ದ ಪಕ್ಷ (ಸ್ವತಂತ್ರ)



- ಜಿಲ್ಲೆಯಲ್ಲಿ ಕುಮಾರಸ್ವಾಮಿ ಅವರಿಗಿರುವ ನಾಮಬಲ, ಒಕ್ಕಲಿಗರ ಪ್ರಮುಖ ನಾಯಕನೆಂಬ ಜಾತಿಬಲ, ಬಿಜೆಪಿ ಜೊತೆಗಿನ ಮೈತ್ರಿಯು ಗೆಲುವಿಗೆ ಮತ್ತಷ್ಟು ಅನುಕೂಲವಾಯಿತು

21. ಮೈಸೂರು- ಕೊಡಗು
ಯದುವೀರ್ ಒಡೆಯರ್ **7,95,503**
ಗೆಲುವಿನ ಅಂತರ 1,39,262
ಪ್ರತಿಸ್ಪರ್ಧಿ: ಎಂ.ಲಕ್ಷ್ಮಣ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಮೈಸೂರು ರಾಜವಂಶಸ್ಥರ ಬಗ್ಗೆ ಜನರಲ್ಲಿರುವ ಗೌರವ. ಯದುವೀರ್ ಯುವಜನರನ್ನು ಸೆಳೆದಿದ್ದು. ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿಯಾಗಲೆಂಬ ಬಯಕೆ. ಮೈತ್ರಿಯಿಂದ ದೊರೆತ ಒಕ್ಕಲಿಗ ಸಮಾಜದ ನೆರವು. ಎರಡೂ ಪಕ್ಷಗಳ ನಾಯಕರ ಒಗ್ಗಟ್ಟಿನ ಕೆಲಸ

22. ಚಾಮರಾಜನಗರ (ಎಸ್.ಸಿ.)
ಸುನಿಲ್ ಬೋಸ್ **7,51,671**
ಗೆಲುವಿನ ಅಂತರ 1,88,706
ಪ್ರತಿಸ್ಪರ್ಧಿ: ಎಸ್.ಬಾಲರಾಜ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಐದು ಗ್ಯಾರಂಟಿ ಯೋಜನೆಗಳು
- ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಡಾ.ಎಚ್.ಸಿ.ಮಹದೇವಪ್ಪ ವರ್ಚಸ್ಸು, ಕ್ಷೇತ್ರ ವ್ಯಾಪ್ತಿಯಲ್ಲಿ ಏಳು ಶಾಸಕರಿರುವುದು

23. ಚಿಕ್ಕಬಳ್ಳಾಪುರ
ಡಾ.ಕೆ.ಸುಧಾಕರ್ **8,22,619**
ಗೆಲುವಿನ ಅಂತರ 1,63,460
ಪ್ರತಿಸ್ಪರ್ಧಿ: ಕೆ.ವಿ. ಗೌತಮ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಪ್ರಬಲ ಒಕ್ಕಲಿಗ ಸಮುದಾಯದ ಬೆಂಬಲ, ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ
- ಒಕ್ಕಲಿಗರನ್ನು ಒಗ್ಗೂಡಿಸಿದ ಶಾಸಕ ಪ್ರದೀಪ್ ಈಶ್ವರ್ ಅವರ ನಿಂದನೆ ಮತ್ತು ಸವಾಲಿನ ಮಾತುಗಳು

24. ಕೋಲಾರ
ಎಂ.ಮಲ್ಲೇಶ್ ಬಾಬು **6,91,481**
ಗೆಲುವಿನ ಅಂತರ 71,388
ಪ್ರತಿಸ್ಪರ್ಧಿ: ಕೆ.ವಿ.ಗೌತಮ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಫಲ ನೀಡಿದ ಮೈತ್ರಿ ಕೆಮಿಸ್ಟ್ರಿ, ಜೆಡಿಎಸ್ ಕಾರ್ಯಕರ್ತರ ಶ್ರಮ
- ಸತತ ಎರಡು ಬಾರಿ ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದ ಅನುಕಂಪ
- ಒಕ್ಕಲಿಗ ಮತಗಳ ಕ್ರೋಡೀಕರಣ

25. ಬೆಂಗಳೂರು ಕೇಂದ್ರ
ಪಿ.ಸಿ.ಮೋಹನ್ **6,58,915**
ಗೆಲುವಿನ ಅಂತರ 32,707
ಪ್ರತಿಸ್ಪರ್ಧಿ: ಮನ್ಸೂರ್ ಅಲಿ ಖಾನ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಕ್ಷೇತ್ರದ ಜನರೊಂದಿಗೆ ಉತ್ತಮ ಒಡನಾಟ
- ಕ್ಷೇತ್ರದ ಸಮಸ್ಯೆ- ಸವಾಲುಗಳ ಅರಿವು
- ಕೈ ಹಿಡಿದ ಅಭಿವೃದ್ಧಿ ಕೆಲಸಗಳು

26. ಬೆಂಗಳೂರು ದಕ್ಷಿಣ
ತೇಜಸ್ವಿ ಸೂರ್ಯ **7,50,830**
ಗೆಲುವಿನ ಅಂತರ 2,77,083
ಪ್ರತಿಸ್ಪರ್ಧಿ: ಸೌಮ್ಯಾ ರೆಡ್ಡಿ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ವರ್ಷಗಳಿಂದಲೂ ಬಿಜೆಪಿಯ ಭದ್ರಕೋಟೆ
- ಸಂಘ–ಪಕ್ಷದ ಕಾರ್ಯಕರ್ತರ ಒಗ್ಗಟ್ಟು
- ಯುವ ನಾಯಕನತ್ತ ಮತದಾರರ ವಿಶ್ವಾಸ

27. ಬೆಂಗಳೂರು ಉತ್ತರ
ಶೋಭಾ ಕರಂದ್ಲಾಜೆ **9,86,049**
ಗೆಲುವಿನ ಅಂತರ 2,59,476
ಪ್ರತಿಸ್ಪರ್ಧಿ: ಎಂ.ವಿ. ರಾಜೀವ್ ಗೌಡ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



- ಒಕ್ಕಲಿಗ ಸಮುದಾಯದ ಒಲವು
- ಎರಡು ದಶಕಗಳಿಂದ ಬಿಜೆಪಿಯ ಭದ್ರಕೋಟೆ
- ಜೆಡಿಎಸ್ ಜೊತೆಗಿನ ಮೈತ್ರಿ

28. ಬೆಂಗಳೂರು ಗ್ರಾಮಾಂತರ
ಡಾ. ಸಿ.ಎನ್. ಮಂಜುನಾಥ್ **10,75,553**
ಗೆಲುವಿನ ಅಂತರ 2,68,094
ಪ್ರತಿಸ್ಪರ್ಧಿ: ಡಿ.ಕೆ.ಸುರೇಶ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



- ಬಿಜೆಪಿ, ಜೆಡಿಎಸ್ ಮೈತ್ರಿ ಕ್ಷೇತ್ರದಲ್ಲಿ ಫಲ ಕೊಟ್ಟಿತು.
- ಬದಲಾವಣೆ ಬಯಸುತ್ತಿದ್ದ ಜನರಿಗೆ ಹೊಸ ಆಶಾಕಿರಣದಂತೆ ಕಂಡ ಡಾ. ಸಿ.ಎನ್. ಮಂಜುನಾಥ್




ಪ್ರಜಾ ಮತ 2024

ಜನತಂತ್ರದ ಹಬ್ಬ



ಲೋಕಸಭೆಯಲ್ಲಿ ದಕ್ಷಿಣ ಭಾರತದ ಚಿತ್ರಣ

ಕೇರಳ



20 ಒಟ್ಟು ಸ್ಥಾನಗಳು

	2019	2024
ಬಿಜೆಪಿ	00	01
ಯುಡಿಎಫ್	19	18
ಎಲ್‌ಡಿಎಫ್	01	01
ಇತರೆ	00	00


ತೆಲಂಗಾಣ



17 ಒಟ್ಟು ಸ್ಥಾನಗಳು

	2019	2024
ಬಿಜೆಪಿ	04	08
ಕಾಂಗ್ರೆಸ್	03	08
ಟಿಆರ್‌ಎಸ್	09	00
ಎಐಎಂಐಎಂ	01	01


ಆಂಧ್ರಪ್ರದೇಶ



25 ಒಟ್ಟು ಸ್ಥಾನಗಳು

	2019	2024
ಬಿಜೆಪಿ	00	03
ಜನಸೇನಾ	00	02
ಟಿಡಿಪಿ	03	16
ವೈಎಸ್‌ಆರ್‌ಸಿ	22	04


ತಮಿಳುನಾಡು



39 ಒಟ್ಟು ಸ್ಥಾನಗಳು

	2019	2024
ಬಿಜೆಪಿ	00	00
ಕಾಂಗ್ರೆಸ್	08	09
ಡಿಎಮ್‌ಕೆ	24	22
ಇತರೆ	07	08

ಗೋವಾ



2 ಒಟ್ಟು ಸ್ಥಾನಗಳು

	2019	2024
ಬಿಜೆಪಿ	01	01
ಕಾಂಗ್ರೆಸ್	01	01

ಬಿಜೆಪಿ ನೆಲೆ ವಿಸ್ತರಣೆಗೆ ಕಾಂಗ್ರೆಸ್ ಅಡ್ಡಿ

ಕೇರಳದಲ್ಲಿ ಮೊದಲ ಗೆಲುವು • ಆಡಳಿತದಲ್ಲಿರುವ ರಾಜ್ಯಗಳಲ್ಲೂ ಎರಡಂಕಿ ದಾಟದ ಕಾಂಗ್ರೆಸ್

• ಬಿ.ವಿ. ಶ್ರೀನಾಥ್



ಹೈದರಾಬಾದ್‌ನಲ್ಲಿ ಮಂಗಳವಾರ ತೆಲುಗು ದೇಶಂ ಪಕ್ಷದ ಕಾರ್ಯಕರ್ತರು ಸಂಭ್ರಮಿಸಿದರು —ಪಿಟಿಐ ಚಿತ್ರ

ಬೆಂಗಳೂರು: 2024ರ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣದ ರಾಜ್ಯಗಳ ಮೇಲೆ ಬಿಜೆಪಿ ವಿಶೇಷ ದೃಷ್ಟಿ ನೆಟ್ಟಿತ್ತು. ಹಿಂದಿ ಭಾಷಿಕ ರಾಜ್ಯಗಳ ಪಕ್ಷ ಎಂದೇ ಹೆಸರಾಗಿದ್ದ ಬಿಜೆಪಿ ಆ ಅಪವಾದ ಹೋಗಲಾಡಿಸಿಕೊಳ್ಳಲು ಮತ್ತು ತನ್ನ ಬಲ ವೃದ್ಧಿಸಿಕೊಳ್ಳಲು ಈ ಬಾರಿ ಹಲವು ತಂತ್ರಗಳ ಮೊರೆ ಹೋಗಿತ್ತು. ದಕ್ಷಿಣದ ರಾಜ್ಯಗಳಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಮೂಲಕ ಪಕ್ಷವು 'ಚಾರ್ ಸೌ ಪಾರ್' ಸಾಧನೆ ಮಾಡಲಿದೆ ಎಂದು ಚುನಾವಣಾ ಪ್ರಚಾರದ ವೇಳೆ ಅಮಿತ್ ಶಾ ಹೇಳಿದ್ದು ಬಿಜೆಪಿಯ ಉದ್ದೇಶ ಬಹಿರಂಗಪಡಿಸಿತ್ತು.

ಬಿಜೆಪಿ ದಕ್ಷಿಣದ ರಾಜ್ಯಗಳಲ್ಲಿ ಈ ಬಾರಿ ಕೊಂಚ ಮಟ್ಟಿಗೆ ಉತ್ತಮ ಸಾಧನೆ ಮಾಡಿದೆ ಎನ್ನಿಸಿದರೂ ವಾಸ್ತವ ಬೇರೆಯೇ ಇದೆ. ತೆಲಂಗಾಣ, ಕರ್ನಾಟಕ, ಆಂಧ್ರಪ್ರದೇಶ, ಕೇರಳ, ತಮಿಳುನಾಡುಗಳಲ್ಲಿ ಒಟ್ಟು 131 ಲೋಕಸಭಾ ಕ್ಷೇತ್ರಗಳಿವೆ. ಇವುಗಳಲ್ಲಿ 'ಇಂಡಿಯಾ' ಕೂಟ ಈ ಬಾರಿ 77 ಸ್ಥಾನ ಗಳಿಸಿದ್ದರೆ, ಎನ್‌ಡಿಎ ಕೂಟವು 51 ಕ್ಷೇತ್ರದಲ್ಲಿ ಗೆದ್ದಿದೆ. ನಾಲ್ಕು ರಾಜ್ಯಗಳಲ್ಲಿ ಕಾಂಗ್ರೆಸ್ 42 ಕ್ಷೇತ್ರಗಳೊಂದಿಗೆ ಅತಿ ದೊಡ್ಡ ಪಕ್ಷವಾಗಿದ್ದರೆ, ಬಿಜೆಪಿ 29 ಸ್ಥಾನಗಳನ್ನು ಗಳಿಸಿದೆ. 2019ರಲ್ಲಿ ಬಿಜೆಪಿ 30 ಕ್ಷೇತ್ರಗಳನ್ನು ಗೆದ್ದಿತ್ತು.

ತೆಲಂಗಾಣದಲ್ಲಿ ಬಿಜೆಪಿ 'ದುಪ್ಪಟ್ಟು' ಸಾಧನೆ: ದಕ್ಷಿಣದ ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ರಾಜ್ಯಗಳ ಪೈಕಿ ಬಿಜೆಪಿಗೆ ಕೊಂಚವಾದರೂ ನೆಲೆ ಇದ್ದದ್ದು ತೆಲಂಗಾಣದಲ್ಲಿ ಮಾತ್ರ. ಅಲ್ಲಿ 2019ರಲ್ಲಿ ಬಿಜೆಪಿ 4 ಸ್ಥಾನ ಗೆದ್ದಿತ್ತು. ಈ ಬಾರಿ ಬಲವನ್ನು 8ಕ್ಕೆ ಏರಿಸಿಕೊಂಡಿದೆ. ವಿಧಾನಸಭಾ ಚುನಾವಣೆಯಲ್ಲಿ ದೊಡ್ಡ ಗೆಲುವು ದಾಖಲಿಸಿದ್ದ ಎ.ರೇವಂತ್ ರೆಡ್ಡಿ ನೇತೃತ್ವದ ಕಾಂಗ್ರೆಸ್, ಲೋಕಸಭಾ ಚುನಾವಣೆಯಲ್ಲಿ 8 ಸ್ಥಾನಗಳನ್ನು ಮಾತ್ರ ಪಡೆಯುವಲ್ಲಿ ಸಫಲವಾಗಿದೆ.

ಆಂಧ್ರಪ್ರದೇಶದ ಚಿತ್ರಣ: ದಕ್ಷಿಣದಲ್ಲಿ ಈ ಬಾರಿ ಎನ್‌ಡಿಎಗೆ ಅತಿ ಹೆಚ್ಚು ದಕ್ಕಿರುವುದು ಆಂಧ್ರದಲ್ಲಿ. ಅಲ್ಲಿ ಟಿಡಿಪಿ, ಜನಸೇನಾ ಪಕ್ಷಗಳೊಂದಿಗೆ ಬಿಜೆಪಿ ಮೈತ್ರಿ ಮಾಡಿಕೊಂಡಿತ್ತು. ಇಲ್ಲಿ ಬಿಜೆಪಿ ಮೂರು ಸ್ಥಾನ ಗೆದ್ದಿದೆ. ಬಿಜೆಪಿಗೆ ಉತ್ತರ ಪ್ರದೇಶದಂಥ ರಾಜ್ಯಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಗೆಲ್ಲಲು ಸಾಧ್ಯವಾಗದಿದ್ದರೂ ಈ ಬಾರಿ ಆ ಕೊರತೆಯನ್ನು ಆಂಧ್ರಪ್ರದೇಶ ನೀಗಿದೆ.

ಕೇರಳದಲ್ಲಿ ಖಾತೆ ತೆರೆದ ಬಿಜೆಪಿ: ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಈ ಬಾರಿ ಉತ್ತಮ ಸಾಧನೆ ಮಾಡಿದೆ. ಕಾಂಗ್ರೆಸ್ 14 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದರೆ, ಯುಡಿಎಫ್ 18 ಕ್ಷೇತ್ರಗಳಲ್ಲಿ ಗೆದ್ದಿದೆ. 'ಕೆಂಪು ಕೋಟೆ'ಯಲ್ಲಿ ಬೇರು ಬಿಡಲು ಹರಸಾಹಸ ನಡೆಸಿದ ಬಿಜೆಪಿ ಈ ಬಾರಿ ಅದರಲ್ಲಿ ಯಶಸ್ವಿಯಾಗಿದೆ. ತ್ರಿಶೂರ್ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ಸುರೇಶ್ ಗೋಪಿ ಗೆದ್ದಿದ್ದಾರೆ.

ತಮಿಳುನಾಡಿನಲ್ಲಿ 'ಇಂಡಿಯಾ' ಕೂಟದ ಅಬ್ಬರ: ತಮಿಳುನಾಡಿನಲ್ಲಿ ಡಿಎಂಕೆ ತನ್ನ ವಿಜಯಯಾತ್ರೆ ಮುಂದುವರೆಸಿದೆ. ಕಳೆದ ಬಾರಿ ಡಿಎಂಕೆ 20 ಕ್ಷೇತ್ರಗಳಲ್ಲಿ ಜಯಗಳಿಸಿದ್ದ ಡಿಎಂಕೆ ಈ ಬಾರಿ 22 ಸ್ಥಾನ ಗೆದ್ದಿದೆ. ಉಳಿದ 17 ಕ್ಷೇತ್ರಗಳಲ್ಲಿ ಇಂಡಿಯಾ ಮೈತ್ರಿಕೂಟದ ಪಕ್ಷಗಳು ಗೆದ್ದಿವೆ. ಈ ಮೂಲಕ ತಮಿಳುನಾಡು 'ಇಂಡಿಯಾ' ಕೂಟಕ್ಕೆ ಹೆಚ್ಚು ಬಲ ತುಂಬಿದ ರಾಜ್ಯಗಳಲ್ಲೊಂದಾಗಿದೆ. ಭಾರಿ ಅಬ್ಬರ ಮಾಡಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಕೊಯಮತ್ತೂರು ಕ್ಷೇತ್ರದಲ್ಲಿ ಪರಾಭವಗೊಂಡಿದ್ದಾರೆ.

ನೆಲಕಚ್ಚಿದ ಬಿಆರ್‌ಎಸ್

ಈ ಚುನಾವಣೆಯಲ್ಲಿ ಶೋಚನೀಯ ಅವಸ್ಥೆ ಎಂದರೆ, ಅದು ಬಿಆರ್‌ಎಸ್ ಪಕ್ಷದ್ದು.

2019ರ ಲೋಕಸಭಾ ಚುನಾವಣೆಯಲ್ಲಿ ಕೆ.ಚಂದ್ರಶೇಖರ ರಾವ್ ಅವರ ಬಿಆರ್‌ಎಸ್ ಅತಿ ಹೆಚ್ಚು ಸ್ಥಾನಗಳನ್ನು ಗೆದ್ದಿತ್ತು. 17 ಕ್ಷೇತ್ರಗಳ ಪೈಕಿ ಬಿಆರ್‌ಎಸ್ 9 ಸ್ಥಾನಗಳನ್ನು ತನ್ನದಾಗಿಸಿಕೊಂಡಿತ್ತು. ಈ ಬಾರಿ ಬಿಆರ್‌ಎಸ್ ಸಂಪೂರ್ಣವಾಗಿ ನೆಲ ಕಚ್ಚಿದ್ದು, ಕನಿಷ್ಠ ಒಂದು ಕ್ಷೇತ್ರದಲ್ಲೂ ಗೆಲುವು ಸಾಧಿಸಿಲ್ಲ. ಕಳೆದ ನವೆಂಬರ್‌ವರೆಗೂ ರಾಜ್ಯದಲ್ಲಿ ಆಡಳಿತ ನಡೆಸಿದ ಬಿಆರ್‌ಎಸ್ ವಿಧಾನಸಭಾ ಚುನಾವಣೆಯಲ್ಲಿ ಸೋತು ವಿರೋಧ ಪಕ್ಷವಾಗಿದೆ. ಆದರೆ, ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ಪೈಪೋಟಿ ನಡುವೆ ನೆಲೆ ಕಳೆದುಕೊಂಡಿರುವ ಬಿಆರ್‌ಎಸ್ ಶೂನ್ಯಕ್ಕೆ ಇಳಿದಿದೆ.

ಚುನಾವಣಾ ಫಲಿತಾಂಶ: ಪ್ರಮುಖರು ಏನೆಂದರು?



ಜೆಡಿಯು ಎನ್‌ಡಿಎ ಒಕ್ಕೂಟದಲ್ಲಿದೆ ಮತ್ತು ಮುಂದೆಯೂ ಇರಲಿದೆ. ಇದು ನಮ್ಮ ಅಂತಿಮ ತೀರ್ಮಾನ. ಜನರ ತೀರ್ಪು ಅತಿ ಮುಖ್ಯ. ನಾವು ಅದಕ್ಕೆ ತಲೆಬಾಗುತ್ತೇವೆ. ರಾಷ್ಟ್ರ ಮಟ್ಟದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎಗೆ ಜನಾದೇಶ ಸಿಕ್ಕಿದೆ. ನಾವು ಅದನ್ನು ಸ್ವಾಗತಿಸುತ್ತೇವೆ. ಮೋದಿ ಅವರ ಪ್ರಭಾವ ಇಲ್ಲದಿದ್ದರೆ, ಬಿಜೆಪಿ ಇಷ್ಟು ಕ್ಷೇತ್ರಗಳಲ್ಲಿ ಗೆಲ್ಲಲು ಹೇಗೆ ಸಾಧ್ಯ

ಕೆ.ಸಿ.ತ್ಯಾಗಿ
ಜೆಡಿಯು ಮುಖಂಡ



ಲೋಕಸಭಾ ಚುನಾವಣೆಯಲ್ಲಿ 400 ಕ್ಷೇತ್ರಗಳಲ್ಲಿ ಗೆಲ್ಲುತ್ತೇವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಈ ಗುರಿಯನ್ನು ತಲುಪದ್ದಕ್ಕೆ, ನೈತಿಕ ಹೊಣೆ ಹೊತ್ತು ಅವರು ರಾಜೀನಾಮೆ ನೀಡಬೇಕು. ಅವರು ವಿಶ್ವಾಸಾರ್ಹತೆ ಕಳೆದುಕೊಂಡಿದ್ದಾರೆ. 'ಇಂಡಿಯಾ' ಒಕ್ಕೂಟವನ್ನು ಅಧಿಕಾರಕ್ಕೇರಿಸಲು ಪ್ರಯತ್ನಿಸುತ್ತೇನೆ. 'ಇಂಡಿಯಾ' ಗೆದ್ದಿದೆ, ಮೋದಿ ಸೋತಿದ್ದಾರೆ

ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ



ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಗೆಲುವನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಮರ್ಪಿಸುತ್ತೇನೆ. ಕುಟುಂಬದ ಪರಂಪರೆಯ ವಿರುದ್ಧ ಜನರು ಮತ ಹಾಕಿದ್ದಾರೆ ಮತ್ತು ನನ್ನನ್ನು ಗೆಲ್ಲಿಸಿದ್ದಾರೆ ಅವರಿಗೆ ಧನ್ಯವಾದಗಳು. ಮಂಡಿಯ ಜನರಿಗಾಗಿ ಕೆಲಸ ಮಾಡುತ್ತೇನೆ

ಕಂಗನಾ ರನೌತ್
ಬಿಜೆಪಿ ವಿಜೇತ ಅಭ್ಯರ್ಥಿ, ಮಂಡಿ ಕ್ಷೇತ್ರ



ಸಂವಿಧಾನ ಬದಲಾವಣೆ ಬಗ್ಗೆ ಪ್ರತಿಪಕ್ಷಗಳು ನಿರಂತರವಾಗಿ ಅಪಪ್ರಚಾರ ಮಾಡಿದವು. ಮತದಾರರ ಅನುಮಾನ ಬಗೆಹರಿಸಲು ನಾವು ವಿಫಲರಾದೆವು. ಜೊತೆಗೆ ವೋಟ್ ಬ್ಯಾಂಕ್ ರಾಜಕಾರಣ ಕೂಡಾ ನಮ್ಮ ಸೋಲಿಗೆ ಕಾರಣವಾಯಿತು. ಬಾಳಾಸಾಹೇಬ್ ಠಾಕ್ರೆ ಅವರೂ ಇಷ್ಟಪಡುತ್ತಿರಲಿಲ್ಲ ಎಂದು ಅವರಿಗೆ (ಪ್ರತಿಪಕ್ಷಗಳು) ತಿಳಿಸಲು ಬಯಸುತ್ತೇನೆ

ಏಕನಾಥ ಶಿಂದೆ
ಮಹಾರಾಷ್ಟ್ರ ಮುಖ್ಯಮಂತ್ರಿ



ಇದು ಕೇವಲ ನನ್ನ ಗೆಲುವಲ್ಲ, ಎಲ್ಲಾ ಕಾರ್ಯಕರ್ತರ ಗೆಲುವು. ದಾಖಲೆಗಳನ್ನು ಮುರಿಯಲಿಕ್ಕಾಗಿಯೇ ನಿರ್ಮಿಸಲಾಗುತ್ತಿದೆ. ನಾನು ಅಧೀರ್ ರಂಜನ್ ಚೌಧರಿ ಅವರನ್ನು ಗೌರವಿಸುತ್ತೇನೆ. ಮೊದಲು ನಾನು ಸ್ಪೋರ್ಟ್ಸ್ ಅಕಾಡೆಮಿ ರಚಿಸುತ್ತೇನೆ

ಯೂಸುಫ್ ಪಠಾಣ್
ಟಿಎಂಸಿ ವಿಜೇತ ಅಭ್ಯರ್ಥಿ, ಪಶ್ಚಿಮ ಬಂಗಾಳದ ಬಹರಾಮ್‌ಪುರ ಕ್ಷೇತ್ರ

ಗಮನಸೆಳೆದ ಕ್ಷೇತ್ರಗಳು

ಅಮೇಠಿ

ಉತ್ತರ ಪ್ರದೇಶದ ಅಮೇಠಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಸೋಲಿನಿಂದ ಗಮನಸೆಳೆದಿದ್ದ ಕ್ಷೇತ್ರ. ಕಳೆದಬಾರಿ ಈ ಕ್ಷೇತ್ರದಲ್ಲಿ ಗೆದ್ದಿದ್ದ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರನ್ನು ಈ ಬಾರಿ ಗಾಂಧಿ ಕುಟುಂಬಕ್ಕೆ ಆಪ್ತರಾಗಿರುವ ಕಿಶೋರಿ ಲಾಲ್ ಶರ್ಮಾ ಅವರು ಸೋಲಿಸಿದ್ದಾರೆ. ಕಾಂಗ್ರೆಸ್ ಪಕ್ಷ ಕೊನೆ ಗಳಿಗೆಯಲ್ಲಿ ಕಿಶೋರಿ ಲಾಲ್ ಅವರನ್ನು ಕಣಕ್ಕಿಳಿಸುವ ಮೂಲಕ ಅಚ್ಚರಿ ಮೂಡಿಸಿತ್ತು. ಗೆಲುವಿನ ಮೂಲಕ ಅಚ್ಚರಿಗೆ ಕಾರಣರಾಗಿದ್ದಾರೆ.

ಬಾರಾಮತಿ

ಶರದ್ ಪವಾರ್ ಕುಟುಂಬ ಸದಸ್ಯರ ನಡುವಣ ಹಣಾಹಣಿಗೆ ವೇದಿಕೆಯಾಗುವ ಮೂಲಕ ತೀವ್ರ ಕುತೂಹಲ ಕೆರಳಿಸಿದ್ದುದು ಮಹಾರಾಷ್ಟ್ರದ ಬಾರಾಮತಿ ಕ್ಷೇತ್ರ. ಎನ್‌ಸಿಪಿ ವರಿಷ್ಠ ಶರದ್ ಪವಾರ್ ಪುತ್ರಿ, ಹಾಲಿ ಸಂಸದೆ ಸುಪ್ರಿಯಾ ಸುಳೆ ಮತ್ತೆ ಗೆಲುವಿನ ನಗೆ ಬೀರಿದ್ದಾರೆ. ಸಂಬಂಧಿ ಹಾಗೂ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ಅವರನ್ನು ಪರಾಭವಗೊಳಿಸಿದ್ದಾರೆ. ಸುನೇತ್ರಾ ಬಿಜೆಪಿ ನೇತೃತ್ವದ 'ಮಹಾಯುತಿ' ಮೈತ್ರಿಕೂಟದ ಅಭ್ಯರ್ಥಿಯಾಗಿದ್ದರು.

ತಿರುವನಂತಪುರ

ಕೇರಳದ ತಿರುವನಂತಪುರ ಲೋಕಸಭಾ ಕ್ಷೇತ್ರದಿಂದ ನಾಲ್ಕನೇ ಬಾರಿಯೂ ಕಾಂಗ್ರೆಸ್‌ನ ಹಿರಿಯ ಮುಖಂಡ ಶಶಿ ತರೂರ್ ಅವರು ಗೆಲುವಿನ ನಗೆ ಬೀರಿದ್ದಾರೆ. ಬಿಜೆಪಿಯಿಂದ ಸ್ಪರ್ಧಿಸಿದ್ದ ರಾಜೀವ್ ಚಂದ್ರಶೇಖರ್ ಅವರನ್ನು ತರೂರ್ ಮಣಿಸಿದ್ದಾರೆ. ಆರಂಭದಲ್ಲಿ ಮುನ್ನಡೆ ಕಾಯ್ದುಕೊಂಡಿದ್ದ ರಾಜೀವ್ ಅವರು ಕೊನೆಯ ಹಂತದ ಮತ ಎಣಿಕೆ ನಡೆಯುವವರೆಗೂ ತೀವ್ರ ಪೈಪೋಟಿ ನೀಡಿದ್ದರು. ಕೇಂದ್ರ ಸಚಿವರ ಸ್ಪರ್ಧೆಯಿಂದಾಗಿ ಈ ಕ್ಷೇತ್ರ ದೇಶದ ಗಮನ ಸೆಳೆದಿತ್ತು.

ಮಂಡಿ

ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲೊಂದಾದ ಮಂಡಿ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ನಟಿ ಕಂಗನಾ ರನೌತ್ ಅವರು ಗೆಲುವಿನ ನಗೆ ಬೀರಿದ್ದಾರೆ. ತೀವ್ರ ಕುತೂಹಲ ಕೆರಳಿಸಿದ್ದ ಈ ಕ್ಷೇತ್ರದಿಂದ ರಾಜ್ಯ ಸಚಿವ ಹಾಗೂ ಕಾಂಗ್ರೆಸ್ ಅಭ್ಯರ್ಥಿ ವಿಕ್ರಮಾದಿತ್ಯ ಸಿಂಗ್ ಅವರನ್ನು ಸೋಲಿಸಿದ್ದಾರೆ. ಬಲಪಂಥೀಯ ಸಿದ್ಧಾಂತದ ಕಂಗನಾ ಅವರನ್ನು ಈ ಬಾರಿ ಚುನಾವಣಾ ರಾಜಕೀಯಕ್ಕಿಳಿಸುವ ಮೂಲಕ ಬಿಜೆಪಿಯು ಇಲ್ಲಿ ಅದೃಷ್ಟ ಪರೀಕ್ಷೆಗಿಳಿದಿತ್ತು.

ಹೈದರಾಬಾದ್

ಆಲ್ ಇಂಡಿಯಾ ಮಜ್ಲಿಸ್ ಎ ಇತ್ತೆಹಾದ್ ಉಲ್ ಮುಸ್ಲಿಮೀನ್ (ಎಐಎಂಐಎಂ) ಪಕ್ಷದ ಭದ್ರಕೋಟೆಯಾದ ತೆಲಂಗಾಣದ ಹೈದರಾಬಾದ್ ಲೋಕಸಭಾ ಕ್ಷೇತ್ರದಿಂದ ಅಸಾದುದ್ದೀನ್ ಒವೈಸಿ ವಿರುದ್ಧ ಕಣಕ್ಕಿಳಿದಿದ್ದ ಹಿಂದುತ್ವದ ಪ್ರಬಲ ಪ್ರತಿಪಾದಕಿ ಮಾಧವಿ ಲತಾ ಅವರು ಪರಾಭವಗೊಂಡಿದ್ದಾರೆ. ಒವೈಸಿ ಅವರು ಬಿಜೆಪಿಯ ಮಾಧವಿ ಲತಾ ಅವರನ್ನು ಮಣಿಸಿದ್ದಾರೆ. ರಾಜಕೀಯದಲ್ಲಿ ಅನನುಭವಿಯಾದರೂ ಧಾರ್ಮಿಕ ಭಾಷಣಗಳ ಮೂಲಕ ಮಾಧವಿ ಲತಾ ರಾಜ್ಯಮಟ್ಟದಲ್ಲಿ ಗಮನ ಸೆಳೆದಿದ್ದರು.

ಕೇರಳ: ಖಾತೆ ತೆರೆದ ಬಿಜೆಪಿ

'ದೇವರ ನಾಡು' ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲುವುದರೊಂದಿಗೆ 'ಇಂಡಿಯಾ' ಕೂಟಕ್ಕೆ ಶಕ್ತಿ ತುಂಬಿದೆ. ಆದರೆ, ಎಡಪಕ್ಷಗಳ ಪ್ರಾಬಲ್ಯವಿರುವ ರಾಜ್ಯದಲ್ಲಿ ಅಸ್ತಿತ್ವವನ್ನು ಸ್ಥಾಪಿಸಬೇಕು ಎನ್ನುವ ಬಿಜೆಪಿಯ ದಶಕಗಳ ಕನಸು ಈ ಬಾರಿ ಈಡೇರಿದೆ.

ರಾಜ್ಯದಲ್ಲಿ ಒಟ್ಟು 20 ಲೋಕಸಭಾ ಕ್ಷೇತ್ರಗಳಿವೆ. ಈ ಪೈಕಿ ಯುಡಿಎಫ್ 18 ಕ್ಷೇತ್ರಗಳಲ್ಲಿ ಜಯ ಸಾಧಿಸಿದೆ. ಅವುಗಳ ಪೈಕಿ ಕಾಂಗ್ರೆಸ್ 14 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದರೆ, ಅದರ ಮಿತ್ರಪಕ್ಷಗಳಾದ ಐಯುಎಂಎಲ್ 2 ಸ್ಥಾನಗಳಲ್ಲಿ, ಆರ್‌ಎಸ್‌ಪಿ ಮತ್ತು ಕೆಇಸಿ ತಲಾ ಒಂದು ಸ್ಥಾನದಲ್ಲಿ ಗೆಲುವು ಸಾಧಿಸಿವೆ.

ರಾಜ್ಯದಲ್ಲಿ ಈ ಬಾರಿ ಅತ್ಯಂತ ಅಚ್ಚರಿಯ ಫಲಿತಾಂಶ ಎಂದರೆ, ಅದು ತ್ರಿಶೂರ್ ಕ್ಷೇತ್ರದ್ದು. ಈ ಕ್ಷೇತ್ರದಿಂದ ನಟ ಸುರೇಶ್ ಗೋಪಿ ಜಯಗಳಿಸಿದ್ದು, ಕೇರಳದಲ್ಲಿ ಬಿಜೆಪಿ ಶಕೆ ಆರಂಭವಾಗಿದೆ. ಇನ್ನೊಂದೆಡೆ ಎಡಪಕ್ಷಗಳ ಕೂಟ ಎಲ್‌ಡಿಎಫ್ ಕೇವಲ ಒಂದು ಕ್ಷೇತ್ರದಲ್ಲಿ (ಆಲತ್ತೂರ್) ಗೆಲ್ಲುವುದರ ಮೂಲಕ ತನ್ನ ಅಸ್ತಿತ್ವ ಉಳಿಸಿಕೊಂಡಿದೆ.


ತೆಲಂಗಾಣ: ಕಾಂಗ್ರೆಸ್, ಬಿಜೆಪಿಗೆ ಸಮಬಲ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಆಡಳಿತಾರೂಢ ಕಾಂಗ್ರೆಸ್ ಹಾಗೂ ಬಿಜೆಪಿ ಸಮಾನ ಸಾಧನೆ ಮಾಡಿದ್ದರೆ, ವಿರೋಧ ಪಕ್ಷವಾದ ಬಿಆರ್‌ಎಸ್ ದೂಳೀಪಟವಾಗಿದೆ.

2019ರ ಚುನಾವಣೆಯಲ್ಲಿ ಕೆ.ಚಂದ್ರಶೇಖರ ರಾವ್ ಅವರ ಬಿಆರ್‌ಎಸ್ ಅತಿ ಹೆಚ್ಚು ಸ್ಥಾನಗಳನ್ನು ಗೆದ್ದಿತ್ತು. 17 ಕ್ಷೇತ್ರಗಳ ಪೈಕಿ ಬಿಆರ್‌ಎಸ್ 9 ಸ್ಥಾನಗಳನ್ನು ತನ್ನದಾಗಿಸಿಕೊಂಡಿತ್ತು. ಈ ಬಾರಿ ಬಿಆರ್‌ಎಸ್ ಸಂಪೂರ್ಣವಾಗಿ ನೆಲ ಕಚ್ಚಿದೆ. ಕನಿಷ್ಠ ಒಂದು ಕ್ಷೇತ್ರದಲ್ಲೂ ಗೆಲುವು ಸಾಧಿಸಿಲ್ಲ. ಕಳೆದ ಬಾರಿ ಬಿಜೆಪಿ ರಾಜ್ಯದಲ್ಲಿ ನಾಲ್ಕು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಈ ಬಾರಿ ತನ್ನ ಬಲ ವೃದ್ಧಿಸಿಕೊಂಡಿರುವ ಬಿಜೆಪಿ, 8 ಸ್ಥಾನ ಗೆದ್ದಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಮೂರು ಸ್ಥಾನ ಗೆದ್ದಿದ್ದ ಕಾಂಗ್ರೆಸ್, ಈ ಬಾರಿ 8ರಲ್ಲಿ ಜಯ ದಾಖಲಿಸಿದೆ.

ಹೈದರಾಬಾದ್ ಕ್ಷೇತ್ರದಲ್ಲಿ ಎಐಎಂಐಎಂ ತನ್ನ ನೆಲೆ ಉಳಿಸಿಕೊಂಡಿದೆ. ಈ ಕ್ಷೇತ್ರದಲ್ಲಿ ಎಐಎಂಐಎಂನ ಅಸಾದುದ್ದೀನ್ ಒವೈಸಿ ಅವರಿಗೆ ಬಿಜೆಪಿಯ ಮಾಧವಿ ಲತಾ ಅವರು ತೀವ್ರ ಪೈಪೋಟಿ ನೀಡಿದ್ದರು. ಒವೈಸಿ ಮತ್ತೊಮ್ಮೆ ಗೆಲ್ಲುವ ಮೂಲಕ ಮತಕ್ಷೇತ್ರ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದು, ಗೆಲುವಿನ ಓಟ ಮುಂದುವರಿಸಿದ್ದಾರೆ.

ಆಂಧ್ರಪ್ರದೇಶ: ಎನ್‌ಡಿಎಗೆ ಟಾನಿಕ್



ಅಮರಾವತಿ (ಪಿಟಿಐ): ಆಂಧ್ರಪ್ರದೇಶದಲ್ಲಿ ಎನ್. ಚಂದ್ರಬಾಬು ನಾಯ್ಡು ನೇತೃತ್ವದ ತೆಲುಗು ದೇಶಂ ಪಕ್ಷ ಈ ಬಾರಿ ಪುಟಿದೆದ್ದಿದೆ. ರಾಜ್ಯದಲ್ಲಿ ಅಧಿಕಾರ ಹಿಡಿಯುವ ಜತೆಗೆ ಲೋಕಸಭಾ ಚುನಾವಣೆಯಲ್ಲೂ ಗಮನಸೆಳೆದಿದೆ.

2019ರ ಚುನಾವಣೆಯಲ್ಲಿ ಆಂಧ್ರಪ್ರದೇಶದಲ್ಲಿ ಹೀನಾಯ ಸೋಲು ಅನುಭವಿಸಿದ್ದ ಚಂದ್ರಬಾಬು ನಾಯ್ಡು ಕೇವಲ 3 ಲೋಕಸಭೆ ಕ್ಷೇತ್ರ ಗೆದ್ದಿದ್ದರು. ಜಗನ್‌ಮೋಹನ್ ರೆಡ್ಡಿಯ ವೈಎಸ್‌ಆರ್‌ಸಿಪಿ 23 ಸ್ಥಾನ ಗೆದ್ದಿತ್ತು. ಈ ಬಾರಿ ನಾಯ್ಡು ಅವರು ಜಗನ್ ಪಕ್ಷವನ್ನು ಬಗ್ಗುಬಡಿದಿದ್ದಾರೆ. ಎನ್‌ಡಿಎ ಮೈತ್ರಿಕೂಟದ ಭಾಗವಾಗಿದ್ದ ಟಿಡಿಪಿ ರಾಜ್ಯದಲ್ಲಿ 17 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಈ ಪೈಕಿ 16 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ.

ಟಿಡಿಪಿ ಜತೆಗೆ ಮೈತ್ರಿ ಮಾಡಿಕೊಂಡಿದ್ದ ಬಿಜೆಪಿ ರಾಜ್ಯದಲ್ಲಿ ಮೊದಲ ಬಾರಿಗೆ ಖಾತೆ ತೆರೆದಿದೆ. ಆರು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಬಿಜೆಪಿ ಆ ಪೈಕಿ ಮೂರು ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಅದೇ ರೀತಿ ರಾಜ್ಯದಲ್ಲಿ ಎನ್‌ಡಿಎಯ ಮತ್ತೊಂದು ಮಿತ್ರಪಕ್ಷವಾಗಿದ್ದ ನಟ ಪವನ್ ಕಲ್ಯಾಣ್ ಅವರ ಜನಸೇನಾ ಪಕ್ಷವು ಲೋಕಸಭಾ ಚುನಾವಣೆಯಲ್ಲಿ ಖಾತೆ ತೆರೆದಿದೆ. ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಜನಸೇನಾ ಎರಡರಲ್ಲೂ ಗೆಲುವು ಸಾಧಿಸಿದೆ.

ಆಂಧ್ರಪ್ರದೇಶವನ್ನು ವಿಭಜಿಸಿದ್ದ ಕಾರಣಕ್ಕೆ ಕಾಂಗ್ರೆಸ್ ಮೇಲಿನ ಜನರ ಸಿಟ್ಟು ಈ ಚುನಾವಣೆಯಲ್ಲೂ ಪ್ರತಿಫಲನಗೊಂಡಿದೆ. ವೈ.ಎಸ್. ಜಗನ್‌ಮೋಹನ್ ರೆಡ್ಡಿ ಅವರ ಸಹೋದರಿ, ಆಂಧ್ರಪ್ರದೇಶದ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷೆ ವೈ.ಎಸ್.ಶರ್ಮಿಳಾ ಸೇರಿದಂತೆ ಪಕ್ಷದ ಎಲ್ಲ ಅಭ್ಯರ್ಥಿಗಳೂ ಸೋಲು ಕಂಡಿದ್ದಾರೆ.

ತಮಿಳುನಾಡು: 'ಇಂಡಿಯಾ' ಕ್ಲೀನ್ ಸ್ವೀಪ್

ಚೆನ್ನೈ (ಪಿಟಿಐ): ದ್ರಾವಿಡ ಪಕ್ಷಗಳ ಜಯದ ಓಟ ತಮಿಳುನಾಡಿನಲ್ಲಿ ಮುಂದುವರೆದಿದೆ. ಆಡಳಿತಪಕ್ಷ ಡಿಎಂಕೆ ಲೋಕಸಭಾ ಚುನಾವಣೆಯಲ್ಲಿ ಅತಿ ಹೆಚ್ಚು ಸ್ಥಾನ ಗೆದ್ದು 'ಇಂಡಿಯಾ' ಕೂಟದ ಕೈ ಬಲಪಡಿಸಿದೆ. ರಾಜ್ಯದ ಒಟ್ಟು 39 ಕ್ಷೇತ್ರಗಳಲ್ಲಿಯೂ 'ಇಂಡಿಯಾ' ಕೂಟವು ಗೆಲುವಿನ ನಗೆಬೀರಿದೆ.

ಎಂ.ಕೆ.ಸ್ಟಾಲಿನ್ ನೇತೃತ್ವದ ಆಡಳಿತಾರೂಢ ಡಿಎಂಕೆ 22 ಕ್ಷೇತ್ರಗಳಲ್ಲಿ ಜಯ ಸಾಧಿಸುವ ಮೂಲಕ ರಾಜ್ಯದಲ್ಲಿ ಅತಿ ಹೆಚ್ಚು ಸ್ಥಾನಗಳನ್ನು ಗೆದ್ದ ಪಕ್ಷವಾಗಿದೆ. ಇನ್ನು 'ಇಂಡಿಯಾ' ಕೂಟದ ಮಿತ್ರಪಕ್ಷಗಳ ಪೈಕಿ ಕಾಂಗ್ರೆಸ್ 9 ಸ್ಥಾನಗಳನ್ನು ಗೆದ್ದಿದೆ. ವಿಸಿಕೆ 2, ಸಿಪಿಐ 2, ಸಿಪಿಎಂ 2 ಮತ್ತು ಎಂಡಿಎಂಕೆ ಒಂದು ಸ್ಥಾನ ಗಳಿಸಿದೆ.

ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ರಾಜ್ಯದಲ್ಲಿ ಒಂದು ಸ್ಥಾನ ಗೆಲ್ಲಲು ಸಾಧ್ಯವಾಗಿಲ್ಲ. ಬಿಜೆಪಿ 23 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು, ಉಳಿದ ಕ್ಷೇತ್ರಗಳನ್ನು ಪಿಎಂಕೆ, ತಮಿಳು ಮನಿಲಾ ಕಾಂಗ್ರೆಸ್ ಮತ್ತು ತನ್ನ ಇತರ ಮಿತ್ರಪಕ್ಷಗಳಿಗೆ ಬಿಟ್ಟುಕೊಟ್ಟಿತ್ತು. ಅದೇ ರೀತಿ ಎಐಎಡಿಎಂಕೆ 32 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಉಳಿದ ಸ್ಥಾನಗಳ ಪೈಕಿ ಮಿತ್ರಪಕ್ಷಗಳಾದ ಡಿಎಂಡಿಕೆಗೆ 5, ಪಿಟಿ ಹಾಗೂ ಎಸ್‌ಡಿಪಿಐ ಪಕ್ಷಗಳಿಗೆ ತಲಾ ಒಂದು ಸ್ಥಾನ ಬಿಟ್ಟುಕೊಟ್ಟಿತ್ತು.

ಗೋವಾ: ಕಾಂಗ್ರೆಸ್, ಬಿಜೆಪಿ ಸಮಸಮ

ಚಿಕ್ಕ ರಾಜ್ಯವಾದ ಗೋವಾದಲ್ಲಿ ಎರಡು ಲೋಕಸಭಾ ಕ್ಷೇತ್ರಗಳಿದ್ದು, ಅವುಗಳ ಪೈಕಿ ಬಿಜೆಪಿ ಹಾಗೂ ಕಾಂಗ್ರೆಸ್ ತಲಾ ಒಂದು ಸ್ಥಾನವನ್ನು ಗೆದ್ದಿವೆ.

ಬಿಜೆಪಿ ಅಭ್ಯರ್ಥಿ ಮತ್ತು ಕೇಂದ್ರ ಸಚಿವ ಶ್ರೀಪಾದ್ ನಾಯಕ್ ಉತ್ತರ ಗೋವಾ ಲೋಕಸಭಾ ಕ್ಷೇತ್ರದಿಂದ ಜಯ ಸಾಧಿಸಿದ್ದಾರೆ. ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ರಮಾಕಾಂತ್ ಖಲಾಪ್ ವಿರುದ್ಧ 1,13,621 ಮತಗಳ ಅಂತರದಿಂದ ಗೆದ್ದಿದ್ದಾರೆ. ಅವರು ಸತತ ಆರನೇ ಬಾರಿಗೆ ಗೆಲುವು ದಾಖಲಿಸಿದ್ದಾರೆ.


ಇನ್ನು ದಕ್ಷಿಣ ಗೋವಾ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಮಾಜಿ ಸೈನಿಕ ವಿರಿಯಾಟೊ ಫರ್ನಾಂಡಿಸ್ ಅವರು ಗೆಲುವು ಪಡೆದಿದ್ದಾರೆ. ವಿರಿಯಾಟೋ ಅವರು ನೌಕಾಪಡೆಯ ನಿವೃತ್ತ ಅಧಿಕಾರಿ.

ಗೆದ್ದ ಪ್ರಮುಖರು



ಮಹುವಾ ಮೊಯಿತ್ರಾ

ಪಶ್ಚಿಮ ಬಂಗಾಳದ ಕೃಷ್ಣನಗರ ಕ್ಷೇತ್ರದಿಂದ ಟಿಎಂಸಿ ಅಭ್ಯರ್ಥಿ ಮಹುವಾ ಮೊಯಿತ್ರಾ ಜಯ ಗಳಿಸಿದ್ದಾರೆ. ಇವರು ಸಮೀಪದ ಪ್ರತಿಸ್ಪರ್ಧಿ, ಬಿಜೆಪಿಯ ಅಮೃತಾ ರಾಯ್ ವಿರುದ್ಧ ಜಯಗಳಿಸಿದರು. ಪ್ರಶ್ನೆ ಕೇಳಲು ಹಣ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಪ್ರಸಕ್ತ ಲೋಕಸಭೆಯ ಕಡೆಯ ಅಧಿವೇಶನ ವೇಳೆ ಮೊಯಿತ್ರಾ ಅವರನ್ನು ಸದನದಿಂದ ಉಚ್ಚಾಟಿಸಲಾಗಿತ್ತು.



ಅಭಿಜಿತ್ ಗಂಗೋಪಾಧ್ಯಾಯ

ಪಶ್ಚಿಮ ಬಂಗಾಳದ ತಮ್ಲುಕ್ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಲೋಕಸಭೆ ಪ್ರವೇಶಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪಶ್ಚಿಮ ಬಂಗಾಳದ ಸರ್ಕಾರದ ವಿರುದ್ಧ ಸಂಘರ್ಷ ನಡೆಸಿದ್ದ ಅವರು, ಚುನಾವಣೆಯ ಪೂರ್ವದಲ್ಲಿ ಹುದ್ದೆಗೆ ರಾಜೀನಾಮೆ ನೀಡಿ ಬಿಜೆಪಿ ಟಿಕೆಟ್‌ನಡಿ ಕಣಕ್ಕಿಳಿದಿದ್ದರು.



ಶ್ರೀಕಾಂತ್ ಶಿಂದೆ

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂಧೆ ಅವರ ಪುತ್ರ ಶ್ರೀಕಾಂತ್ ಶಿಂಧೆ ಅವರು ಲೋಕಸಭೆಗೆ ಮೂರನೇ ಬಾರಿಗೆ ಆಯ್ಕೆಯಾಗಿದ್ದಾರೆ. ಮಹಾರಾಷ್ಟ್ರದ ಕಲ್ಯಾಣ ಕ್ಷೇತ್ರದಿಂದ ಎನ್‌ಡಿಎ ಮೈತ್ರಿಯ ಶಿವಸೇನಾದಿಂದ ಸ್ಪರ್ಧಿಸಿದ್ದ ಅವರು ಶಿವಸೇನಾದ (ಯುಬಿಟಿ) ವೈಶಾಲಿ ಧಾರೇಕರ್ ರಾಣೆ ಎದುರು ಗೆಲವು ಸಾಧಿಸಿದ್ದಾರೆ.

ಸೋತ ಪ್ರಮುಖರು



ಮೇನಕಾ ಗಾಂಧಿ

ಉತ್ತರ ಪ್ರದೇಶದ ಸುಲ್ತಾನ್‌ಪುರ್ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಬಿಜೆಪಿ ನಾಯಕ ಮೇನಕಾ ಗಾಂಧಿ ಪರಾಭವಗೊಂಡಿದ್ದಾರೆ. ಸಮಾಜವಾದಿ ಪಕ್ಷದ ಅಭ್ಯರ್ಥಿ ರಾಂಭುಲ್ ನಿಶಾದ್ ಈ ಕ್ಷೇತ್ರದಲ್ಲಿ ಜಯದ ನಗೆಬೀರಿದ್ದರು. ಇವರ ಪುತ್ರ ವರುಣ್‌ಗಾಂಧಿ ಅವರಿಗೆ ಬಿಜೆಪಿ ಈ ಬಾರಿ ಟಿಕೆಟ್ ನಿರಾಕರಿಸಿತ್ತು.



ಕೆ. ಅಣ್ಣಾಮಲೈ

ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ, ಲೋಕಸಭೆ ಚುನಾವಣೆಯಲ್ಲಿ ತೀವ್ರ ನೇರ ಮಾತುಗಳಿಂದ ಗಮನಸೆಳೆದಿದ್ದ ಅಣ್ಣಾಮಲೈ ಪರಾಭವಗೊಂಡಿದ್ದಾರೆ. ಕೊಯಮತ್ತೂರು ಕ್ಷೇತ್ರದಿಂದ ಕಣಕ್ಕಿಳಿದಿದ್ದ ಅವರು 2ನೇ ಸ್ಥಾನ ಗಳಿಸಿದ್ದಾರೆ. ಈ ಕ್ಷೇತ್ರದಲ್ಲಿ ಡಿಎಂಕೆ ಅಭ್ಯರ್ಥಿ ಗಣಪತಿ ಪಿ.ರಾಜಕುಮಾರ್ ಅವರು 79 ಸಾವಿರಕ್ಕೂ ಅಧಿಕ ಮತಗಳಿಂದ ಜಯಗಳಿಸಿದರು.



ಕೆ.ಮಾಧವಿ ಲತಾ

ತೆಲಂಗಾಣದ ಹೈದರಾಬಾದ್ ಕ್ಷೇತ್ರದಲ್ಲಿ ಬಿಜೆಪಿಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ, ತನ್ನ ನೇರ, ಕಠಿಣ ಮಾತುಗಳಿಂದ ಗಮನಸೆಳೆದಿದ್ದ ಹಿಂದುತ್ವವಾದದ ಪ್ರತಿಪಾದಕಿ ಕೆ.ಮಾಧವಿ ಲತಾ ಪರಾಭವಗೊಂಡಿದ್ದಾರೆ. ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಅವರು ಇವರ ವಿರುದ್ಧ ಒಟ್ಟು 3.38 ಲಕ್ಷ ಮತಗಳ ಅಂತರದಿಂದ ಜಯಗಳಿಸಿದ್ದಾರೆ.





ಭದ್ರಕೋಟೆಯಲ್ಲೇ ಕ್ಷೀಣಿಸಿತು ಕಮಲ ಪಾಳಯದ ಬಲ

ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಮಹಾರಾಷ್ಟ್ರದಲ್ಲಿ ಬಿಜೆಪಿಗೆ ಅನಿರೀಕ್ಷಿತ ಹಿನ್ನಡೆ

• ಮಹಮ್ಮದ್ ನೂಮಾನ್

ಸತತ ಮೂರನೇ ಬಾರಿ ಸ್ವಂತ ಬಲದಿಂದ ಅಧಿಕಾರದ ಗದ್ದುಗೆ ಏರುವ ಕನಸು ಕಂಡಿದ್ದ ಬಿಜೆಪಿಗೆ ಉತ್ತರ ಪ್ರದೇಶದಲ್ಲಿ ಅನಿರೀಕ್ಷಿತ ಹಿನ್ನಡೆ ಎದುರಾಗಿದ್ದು, ಸರ್ಕಾರ ರಚಿಸಲು ಮೈತ್ರಿಕೂಟದ ಇತರ ಪಕ್ಷಗಳ ನೆರವು ಅವಲಂಬಿಸಬೇಕಾಗಿದೆ.

ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೇರಲು ಹಿಂದಿ ಭಾಷಿಕ ರಾಜ್ಯಗಳಲ್ಲಿ ಬಿಜೆಪಿ ತೋರಲಿರುವ ಸಾಧನೆ ನಿರ್ಣಾಯಕ ಆಗಿತ್ತು. ಉತ್ತರ ಪ್ರದೇಶ ಅಲ್ಲದೆ ರಾಜಸ್ಥಾನದಲ್ಲೂ ಕಮಲ ಪಾಳಯ ಹಿನ್ನಡೆ ಅನುಭವಿಸಿದೆ. ಆದರೆ ಗುಜರಾತ್, ಮಧ್ಯಪ್ರದೇಶ, ದೆಹಲಿಯಲ್ಲಿ ಪ್ರಾಬಲ್ಯ ಮುಂದುವರಿದಿದೆ ಮತ್ತು ಬಿಹಾರದಲ್ಲಿ ಜೆಡಿಯು ಜತೆಗಿನ ಮೈತ್ರಿ ಫಲ ಕೊಟ್ಟಿದ್ದರಿಂದ ಎನ್‌ಡಿಎ, ಬಹುಮತದತ್ತ ಹೆಜ್ಜೆಯಿಟ್ಟಿದೆ.

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಆಗಿದ್ದಕ್ಕೆ ದೇಶದ ಜನರು ಸಂತಸಪಟ್ಟಿದ್ದರು. ಆದರೆ, ಆ ಸಂತಸ ಮತಗಳಾಗಿ ಪರಿವರ್ತನೆ ಆಗಲಿಲ್ಲ. ಅಯೋಧ್ಯೆ ನಗರವನ್ನು ಒಳಗೊಂಡಿರುವ ಫೈಜಾಬಾದ್ ಕ್ಷೇತ್ರದಲ್ಲಿ ಬಿಜೆಪಿ ಎಡವಿರುವುದೇ ಇದಕ್ಕೆ ಸಾಕ್ಷಿ.

'ಯೋಗಿ ಆದಿತ್ಯನಾಥ ಮಾದರಿ'ಯನ್ನು ಬಿಜೆಪಿಯು ದೇಶದ ಉದ್ದಗಲಕ್ಕೂ ಪ್ರಚಾರ ಮಾಡಿತ್ತು. ಆದರೆ 'ಯೋಗಿ ಮಾದರಿ'ಯನ್ನು ತಿರಸ್ಕರಿಸುವ ಸಂದೇಶವನ್ನು ಅಲ್ಲಿನ ಜನರು ಇಡೀ ದೇಶಕ್ಕೆ ರವಾನಿಸಿದ್ದಾರೆ. ಲೋಕಸಭಾ ಚುನಾವಣೆ ಬಳಿಕ ಮುಖ್ಯಮಂತ್ರಿ ಸ್ಥಾನದಿಂದ ಆದಿತ್ಯನಾಥ ಅವರನ್ನು ಕೆಳಗಿಳಿಸಲಾಗುತ್ತದೆ ಎಂಬ ಮಾತುಗಳು ಕೇಳಿಬಂದಿದ್ದವು. ಈಗಿನ ಫಲಿತಾಂಶವು ಆ ಕುರಿತ ಚರ್ಚೆಯ ಕಾವು ಹೆಚ್ಚಿಸುವ ಸಾಧ್ಯತೆಯಿದೆ.

ಅಖಿಲೇಶ್ ಯಾದವ್ ಅವರು ಅಭ್ಯರ್ಥಿಗಳ ಆಯ್ಕೆಯ ವೇಳೆ ನಡೆಸಿದ ತಂತ್ರಗಾರಿಕೆ ಎಸ್‌ಪಿಗೆ ಫಲ ನೀಡಿದೆ. ಜಾತಿ ಸಮೀಕರಣ ಸೇರಿದಂತೆ ಹಲವು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಟಿಕೆಟ್ ಹಂಚಿಕೆ ಮಾಡಿದ್ದರು. ಯಾದವ ಸಮುದಾಯ, ಮುಸ್ಲಿಮರು ಮತ್ತು ದಲಿತರ ಮತಗಳು ಹಂಚಿ ಹೋಗದೆ 'ಇಂಡಿಯಾ' ಮೈತ್ರಿಕೂಟದ ಅಭ್ಯರ್ಥಿಗಳ ಪರ ಬಿದ್ದಿವೆ. ಬಿಎಸ್‌ಪಿಯ ಮತಗಳೂ ಮೈತ್ರಿಕೂಟದ ಪರವಾಗಿ ಬಿದ್ದವು.

ಅಖಿಲೇಶ್ ಅವರು ತಮ್ಮ ಪಕ್ಷವು 'ಪಿಡಿಎ' ಅಂದರೆ, ಪಿಚ್ಡೆ (ಹಿಂದುಳಿದ), ದಲಿತ ಮತ್ತು ಅಲ್ಪಸಂಖ್ಯಾತರ ಪರವಾಗಿದೆ ಎಂದು ಹೇಳಿ ಪ್ರಚಾರ ಕೈಗೊಂಡಿದ್ದರು. ಅದು ಫಲ ನೀಡಿದೆ. ರಾಹುಲ್ ಗಾಂಧಿ ಮತ್ತು ಅಖಿಲೇಶ್ ಜತೆಯಾಗಿ ನಡೆಸಿದ ಪ್ರಚಾರ ಸಭೆಗಳೂ, ಬಿಜೆಪಿಯ ಲೆಕ್ಕಾಚಾರ ಬುಡಮೇಲುಗೊಳ್ಳಲು ಕಾರಣವಾದವು.

ಮುಂದುವರಿದ 'ಮಮತಾ' ಮ್ಯಾಜಿಕ್: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ನಡೆಸಿದ 'ವಿಭಜಕ ರಾಜಕಾರಣ'ವನ್ನು ಅಲ್ಲಿನ ಮತದಾರರು ಬಂಗಾಳ ಕೊಲ್ಲಿಗೆ ತಳ್ಳಿದ್ದಾರೆ. ಪ್ರಧಾನಿ ಮೋದಿ ಅವರು ಬಂಗಾಳದಲ್ಲಿ ನಡೆಸಿದ್ದ ಎಲ್ಲ ರ‍್ಯಾಲಿಗಳಲ್ಲಿ ಸಿಎಎ ಮತ್ತು 'ಒಳನುಸುಳುವಿಕೆ' ವಿಷಯ ಪ್ರಸ್ತಾಪ ಮಾಡಿದ್ದರು. ಸಂದೇಶ್‌ಖಾಲಿ ಘಟನೆಯನ್ನು ಮುಂದಿರಿಸಿ ಮಹಿಳೆಯರ ಮತಗಳನ್ನು ಸೆಳೆಯಲು ನಡೆಸಿದ ಪ್ರಯತ್ನವೂ ಯಶಸ್ಸು ಕಾಣಲಿಲ್ಲ. 35 ಸ್ಥಾನಗಳನ್ನು ಗೆಲ್ಲುವ ಗುರಿ ಇಟ್ಟುಕೊಂಡಿದ್ದ ಬಿಜೆಪಿ, ಬಹಳ ಪ್ರಯಾಸದಿಂದ ಎರಡಂಕಿ ತಲುಪಿದೆ. ಮಮತಾ ಬ್ಯಾನರ್ಜಿ ಅವರ 'ಮ್ಯಾಜಿಕ್' ಮುಂದುವರಿದಿದೆ.

ಬಿಜೆಪಿಯು ಮಹಾರಾಷ್ಟ್ರದಲ್ಲೂ ಹಿನ್ನಡೆ ನಿರೀಕ್ಷಿಸಿರಲಿಲ್ಲ. ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಮತ್ತು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ವಿರುದ್ಧ ಪ್ರಧಾನಿ ಮೋದಿ ಅವರು ವೈಯಕ್ತಿಕ ಟೀಕೆ ಮಾಡಿದ್ದು, ಮರಾಠರ ಭಾವನೆಗಳಿಗೆ ನೋವುಂಟು ಮಾಡಿದೆ ಎಂಬುದು ಚುನಾವಣೆಯ ಫಲಿತಾಂಶದಲ್ಲಿ ಪ್ರತಿಫಲಿಸಿದೆ.

ಆದರೆ ಮೋದಿ ಅವರ ತವರು ರಾಜ್ಯ ಗುಜರಾತ್, ಮಧ್ಯಪ್ರದೇಶ, ದೆಹಲಿ, ಉತ್ತರಾಖಂಡ ಮತ್ತು ಛತ್ತೀಸಗಡ ತನ್ನ ಭದ್ರಕೋಟೆ ಎಂಬುದನ್ನು ಬಿಜೆಪಿ ಮತ್ತೊಮ್ಮೆ ತೋರಿಸಿಕೊಟ್ಟಿದೆ. ಈ ರಾಜ್ಯಗಳಲ್ಲಿ ಅಚ್ಚರಿ ಉಂಟುಮಾಡಲು 'ಇಂಡಿಯಾ' ಮೈತ್ರಿಕೂಟಕ್ಕೆ ಆಗಲಿಲ್ಲ. ಚುನಾವಣೆ ಘೋಷಣೆಗೆ ಕೆಲವೇ ದಿನಗಳಿರುವಾಗ ಬಿಹಾರದಲ್ಲಿ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರನ್ನು ಎನ್‌ಡಿಎ ತೆಕ್ಕೆಗೆ ಸೆಳೆದುಕೊಂಡದ್ದು ಅಧಿಕಾರವನ್ನು ತನ್ನ ಕೈಯಲ್ಲೇ ಇರಿಸಿಕೊಳ್ಳಲು ಬಿಜೆಪಿಗೆ ನೆರವಾಗಿದೆ.



ನವದೆಹಲಿಯಲ್ಲಿರುವ ಪಕ್ಷದ ಕೇಂದ್ರ ಕಚೇರಿಗೆ ಬಂದ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಅವರಿಗೆ ಕಾರ್ಯಕರ್ತರು ಭರ್ಜರಿ ಸ್ವಾಗತ ಕೋರಿದರು – ಪಿಟಿಐ ಚಿತ್ರ

ಅಯೋಧ್ಯೆ ರಾಮಮಂದಿರ ನಿರ್ಮಾಣವು ಈ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಬಿಜೆಪಿ ಪರವಾಗಿ ಕೆಲಸ ಮಾಡಬಹುದು ಎಂದು ಭಾವಿಸಲಾಗಿತ್ತು. ಆದರೆ ಆ ನಿರೀಕ್ಷೆ ಹುಸಿಯಾಗಿದೆ. ಅಯೋಧ್ಯೆ ನಗರವನ್ನು ಒಳಗೊಂಡಿರುವ ಫೈಜಾಬಾದ್ ಕ್ಷೇತ್ರದಲ್ಲಿ ಬಿಜೆಪಿ ಎಡವಿರುವುದೇ ಇದಕ್ಕೆ ಸಾಕ್ಷಿ

ಫೈಜಾಬಾದ್: ಬಿಜೆಪಿ ಅಭ್ಯರ್ಥಿಗೆ ಸೋಲು

ಅಯೋಧ್ಯೆ ಜಿಲ್ಲೆಯನ್ನು ಒಳಗೊಂಡಿರುವ ಉತ್ತರ ಪ್ರದೇಶದ ಫೈಜಾಬಾದ್ ಕ್ಷೇತ್ರದಲ್ಲೇ ಬಿಜೆಪಿಗೆ ಅನಿರೀಕ್ಷಿತ ಅಘಾತ ಅನುಭವಿಸಿದೆ. ಬಿಜೆಪಿ ಅಭ್ಯರ್ಥಿ ಲಲ್ಲು ಸಿಂಗ್ ಅವರು ಸಮಾಜವಾದಿ ಪಕ್ಷದ ಅಭ್ಯರ್ಥಿ ಅವಧೇಶ್ ಸಿಂಗ್ ಅವರೆದುರು ಸೋತಿದ್ದಾರೆ. ರಾಮಮಂದಿರ ನಿರ್ಮಾಣ ಮತ್ತು ಈ ವರ್ಷದ ಆರಂಭದಲ್ಲಿ ನಡೆದ ಬಾಲರಾಮನ ಮೂರ್ತಿ ಪ್ರಾಣ ಪ್ರತಿಷ್ಠಾಪನೆಯ ಅದ್ಧೂರಿ ಸಮಾರಂಭದ ಹೊರತಾಗಿಯೂ ಅಲ್ಲಿಯ ಮತದಾರರು ಬಿಜೆಪಿ ಕೈ ಹಿಡಿಯದೇ ಇದ್ದದ್ದು ಈ ಬಾರಿಯ ಚುನಾವಣೆಯ ಅಚ್ಚರಿಗಳಲ್ಲಿ ಒಂದು.

ಸ್ಮೃತಿ ಓಟಕ್ಕೆ ಶರ್ಮ ತಡೆ

ಉತ್ತರ ಪ್ರದೇಶದ ಅಮೇಠಿ ಕ್ಷೇತ್ರವು 2014ರ ಲೋಕಸಭಾ ಚುನಾವಣೆವರೆಗೂ ಕಾಂಗ್ರೆಸ್ ಭದ್ರಕೋಟೆಯಾಗಿತ್ತು.



2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನಾಯಕಿ ಸ್ಮೃತಿ ಇರಾನಿ ಅವರು ಕಾಂಗ್ರೆಸ್ ಅಭ್ಯರ್ಥಿ ರಾಹುಲ್ ಗಾಂಧಿ ಅವರನ್ನು ಸೋಲಿಸುವ ಮೂಲಕ ಇತಿಹಾಸ ಸೃಷ್ಟಿಸಿದ್ದರು. ಈ ಬಾರಿಯೂ ರಾಹುಲ್ ಮತ್ತು ಸ್ಮೃತಿ ನಡುವೆ ಪೈಪೋಟಿ ನಡೆಯಲಿದೆ ಎಂದೇ ಅಂದಾಜಿಸಲಾಗಿತ್ತು. ಆದರೆ ಅಚ್ಚರಿ ಎಂಬಂತೆ ಕಾಂಗ್ರೆಸ್ ತನ್ನ ಹಿರಿಯ ಮುಖಂಡ ಕಿಶೋರಿ ಲಾಲ್ ಶರ್ಮ ಅವರನ್ನು ಕಣಕ್ಕಿಳಿಸಿತ್ತು. ಸ್ಮೃತಿ ಎದುರು ಅವರು ಗೆಲುವು ದಾಖಲಿಸಿದ್ದಾರೆ.

'ಕೈ'ಯೊಳಗೆ ಉಳಿದ ರಾಯಬರೇಲಿ

2019ರ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಗೆದ್ದಿದ್ದ ಏಕೈಕ ಕ್ಷೇತ್ರ ರಾಯಬರೇಲಿ. ಕಾಂಗ್ರೆಸ್‌ನ ಭದ್ರಕೋಟೆ ಎಂದೇ ಕರೆಸಿಕೊಳ್ಳುವ ರಾಯಬರೇಲಿ ಕ್ಷೇತ್ರಕ್ಕೆ ಕಾಂಗ್ರೆಸ್ ಈ ಬಾರಿ ಕಡೆಯ ಕ್ಷಣಗಳವರೆಗೂ ಅಭ್ಯರ್ಥಿ ಘೋಷಿಸಿರಲಿಲ್ಲ.

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಆ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ ಎಂದು ಖಚಿತಪಟ್ಟ ಬಳಿಕ ಅಭ್ಯರ್ಥಿ ಆಯ್ಕೆ ಕುರಿತು ಮತ್ತಷ್ಟು ಊಹಾಪೋಹಗಳು ಗರಿಗೆದರಿದ್ದವು. ಅಮೇಠಿ ಕ್ಷೇತ್ರವನ್ನು ತೊರೆದು ರಾಹುಲ್ ಗಾಂಧಿ ರಾಯಬರೇಲಿ ಯಿಂದ ಸ್ಪರ್ಧಿಸಿದರು. ಬಿಜೆಪಿ ಅಭ್ಯರ್ಥಿ ದಿನೇಶ್ ಪ್ರತಾಪ್ ಸಿಂಗ್ ವಿರುದ್ಧ ರಾಹುಲ್ 3,89,341 ಮತಗಳಿಂದ ಗೆಲುವು ಸಾಧಿಸಿದ್ದಾರೆ.

ಕಂಗನಾ ರನೌತ್, ಪಠಾಣ್‌ಗೆ ಗೆಲುವು; ಪವನ್ ಸಿಂಗ್ ಪರಾಭವ

ಕ್ರೀಡೆ, ಸಿನಿಮಾ ಒಳಗೊಂಡಂತೆ ಬೇರೆ ಕ್ಷೇತ್ರಗಳಲ್ಲಿದ್ದ ಹಲವರು ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಅವರಲ್ಲಿ ಕೆಲವರು ಗೆದ್ದರೆ, ಕೆಲವರು ಸೋತಿದ್ದಾರೆ

ಅರುಣ್ ಗೋವಿಲ್



1997 ಮತ್ತು 1988ರ ಅವಧಿಯಲ್ಲಿ ದೂರದರ್ಶನದಲ್ಲಿ ಪ್ರಸಾರವಾಗಿದ್ದ ಜನಪ್ರಿಯ 'ರಾಮಾಯಣ' ಧಾರಾವಾಹಿಯ ಶ್ರೀರಾಮ ಪಾತ್ರಧಾರಿ ಅರುಣ್ ಗೋವಿಲ್ ಅವರು ಉತ್ತರ ಪ್ರದೇಶದ ಮೀರತ್ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಸಮಾಜವಾದಿ ಪಕ್ಷದ ಸುನಿತಾ ವರ್ಮಾ ಅವರೆದುರು ಗೆದ್ದಿದ್ದಾರೆ.

ಯೂಸುಫ್ ಪಠಾಣ್

ಪಶ್ಚಿಮ ಬಂಗಾಳದ ಬಹರಾಮ್‌ಪುರ ಕ್ಷೇತ್ರದಿಂದ ಕಣಕ್ಕಿಳಿದಿರುವ ಮಾಜಿ ಕ್ರಿಕೆಟಿಗ ಯೂಸುಫ್ ಪಠಾಣ್ ಕಾಂಗ್ರೆಸ್‌ನ ಅಧೀರ್ ರಂಜನ್ ಚೌಧರಿ ವಿರುದ್ಧ ಗೆಲುವು ದಾಖಲಿಸಿದ್ದಾರೆ.

ಪವನ್ ಸಿಂಗ್



ಬೋಜಪುರಿಯ ಜನಪ್ರಿಯ ನಟ ಪವನ್ ಸಿಂಗ್ ಅವರು ಈ ಬಾರಿಯ ಚುನಾವಣೆಯಲ್ಲಿ ಕರಾಟಕ್ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಬಿಜೆಪಿಯಿಂದ ಮಾಜಿ ಕೇಂದ್ರ ಸಚಿವ ಉಪೇಂದ್ರ ಕುಶ್ವಾಹ ಮತ್ತು ಸಿಪಿಎಂನ (ಇಂಡಿಯಾ ಒಕ್ಕೂಟದ ಸದಸ್ಯಪಕ್ಷ) ರಾಜಾರಾಮ್ ಸಿಂಗ್ ಅವರು ಅಂತಹ ರಾಜಕೀಯ ಪ್ರಮುಖರು ಕಣದಲ್ಲಿದ್ದ ಕ್ಷೇತ್ರದಲ್ಲಿ ಪವನ್ ಸೋತಿದ್ದಾರೆ.

ಕಂಗನಾ ರನೌತ್

ಬಾಲಿವುಡ್ ನಟಿ ಕಂಗನಾ ರನೌತ್ ಅವರು ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರ ಕಡು ಬೆಂಬಲಿಗರಾಗಿದ್ದ ಇವರು ಈ ವರ್ಷದ ಆರಂಭದಲ್ಲಿ ಬಿಜೆಪಿ ಸೇರ್ಪಡೆಯಾಗಿದ್ದರು. ಆ ಬೆನ್ನಲ್ಲೇ ಅವರಿಗೆ ಚುನಾವಣಾ ಟಿಕೆಟ್ ಕೂಡಾ ಘೋಷಿಸಲಾಯಿತು. ಕಾಂಗ್ರೆಸ್ ಭದ್ರಕೋಟೆಯಾಗಿದ್ದ ಈ ಕ್ಷೇತ್ರದಲ್ಲಿ ಅವರು ಕಾಂಗ್ರೆಸ್ ಅಭ್ಯರ್ಥಿ ವಿಕ್ರಮಾದಿತ್ಯ ಸಿಂಗ್ ಅವರನ್ನು ಮಣಿಸಿದ್ದಾರೆ.

ಸಿಖ್ ಬೋಧಕ ಅಮೃತ್‌ಪಾಲ್‌ಗೆ ಜಯ

ಚಂಡೀಗಢ (ಪಿಟಿಐ): ಪ್ರತ್ಯೇಕತಾವಾದಿ ಚಳವಳಿಯ ನಾಯಕ ಮತ್ತು ಸಿಖ್ ಬೋಧಕ ಅಮೃತ್‌ಪಾಲ್ ಸಿಂಗ್ ಮತ್ತು ಪ್ರಧಾನಿ ಇಂದಿರಾ ಗಾಂಧಿ ಹಂತಕರಲ್ಲಿ ಒಬ್ಬನ ಮಗ ಸರಬ್ಜೀತ್ ಸಿಂಗ್ ಖಾಲ್ಸಾ ಲೋಕಸಭಾ ಚುನಾವಣೆಯಲ್ಲಿ ಜಯ ಗಳಿಸಿದ್ದು, ಸಂಸತ್ ಪ್ರವೇಶಕ್ಕೆ ಸಿದ್ಧರಾಗಿದ್ದಾರೆ.

ಪಂಜಾಬ್‌ನ ಖದೂರ್ ಸಾಹಿಬ್ ಕ್ಷೇತ್ರದಿಂದ ಅಮೃತ್ ಪಾಲ್ ಸಿಂಗ್, ಫರೀದ್‌ಕೋಟ್ ಕ್ಷೇತ್ರದಿಂದ ಸರಬ್ಜೀತ್ ಸಿಂಗ್ ಖಾಲ್ಸಾ ಅವರು ಪಕ್ಷೇತರರಾಗಿ ಕಣಕ್ಕಿಳಿದಿದ್ದರು. ಅಮೃತ್ ಪಾಲ್ ಅವರು ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಕುಲ್ಬೀರ್ ಸಿಂಗ್ ಝಿರಾ ಅವರನ್ನು 1.97 ಲಕ್ಷ ಮತಗಳಿಂದ ಸೋಲಿಸಿದ್ದಾರೆ.



ಅಮೃತ್‌ಪಾಲ್ ಸಿಂಗ್

ಸರಬ್ಜೀತ್ ಅವರು ಎಎಪಿಯ ಕರಮ್‌ಜಿತ್‌ಸಿಂಗ್‌ಅನ್ಮೋಲ್‌ಅವರವಿರುದ್ಧ 70,000ಕ್ಕೂ ಹೆಚ್ಚು ಮತಗಳ ಅಂತರದಿಂದ ಜಯಗಳಿಸಿದ್ದಾರೆ.

ತಗ್ಗಿದ ಮೋದಿ ಗೆಲುವಿನ ಅಂತರ

ಲಖನೌ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ, ವಾರಾಣಸಿ ಕ್ಷೇತ್ರದಿಂದ ಸತತ ಮೂರನೇ ಬಾರಿ ಆಯ್ಕೆಯಾದರು. ಅವರು 1.52 ಲಕ್ಷ ಮತಗಳ ಅಂತರದಿಂದ ಕಾಂಗ್ರೆಸ್‌ನ ಅಜಯ್ ರಾಯ್ ಅವರನ್ನು ಮಣಿಸಿದರು.

ಕಳೆದ ಎರಡು ಚುನಾವಣೆಗಳಿಗೆ ಹೋಲಿಸಿದರೆ ಮೋದಿ ಅವರ ಗೆಲುವಿನ ಅಂತರ ತಗ್ಗಿದೆ. 2019 ರಲ್ಲಿ ಅವರು ರಾಯ್ ವಿರುದ್ಧ 4.79 ಲಕ್ಷ ಮತಗಳ ಅಂತರದಿಂದ ಗೆದ್ದಿದ್ದರು. 2014ರಲ್ಲಿ ಅರವಿಂದ ಕೇಜ್ರಿವಾಲ್ ಅವರನ್ನು 3.71 ಲಕ್ಷ ಮತಗಳಿಂದ ಮಣಿಸಿದ್ದರು.

ಈ ಬಾರಿ ಮೋದಿ ಅವರು ದಾಖಲೆ ಅಂತರದಿಂದ ಗೆಲ್ಲಲಿದ್ದಾರೆ ಎಂದು ಬಿಜೆಪಿ ಮುಖಂಡರು ವಿಶ್ವಾಸ ವ್ಯಕ್ತಪಡಿಸಿದ್ದರು.

ಪ್ರಮುಖ ರಾಜ್ಯಗಳ ಫಲಿತಾಂಶ

ಬಿಜೆಪಿಗೆ ಭಾರಿ ಹಿನ್ನಡೆ



ಬಿಜೆಪಿಯು ಉತ್ತರ ಪ್ರದೇಶದ ಮೇಲೆ ಹೊಂದಿದ್ದ ಆಧಿಪತ್ಯಕ್ಕೆ ಈ ಚುನಾವಣೆಯಲ್ಲಿ ತೆರೆಬಿದ್ದಿದೆ. ಅತಿಹೆಚ್ಚು ಅಂದರೆ 80 ಸದಸ್ಯರನ್ನು ಲೋಕಸಭೆಗೆ ಕಳುಹಿಸುವ ಈ ರಾಜ್ಯವು, ಕೇಂದ್ರದಲ್ಲಿ ಅಧಿಕಾರ ಹಿಡಿಯುವವರು ಯಾರು ಎಂಬುದನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾ ಬಂದಿದೆ.

2014 ಮತ್ತು 2019 ರಲ್ಲಿ ಬಿಜೆಪಿ ಇಲ್ಲಿ ಕ್ರಮವಾಗಿ 71 ಮತ್ತು 62 ಸ್ಥಾನಗಳನ್ನು ಜಯಿಸಿತ್ತು. ಇದರಿಂದ ಪಕ್ಷಕ್ಕೆ ಏಕಾಂಗಿಯಾಗಿ 272 ಸ್ಥಾನಗಳ ಗಡಿ ದಾಟಲು ಸಾಧ್ಯವಾಗಿತ್ತು. ಆದರೆ ಈ ಬಾರಿ ಪಕ್ಷ 33 ಸ್ಥಾನಗಳಲ್ಲಿ ಮಾತ್ರ ಗೆದ್ದಿದೆ. ಅಖಿಲೇಶ್ ಯಾದವ್ ನೇತೃತ್ವದ ಎಸ್‌ಪಿ ಮತ್ತು ಕಾಂಗ್ರೆಸ್ ನಡುವಣ ಮೈತ್ರಿ ಫಲಿಸಿದೆ. ಬಿಜೆಪಿಗೆ ದೊಡ್ಡ ಹೊಡೆತ ನೀಡಿರುವ ಎಸ್‌ಪಿ, 37 ಸ್ಥಾನಗಳಲ್ಲಿ ಗೆದ್ದಿದೆ. ಕಳೆದ ಸಲ ಪಕ್ಷವು ಕೇವಲ ಐದು ಸ್ಥಾನಗಳನ್ನು ಗೆದ್ದುಕೊಂಡಿತ್ತು. 2019 ರಲ್ಲಿ ಕೇವಲ ಒಂದು ಸ್ಥಾನ ಗಳಿಸಿದ್ದ ಕಾಂಗ್ರೆಸ್, ಈ ಬಾರಿ ಆರು ಸ್ಥಾನಗಳನ್ನು ಗೆದ್ದು ತನ್ನ ಶಕ್ತಿ ವೃದ್ಧಿಸಿಕೊಂಡಿದೆ.

ಆಗೊಮ್ಮೆ, ಈಗೊಮ್ಮೆ ಅಚ್ಚರಿಯ ಫಲಿತಾಂಶ ನೀಡುವ ಬಿಎಸ್‌ಪಿ ಈ ಬಾರಿ 'ಸೊನ್ನೆ' ಸುತ್ತಿದೆ. ಮಾಯಾವತಿ ನೇತೃತ್ವದ ಪಕ್ಷ ಕಳೆದ ಚುನಾವಣೆಯಲ್ಲಿ 10 ಸ್ಥಾನಗಳನ್ನು ಗೆದ್ದುಕೊಂಡಿತ್ತು.

ಎನ್‌ಡಿಎಗೆ ಮುಖಭಂಗ, ಕಾಂಗ್ರೆಸ್‌ಗೆ ಹೆಚ್ಚು ಸ್ಥಾನ



ಶಿವಸೇನಾ ಮತ್ತು ಎನ್‌ಸಿಪಿ ಇಬ್ಭಾಗವಾಗಿರುವ ಮಹಾರಾಷ್ಟ್ರದಲ್ಲಿ ಲೋಕಸಭಾ ಚುನಾವಣೆಯಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸಬಹುದೆಂಬ ನಿರೀಕ್ಷೆ ಇಟ್ಟುಕೊಂಡಿದ್ದ ಎನ್‌ಡಿಎ ಮೈತ್ರಿಕೂಟಕ್ಕೆ ಈ ಬಾರಿಯ ಚುನಾವಣಾ ಫಲಿತಾಂಶವು ತೀವ್ರ ಹೊಡೆತ ನೀಡಿದೆ. ಬಿಜೆಪಿ ನೇತೃತ್ವದ 'ಮಹಾಯುತಿ' ಒಕ್ಕೂಟವು ಕೇವಲ 11 ಕ್ಷೇತ್ರಗಳಲ್ಲಷ್ಟೇ ಗೆದ್ದಿದೆ. ಮಹಾ ವಿಕಾಸ್ ಆಘಾಡಿಯು 29 ಸ್ಥಾನಗಳಲ್ಲಿ ಜಯಭೇರಿ ಭಾರಿಸಿದೆ.

ಕಾಂಗ್ರೆಸ್ ಅಭ್ಯರ್ಥಿಗಳು 13 ಕ್ಷೇತ್ರಗಳಲ್ಲಿ, ಶಿವಸೇನಾ ಉದ್ಧವ್ ಠಾಕ್ರೆ ಬಣದ ಅಭ್ಯರ್ಥಿಗಳು 9 ಕ್ಷೇತ್ರಗಳಲ್ಲಿ ಹಾಗೂ ಎನ್‌ಸಿಪಿ ಶರದ್ ಪವಾರ್ ಬಣದ ಅಭ್ಯರ್ಥಿಗಳು 7 ಕ್ಷೇತ್ರಗಳಲ್ಲಿ ಗೆದ್ದಿದ್ದಾರೆ. ಬಿಜೆಪಿ ಜೊತೆ ಕೈಜೋಡಿಸಿ ಸರ್ಕಾರ ರಚಿಸಿದ್ದ ಶಿವಸೇನಾ ಏಕನಾಥ ಶಿಂದೆ ಬಣದ ಹಾಗೂ ಎನ್‌ಸಿಪಿ ಅಜಿತ್ ಪವಾರ್ ಬಣಗಳ ಅಭ್ಯರ್ಥಿಗಳು ಮುಗ್ಗರಿಸುವ ಮೂಲಕ 'ಮುಹಾಯುತಿ' ಒಕ್ಕೂಟಕ್ಕೆ ಭಾರಿ ಮುಖಭಂಗವಾಗಿದೆ. 'ಮಹಾ ವಿಕಾಸ್ ಆಘಾಡಿ' ಸರ್ಕಾರವನ್ನು ಬೀಳಿಸಿ ಶಿಂದೆ ಮತ್ತು ಅಜಿತ್ ಪವಾರ್ ನೆರವಿನಿಂದ ಸರ್ಕಾರ ರಚಿಸಿಯೂ ಮಹಾರಾಷ್ಟ್ರದಲ್ಲಿ ಬಿಜೆಪಿಗೆ ಯಾವುದೇ ಲಾಭವಾಗಿಲ್ಲ. 2019ರ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು 41 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು.

ಎನ್‌ಡಿಎ ಕೈಬಿಡದ ಮತದಾರ



ಬಿಹಾರದಲ್ಲಿ ಎನ್‌ಡಿಎ ಒಕ್ಕೂಟವು ಉತ್ತಮ ಸಾಧನೆ ಮಾಡುವ ಮೂಲಕ 'ಇಂಡಿಯಾ' ಒಕ್ಕೂಟಕ್ಕೆ ಏಟು ನೀಡಿದೆ. ಚುನಾವಣೆಗೂ ಮುನ್ನ ಜೆಡಿಯು ಪಕ್ಷವನ್ನು ಎನ್‌ಡಿಎ ಒಕ್ಕೂಟಕ್ಕೆ ಸೆಳೆದುಕೊಂಡಿರುವುದು ಬಿಜೆಪಿಗೆ ಆಸರೆಯಾಗಿದೆ. ಜೆಡಿಯು 12 ಕ್ಷೇತ್ರದಲ್ಲಿ ಹಾಗೂ ಬಿಜೆಪಿ 12 ಕ್ಷೇತ್ರದಲ್ಲಿ ಗೆದ್ದಿದೆ. ಕಾಂಗ್ರೆಸ್ 3 ಕ್ಷೇತ್ರಗಳಲ್ಲಿ ಹಾಗೂ ಆರ್‌ಜೆಡಿ 4 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ.

2019ರ ಚುನಾವಣೆಯಲ್ಲಿ ಎನ್‌ಡಿಎ ಒಕ್ಕೂಟವು 39 ಸ್ಥಾನಗಳನ್ನು ಗೆದ್ದಿತ್ತು. ಕಳೆದ ಚುನಾವಣೆಯಲ್ಲಿ ಎನ್‌ಡಿಎ ಒಕ್ಕೂಟದಲ್ಲಿದ್ದು ಚುನಾವಣೆ ಎದುರಿಸಿದ್ದ ಜೆಡಿಯು ಬಳಿಕ ಒಕ್ಕೂಟವನ್ನು ತೊರೆದು ಆರ್‌ಜೆಡಿ ಜೊತೆ ಕೈಜೋಡಿಸಿ ರಾಜ್ಯದಲ್ಲಿ ಅಧಿಕಾರಕ್ಕೇರಿತ್ತು. ಈ ಬಾರಿ ಲೋಕಸಭಾ ಚುನಾವಣೆಯು ಹತ್ತಿರ ಬರುತ್ತಿದ್ದಂತೆ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದ ಬಿಜೆಪಿ ಮುಖಂಡರು ಜೆಡಿಯುಅನ್ನು ಮತ್ತೆ ಎನ್‌ಡಿಎಗೆ ಸೇರಿಸಿದ್ದರು. ಇದರಿಂದ ಎನ್‌ಡಿಎಗೆ ಬಹುಮತದ ಸಂಖ್ಯೆ ದಾಟಲು ಅನುಕೂಲವಾಗಿದೆ. ನಿತೀಶ್ ಅವರು ಪದೇ ಪದೇ ಒಕ್ಕೂಟ ಬದಲಿಸುತ್ತಿರುವುದರಿಂದ ಮತದಾರರು ಆರ್‌ಜೆಡಿ ಮತ್ತು ಕಾಂಗ್ರೆಸ್ ಕೈ ಹಿಡಿಯಬಹುದೆಂದು ಈ ಎರಡು ಪಕ್ಷಗಳ ನಾಯಕರು ವಿಶ್ವಾಸ ವ್ಯಕ್ತಪಡಿಸಿದ್ದರು. ಆದರೆ ಅವರ ನಿರೀಕ್ಷೆ ಹುಸಿಯಾಗಿದೆ. ಕಳೆದ ಬಾರಿಯ ಚುನಾವಣೆಗೆ ಹೋಲಿಸಿದರೆ ಈ ಬಾರಿ ಕಾಂಗ್ರೆಸ್ ಮತ್ತು ಆರ್‌ಜೆಡಿ ಒಳಗೊಂಡಿರುವ 'ಇಂಡಿಯಾ' ಒಕ್ಕೂಟವು ಉತ್ತಮ ಸಾಧನೆಯನ್ನೇ ಮಾಡಿದೆ. ಬಿಹಾರದಲ್ಲಿ ಈ ಬಾರಿ ಶೇ 56.19 ರಷ್ಟು ಮತದಾನವಾಗಿತ್ತು.

ಮುಂದುವರಿದ ಬಿಜೆಪಿ ಪ್ರಾಬಲ್ಯ



ಮಧ್ಯಪ್ರದೇಶದ ಎಲ್ಲ 29 ಕ್ಷೇತ್ರಗಳನ್ನು ಗೆಲ್ಲುವ ಮೂಲಕ ಆಡಳಿತಾರೂಢ ಬಿಜೆಪಿ ಪ್ರಾಬಲ್ಯ ಮೆರೆದಿದೆ. ಹಿಂದಿನ ಎರಡು ಅವಧಿಗಳಲ್ಲಿಯೂ ಬಿಜೆಪಿ ಅತಿ ಹೆಚ್ಚು ಸ್ಥಾನಗಳನ್ನು ಪಡೆದಿತ್ತು.

ಆಲ್‌ಇಂಡಿಯಾ ಫಾರ್ವರ್ಡ್ ಬ್ಲಾಕ್‌ಗೆ ಒಂದು ಕ್ಷೇತ್ರವನ್ನು ಬಿಟ್ಟುಕೊಟ್ಟಿದ್ದ ಕಾಂಗ್ರೆಸ್, 28 ಸ್ಥಾನಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿತ್ತು. ಆದರೆ ಕೊನೆ ಕ್ಷಣದಲ್ಲಿ ಅಭ್ಯರ್ಥಿಯೊಬ್ಬರು ಬಿಜೆಪಿಗೆ ಪಕ್ಷಾಂತರವಾದ ಕಾರಣ ಕಾಂಗ್ರೆಸ್, 27 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು.

2014 ಮತ್ತು 2019ರ ಚುನಾವಣೆಯಲ್ಲಿ ಬಿಜೆಪಿ ಕ್ರಮವಾಗಿ 27 ಹಾಗೂ 28 ಸ್ಥಾನಗಳನ್ನು ಗೆದ್ದಿತ್ತು. ಕಾಂಗ್ರೆಸ್ ಕ್ರಮವಾಗಿ 2 ಮತ್ತು 1 ಸ್ಥಾನ ಗಳಿಸಿತ್ತು. ಇದ್ದ ಒಂದು ಕ್ಷೇತ್ರವನ್ನು ಕಾಂಗ್ರೆಸ್ ಕಳೆದುಕೊಂಡಿದೆ. ಕೆಲ ತಿಂಗಳ ಹಿಂದೆಯಷ್ಟೆ ನಡೆದಿದ್ದ ವಿಧಾನಸಭೆ ಚುನಾವಣೆಯಲ್ಲಿ ಬಹುಮತ ಪಡೆದು ಮತ್ತೊಮ್ಮೆ ಅಧಿಕಾರಕ್ಕೆ ಏರಿದ್ದ ಬಿಜೆಪಿ ವರ್ಚಸ್ಸು ರಾಜ್ಯದಲ್ಲಿ ಮತ್ತಷ್ಟು ಹೆಚ್ಚಾಗಿದೆ.

ವಿದಿಶಾ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಎದುರಾಳಿ ಪ್ರತಾಪ್ ಬಾನು ಶರ್ಮ ಅವರನ್ನು ಮಣಿಸಿದ್ದಾರೆ. ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಗುನಾ ಕ್ಷೇತ್ರದಿಂದ ಸ್ಪರ್ಧಿಸಿ, ಗೆಲುವಿನ ನಗೆ ಬೀರಿದ್ದಾರೆ.

ಕಾಂಗ್ರೆಸ್‌ನ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಅವರು (ರಾಜಗಢ ಕ್ಷೇತ್ರ) ಪರಾಭವಗೊಂಡಿದ್ದಾರೆ. ಮಾಜಿ ಮುಖ್ಯಮಂತ್ರಿ ಕಮಲ್‌ನಾಥ್ ಪುತ್ರ, ಸಂಸದ ನಕುಲ್ ಕಮಲ್‌ನಾಥ್ ಸೋಲುಂಡಿದ್ದಾರೆ.

ದಶಕದ ಬಳಿಕ ಖಾತೆ ತೆರೆದ ಕಾಂಗ್ರೆಸ್



ಕಳೆದ ಎರಡು ಚುನಾವಣೆಗಳಲ್ಲಿ ಗುಜರಾತ್‌ನಲ್ಲಿ ಖಾತೆ ತೆರೆಯಲು ವಿಫಲವಾಗಿದ್ದ ಕಾಂಗ್ರೆಸ್, ಈ ಬಾರಿ ಒಂದು ಸ್ಥಾನ ಗೆಲ್ಲುವಲ್ಲಿ ಯಶಸ್ವಿಯಾಗಿದೆ. 10 ವರ್ಷಗಳ ಬಳಿಕ ಖಾತೆ ತೆರೆಯಿತಲ್ಲದೆ, ಬಿಜೆಪಿಯ 'ಹ್ಯಾಟ್ರಿಕ್ ಕ್ಲೀನ್‌ಸ್ವೀಪ್' ಸಾಧನೆಗೆ ತಡೆಯೊಡ್ಡಿದೆ. 2014, 2019 ರಲ್ಲಿ ಎಲ್ಲ 26 ಸ್ಥಾನಗಳನ್ನು ಜಯಿಸಿದ್ದ ಬಿಜೆಪಿ ಈ ಬಾರಿ 25 ಸ್ಥಾನ ಗೆದ್ದುಕೊಂಡಿದೆ.

ಉತ್ತರ ಗುಜರಾತ್‌ನ ಬನಾಸಕಾಂಠಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಗನೀಬೆನ್ ಠಾಕೂರ್ ಅವರು 33 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಬಿಜೆಪಿಯ ರೇಖಾಬೆನ್ ಚೌಧರಿ ಅವರನ್ನು ಮಣಿಸಿದರು.

ಪಠಾಣ್ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಭರತ್‌ಸಿಂಹ ಅವರು ಬಿಜೆಪಿಯ ಚಂದನ್ ಠಾಕೂರ್‌ಗೆ ತಕ್ಕ ಪೈಪೋಟಿ ನೀಡಿದರೂ, ಅಂತಿಮವಾಗಿ 30 ಸಾವಿರದಷ್ಟು ಮತಗಳಿಂದ ಪರಾಭವಗೊಂಡರು. ಇತರ ಕ್ಷೇತ್ರಗಳಲ್ಲಿ ಬಿಜೆಪಿಗೆ ಸರಿಸಾಟಿಯಾಗಿ ನಿಲ್ಲಲು ಕಾಂಗ್ರೆಸ್‌ಗೆ ಸಾಧ್ಯವಾಗಲಿಲ್ಲ.

ಚುನಾವಣೆಯ ಅವಧಿಯಲ್ಲಿ ಕೇಂದ್ರ ಸಚಿವ ಪರಷೋತ್ತಮ್ ರೂಪಾಲಾ ಅವರು ನೀಡಿದ್ದ ಹೇಳಿಕೆ ವಿರೋಧಿಸಿ ರಜಪೂತ ಸಮುದಾಯದವರು ಬಿಜೆಪಿ ವಿರುದ್ಧ ಪ್ರತಿಭಟನೆ ನಡೆಸಿದ್ದರು. ರೂಪಾಲಾ ಕ್ಷಮೆಯಾಚಿಸಿದ್ದರೂ, ರಜಪೂತರ ಕೋಪ ತಣಿದಿರಲಿಲ್ಲ. ಬನಾಸಕಾಂಠಾ ಮತ್ತು ಪಠಾಣ್ ಕ್ಷೇತ್ರಗಳಲ್ಲಿ ರಜಪೂತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಆಡಳಿತಾರೂಢ ಬಿಜೆಪಿಗೆ ಜಯಭೇರಿ



ಛತ್ತೀಸಗಢದಲ್ಲಿ ಆಡಳಿತಾರೂಢ ಬಿಜೆಪಿಯು 10 ಲೋಕಸಭಾ ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದೆ. ಕಾಂಗ್ರೆಸ್ ಪಕ್ಷವು ಒಂದು ಕ್ಷೇತ್ರದಲ್ಲಷ್ಟೇ ಗೆಲುವು ಸಾಧಿಸಿದೆ. 2019ರ ಚುನಾವಣೆಯಲ್ಲಿ ಬಿಜೆಪಿಯು 9 ಕ್ಷೇತ್ರಗಳಲ್ಲಿ ಹಾಗೂ ಕಾಂಗ್ರೆಸ್ ಎರಡು ಕ್ಷೇತ್ರಗಳಲ್ಲಿ ಗೆದ್ದಿತ್ತು.

ಕಳೆದ ಚುನಾವಣೆಗೆ ಹೋಲಿಸಿದರೆ ಈ ಬಾರಿ ಕಾಂಗ್ರೆಸ್ ಕಳಪೆ ಸಾಧನೆ ಮಾಡಿದೆ.

ಕಾಂಗ್ರೆಸ್ ಪಕ್ಷವು ಈ ಬಾರಿ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಅವರನ್ನು ರಾಜನಂದಗಾಂವ್ ಕ್ಷೇತ್ರದಿಂದ ಕಣಕ್ಕಿಳಿಸಿತ್ತು. ಅವರು ಬಿಜೆಪಿ ಅಭ್ಯರ್ಥಿ ಸಂತೋಷ್ ಪಾಂಡೆ ಎದುರು ಮುಗ್ಗರಿಸಿದ್ದಾರೆ. ಸಂತೋಷ್ ಪಾಂಡೆ ಅವರು ಕಳೆದ ಚುನಾವಣೆಯಲ್ಲೂ ಇಲ್ಲಿಂದ ಗೆದ್ದಿದ್ದರು. ಇವರನ್ನು ಮಣಿಸುವ ಉದ್ದೇಶದಿಂದಲೇ ಕಾಂಗ್ರೆಸ್, ಬಘೆಲ್ ಅವರನ್ನು ಕಣಕ್ಕಿಳಿಸಿತ್ತು ಮತ್ತು ಗೆಲ್ಲುವ ನಿರೀಕ್ಷೆ ಇರಿಸಿಕೊಂಡಿತ್ತು. ಆದರೆ ಫಲಿತಾಂಶ ಪ್ರಕಟವಾದಾಗ 'ಕೈ' ಪಕ್ಷದ ಲೆಕ್ಕಾಚಾರ ಬುಡಮೇಲಾಗಿದೆ. ಛತ್ತೀಸ್‌ಗಢದ 11 ಕ್ಷೇತ್ರಗಳಿಗೆ ಮೂರು ಹಂತಗಳಲ್ಲಿ ಮತದಾನ ನಡೆದಿತ್ತು.

ರಾಜಧಾನಿಯಲ್ಲಿ ಬಿಜೆಪಿ 'ಹ್ಯಾಟ್ರಿಕ್ ಕ್ಲೀನ್‌ಸ್ವೀಪ್'



ರಾಷ್ಟ್ರದ ರಾಜಧಾನಿಯಲ್ಲಿ ಬಿಜೆಪಿಯ ಗೆಲುವಿನ ಓಟ ಈ ಬಾರಿಯೂ ಮುಂದುವರಿದಿದೆ. 2014 ಮತ್ತು 2019 ರಲ್ಲಿ ಎಲ್ಲ ಏಳು ಸ್ಥಾನಗಳನ್ನು ಗೆದ್ದುಕೊಂಡಿದ್ದ ಕಮಲ ಪಾಳಯ ಈ ಬಾರಿಯೂ ಅದೇ ಸಾಧನೆ ಪುನರಾವರ್ತಿಸಿದ್ದು, 'ಕ್ಲೀನ್‌ಸ್ವೀಪ್' ಮಾಡುವುದರಲ್ಲಿ 'ಹ್ಯಾಟ್ರಿಕ್' ಸಾಧಿಸಿದೆ.

ಎಎಪಿ–ಕಾಂಗ್ರೆಸ್ ಮೈತ್ರಿಯು ಅಚ್ಚರಿಯ ಫಲಿತಾಂಶ ನೀಡಲಿದೆ ಎಂಬ ನಿರೀಕ್ಷೆ ಹುಸಿಯಾಗಿದೆ. ಚುನಾವಣೆಗೆ ಕೆಲವೇ ದಿನಗಳಿರುವಾಗ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಲಾಗಿತ್ತು. ಮಧ್ಯಂತರ ಜಾಮೀನು ಪಡೆದು ಹೊರಬಂದಿದ್ದ ಅವರು ಬಿರುಸಿನ ಪ್ರಚಾರ ಕೈಗೊಂಡಿದ್ದರು. ಪ್ರಚಾರ ಸಭೆಗಳಲ್ಲಿ ತಮ್ಮ ಬಂಧನ ವಿಚಾರವನ್ನು ಪ್ರಸ್ತಾಪಿಸಿ, ಕೇಂದ್ರ ಸರ್ಕಾರವನ್ನು ಟೀಕಿಸಿ ಮತಯಾಚನೆ ಮಾಡಿದ್ದರು. ಆದರೆ ಮತದಾರರು ಮಾತ್ರ ಬಿಜೆಪಿಯ ಕೈಬಿಡಲಿಲ್ಲ.

'ಇಂಡಿಯಾ' ಮೈತ್ರಿಕೂಟದ ಸೀಟು ಹಂಚಿಕೆ ಸೂತ್ರದಂತೆ ಎಎಪಿಯು ನಾಲ್ಕು ಕ್ಷೇತ್ರಗಳಲ್ಲಿ ಹಾಗೂ ಕಾಂಗ್ರೆಸ್ ಪಕ್ಷವು ಮೂರು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಬಿಜೆಪಿಯು ಕಳೆದ ಬಾರಿ ಗೆದ್ದ ಆರು ಸಂಸದರಿಗೆ ವಿವಿಧ ಕಾರಣಗಳಿಂದ ಟಿಕೆಟ್ ನೀಡದೆ, ಹೊಸಬರಿಗೆ ಮಣೆ ಹಾಕಿತ್ತು.

ಈಶಾನ್ಯ ದೆಹಲಿ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಕಾಂಗ್ರೆಸ್‌ನ ಕನ್ಹಯ್ಯ ಕುಮಾರ್ ಅವರು ಬಿಜೆಪಿಯ ಮನೋಜ್ ತಿವಾರಿ ಎದುರು ಪರಾಭವಗೊಂಡರು.

ಪುಟಿದೆದ್ದ ಕಾಂಗ್ರೆಸ್



ಬಿಜೆಪಿ ಆಡಳಿತವಿರುವ ರಾಜಸ್ಥಾನದಲ್ಲಿ ಕಾಂಗ್ರೆಸ್ ಉತ್ತಮ ಸಾಧನೆ ಮಾಡಿದೆ. 14 ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯದ ನಗೆ ಬೀರಿದರೆ, ಕಾಂಗ್ರೆಸ್ ಅಭ್ಯರ್ಥಿಗಳು 8 ಕ್ಷೇತ್ರಗಳಲ್ಲಿ ಗೆದ್ದಿದ್ದಾರೆ.

ಮೂರು ಕ್ಷೇತ್ರಗಳಲ್ಲಿ ಇತರರು ಗೆಲುವಿನ ಸವಿ ಉಂಡಿದ್ದಾರೆ. 2019ರ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷವು ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿದ್ದರೂ ಶೂನ್ಯ ಸಾಧನೆ ಮಾಡುವ ಮೂಲಕ ತೀವ್ರ ಮುಖಭಂಗಕ್ಕೆ ಒಳಗಾಗಿತ್ತು. ಎನ್‌ಡಿಎಯು 24 ಕ್ಷೇತ್ರಗಳಲ್ಲಿ ಹಾಗೂ ರಾಷ್ಟ್ರೀಯ ಲೋಕತಾಂತ್ರಿಕ ಪಕ್ಷವು ಒಂದು ಕ್ಷೇತ್ರದಲ್ಲಿ ಗೆದ್ದಿತ್ತು. ಈ ಬಾರಿ ಪುಟಿದೆದ್ದಿರುವ ಕಾಂಗ್ರೆಸ್, ಬಿಜೆಪಿಗೆ ತೀವ್ರ ಪೈಪೋಟಿ ನೀಡಿದೆ.

ಈ ಸಲ ರಾಜ್ಯದಲ್ಲಿ ಎರಡು ಹಂತಗಳಲ್ಲಿ ಮತದಾನ ನಡೆದಿದ್ದು, ಶೇ 61.34 ರಷ್ಟು ಮತದಾನ ದಾಖಲಾಗಿತ್ತು. ಹೆಚ್ಚಿನ ಸ್ಥಾನ ಗೆಲ್ಲುವ ನಿರೀಕ್ಷೆ ಇಟ್ಟುಕೊಂಡಿದ್ದ ಎನ್‌ಡಿಎ ಮೈತ್ರಿಕೂಟಕ್ಕೆ ಈ ಬಾರಿ ಇಲ್ಲಿ ಹಿನ್ನಡೆ ಉಂಟಾಗಿದೆ. ಬಿಎಸ್‌ಪಿಯು 24 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಇದರಿಂದ ಬಿಜೆಪಿ ವಿರೋಧಿ ಮತಗಳು ಹಂಚಿಹೋಗಲಿವೆ ಎಂದು ವಿಶ್ಲೇಷಿಸಲಾಗಿತ್ತು.



ಪ್ರಜಾ ಮತ

2024 ಜನತಂತ್ರದ ಹಬ್ಬ



'ಇಂಡಿಯಾ': ಒಗ್ಗಟ್ಟಿನ ಯತ್ನಕ್ಕೆ ಸಂದ ಗೆಲುವು



. ಕೋಲ್ಕತ್ತದಲ್ಲಿ ಟಿಎಂಸಿ ಕಾರ್ಯಕರ್ತರು ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಟಿಎಂಸಿಗೆ 'ಫಸಲು' ಮಂಕಾದ ಬಿಜೆಡಿ

ನವದೆಹಲಿ: ಪ್ರಮುಖ ಪ್ರಾದೇಶಿಕ ಪಕ್ಷಗಳಾದ ತೃಣಮೂಲ ಕಾಂಗ್ರೆಸ್ (ಟಿಎಂಸಿ), ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ಮತ್ತು ಆಮ್ ಆದ್ಮಿ (ಎಎಪಿ) ಪಕ್ಷಗಳು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಗಮನ ಸೆಳೆದಿದ್ದರೆ, ಬಿಜು ಜನತಾದಳ (ಬಿಜೆಡಿ) ಮತ್ತು ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ (ಎಐಎಡಿಎಂಕೆ) ಕಳೆಗುಂದಿವೆ.

ಪಶ್ಚಿಮ ಬಂಗಾಳದ ಆಡಳಿತಾರೂಢ ಪಕ್ಷ ಟಿಎಂಸಿಯು ರಾಜ್ಯದ 29 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದೆ. ಕಳೆದ ಬಾರಿ 22 ಕ್ಷೇತ್ರಗಳಲ್ಲಿ ಜಯಿಸಿದ್ದ ಟಿಎಂಸಿ ಈ ಬಾರಿ 7 ಕ್ಷೇತ್ರಗಳನ್ನು ಹೆಚ್ಚುವರಿಯಾಗಿ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಮೂಲಕ ಶಕ್ತಿ ವೃದ್ಧಿಸಿಕೊಂಡಿದೆ.

ಪಶ್ಚಿಮ ಬಂಗಾಳದಲ್ಲಿ ಕಳೆದ ಬಾರಿಗಿಂತ ಹೆಚ್ಚು ಸ್ಥಾನಗಳನ್ನು ಗಳಿಸಬೇಕು ಎಂದು ಯೋಜಿಸಿ, ಅಬ್ಬರದ ಪ್ರಚಾರ ನಡೆಸಿದ್ದ ಬಿಜೆಪಿ 12 ಸ್ಥಾನಗಳಿಗೆ ಕುಸಿದಿದೆ. ಕಳೆದ ಬಾರಿ ಅದು 18 ಕ್ಷೇತ್ರಗಳಲ್ಲಿ ಜಯಿಸಿತ್ತು. ಬಿಜೆಪಿಯನ್ನು ರಾಜ್ಯದಲ್ಲಿ ಕಟ್ಟಿಹಾಕುವಲ್ಲಿ ಟಿಎಂಸಿ ಯಶಸ್ವಿಯಾಗಿದೆ. ಸಂದೇಶ್‌ಖಾಲಿ ಪ್ರಕರಣ, ಶಿಕ್ಷಕರ ನೇಮಕಾತಿ ಪ್ರಕರಣಗಳು ಟಿಎಂಸಿಗೆ ತಲೆನೋವಾಗಿ ಪರಿಣಮಿಸಿದ್ದವು. ಅವುಗಳ ನಡುವೆಯೂ ಅದು 29 ಕ್ಷೇತ್ರಗಳಲ್ಲಿ ಜಯಿಸುವ ಮೂಲಕ ಗಮನಾರ್ಹ ಸಾಧನೆ ಮಾಡಿದೆ.

ಮಮತಾ ಬ್ಯಾನರ್ಜಿ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅವರು ಡೈಮಂಡ್ ಹಾರ್ಬರ್ ಕ್ಷೇತ್ರದಲ್ಲಿ, ತನ್ನ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಅಭಿಜಿತ್ ದಾಸ್ ಅವರನ್ನು ಭಾರಿ ಅಂತರದಲ್ಲಿ ಸೋಲಿಸಿದ್ದಾರೆ.

ಸಂಸತ್ತಿನಿಂದ ಉಚ್ಚಾಟನೆಗೊಂಡಿದ್ದ ಟಿಎಂಸಿಯ ಮಹುವಾ ಮೊಯಿತ್ರಾ ಅವರು ಕೃಷ್ಣನಗರ ಕ್ಷೇತ್ರದಲ್ಲಿ, ಎದುರಾಳಿ ಬಿಜೆಪಿಯ ಅಮೃತಾ ರಾಯ್ ಅವರ ವಿರುದ್ಧ ಗೆಲುವಿನ ನಗೆ ಬೀರಿದ್ದಾರೆ.

ತಮ್ಲುಕ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಟಿಎಂಸಿ ಅಭ್ಯರ್ಥಿ ದೇವಾಂಶು ಭಟ್ಟಾಚಾರ್ಯ ಅವರು, ಮಾಜಿ ನ್ಯಾಯಮೂರ್ತಿ ಹಾಗೂ ಬಿಜೆಪಿ ಅಭ್ಯರ್ಥಿ ಅಭಿಜಿತ್ ಗಂಗೋಪಾಧ್ಯಾಯ ಅವರ ಎದುರು ಸೋತಿದ್ದಾರೆ.

ಎಎಪಿ ಸಾಧನೆ: ಕಳೆದ ಬಾರಿ ಒಂದು ಲೋಕಸಭಾ ಕ್ಷೇತ್ರದಲ್ಲಿ ಜಯಿಸಿದ್ದ ಎಎಪಿಯು ಈ ಬಾರಿ ಪಂಜಾಬಿನ ಮೂರು ಕ್ಷೇತ್ರಗಳಲ್ಲಿ ಜಯಗಳಿಸಿದೆ. ಆದರೆ ತನ್ನ ಆಡಳಿತವಿರುವ ದೆಹಲಿಯಲ್ಲಿ ತಾನು ಸ್ಪರ್ಧಿಸಿದ್ದ ನಾಲ್ಕೂ ಕ್ಷೇತ್ರಗಳಲ್ಲಿ ಸೋಲುಂಡಿದೆ.

ಒಡಿಶಾ ಆಡಳಿತ ಪಕ್ಷ ಬಿಜು ಜನತಾದಳ (ಬಿಜೆಡಿ) ಈ ಬಾರಿ ಕೇವಲ 1 ಕ್ಷೇತ್ರದಲ್ಲಿ ಜಯಿಸುವ ಮೂಲಕ ಕಳಪೆ ಸಾಧನೆ ಮಾಡಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಒಡಿಶಾದ 12 ಕ್ಷೇತ್ರಗಳಲ್ಲಿ ಬಿಜೆಡಿ ಗೆದ್ದಿತ್ತು. 2019ರ ಲೋಕಸಭಾ ಚುನಾವಣೆಯಲ್ಲಿ ಕೇವಲ ಒಂದು ಕ್ಷೇತ್ರದಲ್ಲಿ ಗೆದ್ದು ನೆಲಕಚ್ಚಿದ ಎಐಎಡಿಎಂಕೆ, ಈ ಬಾರಿ ಆ ಕ್ಷೇತ್ರದಲ್ಲೂ ಸೋಲುಂಡಿದೆ.

• ಭೀಮಸೇನ ಚಳಗೇರಿ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಪ್ರಬಲ ವಿರೋಧ ಪಕ್ಷದ ಒಕ್ಕೂಟ ರಚಿಸಬೇಕು ಎಂಬ ವಿಚಾರ ಮೊಳಕೆ ಒಡೆದ ನಂತರ ಅಸ್ತಿತ್ವಕ್ಕೆ ಬಂದಿದ್ದೇ 'ಇಂಡಿಯಾ' ಒಕ್ಕೂಟ.

'ಭಾರತೀಯ ರಾಷ್ಟ್ರೀಯ ಅಭಿವೃದ್ಧಿ ಮತ್ತು ಒಳಗೊಳ್ಳುವಿಕೆ ಮೈತ್ರಿಕೂಟ' ಎಂಬುದು 'ಇಂಡಿಯಾ'ದ ಸಂಕ್ಷಿಪ್ತರೂಪ. ಒಕ್ಕೂಟ ಪ್ರತಿಪಾದಿಸಿದ 'ಒಳಗೊಳ್ಳುವಿಕೆ'ಗೆ ಮತದಾರ ಭಾರಿ ಸ್ಪಂದನೆಯನ್ನೇ ನೀಡಿದ್ದಾನೆ.

ಈ ಒಕ್ಕೂಟ ಅಸ್ತಿತ್ವಕ್ಕೆ ಬಂದ ನಂತರ ಸಾಕಷ್ಟು ಭಿನ್ನಾಭಿಪ್ರಾಯಗಳು ಇದ್ದರೂ, ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋದ ಒಕ್ಕೂಟದ ನಾಯಕ ನಡೆ ದೊಡ್ಡ ಗೆಲುವು ತಂದು ಕೊಟ್ಟಿದೆ. ಇದರೊಂದಿಗೆ ಬಿಜೆಪಿಯ ನಾಗಾಲೋಟಕ್ಕೆ ತಡೆ ಒಡ್ಡಲು ಸಾಧ್ಯವಾಗಿದೆ.

ಎಲ್ಲ ಚುನಾವಣೋತ್ತರ ಸಮೀಕ್ಷೆಗಳು ಹುಸಿಯಾಗುವಂತೆ ಮಾಡಿರುವ ಕಾಂಗ್ರೆಸ್ ಹಾಗೂ ಅದು ಭಾಗವಾಗಿರುವ 'ಇಂಡಿಯಾ' ಮೈತ್ರಿಕೂಟ, ಬಿಜೆಪಿಯನ್ನು ಸರಳ ಬಹುಮತ 272ಕ್ಕೂ ಕಡಿಮೆ ಸ್ಥಾನಗಳಿಗೆ ಕಟ್ಟಿಹಾಕುವಲ್ಲಿ ಯಶಸ್ವಿಯಾಗಿವೆ. 'ಅಬ್ ಕಿ ಬಾರ್ ಚಾರ್ ಸೌ ಪಾರ್' ಎನ್ನುವ ಮೂಲಕ 400ರ ಗಡಿ ದಾಟುವ ಕನಸು ಕಂಡಿದ್ದ ಎನ್‌ಡಿಎ, 300 ಸ್ಥಾನಗಳನ್ನೂ ದಾಟದಂತೆ ಅದರ ನಾಗಾಲೋಟಕ್ಕೆ 'ಇಂಡಿಯಾ' ತಡೆ ಒಡ್ಡಿವೆ.

ಉತ್ತರ ಪ್ರದೇಶವನ್ನು ಯಾರು ಗೆಲ್ಲುತ್ತಾರೋ ಅವರಿಗೆ ದೆಹಲಿ ಗದ್ದುಗೆ ಎಂಬುದು ಭಾರತದ ಚುನಾವಣಾ ರಾಜಕೀಯದ ಅಲಿಖಿತ ನಿಯಮ. ಹಿಂದಿನ ಎಲ್ಲ ಸಾರ್ವತ್ರಿಕ ಚುನಾವಣೆಗಳನ್ನು ಗಮನಿಸಿದಾಗ ಈ ಅಂಶ ಮನದಟ್ಟಾಗುತ್ತದೆ. ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು 80 ಲೋಕಸಭಾ ಕ್ಷೇತ್ರಗಳಿರುವುದೇ ಇದಕ್ಕೆ ಕಾರಣ.

2014ರ ಚುನಾವಣೆಗೆ ಹೋಲಿಸಿದಾಗ, ಉತ್ತರ ಪ್ರದೇಶದಲ್ಲಿ ಎನ್‌ಡಿಎ ಗಮನಾರ್ಹ ಸಂಖ್ಯೆಯ ಕ್ಷೇತ್ರಗಳನ್ನು ಕಳೆದುಕೊಂಡಿದೆ. ಇದಕ್ಕೆ ಕಾರಣ ಹಲವು.

ಆರಂಭದಲ್ಲಿ, ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಮೀನಮೇಷ ಎಣಿಸಿದ್ದರು. ಇನ್ನೇನು, ಸಮಾಜವಾದಿ ಪಕ್ಷ 'ಇಂಡಿಯಾ' ಒಕ್ಕೂಟ ಸೇರದೇ ಸ್ವತಂತ್ರವಾಗಿ ಚುನಾವಣೆ ಎದುರಿಸಲಿದೆ ಎಂದೇ ಹೇಳಲಾಗುತ್ತಿತ್ತು. ಆದರೆ, ಕೊನೆಗೆ ಅವರು 'ಇಂಡಿಯಾ' ಒಕ್ಕೂಟ ಸೇರಲು ನಿರ್ಧರಿಸಿದ್ದು, ಉತ್ತರ ಪ್ರದೇಶದಲ್ಲಿ ಹೊಸ ಸಮೀಕರಣಕ್ಕೆ ಕಾರಣವಾಯಿತು.

ಕಮಾಲ್ ಮಾಡಿದ 'ಯುಪಿ ಕೆ ಲಡ್ಕೆ': ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಜಂಟಿಯಾಗಿ ಪ್ರಚಾರ ಕಾರ್ಯ ಶುರುಮಾಡಿದರು. ಪ್ರಚಾರದುದ್ದಕ್ಕೂ, ಬಿಜೆಪಿ ಪಾಳಯ ಅವರನ್ನು 'ಯುಪಿ ಕೆ ಲಡ್ಕೆ' ಎಂದು ಮೂದಲಿಸಿತ್ತು. ಆದರೆ, ಈ ಜೋಡಿ 'ಇಂಡಿಯಾ' ಒಕ್ಕೂಟಕ್ಕೆ ಹೆಚ್ಚು ಸ್ಥಾನಗಳನ್ನು ತಂದುಕೊಡುವ ಮೂಲಕ ಎಲ್ಲರೂ ಮೂಗಿನ ಮೇಲೆ ಬೆರಳಿಡುವಂತೆ ಮಾಡಿದೆ.

ಮಹಾರಾಷ್ಟ್ರದಲ್ಲಿ ಮಹಾವಿಕಾಸ್ ಅಘಾಡಿ (ಎಂವಿಎ) ಕೂಡ ಇಂಡಿಯಾ ಒಕ್ಕೂಟದ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದೆ. ಎನ್‌ಸಿಪಿ ಹಾಗೂ ಶಿವಸೇನಾ ಇಬ್ಭಾಗವಾದರೂ, ಅದು 'ಇಂಡಿಯಾ' ಒಕ್ಕೂಟದ ಮತ ಗಳಿಕೆಯ ಮೇಲೆ ಪ್ರಭಾವ ಬೀರದಂತೆ ನೋಡಿಕೊಂಡಿರುವುದು ಗಮನಾರ್ಹ.

ಇತ್ತೀಚೆಗಷ್ಟೆ ಮುಕ್ತಾಯಗೊಂಡ ರಾಜಸ್ಥಾನ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ಗಳಿಸಿತ್ತು. ಆದರೆ, ಲೋಕಸಭಾ ಚುನಾವಣೆಯಲ್ಲಿ ತನ್ನ ತಂತ್ರಗಾರಿಕೆ ಬದಲಿಸುವ ಮೂಲಕ 'ಇಂಡಿಯಾ' ಮೈತ್ರಿಕೂಟ ಬಿಜೆಪಿಗಿಂತ ಹೆಚ್ಚು ಸ್ಥಾನ ಗೆಲ್ಲುವಲ್ಲಿ ಯಶಸ್ವಿಯಾಗಿದೆ.

ಪಶ್ಚಿಮ ಬಂಗಾಳದಲ್ಲಿ ಆರಂಭದಿಂದಲೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ 'ಇಂಡಿಯಾ' ಒಕ್ಕೂಟದ ಅಂಗಪಕ್ಷಗಳೊಂದಿಗೆ ಗುದ್ದಾಟ ನಡೆಸುತ್ತಲೇ ಇದ್ದರು. ಭಾರತ ಜೋಡೊ ನ್ಯಾಯ ಯಾತ್ರೆಗೆ ಪಶ್ಚಿಮ ಬಂಗಾಳದಲ್ಲಿ ನಿರೀಕ್ಷಿತ ಸಹಕಾರ ಸಿಗಲಿಲ್ಲ. ಆದರೆ, ಕಾಂಗ್ರೆಸ್ ಮುಖಂಡರು ಈ ವಿಷಯದಲ್ಲಿ ಬಹಳ ಎಚ್ಚರಿಕೆ ಮತ್ತು ಸಂಯಮದಿಂದ ನಡೆದುಕೊಂಡಿದ್ದು ಗಮನಾರ್ಹ. ಕೆಲ ಕ್ಷೇತ್ರಗಳಲ್ಲಿ ಕಾಂಗ್ರೆಸ್ ವಿರುದ್ಧವೇ ಟಿಎಂಸಿ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದ್ದು ಮುಜುಗರದ ಸಂಗತಿ. ಆದರೂ, 'ಇಂಡಿಯಾ' ಒಕ್ಕೂಟ ಅಚ್ಚರಿಯ ಮತ ಫಸಲು ಪಡೆದಿದೆ.

ದಕ್ಷಿಣಕ್ಕೆ ಬಂದರೆ, ತೆಲಂಗಾಣ ವಿಧಾನಸಭೆ ಚುನಾವಣೆಯಲ್ಲಿನ ಗೆಲುವು 'ಇಂಡಿಯಾ' ಒಕ್ಕೂಟದ ವಿಶ್ವಾಸವನ್ನು ಹೆಚ್ಚಿಸಿತ್ತು. ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆ ಹಾಗೂ ಇತರ ಕೆಲ ದ್ರಾವಿಡ ಪಕ್ಷಗಳೊಂದಿಗೆ ಮೈತ್ರಿ ಮತ ವಿಭಜನೆ ತಡೆಯುವಲ್ಲಿ ಯಶಸ್ವಿಯಾಗಿದೆ.

ಡಿಎಂಕೆ ಸಚಿವ ಉದಯನಿಧಿ ಸ್ಟಾಲಿನ್ ಅವರು ಸನಾತನ ಧರ್ಮ ಕುರಿತು ನೀಡಿದ್ದ ಹೇಳಿಕೆ ಕಾಂಗ್ರೆಸ್ ಸೇರಿದಂತೆ 'ಇಂಡಿಯಾ' ಒಕ್ಕೂಟಕ್ಕೆ ಮುಜುಗರ ತಂದಿತ್ತು. ಈ ವಿವಾದ ಲೋಕಸಭಾ ಚುನಾವಣೆ ವೇಳೆಯಲ್ಲಿ ಮತ ಗಳಿಕೆ ಮೇಲೆ ಪರಿಣಾಮ ಉಂಟು ಮಾಡದಂತೆ ನೋಡಿಕೊಳ್ಳುವಲ್ಲಿಯೂ ಒಕ್ಕೂಟದ ನಾಯಕರು ಯಶಸ್ವಿಯಾಗಿದ್ದಾರೆ.

ಲೋಕಸಭಾ ಚುನಾವಣೆಯೂ ಮುನ್ನ, ಮಣಿಪುರದಿಂದ ಮುಂಬೈವರೆಗೆ ಕಾಂಗ್ರೆಸ್ 'ಭಾರತ್ ಜೋಡೊ ನ್ಯಾಯ ಯಾತ್ರೆ' ಹಮ್ಮಿಕೊಂಡಿತ್ತು. ಈ ಯಾತ್ರೆ ಸಹ 'ಇಂಡಿಯಾ' ಒಕ್ಕೂಟದ ಪರ ಮತ ಪ್ರಮಾಣ ಹೆಚ್ಚಲು ಕಾರಣವಾದ ಅಂಶಗಳಲ್ಲಿ ಒಂದು ವಿಶ್ಲೇಷಿಸಲಾಗುತ್ತಿದೆ. ಅಲ್ಲದೇ, ತಮ್ಮ ಸರ್ಕಾರ ಬಂದ ನಂತರ ಜಾತಿ ಗಣತಿ ನಡೆಸಲಾಗುವುದು ಎಂಬ ಘೋಷಣೆ, ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಿಸುತ್ತದೆ, ಮೀಸಲಾತಿ ಪದ್ಧತಿಯನ್ನು ನಾಶ ಮಾಡುತ್ತದೆ ಎಂಬ ಸಂಕಥನ ರೂಪಿಸಿ, ಜನರಿಗೆ ತಲುಪಿಸುವಲ್ಲಿಯೂ 'ಇಂಡಿಯಾ' ಮೈತ್ರಿಕೂಟ, ಅದರಲ್ಲೂ ಕಾಂಗ್ರೆಸ್ ಯಶ ಕಂಡಿದೆ ಎನ್ನಬಹುದು.

ರೈತರ ಸಂಕಷ್ಟ, ಮಣಿಪುರದಲ್ಲಿನ ಹಿಂಸಾಚಾರ, ನಿರುದ್ಯೋಗ ಸಮಸ್ಯೆ, ಅಗತ್ಯ ವಸ್ತುಗಳ ಬೆಲೆ ಏರಿಕೆಯಂತಹ ವಿಷಯಗಳನ್ನು ಮುಂದಿಟ್ಟುಕೊಂಡು ಕೇಂದ್ರ ಸರ್ಕಾರವನ್ನು ನಿರಂತರವಾಗಿ ಪ್ರಶ್ನಿಸುತ್ತಿದ್ದುದು ಸಹ 'ಇಂಡಿಯಾ' ಒಕ್ಕೂಟಕ್ಕೆ ಅನುಕೂಲವಾಗಿದೆ.



ಲಖನೌದಲ್ಲಿ ಸಮಾಜವಾದಿ ಪಕ್ಷದ ಬೆಂಬಲಿಗರು ಸಂಭ್ರಮಿಸಿದರು – ಪಿಟಿಐ ಚಿತ್ರ

ಬಿಜೆಪಿ ವಿರುದ್ಧ ಹೋರಾಡುವುದಕ್ಕಾಗಿ ಅಸ್ತಿತ್ವಕ್ಕೆ ಬಂದ ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ', ಕೇಂದ್ರ ಸರ್ಕಾರದ ಹಲವು ನಿರ್ಧಾರಗಳನ್ನು ಪ್ರಶ್ನಿಸುವ ಮೂಲಕ, ಆಗಾದ ಉದ್ಭವಿಸಿದ ಅಪಸ್ವರಗಳನ್ನು ಸಂಯಮದಿಂದಲೇ ನಿಭಾಯಿಸುವ ಮೂಲಕ ಈ ಚುನಾವಣೆಯಲ್ಲಿ ಗಮನಾರ್ಹ ಸಾಧನೆ ದಾಖಲಿಸಿದೆ

ನಿಧಾನಗತಿ ಎಣಿಕೆ: ಕಾಂಗ್ರೆಸ್ ದೂರು

ನವದೆಹಲಿ (ಪಿಟಿಐ): ದೇಶದ ವಿವಿಧ ಭಾಗಗಳಲ್ಲಿ, ಅದರಲ್ಲೂ ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಮತ ಎಣಿಕೆಯು ನಿಧಾನಗತಿಯಲ್ಲಿ ನಡೆದಿದೆ ಎಂದು ಕಾಂಗ್ರೆಸ್ ನಿಯೋಗ ಆರೋಪಿಸಿದೆ.

ಚುನಾವಣಾ ಆಯೋಗದ ಮುಖ್ಯ ಆಯುಕ್ತ ರಾಜೀವ್ ಕುಮಾರ್ ಮತ್ತು ಚುನಾವಣಾ ಆಯೋಗದ ಇತರೆ ಆಯುಕ್ತರನ್ನು ಭೇಟಿ ಮಾಡಿದ ಅಭಿಷೇಕ್ ಮನು ಸಿಂಘ್ವಿ ಮತ್ತು ಸಲ್ಮಾನ್ ಖುರ್ಷಿದ್ ಅವರನ್ನು ಒಳಗೊಂಡ ಕಾಂಗ್ರೆಸ್ ನಿಯೋಗವು, ಪ್ರತಿ ಸುತ್ತಿನ ಮತ ಎಣಿಕೆ ಮುಗಿದ ಕೂಡಲೇ ವಿವರಗಳನ್ನು ಆಯೋಗವು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂದು ಒತ್ತಾಯಿಸಿತು.

'ಪ್ರತಿಯೊಂದು ಸುತ್ತಿನ ಮತ ಎಣಿಕೆ ಮುಗಿದ ಬಳಿಕ ಅದರ ವಿವರಗಳನ್ನು ಆಯೋಗವು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಆದರೆ, ಮಧ್ಯಾಹ್ನ 2.30ರ ವೇಳೆಗೆ ಮತ ಎಣಿಕೆ ಪ್ರಕ್ರಿಯೆಯು ವಿಶೇಷವಾಗಿ ಉತ್ತರ ಪ್ರದೇಶದಲ್ಲಿ ತೀರಾ ನಿಧಾನಗತಿಯಲ್ಲಿ ಇರುವುದು ನಮ್ಮ ಗಮನಕ್ಕೆ ಬಂದಿದೆ' ಎಂದು ಅಭಿಷೇಕ್ ಮನುಸಿಂಘ್ವಿ ತಿಳಿಸಿದ್ದಾರೆ.

ಇಂದೋರ್: 'ನೋಟಾ'ಗೆ 2.18 ಲಕ್ಷ ಮತ!

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಇಂದೋರ್ ಲೋಕಸಭಾ ಕ್ಷೇತ್ರದಲ್ಲಿ 'ನೋಟಾ'ಗೆ (ಮತ ಯಾರಿಗೂ ಇಲ್ಲ) 2.18 ಲಕ್ಷ ಮತಗಳು ಚಲಾವಣೆಯಾಗಿವೆ. ಅಂದರೆ ಒಟ್ಟು ಮತದಾರರ ಪೈಕಿ ಶೇ 14.01ರಷ್ಟು ನೋಟಾಗೆ ಚಲಾವಣೆಯಾಗಿದೆ.

ಈ ಹಿಂದೆ ಬಿಹಾರದ ಗೋಪಾಲ್‌ಗಂಜ್ ಕ್ಷೇತ್ರದಲ್ಲಿ 'ನೋಟಾ'ಗೆ ಚಲಾವಣೆಯಾಗಿದ್ದಕ್ಕಿಂತ ಹೆಚ್ಚು ಮತಗಳು ಇಲ್ಲಿ ಚಲಾವಣೆಯಾಗಿ, ದಾಖಲೆಯಾಗಿದೆ.

ಇಂದೋರ್‌ನ ಕಾಂಗ್ರೆಸ್ ಅಭ್ಯರ್ಥಿ ಅಕ್ಷಯ್ ಕಾಂತಿ ಬಮ್ ಕೊನೆ ಕ್ಷಣದಲ್ಲಿ ತಮ್ಮ ನಾಮಪತ್ರವನ್ನು ಹಿಂಪಡೆದು, ಬಿಜೆಪಿ ಸೇರಿದ್ದರು. ಬಿಜೆಪಿಗೆ ಪಾಠ ಕಲಿಸುವ ಉದ್ದೇಶದಿಂದ ಕಾಂಗ್ರೆಸ್ ಪಕ್ಷವು ಇಂದೋರ್‌ನ ಮತದಾರರಿಗೆ 'ನೋಟಾ'ಗೆ ಮತ ಚಲಾಯಿಸುವಂತೆ ಕೋರಿತ್ತು.

ಕಣದಲ್ಲಿ ಬಿಜೆಪಿಯ ಶಂಕರ್ ಲಾಲ್ವಾನಿ ಸೇರಿದಂತೆ 13 ಅಭ್ಯರ್ಥಿಗಳಿದ್ದರು. ಶಂಕರ್ ಅವರು 12.26 ಲಕ್ಷ ಮತಗಳನ್ನು ಪಡೆದರೆ, ಅತ್ಯಧಿಕ ಮತಗಳನ್ನು ಪಡೆದವರ ಸಾಲಿನಲ್ಲಿ 'ನೋಟಾ' ಎರಡನೇ ಸ್ಥಾನದಲ್ಲಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ಗೋಪಾಲಗಂಜ್‌ನಲ್ಲಿ 51,660 ಮತಗಳು (ಶೇ 5ರಷ್ಟು) ಚಲಾವಣೆಯಾಗಿದ್ದವು. ಸುಪ್ರೀಂ ಕೋರ್ಟ್ ಆದೇಶದ ಅನುಸಾರ 2013ರಿಂದ 'ನೋಟಾ' ಪರಿಚಯಿಸಲಾಗಿದೆ.

ದ.ಕ. ಕ್ಷೇತ್ರದಲ್ಲೂ ಗರಿಷ್ಠ ಮತ

ಮಂಗಳೂರು: ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ನೋಟಾಕ್ಕೆ 23,576 ಮತಗಳು ದೊರೆತಿದ್ದು, ರಾಜ್ಯದಲ್ಲೇ ಇದು ಗರಿಷ್ಠವಾಗಿದೆ.

ನೋಟಾಕ್ಕೆ 11,191 ಮತ ದಾಖಲಾಗಿರುವ ಉಡುಪಿ– ಚಿಕ್ಕಮಗಳೂರು ಕ್ಷೇತ್ರ ದ್ವಿತೀಯ ಸ್ಥಾನದಲ್ಲಿದೆ. ಇವೆರಡೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ ಮತ್ತು ಪ್ರತಿಸ್ಪರ್ಧಿ ಅಭ್ಯರ್ಥಿಯ ನಂತರದ ಸ್ಥಾನ ನೋಟಾಕ್ಕೆ ದೊರೆತಿದೆ.

ಮೊದಲ ಬಾರಿಗೆ ಸಂಸತ್ ಪ್ರವೇಶಿಸಿದ ಯುವ ಮುಖಗಳು



ಹೆಸರು: ಶಾಂಭವಿ ಚೌಧರಿ
(25 ವರ್ಷ)
ಪಕ್ಷ: ಲೋಕ ಜನಶಕ್ತಿ ಪಕ್ಷ
ಸಮೀಪ ಪ್ರತಿಸ್ಪರ್ಧಿ: ಸನ್ನಿ ಹಜಾರಿ (ಕಾಂಗ್ರೆಸ್)
ಗೆಲುವಿನ ಅಂತರ: 1,87,251

ಉತ್ತರ ಬಿಹಾರದ ಸಮಸ್ತಿಪುರ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಶಾಂಭವಿ ಚೌಧರಿ ಲೋಕಸಭೆಯಲ್ಲಿ ದೇಶದ ಅತ್ಯಂತ ಕಿರಿಯ ಸಂಸದೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಲೋಕ ಜನಶಕ್ತಿ ಪಕ್ಷದ ಶಾಂಭವಿ ಚೌಧರಿ ಅವರಿಗೆ ಕೇವಲ 25 ವರ್ಷ. ನಿತೀಶ್ ಕುಮಾರ್ ನೇತೃತ್ವದ ರಾಜ್ಯ ಎನ್‌ಡಿಎ ಸರ್ಕಾರದಲ್ಲಿನ ಹಿರಿಯ ಸಚಿವ ಜೆಡಿಯುನ ಅಶೋಕ್ ಕುಮಾರ್ ಚೌಧರಿ ಅವರ ಪುತ್ರಿ ಶಾಂಭವಿ ಚೌಧರಿ ಈ ಮೀಸಲು ಕ್ಷೇತ್ರದಿಂದ ಚುನಾವಣಾ ರಾಜಕೀಯಕ್ಕೆ ಪದಾರ್ಪಣೆ ಮಾಡಿದ್ದರು.

ಶಾಂಭವಿ ತಮ್ಮ ಪ್ರತಿಸ್ಪರ್ಧಿ, ಸಚಿವ ಜೆಡಿಯುನ ಮಹೇಶ್ವರ್ ಹಜಾರಿಯವರ ಪುತ್ರ ಸನ್ನಿ ಹಜಾರಿ ವಿರುದ್ಧ 1.80 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಕಂಡಿದ್ದಾರೆ.



ಹೆಸರು: ಸಾಗರ್ ಖಂಡ್ರೆ
(26 ವರ್ಷ)
ಪಕ್ಷ: ಕಾಂಗ್ರೆಸ್
ಸಮೀಪ ಪ್ರತಿಸ್ಪರ್ಧಿ: ಭಗವಂತ ಖೂಬಾ (ಬಿಜೆಪಿ)
ಗೆಲುವಿನ ಅಂತರ: 1,29,396

ಬೀದರ್ ಲೋಕಸಭಾ ಕ್ಷೇತ್ರ ಮೊದಲ ಬಾರಿಗೆ ಕಣಕ್ಕಿಳಿದಿದ್ದ ಸಾಗರ್ ಖಂಡ್ರೆ ಅವರು ಪ್ರಯತ್ನದಲ್ಲೇ ಗೆಲುವು ಕಂಡಿದ್ದಾರೆ. ಮೊದಲ ಬಾರಿಗೆ ಲೋಕಸಭೆ ಪ್ರವೇಶಿಸಿದ ದೇಶದ ಅತ್ಯಂತ ಕಿರಿಯರ ಪೈಕಿ ಇವರೂ ಒಬ್ಬರಾಗಿದ್ದಾರೆ. ಪರಿಸರ ಖಾತೆ ಸಚಿವ ಈಶ್ವರ ಬಿ.ಖಂಡ್ರೆ ಅವರ ಪುತ್ರನಾದ ಸಾಗರ್ ಕಾನೂನು ಪದವೀಧರ.

'ಹ್ಯಾಟ್ರಿಕ್' ಗೆಲುವಿನ ಭರವಸೆಯಲ್ಲಿದ್ದ ಹಾಲಿ ಸಂಸದರೂ ಆದ ಕೇಂದ್ರ ಸಚಿವ ಭಗವಂತ ಖೂಬಾ ಅವರನ್ನು ಸಾಗರ್ ಮಣಿಸಿದ್ದಾರೆ.



ಹೆಸರು: ಪ್ರಿಯಾಂಕಾ ಜಾರಕಿಹೊಳಿ
(27)
ಪಕ್ಷ: ಕಾಂಗ್ರೆಸ್
ಸಮೀಪ ಪ್ರತಿಸ್ಪರ್ಧಿ: ಅಣ್ಣಾಸಾಹೇಬ ಜೊಲ್ಲೆ (ಬಿಜೆಪಿ)
ಗೆಲುವಿನ ಅಂತರ: 92,655

ಚಿಕ್ಕೋಡಿ ಲೋಕಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಪ್ರಿಯಾಂಕಾ ಜಾರಕಿಹೊಳಿ ಜಿದ್ದಾಜಿದ್ದಿಯಿಂದ ಕೂಡಿದ್ದ ಲೋಕ 'ಕದನ'ದಲ್ಲಿ ಗೆದ್ದು, ಕಿರಿಯ ವಯಸ್ಸಿನಲ್ಲೇ ಸಂಸದೆಯಾಗಿ ಆಯ್ಕೆಯಾಗಿದ್ದಾರೆ. ಇವರು ರಾಜ್ಯದ ಕಾಂಗ್ರೆಸ್ ಸರ್ಕಾರದಲ್ಲಿ ಲೋಕೋಪಯೋಗಿ ಇಲಾಖೆ ಸಚಿವರಾಗಿರುವ ಸತೀಶ್ ಜಾರಕಿಹೊಳಿ ಅವರ ಪುತ್ರಿ. ಬಿಜೆಪಿ ಅಭ್ಯರ್ಥಿ ಹಾಗೂ ಹಾಲಿ ಸಂಸದ ಅಣ್ಣಾಸಾಹೇಬ ಜೊಲ್ಲೆ ವಿರುದ್ಧ ಗೆಲುವು ಸಾಧಿಸಿದರು. ಎಂಬಿಎ ಪದವೀಧರೆ ಆಗಿರುವ ಪ್ರಿಯಾಂಕಾ ಉದ್ಯಮಿಯೂ ಹೌದು. ಹಲವು ಕಂಪನಿಗಳಲ್ಲಿ ಹೂಡಿಕೆ ಮಾಡಿದ್ದಾರೆ.



ಹೆಸರು: ಶ್ರೇಯಸ್ ಪಟೇಲ್
(32)
ಪಕ್ಷ: ಕಾಂಗ್ರೆಸ್
ಸಮೀಪ ಪ್ರತಿಸ್ಪರ್ಧಿ: ಪ್ರಜ್ವಲ್ ರೇವಣ್ಣ (ಎನ್‌ಡಿಎ)
ಗೆಲುವಿನ ಅಂತರ: 39,465

ಹಾಸನ ಕ್ಷೇತ್ರದಿಂದ ಮಾಜಿ ಸಚಿವ ದಿ. ಪುಟ್ಟಸ್ವಾಮಿಗೌಡರ ಮೊಮ್ಮಗ, ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ (32) ಮೊದಲ ಬಾರಿಗೆ ಲೋಕಸಭೆ ಪ್ರವೇಶಿಸಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಮೊಮ್ಮಗ, ಶಾಸಕ ಎಚ್.ಡಿ.ರೇವಣ್ಣನವರ ಮಗ ಪ್ರಜ್ವಲ್ ರೇವಣ್ಣ ಅವರನ್ನು ಮಣಿಸಿದ್ದಾರೆ. 'ಪೈನ್ ಡ್ರೈವ್' ಹಗರಣದಲ್ಲಿ ಬಂಧಿತರಾಗಿರುವ, ಜೆಡಿಎಸ್ ಸಂಸದ ಪ್ರಜ್ವಲ್ ಎನ್‌ಡಿಎ ಅಭ್ಯರ್ಥಿಯಾಗಿ 2ನೇ ಬಾರಿಗೆ ಕಣಕ್ಕಿಳಿದಿದ್ದರು. ಶ್ರೇಯಸ್ ಪಟೇಲ್ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಎಚ್.ಡಿ. ರೇವಣ್ಣ ವಿರುದ್ಧ ಪರಾಭವಗೊಂಡಿದ್ದರು.



ನವದೆಹಲಿಯ ಬಿಜೆಪಿ ಕಚೇರಿಗೆ ಪ್ರಧಾನಿ ನರೇಂದ್ರ ಮೋದಿ ಆಗಮಿಸಿದ ಸಂದರ್ಭದಲ್ಲಿ ಬೆಂಬಲಿಗರು ಸಂಭ್ರಮಿಸಿದರು –ಪಿಟಿಐ ಚಿತ್ರ



ಹೆಸರು: ಬಾನ್ಸುರಿ ಸ್ವರಾಜ್ (40)
ಪಕ್ಷ: ಬಿಜೆಪಿ
ಸಮೀಪ ಪ್ರತಿಸ್ಪರ್ಧಿ: ಸೋಮನಾಥ್ ಭಾರ್ತಿ (ಎಎಪಿ)
ಗೆಲುವಿನ ಅಂತರ: 78,370

ರಾಷ್ಟ್ರ ರಾಜಧಾನಿಯ ನವದೆಹಲಿ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯ ಬಾನ್ಸುರಿ ಸ್ವರಾಜ್ ಗೆಲುವು ಸಾಧಿಸಿದ್ದು ಮೊದಲ ಬಾರಿಗೆ ಲೋಕಸಭೆಗೆ ಪ್ರವೇಶ ಪಡೆದಿದ್ದಾರೆ.

ಮಾಜಿ ವಿದೇಶಾಂಗ ಸಚಿವೆ ದಿವಂಗತ ಸುಷ್ಮಾ ಸ್ವರಾಜ್ ಅವರ ಪುತ್ರಿ ಬಾನ್ಸುರಿ ಅವರು 'ಇಂಡಿಯಾ' ಮೈತ್ರಿಕೂಟದ ಎಎಪಿ ಅಭ್ಯರ್ಥಿ ಸೋಮನಾಥ್ ಭಾರ್ತಿ ಅವರನ್ನು ಮಣಿಸಿದ್ದಾರೆ. ನಿರ್ಗಮಿತ ಬಿಜೆಪಿ ಸಂಸದೆ ಮೀನಾಕ್ಷಿ ಲೇಖಿ ಅವರ ಬದಲಿಗೆ ಬಾನ್ಸುರಿ ಸ್ವರಾಜ್ ಅವರು ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು.



ಹೆಸರು: ಕರಣ್ ಭೂಷಣ್ ಸಿಂಗ್
(33)
ಪಕ್ಷ: ಬಿಜೆಪಿ
ಸಮೀಪ ಪ್ರತಿಸ್ಪರ್ಧಿ: ಭಗತ್ ರಾಮ್ (ಸಮಾಜವಾದಿ ಪಕ್ಷ)
ಗೆಲುವಿನ ಅಂತರ: 1,48,843

ಭಾರತೀಯ ಕುಸ್ತಿ ಒಕ್ಕೂಟದ ಮಾಜಿ ಮುಖ್ಯಸ್ಥ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಪುತ್ರ ಬಿಜೆಪಿಯ ಕರಣ್ ಭೂಷಣ್ ಸಿಂಗ್ ಅವರು ಉತ್ತರ ಪ್ರದೇಶದ ಕೈಸರ್‌ಗಂಜ್‌ನಿಂದ ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ.

ಸಮಾಜವಾದಿ ಪಕ್ಷದ ಭಗತ್ ರಾಮ್ ಎದುರು 5,71,263 ಮತಗಳನ್ನು ಗಳಿಸಿದ್ದಾರೆ. ಬಿಜೆಪಿಯ ನಿರ್ಗಮಿತ ಸಂಸದ ಬ್ರಿಜ್ ಭೂಷಣ್ ಸಿಂಗ್ ಅವರ ವಿರುದ್ಧ ಮಹಿಳಾ ಕುಸ್ತಿಪಟುಗಳು ಲೈಂಗಿಕ ಕಿರುಕುಳ ಆಪಾದನೆಯ ಪ್ರಕರಣಗಳನ್ನು ದಾಖಲಿಸಿದ ನಂತರ ಅವರಿಗೆ ಪಕ್ಷವು ಟಿಕೆಟ್ ನೀಡಲಿಲ್ಲ. ಬ್ರಿಜ್ ಭೂಷಣ್ ಅವರ ಕಿರಿಯ ಮಗ 33ರ ಹರೆಯದ ಕರಣ್ ಅವರನ್ನು ಕಣಕ್ಕಿಳಿಸಿತ್ತು. ಕರಣ್‌ಗೆ ಮೊದಲ ಪ್ರಯತ್ನದಲ್ಲೇ ಗೆಲುವು ದಕ್ಕಿದೆ.




ಹೆಸರು: ಯೂಸುಫ್ ಪಠಾಣ್
(41)
ಪಕ್ಷ: ಟಿಎಂಸಿ
ಸಮೀಪ ಪ್ರತಿಸ್ಪರ್ಧಿ: ಅಧೀರ್ ರಂಜನ್ ಚೌಧರಿ (ಕಾಂಗ್ರೆಸ್)
ಗೆಲುವಿನ ಅಂತರ: 64,084

ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸ್ಟಾರ್ ಮತ್ತು ಭಾರತದ ಮಾಜಿ ಕ್ರಿಕೆಟಿಗ ಯೂಸುಫ್ ಪಠಾಣ್ ಅವರು ಪಶ್ಚಿಮ ಬಂಗಾಳದ ಬಹರಂಪುರ ಕ್ಷೇತ್ರದಲ್ಲಿ ಭರ್ಜರಿ ಜಯ ಸಾಧಿಸುವ ಮೂಲಕ ಚೊಚ್ಚಲ ಬಾರಿಗೆ ಲೋಕಸಭೆ ಪ್ರವೇಶಿಸಿದ್ದಾರೆ.

ಯೂಸುಫ್ ಅವರು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ವಿರುದ್ಧ ಸ್ಪರ್ಧಿಸಿದ್ದರು. ಯೂಸುಫ್ ಅವರು ಚೌಧರಿ ಎದುರು 4,23,451 ಮತಗಳನ್ನು ಪಡೆದರು. ಬಿಜೆಪಿ ಅಭ್ಯರ್ಥಿ ಡಾ.ನಿರ್ಮಲ್ ಕುಮಾರ್ ಸಹಾ(3,23,685 ಮತ) ಮೂರನೇ ಸ್ಥಾನಕ್ಕೆ ತಳ್ಳಿದರು.

ಅತಿ ಹೆಚ್ಚು ಬಾರಿ ಆಯ್ಕೆಯಾದವರು



ವೀರೇಂದ್ರ ಕುಮಾರ್

ಕೇಂದ್ರ ಸಚಿವ, ದಲಿತ ನಾಯಕ ವೀರೇಂದ್ರ ಕುಮಾರ್ ಅವರು ಎಂಟನೇ ಬಾರಿಗೆ ಲೋಕಸಭೆಗೆ ಆಯ್ಕೆಯಾಗಿದ್ದಾರೆ.

ಮಧ್ಯಪ್ರದೇಶದ ಟಿಕಮ್‌ಗಢ್ (ಎಸ್‌ಸಿ) ಕ್ಷೇತ್ರದಿಂದ ಕೇಂದ್ರ ಸಚಿವ ವೀರೇಂದ್ರ ಕುಮಾರ್ ಅವರು ತಮ್ಮ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಪಂಕಜ್ ಅಹಿರ್ವಾರ್ ಅವರನ್ನು 4,03,312 ಮತಗಳಿಂದ ಸೋಲಿಸಿದ್ದಾರೆ. ವೀರೇಂದ್ರ ಕುಮಾರ್ ಅವರು 2009ರಿಂದ ಟಿಕಮ್‌ಗಢ ಲೋಕಸಭೆ ಕ್ಷೇತ್ರದಲ್ಲಿ ಅಜೇಯರಾಗಿ ಉಳಿದಿದ್ದಾರೆ.



7ನೇ ಬಾರಿಗೆ ಪಂಕಜ್ ಚೌಧರಿ

ನರೇಂದ್ರ ಮೋದಿ ಅವರ ನೇತೃತ್ವದ ಸಂಪುಟದಲ್ಲಿ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಮತ್ತು ಹಿಂದುಳಿದ ವರ್ಗದ ನಾಯಕರಾದ ಪಂಕಜ್ ಚೌಧರಿ ಅವರು ಲೋಕಸಭೆಗೆ ಏಳನೇ ಅವಧಿಗೆ ಆಯ್ಕೆಯಾಗಿದ್ದಾರೆ.

ಉತ್ತರ ಪ್ರದೇಶದ ಮಹಾರಾಜಗಂಜ್ ಕ್ಷೇತ್ರದಲ್ಲಿ ಬಿಜೆಪಿಯನ್ನು ಪ್ರತಿನಿಧಿಸುತ್ತಿರುವ ಪಂಕಜ್ ಚೌಧರಿ ಅವರು ಕಾಂಗ್ರೆಸ್ ಅಭ್ಯರ್ಥಿ ವಿರೇಂದ್ರ ಚೌಧರಿ ಅವರನ್ನು 35,451 ಮತಗಳ ಅಂತರದಿಂದ ಮಣಿಸಿ, ಗೆಲುವು ಸಾಧಿಸಿದ್ದಾರೆ.



ಶಿವರಾಜ್ ಸಿಂಗ್ ಚೌಹಾಣ್

ಬಿಜೆಪಿ ಅಭ್ಯರ್ಥಿ ಶಿವರಾಜ್ ಸಿಂಗ್ ಚೌಹಾಣ್ ಅವರು ಆರನೇ ಅವಧಿಗೆ ಲೋಕಸಭೆಗೆ ಪ್ರವೇಶಿಸಿದ್ದಾರೆ.

ಮಧ್ಯಪ್ರದೇಶದ ವಿಧಿಶಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಅವರು 8,21,408 ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಪ್ರತಾಪ್ ಬಾನು ಶರ್ಮಾ ಅವರನ್ನು ಮಣಿಸಿದ್ದಾರೆ. 1991ರಿಂದ 2004ರವರೆಗೆ ವಿದಿಶಾ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. 2005ರಲ್ಲಿ ಬಿಜೆಪಿಯ ಮಧ್ಯಪ್ರದೇಶ ಘಟಕದ ಅಧ್ಯಕ್ಷರಾಗಿ ನೇಮಕವಾದ ಚೌಹಾಣ್ ಅವರು ಅದೇ ವರ್ಷ ಮುಖ್ಯಮಂತ್ರಿಯಾದರು.



ಸುದೀಪ್ ಬಂಧೋಪಾಧ್ಯಾಯ

ತೃಣಮೂಲ ಕಾಂಗ್ರೆಸ್‌ನ ಸುದೀಪ್ ಬಂಧೋಪಾಧ್ಯಾಯ ಅವರು ಲೋಕಸಭೆಯಲ್ಲಿ ಆರನೇ ಬಾರಿಗೆ ಗೆದ್ದಿದ್ದಾರೆ.

ಕೋಲ್ಕತ್ತಾ ಉತ್ತರ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯ ತಪಸ್ ರಾಯ್ ಅವರನ್ನು 83,731 ಮತಗಳ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ. ಕಳೆದ ಚುನಾವಣೆಯಲ್ಲೂ ಬಿಜೆಪಿ ಅಭ್ಯರ್ಥಿ ರಾಹುಲ್ ಸಿನ್ಹಾ ಅವರನ್ನು 1,27,095 ಮತಗಳ ಅಂತರದಿಂದ ಮಣಿಸಿದ್ದರು. ಬಿಜೆಪಿ ಮತ್ತು ಕಾಂಗ್ರೆಸ್‌ನ ಪ್ರಬಲ ಸ್ಪರ್ಧೆಯ ನಡುವೆಯೂ ಸುದೀಪ್ ಕ್ಷೇತ್ರದ ಮೇಲೆ ಹಿಡಿತ ಸಾಧಿಸಿದ್ದಾರೆ.

ಗೆದ್ದ ಪ್ರಮುಖರು



ಶಶಿ ತರೂರ್

ಕಾಂಗ್ರೆಸ್‌ನ ಪ್ರಮುಖ ನಾಯಕ ಶಶಿ ತರೂರ್ ಅವರು ಸತತ ನಾಲ್ಕನೇ ಬಾರಿಗೆ ಸಂಸದರಾಗಿ ಆಯ್ಕೆ ಆಗಿದ್ದಾರೆ. ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರು ಈ ಬಾರಿ ಶಶಿ ತರೂರ್ ಎದುರಾಳಿಯಾಗಿ ಕೇರಳದ ತಿರುವನಂತಪುರ ಕ್ಷೇತ್ರದಿಂದ ಬಿಜೆಪಿ ಟಿಕೆಟ್‌ನಲ್ಲಿ ಕಣಕ್ಕಿಳಿದಿದ್ದರು.



ಶಶಿಕಾಂತ್ ಸೆಂಥಿಲ್

ಕರ್ನಾಟಕ ಕೇಡರ್‌ನ ಮಾಜಿ ಐಎಎಸ್ ಅಧಿಕಾರಿ ಶಶಿಕಾಂತ್ ಸೆಂಥಿಲ್ ತಮಿಳುನಾಡಿನ ತಿರುವಳ್ಳೂರು ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದರು. 2019ರಲ್ಲಿ ಅವರು ಕಾಂಗ್ರೆಸ್ ಸೇರಿದ್ದರು. 2023ರ ಕರ್ನಾಟಕ ಚುನಾವಣೆ ವೇಳೆ ಕಾಂಗ್ರೆಸ್ ಪರ ಕಾರ್ಯತಂತ್ರ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಸೋತ ಪ್ರಮುಖರು



ಕೆ. ಅಣ್ಣಾಮಲೈ

ತಮಿಳುನಾಡು ಬಿಜೆಪಿ ಪ್ರಮುಖ ನಾಯಕ ಕೆ. ಅಣ್ಣಾಮಲೈ ಅವರು ಕರ್ನಾಟಕ ಕೇಡರ್‌ನ ಮಾಜಿ ಐಪಿಎಸ್ ಅಧಿಕಾರಿ. 2020ರ ಆಗಸ್ಟ್‌ನಲ್ಲಿ ಬಿಜೆಪಿ ಸೇರಿ, 10 ತಿಂಗಳಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷರಾದರು. ಕೊಯಮತ್ತೂರು ಕ್ಷೇತ್ರದಿಂದ ಡಿಎಂಕೆ ಅಭ್ಯರ್ಥಿ ಗಣಪತಿ ರಾಜ್‌ಕುಮಾರ್ ಎದುರು ಸೋತಿದ್ದಾರೆ.



ರಾಜೀವ್ ಚಂದ್ರಶೇಖರ್

ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆ ಆಗಿರುವ ಬಿಜೆಪಿ ನಾಯಕ, ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರು ಕೇರಳದ ತಿರುವನಂತಪುರ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಕಾಂಗ್ರೆಸ್‌ನ ಹಾಲಿ ಸಂಸದ, ಜನಪ್ರಿಯ ನಾಯಕ ಶಶಿ ತರೂರ್ ಅವರ ವಿರುದ್ಧ ರಾಜೀವ್ ಅವರು ಸೋಲು ಅನುಭವಿಸಿದ್ದಾರೆ.

ಕುಗ್ಗಿದ ಬಿಜೆಪಿ: ಹಿಗ್ಗಿದ ಕಾಂಗ್ರೆಸ್

ಒಂದನೇ ಪುಟದಿಂದ

ಬಳ್ಳಾರಿಯಿಂದ ಹಿಡಿದು ಕಲಬುರಗಿವರೆಗಿನ ಕಲ್ಯಾಣ ಕರ್ನಾಟಕದ ಕ್ಷೇತ್ರಗಳಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಸಿದ್ದರಾಮಯ್ಯನವರ ವರ್ಚಸ್ಸು ಗೆಲುವಿನ ದಾರಿಯನ್ನು ಸಲೀಸು ಮಾಡಿದೆ.

ಈ ಕ್ಷೇತ್ರಗಳ ಗೆಲುವಿನ ಶ್ರೇಯ ಇಬ್ಬರೂ ನಾಯಕರಿಗೆ ಸಲ್ಲಬೇಕು. ಬಿಜೆಪಿಯ ಒಳಜಗಳ, ಅಭ್ಯರ್ಥಿ ಆಯ್ಕೆಯ ಗೊಂದಲವೂ ಕಾಂಗ್ರೆಸ್ ಗೆಲುವಿನ ಹಾದಿಯನ್ನು ಸುಲಭಗೊಳಿಸಿತು.

2019ರಲ್ಲಿ ಏಕಾಂಗಿಯಾಗಿ 25 ಹಾಗೂ ಮಂಡ್ಯದಲ್ಲಿ ಬಿಜೆಪಿ ಬೆಂಬಲಿತ ಪಕ್ಷೇತರ ಅಭ್ಯರ್ಥಿ ಗೆದ್ದಿದ್ದರು. ಮೋದಿ ವರ್ಚಸ್ಸು ಒಂದೇ ಕಮಲ ಅರಳಿಸಲು ಕಾರಣವಾಗಿದ್ದರೆ 20 ಕ್ಷೇತ್ರಗಳಲ್ಲಾದರೂ ಬಿಜೆಪಿ ಗೆಲ್ಲಬೇಕಿತ್ತು.

ಜೆಡಿಎಸ್ ಮೈತ್ರಿ ಇಲ್ಲದೇ ಇದ್ದರೆ ಬಿಜೆಪಿ 9ಕ್ಕೆ ಇಳಿದು, ಕಾಂಗ್ರೆಸ್ ಬಲ 17ಕ್ಕೆ ಏರಿರುತ್ತಿತ್ತು. ಜೆಡಿಎಸ್ ಜತೆಗಿನ ಸಖ್ಯದಿಂದಾಗಿ ಎಂಟು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಪ್ರಯಾಸವಿಲ್ಲದೇ ದಡ ಸೇರಿದರು. ಅಸಾಧ್ಯ ಎನಿಸಬಹುದಾದ ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಮೈಸೂರು, ಬೆಂಗಳೂರಿನ ಎರಡು ಕ್ಷೇತ್ರಗಳಲ್ಲಿ ಒಕ್ಕಲಿಗರ ಮತಗಳು ಪೂರ್ತಿಯಾಗಿ ಜೆಡಿಎಸ್ ಕಾರಣಕ್ಕೆ ಬಿಜೆಪಿ ಕಡೆ ಹರಿದವು. ಹೀಗಾಗಿ, ಹಿನ್ನಡೆಯಾದರೂ ತಲೆ ಎತ್ತಿ ನಡೆಯಬಹುದಾದಷ್ಟು ಫಲಿತಾಂಶ ಬಿಜೆಪಿಗೆ ದಕ್ಕಿತು.

ಡಿಕೆಶಿಗೆ ಮುಖಭಂಗ: ಒಕ್ಕಲಿಗ ಸಮುದಾಯದ ನಾಯಕತ್ವಕ್ಕಾಗಿ ನಡೆಯುತ್ತಿದ್ದ ಪೈಪೋಟಿಯಲ್ಲಿ ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತೀವ್ರ ಮುಖಭಂಗ ಅನುಭವಿಸಿದ್ದಾರೆ.

ತಮ್ಮ ಭದ್ರಕೋಟೆಯಾದ ಗ್ರಾಮಾಂತರದಲ್ಲಿ ತನ್ನ ತಮ್ಮನನ್ನೇ ಗೆಲ್ಲಿಸಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಮತ ಬಾಹುಳ್ಯ ಹಾಗೂ ಮತ ಹಾಕಿಸುವಲ್ಲಿ ತಮ್ಮದೇ ಪ್ರಭಾವ ಬೀರುವ ಒಕ್ಕಲಿಗರೇ ಪ್ರಧಾನವಾಗಿರುವ ಕ್ಷೇತ್ರಗಳಲ್ಲೆಲ್ಲ ಬಿಜೆಪಿ ಗೆದ್ದಿದೆ. ಪ್ರಜ್ವಲ್ ಪ್ರಮಾದ ಹಾಗೂ ಕಾಂಗ್ರೆಸ್–ಜೆಡಿಎಸ್ ಪೈಪೋಟಿ ಮಧ್ಯೆ ಹಾಸನ ಮಾತ್ರ ಕಾಂಗ್ರೆಸ್‌ಗೆ ದಕ್ಕಿದೆ.

ಒಕ್ಕಲಿಗ ಸಮುದಾಯವು ಶಿವಕುಮಾರ್ ಅವರ ಬೆನ್ನಿಗೆ ಇಲ್ಲ ಎಂಬುದನ್ನು ಫಲಿತಾಂಶ ತೋರಿಸಿದೆ. ಈ ಸಮುದಾಯದ ಹೆಚ್ಚಿನವರ ನಿಷ್ಠೆ ಎಚ್.ಡಿ. ದೇವೇಗೌಡರಿಗೆ ವಿನಃ ಶಿವಕುಮಾರ್ ಅವರಿಗಲ್ಲ ಎಂಬುದು ಫಲಿತಾಂಶದ ಸಾರ. ಈ ಚುನಾವಣೆಯಲ್ಲಿ ಸಮುದಾಯದ ಮೇಲೆ ಹಿಡಿತ ಹೊಂದಿದ ಧಾರ್ಮಿಕ ಕೇಂದ್ರಗಳೂ ಪ್ರಧಾನ ಪಾತ್ರ ವಹಿಸಿರುವುದನ್ನೂ ಕಡೆಗಣಿಸುವ ಹಾಗಿಲ್ಲ.

ಜೆಡಿಎಸ್‌ಗೆ ಚೈತನ್ಯ: ವಿಧಾನಸಭೆ ಚುನಾವಣೆಯಲ್ಲಿ 19 ಕ್ಷೇತ್ರದಲ್ಲಷ್ಟೇ ಗೆಲ್ಲಲು ಸಾಧ್ಯವಾಗಿದ್ದರಿಂದ ತೀವ್ರ ಆಘಾತಕ್ಕೆ ಒಳಗಾಗಿದ್ದ ಜೆಡಿಎಸ್ ಭವಿಷ್ಯ ಕತ್ತಲಲ್ಲಿ ಇತ್ತು. ಅನೇಕ ಶಾಸಕರನ್ನು ಸೆಳೆದು, ಜೆಡಿಎಸ್ ದುರ್ಬಲಗೊಳಿಸುವ ಯತ್ನವನ್ನು ಕಾಂಗ್ರೆಸ್ ನಾಯಕರು ಹೆಣೆದಿದ್ದರು. ಒಂದೂ ಕ್ಷೇತ್ರದಲ್ಲಿ ಗೆಲ್ಲದೇ ಇದ್ದರೆ ಜೆಡಿಎಸ್ ಮೂಲೆಗುಂಪಾಗಲಿತ್ತು. ಮಂಡ್ಯದಲ್ಲಿ ಕುಮಾರಸ್ವಾಮಿ, ಕೋಲಾರದಲ್ಲಿ ಮಲ್ಲೇಶಬಾಬು ಗೆದ್ದಿದ್ದು, ಪಕ್ಷಕ್ಕೆ ಜೀವದ್ರವ್ಯ ಸಿಕ್ಕಂತಾಗಿದೆ. ಇನ್ನು ಬಿಜೆಪಿ ಗೆಲುವಿಗೆ ಊರುಗೋಲಾಗಿರುವುದರಿಂದಾಗಿ, ಆ ಪಕ್ಷದ ನೆರವಿನ ಆಸರೆಯೂ ದಳಪತಿಗಳಿಗೆ ಸಿಗಲಿದೆ. ಇದು ಪಕ್ಷದ ಉತ್ಸಾಹವನ್ನು ಇಮ್ಮಡಿಗೊಳಿಸಿದ್ದು, ಮತ್ತೆ ಪುಟಿದೇಳುವ ಆಸೆಗೆ ಚುನಾವಣೆ ನೀರೆರದಿದೆ.

ಸರ್ಕಾರ ಭದ್ರ: ಬಿಜೆಪಿ 300ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆದ್ದು, ಅಧಿಕಾರ ಹಿಡಿದರೆ ರಾಜ್ಯ ಸರ್ಕಾರ ಪತನವಾಗುತ್ತದೆ. ಕಾಂಗ್ರೆಸ್ ಇಬ್ಭಾಗವಾಗುತ್ತದೆ ಎಂದು ಕಮಲದ ನಾಯಕರು ಹೇಳಿದ್ದುಂಟು. ಪ್ರಧಾನಿಯಾಗುವವರಿಗೆ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳುವುದೇ ಸವಾಲಾಗುವ ಪರಿಸ್ಥಿತಿ ಇದೆ. ಚಂದ್ರಬಾಬು ನಾಯ್ಡು ಮತ್ತು ನಿತೀಶ್ ಕುಮಾರ್ ಅವರ ಹಂಗಿನಲ್ಲಿರಬೇಕಾದ ಅನಿವಾರ್ಯ ಬಿಜೆಪಿಗೆ ಇದೆ. ಹೀಗಿರುವಾಗ, ಇನ್ನು ನಾಲ್ಕು ವರ್ಷ ಕಾಂಗ್ರೆಸ್ ಸರ್ಕಾರವನ್ನು ಪತನಗೊಳಿಸುವ ಆಸೆಗೂ ಈ ಫಲಿತಾಂಶ ಕಲ್ಲುಹಾಕಿದೆ.

ಸಂಕಥನಗಳ ಒಡೆದುಹಾಕಿದ ಚುನಾವಣೆ

● ಸುಕೃತ ಎಸ್.

ಸುಮಾರು ಎಂಬತ್ತು ದಿನಗಳ ಸುದೀರ್ಘ ಚುನಾವಣೆ. ಪ್ರಚಾರವೂ ಅಷ್ಟೇ ಅಬ್ಬರದಲ್ಲಿ, ಅಷ್ಟೇ ವ್ಯಾಪಕವಾಗಿ ನಡೆಯಿತು. ಈಗ ಫಲಿತಾಂಶ ಹೊರಬಿದ್ದ ಸಮಯ. ಪತ್ರಿಕೆಯು ಮುದ್ರಣಕ್ಕೆ ಹೋಗುವವರೆಗೂ ಸ್ಪಷ್ಟ ಫಲಿತಾಂಶ ಪ್ರಕಟಗೊಂಡಿಲ್ಲ. ಆದರೆ, ಎನ್‌ಡಿಎ ಮೈತ್ರಿಕೂಟವು ಸರಳ ಬಹುಮತದ ಮುನ್ನಡೆಯನ್ನಂತೂ ಸಾಧಿಸಿದೆ.

ಈ ಬಾರಿಯ ಚುನಾವಣೆಯು ಬಿಜೆಪಿಗೆ ಪ್ರಯಾಸವನ್ನೇ ನೀಡಿದೆ. ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ಪ್ರಬಲವಾಗಿ ಸವಾಲೊಡ್ಡುವಲ್ಲಿ ಯಶಸ್ವಿಯಾಗಿದೆ. ಸೋಲು–ಗೆಲುವು ಯಾರದ್ದೇ ಆಗಿದ್ದರೂ 2024ರ ಲೋಕಸಭಾ ಚುನಾವಣೆಯ ಪ್ರಚಾರವು ಹಲವು ಸಂಕಥನಗಳನ್ನು ಒಡೆದು ಹಾಕಿದೆ ಮತ್ತು ಹಲವು ಸಂಕಥನಗಳನ್ನು ಹುಟ್ಟುಹಾಕಿದೆ.

ಸಂಸತ್ತಿನಲ್ಲಿನ ತಮ್ಮ ಕೊನೆಯ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಮೊದಲ ಬಾರಿಗೆ 'ಚಾರ್‌ಸೌ ಪಾರ್' (400ಕ್ಕೂ ಹೆಚ್ಚು ಸ್ಥಾನಗಳು) ಎನ್ನುವ ಘೋಷಣೆಯನ್ನು ಕೂಗಿದ್ದರು. ಜನವರಿಯಲ್ಲಿ ರಾಮ ಮಂದಿರದ ಉದ್ಘಾಟನೆಯೂ ನಡೆಯಿತು. ಇದು ಬಿಜೆಪಿಯ ವಿಶ್ವಾಸವನ್ನು ಸಹಜವಾಗಿಯೇ ಹೆಚ್ಚಿಸಿತ್ತು. ಇದರ ನಡುವೆಯೇ ಸಂವಿಧಾನವನ್ನು ಬದಲಿಸುವ ಹೇಳಿಕೆಗಳನ್ನು ವಿವಿಧ ರಾಜ್ಯಗಳ ಪಕ್ಷದ ಕೆಲವು ನಾಯಕರು ನೀಡಿದರು. ಇದು ರಾಷ್ಟ್ರಮಟ್ಟದ ಸುದ್ದಿಯಾಯಿತು. ಈ ಎಲ್ಲದರ ನಡುವೆ ಒಂದಕ್ಕೊಂದು ಕಾರ್ಯಕಾರಣ ಸಂಬಂಧ ಏರ್ಪಟ್ಟವು. ಇದನ್ನು ವಿರೋಧ ಪಕ್ಷಗಳು ತಮ್ಮ ಪ್ರಚಾರದ ಮುಖ್ಯ ವಿಷಯವನ್ನಾಗಿಸಿಕೊಂಡವು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸರಿಸುಮಾರು ತಮ್ಮ ಎಲ್ಲ ಚುನಾವಣಾ ಪ್ರಚಾರ ಸಭೆಗಳಲ್ಲೂ ಸಂವಿಧಾನದ ಹೊತ್ತಗೆಯನ್ನು ಹಿಡಿದು ಭಾಷಣ ಮಾಡಿದ್ದಾರೆ. ಇದು ಸಂವಿಧಾನವನ್ನು ಉಳಿಸಿಕೊಳ್ಳುವ, ಮೀಸಲಾತಿಯನ್ನು ಉಳಿಸಿಕೊಳ್ಳುವ ಚುನಾವಣೆ ಎಂದು ಪದೇ ಪದೇ ಹೇಳಿದ್ದಾರೆ. 'ಇಂಡಿಯಾ' ಮೈತ್ರಿಕೂಟದ ಎಲ್ಲ ನಾಯಕರು ಈ ವಿಷಯವನ್ನು ತಮ್ಮ ಭಾಷಣಗಳಲ್ಲಿ ಪ್ರಸ್ತಾಪಿಸಿದ್ದರು. ಬಿಜೆಪಿ ಎಣಿಸಿದಂತೆ ರಾಮ ಮಂದಿರವೂ ಚುನಾವಣಾ ಪ್ರಚಾರದ ಪ್ರಮುಖ ವಿಷಯವೇ ಆಗಲಿಲ್ಲ.

ಪ್ರಧಾನಿ ಮೋದಿ ಅವರ ಭಾಷಣಗಳು ಹಾಗೂ ಅವರು ವಿವಿಧ ಸುದ್ದಿ ಸಂಸ್ಥೆಗಳಿಗೆ ನೀಡಿದ ಸಂದರ್ಶನಗಳು ಈ ಬಾರಿಯ ಚುನಾವಣೆಯ ಪ್ರಮುಖ ಚರ್ಚಾ ವಿಷಯವಾಗಿದ್ದವು. ಜೊತೆಗೆ, ಈ ಭಾಷಣ ಹಾಗೂ ಸಂದರ್ಶನಗಳೇ ಬಿಜೆಪಿಯ ಚುನಾವಣಾ ವಿಚಾರಗಳೇ ಆಗಿವೆಯೇನೋ ಎಂಬಂತೆ ಪ್ರಚಾರದುದ್ದಕ್ಕೂ ಕಂಡುಬಂದಿತು.

ತಮ್ಮ ಭಾಷಣಗಳಲ್ಲಿ ಪ್ರಧಾನಿ ಮೋದಿ ಅವರು ಪ್ರಸ್ತಾಪಿಸುವ ವಿಚಾರಗಳಿಗೆ ವಿರುದ್ಧವಾದ ಅಭಿಪ್ರಾಯವನ್ನು ಖುದ್ದು ಪ್ರಧಾನಿ ಅವರೇ ತಮ್ಮ ಸಂದರ್ಶನಗಳಲ್ಲಿ ನೀಡಿದ್ದು ಪಕ್ಷಕ್ಕೆ ತುಸು ಮುಜುಗರವನ್ನೇ ಉಂಟು ಮಾಡಿತು. ದೇವರು ತನ್ನನ್ನು ಯಾವುದೋ ಕಾರ್ಯಸಾಧನೆಗಾಗಿಯೇ ಕಳುಹಿಸಿದ್ದಾರೆ ಎನ್ನಿಸುತ್ತಿದೆ ಎಂದು ಪ್ರಧಾನಿ ಅವರು ಹೇಳಿದ್ದು, ಪುರಿಯ ಜಗನ್ನಾಥನು ಪ್ರಧಾನಿ ಮೋದಿ ಅವರು ಭಕ್ತ ಎಂದು ಪಕ್ಷದ ನಾಯಕ ಸಂಬಿತ್ ಪಾತ್ರಾ ಅವರು ಹೇಳಿಕೆ ನೀಡಿದ್ದು (ಬಾಯಿತಪ್ಪಿನಿಂದ ಹೇಳಿದ್ದಾಗಿ ಅವರು ನಂತರ ಹೇಳಿಕೆ ನೀಡಿದರು) ಹಾಸ್ಯಾಸ್ಪದವಾಯಿತು.

ಬೆಲೆ ಏರಿಕೆ, ನಿರುದ್ಯೋಗ, ಅಗ್ನಿವೀರ ಯೋಜನೆ, ಸಂವಿಧಾನ ಉಳಿವು –ಇವು ಆಡಳಿತ ಪಕ್ಷದ ವಿರುದ್ಧ 'ಇಂಡಿಯಾ' ಮೈತ್ರಿಕೂಟವು ತನ್ನ ಪ್ರಚಾರದಲ್ಲಿ ಚರ್ಚಿಸಿದ್ದ ವಿಚಾರಗಳು. ಇನ್ನೊಂದೆಡೆ, ತನ್ನ ನ್ಯಾಯಪತ್ರದಲ್ಲಿನ ಹಲವು ಗ್ಯಾರಂಟಿಗಳು, ಜಾತಿ ಜನಗಣತಿ, ಮೀಸಲಾತಿ ಮಿತಿ ಏರಿಕೆ– ಇವು ಕಾಂಗ್ರೆಸ್ ಪಕ್ಷವು ಜನರಿಗೆ ನೀಡಿದ ಭರವಸೆಗಳು. ಆದರೆ, ಬಿಜೆಪಿಯ ಪ್ರಚಾರವು ಮುಸ್ಲಿಂ ವಿರೋಧಕ್ಕಷ್ಟೇ ಸೀಮಿತವಾಯಿತು. ದೇಶದೆಲ್ಲೆಡೆ 370ನೇ ವಿಧಿ ರದ್ದತಿಯ ಕುರಿತು ಬಿಜೆಪಿ ಪ್ರಚಾರ ಮಾಡಿತು. ಆದರೆ, ಕಾಶ್ಮೀರದಲ್ಲಿಯೇ ಅಭ್ಯರ್ಥಿಗಳನ್ನು ಪಕ್ಷವು ನಿಲ್ಲಿಸಲಿಲ್ಲ. ಹೀಗೆ, ಈ ಬಾರಿಯ ಪ್ರಚಾರವು ಹಲವು ಸಂಕಥನಗಳನ್ನು ಒಡೆದು ಹಾಕಿದೆ. ಸಂವಿಧಾನ ಉಳಿವು ಪ್ರಮುಖವಾದುದು ಎನ್ನುವ ಹೊಸ ಚರ್ಚೆಯನ್ನು ಹುಟ್ಟುಹಾಕಿದೆ.

ಶ್ರೀಮಂತ ಉದ್ಯಮಿ ಗೌತಮ್ ಅದಾನಿ ಅವರ ವಿಚಾರವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕಳೆದ ಎರಡು–ಮೂರು ವರ್ಷಗಳಿಂದ ಮಾತನಾಡುತ್ತಲೇ ಬಂದಿದ್ದಾರೆ. ಇದಕ್ಕಾಗಿಯೇ ತಮ್ಮ ಸಂಸತ್ ಸದಸ್ಯತ್ವವನ್ನು ಕಸಿದುಕೊಳ್ಳಲಾಯಿತು ಎಂದು ಅವರು ಹೇಳುತ್ತಲೇ ಬಂದಿದ್ದಾರೆ. ಕಳೆದ 10 ವರ್ಷಗಳಲ್ಲಿ ಸಾರ್ವಜನಿಕವಾಗಿ ಅದಾನಿ ಹಾಗೂ ಅಂಬಾನಿ ಅವರ ಹೆಸರು ಹೇಳದೇ ಇದ್ದ ಪ್ರಧಾನಿ ಮೋದಿ ಅವರು ತಮ್ಮ ಪ್ರಚಾರ ಭಾಷಣವೊಂದರಲ್ಲಿ ಅದಾನಿ ಹಾಗೂ ಅಂಬಾನಿ ಅವರ ಹೆಸರುಗಳನ್ನು ಪ್ರಸ್ತಾಪಿಸಿದರು. ಇದು ಕೂಡ ಈ ಚುನಾವಣಾ ಪ್ರಚಾರದ ಪ್ರಮುಖಾಂಶ.

ಪ್ರಚಾರ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಮತ್ತೊಂದು ವಿಚಾರವಿದೆ. 'ಇಂಡಿಯಾ' ಮೈತ್ರಿಕೂಟದ ಕುರಿತು, ಮೈತ್ರಿಕೂಟವು ಶಕ್ತಿಯುತವಾಗಿಲ್ಲ, ನಾಯಕರ ನಡುವೆ ತಾಳಮೇಳವಿಲ್ಲ ಎನ್ನುವ ಕುರಿತು ಬಿಜೆಪಿಯು ತನ್ನ ಪ್ರಚಾರವನ್ನು ಮುಂದಿಟ್ಟಿತು. ಆದರೆ, ಈ ಆರೋಪಗಳನ್ನು ಮೈತ್ರಿಕೂಟವು ಸುಳ್ಳು ಮಾಡಿದೆ. ಪ್ರಚಾರ ನಡೆದ ಎಲ್ಲದಿನವೂ ಇಡೀ ಮೈತ್ರಿಕೂಟದ ನಾಯಕ ಮಾತುಗಳು, ಅಭಿಪ್ರಾಯಗಳು ಒಂದೇ ಆಗಿದ್ದವು. ಎಲ್ಲಿಯೂ ಮೈತ್ರಿಕೂಟದ ನಾಯಕರಿಂದ ವ್ಯತಿರಿಕ್ತ ಅಭಿಪ್ರಾಯಗಳು ಮೂಡಲಿಲ್ಲ.

ರಾಹುಲ್ ಗಾಂಧಿಯ 'ಪ್ರೀತಿಯ ಅಂಗಡಿ'


2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಮುನ್ನವೂ, ಬಂದ ಮೇಲೂ ಬಿಜೆಪಿಯು ರಾಹುಲ್ ಗಾಂಧಿ ಅವರ ವ್ಯಕ್ತಿತ್ವವನ್ನು ಅಪಹಾಸ್ಯ ಮಾಡುತ್ತಲೇ ಬಂದಿದೆ. ರಾಹುಲ್ ಅವರ ಕುರಿತು ಬಂದ ಸುಳ್ಳು ಸುದ್ದಿಗಳೂ ದೊಡ್ಡ ಪ್ರಮಾಣದಲ್ಲಿದ್ದವು ಮತ್ತು ಈಗಲೂ ಇವೆ. ಫಲಿತಾಂಶದ ನಂತರ ರಾಹುಲ್ ಅವರು ಇಟಲಿಗೆ ಓಡಿಹೋಗುತ್ತಾರೆ, ಥಾಯ್ಲೆಂಡ್‌ಗೆ ಓಡುತ್ತಾರೆ, ಬ್ಯಾಂಕಾಕ್‌ಗೆ ಹೋಗುತ್ತಾರೆ ಎಂದೆಲ್ಲಾ ಸುಳ್ಳು ಸುದ್ದಿ ಹಬ್ಬಿಸಲಾಗಿತ್ತು. ಆದರೆ, ಭಾರಿ ಬಹುಮತದೊಂದಿಗೆ ರಾಹುಲ್ ಗಾಂಧಿ ಅವರು ತಾವು ಸ್ಪರ್ಧಿಸಿದ್ದ ವಯನಾಡ್ ಹಾಗೂ ರಾಯಬರೇಲಿ ಕ್ಷೇತ್ರಗಳಿಂದ ಗೆದ್ದು ಬಂದಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಕಾಣಸಿಗುವ ರಾಹುಲ್ ಗಾಂಧಿಗೂ ವಾಸ್ತವದಲ್ಲಿ ಇರುವ ರಾಹುಲ್ ಗಾಂಧಿಗೂ ಬಹಳ ವ್ಯತ್ಯಾಸವಿದೆ ಎಂದು ಜಗತ್ತಿಗೆ ತಿಳಿದಿದ್ದು, ಅವರ 'ಭಾರತ ಜೊಡೊ' ಹಾಗೂ 'ಭಾರತ ಜೊಡೊ ನ್ಯಾಯ ಯಾತ್ರೆ'ಗಳಿಂದ. ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿ ತೆರೆಯುತ್ತೇನೆ ಎಂದು ಅವರು ಪದೇ ಪದೇ ತಮ್ಮ ಭಾಷಣಗಳಲ್ಲಿ ಹೇಳಿಕೊಂಡಿದ್ದರು. ಈ ಯಾತ್ರೆಯ ಕಾರಣಕ್ಕಾಗಿ ಪಕ್ಷಕ್ಕೆ ಎಷ್ಟು ಮತಗಳು ಬಂದವು ಎನ್ನುವುದು ಚರ್ಚೆಯ ವಿಚಾರ. ಆದರೆ, ರಾಹುಲ್ ಅವರ ವ್ಯಕ್ತಿತ್ವದ ಪರಿಚಯ ಆಗಿದ್ದು ಮಾತ್ರ ಯಾತ್ರೆಯಿಂದಲೇ.

ರಾಜಕೀಯ ಸಮೀಕರಣ ಬದಲಿಸಿದ ಫಲಿತಾಂಶ

ಬಹುತೇಕ ರಾಜ್ಯಗಳಲ್ಲಿ ನಿರೀಕ್ಷಿತ ಫಲಿತಾಂಶ ಬಂದಿದ್ದರೂ, ಕೆಲವು ರಾಜ್ಯಗಳು ಅನಿರೀಕ್ಷಿತ ಫಲಿತಾಂಶಕ್ಕೆ ಸಾಕ್ಷಿಯಾಗಿವೆ. ಈ ಫಲಿತಾಂಶವು ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಸಂಖ್ಯೆ ಕುಸಿಯಲು ಕಾರಣವಾಗಿದ್ದರೆ, ಕೆಲವೆಡೆ 'ಇಂಡಿಯಾ' ಮೈತ್ರಿಕೂಟದ ಲೆಕ್ಕಾಚಾರವನ್ನೂ ತಲೆಕೆಳಗು ಮಾಡಿದೆ. ಇದು ಒಟ್ಟಾರೆ ದೇಶದ ರಾಜಕೀಯ ಸಮೀಕರಣವು ಬದಲಾಗಲು ಕಾರಣವಾಗಿದೆ

2024ರ ಚುನಾವಣೆಯಲ್ಲಿ ಎನ್‌ಡಿಎ ಮತ್ತು ಇಂಡಿಯಾ ಮೈತ್ರಿಕೂಟದ ಮುನ್ನಡೆ ತೋರಿಸುವ ನಕ್ಷೆ



ಉತ್ತರ ಪ್ರದೇಶ: ಉತ್ತರ ಪ್ರದೇಶದಲ್ಲಿ ಬಿಜೆಪಿ ಮತ್ತು ಎನ್‌ಡಿಎ ಮೈತ್ರಿಕೂಟಕ್ಕೆ ಭಾರಿ ಹಿನ್ನಡೆಯಾಗಿದೆ. ಫಲಿತಾಂಶದ ಚಿತ್ರಣ ಮತ್ತು ರಾಜಕೀಯ ಲೆಕ್ಕಾಚಾರ ಬದಲಾಗಲು ಉತ್ತರ ಪ್ರದೇಶದಲ್ಲಿನ ಫಲಿತಾಂಶವೇ ಕಾರಣ. 'ಇಂಡಿಯಾ' ಮೈತ್ರಿಕೂಟದ ಅಡಿ ಸ್ಪರ್ಧಿಸಿದ್ದ ಎಸ್‌ಪಿ, ಕಾಂಗ್ರೆಸ್ ಮತ್ತು ಆರ್‌ಎಲ್‌ಡಿ ಒಟ್ಟು 45 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿವೆ. ಬಿಜೆಪಿಗೆ ಮುನ್ನಡೆ ದೊರಕಿದ್ದು 33 ಕ್ಷೇತ್ರಗಳಲ್ಲಿ ಮಾತ್ರ.

ಮತ ಪ್ರಮಾಣ: **41.37%** ಬಿಜೆಪಿ
9.39% ಬಿಎಸ್‌ಪಿ
3.96% ಇತರೆ
45.28% 'ಇಂಡಿಯಾ' ಮೈತ್ರಿಕೂಟ

ಬಿಹಾರ: ಅಚ್ಚರಿಯ ಫಲಿತಾಂಶಕ್ಕೆ ಸಾಕ್ಷಿಯಾದ ರಾಜ್ಯಗಳಲ್ಲಿ ಬಿಹಾರವೂ ಒಂದು. ಅತಿಹೆಚ್ಚು ಮತ ಪಡೆದ ಪಕ್ಷವಾಗಿ ಆರ್‌ಜೆಡಿ ಹೊರಹೊಮ್ಮಿದರೂ, ಅದಕ್ಕೆ ಮುನ್ನಡೆ ದೊರಕಿದ್ದು ನಾಲ್ಕು ಕ್ಷೇತ್ರಗಳಲ್ಲಿ ಮಾತ್ರ. 'ಇಂಡಿಯಾ' ಮೈತ್ರಿಕೂಟದ ಕಾಂಗ್ರೆಸ್ ಮತ್ತು ಎಡಪಕ್ಷಗಳು ನಾಲ್ಕು ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿವೆ. ಬಿಜೆಪಿ–ಜೆಡಿಯು–ಎಲ್‌ಜೆಪಿ ಮೈತ್ರಿಕೂಟವು 29 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿವೆ. ಈ ರಾಜ್ಯದಲ್ಲಿ 'ಇಂಡಿಯಾ' ಮೈತ್ರಿಕೂಟವು ಭಾರಿ ಮುನ್ನಡೆ ಸಾಧಿಸುವ ನಿರೀಕ್ಷೆ ಇರಿಸಿಕೊಂಡಿತ್ತು. ಆದರೆ ಮುನ್ನಡೆ ದೊರಕಿದ್ದು ಎಂಟು ಕ್ಷೇತ್ರಗಳಲ್ಲಿ ಮಾತ್ರ

22.08% ಆರ್‌ಜೆಡಿ (ಇಂಡಿಯಾ ಮೈತ್ರಿಕೂಟದ ಭಾಗ)

ಮತ ಪ್ರಮಾಣ:
45.52% ಎನ್‌ಡಿಎ
13.3% ಇತರೆ
19.1% 'ಇಂಡಿಯಾ' ಮೈತ್ರಿಕೂಟ (ಕಾಂಗ್ರೆಸ್ ಮತ್ತು ಎಡಪಕ್ಷಗಳು)

ಈಶಾನ್ಯ ಭಾರತದಲ್ಲಿ ಬದಲಾವಣೆ: ಇಲ್ಲಿನ ಮಣಿಪುರ, ನಾಗಾಲ್ಯಾಂಡ್, ಮಿಜೋರಾಂ ರಾಜ್ಯಗಳ ಎಲ್ಲ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮುನ್ನಡೆ ಸಾಧಿಸಿದೆ. ಅಸ್ಸಾಂನ ಕೆಲವು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆದ್ದಿದೆ. ಮಣಿಪುರ ಗಲಭೆ ಮತ್ತು ಗಲಭೆಯನ್ನು ಬಿಜೆಪಿ ಸರ್ಕಾರ ನಿರ್ವಹಿಸಿದ ರೀತಿಗೆ ಇಲ್ಲಿನ ಜನರು ಪ್ರತಿಕೂಲವಾಗಿ ಪ್ರತಿಕ್ರಿಯಿಸಿದ್ದಾರೆ ಎಂದು ವಿಶ್ಲೇಷಿಸಲಾಗಿದೆ. ಆದರೆ ಅರುಣಾಚಲ ಪ್ರದೇಶದಲ್ಲಿ ಬಿಜೆಪಿ ಎಲ್ಲಾ ಎರಡು ಕ್ಷೇತ್ರಗಳಲ್ಲೂ ಮುನ್ನಡೆ ಸಾಧಿಸಿದೆ

ಪಶ್ಚಿಮ ಬಂಗಾಳ: ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 18 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ಈ ಬಾರಿ ತಮ್ಮ ಸ್ಥಾನವನ್ನು ಉತ್ತಮಪಡಿಸಿಕೊಳ್ಳುವ ಯತ್ನದಲ್ಲಿದ್ದ ಬಿಜೆಪಿ, ಟಿಎಂಸಿ ವಿರುದ್ಧ ಪ್ರಬಲವಾದ ಪ್ರಚಾರ ನಡೆಸಿತ್ತು. ಆದರೆ 12 ಕ್ಷೇತ್ರಗಳನ್ನಷ್ಟೇ ಉಳಿಸಿಕೊಳ್ಳುವುದಕ್ಕೆ ಬಿಜೆಪಿ ತೃಪ್ತಿ ಪಡಬೇಕಾಯಿತು. ಕಾಂಗ್ರೆಸ್ ಒಂದು ಮತ್ತು ಟಿಎಂಸಿ 29 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿವೆ. ಒಟ್ಟು 'ಇಂಡಿಯಾ' ಮೈತ್ರಿಕೂಟವು ಒಟ್ಟು 30 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ.

ಮತ ಪ್ರಮಾಣ:
57.8% 'ಇಂಡಿಯಾ' ಮೈತ್ರಿಕೂಟ (ಟಿಎಂಸಿ, ಕಾಂಗ್ರೆಸ್, ಎಡಪಕ್ಷಗಳು)
38.7% ಬಿಜೆಪಿ
3.5% ಇತರೆ

ಗುಜರಾತ್: 2019ರ ಚುನಾವಣೆಯಲ್ಲಿ ರಾಜ್ಯದ 26 ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿತ್ತು. ಈ ಚುನಾವಣೆಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಕನಿಷ್ಠ 5 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸುವುದಾಗಿ ಮತ್ತು ಗಾಂಧಿನಗರ ಕ್ಷೇತ್ರದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು 10 ಲಕ್ಷ ಮತಗಳ ಅಂತರದಿಂದ ಗೆಲ್ಲಿಸುವುದಾಗಿ ರಾಜ್ಯ ಬಿಜೆಪಿ ಘಟಕ ಘೋಷಿಸಿತ್ತು. ಆದರೆ ಅಮಿತ್ ಅವರು 10 ಲಕ್ಷ ಮತಗಳ ಅಂತರದಿಂದ ಗೆಲ್ಲಲು ಸಾಧ್ಯವಾಗಲಿಲ್ಲ. ಬಿಜೆಪಿ ಅಭ್ಯರ್ಥಿಗಳು ಐದು ಲಕ್ಷಕ್ಕಿಂತಲೂ ಹೆಚ್ಚು ಅಂತರದಿಂದ ಗೆದ್ದಿದ್ದು ಮೂರು ಕ್ಷೇತ್ರಗಳಲ್ಲಿ ಮಾತ್ರ. ಬಿಜೆಪಿಯ ಪ್ರಾಬಲ್ಯದ ನಡುವೆಯೂ ಒಂದು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆದ್ದಿದ್ದಾರೆ. ಗುಜರಾತ್‌ನಲ್ಲಿ ಬಿಜೆಪಿ ಒಂದು ಸ್ಥಾನವನ್ನು ಕಳೆದುಕೊಂಡಂತಾಗಿದೆ

ಮತ ಪ್ರಮಾಣ:
61.86% ಬಿಜೆಪಿ
33.95% 'ಇಂಡಿಯಾ' ಮೈತ್ರಿಕೂಟ
4.19% ಇತರೆ

ಕೇರಳ: ಕೇರಳದ 20 ಕ್ಷೇತ್ರಗಳಲ್ಲಿ 18ರಲ್ಲಿ ಕಾಂಗ್ರೆಸ್ ನೇತೃತ್ವದ ಎಲ್‌ಡಿಎಫ್ ಗೆದ್ದಿದೆ. ಎಲ್‌ಡಿಎಫ್‌ನಲ್ಲಿನ ಎಲ್ಲಾ ಪಕ್ಷಗಳೂ 'ಇಂಡಿಯಾ' ಮೈತ್ರಿಕೂಟದಲ್ಲಿವೆ. 'ಇಂಡಿಯಾ' ಮೈತ್ರಿಕೂಟದಲ್ಲಿದ್ದೂ ಪ್ರತ್ಯೇಕವಾಗಿ ಸ್ಪರ್ಧಿಸಿದ್ದ ಎಡಪಕ್ಷಗಳು ಒಂದು ಕ್ಷೇತ್ರದಲ್ಲಷ್ಟೇ ಗೆದ್ದಿವೆ. ಅಚ್ಚರಿ ಮೂಡಿಸುವಂತೆ ಒಂದು ಕ್ಷೇತ್ರದಲ್ಲಿ ಬಿಜೆಪಿ ಗೆದ್ದು, ಕೇರಳದಲ್ಲಿ ಖಾತೆ ತೆರೆದಿದೆ. ತಿರುವನಂತಪುರದಲ್ಲಿ ಕಾಂಗ್ರೆಸ್‌ನ ಅಭ್ಯರ್ಥಿ ಶಶಿ ತರೂರ್ ಅವರಿಗೆ ಬಿಜೆಪಿಯ ರಾಜೀವ್ ಚಂದ್ರಶೇಖರ್ ಪ್ರಬಲ ಪೈಪೋಟಿ ನೀಡಿದ್ದರು. ಇಲ್ಲಿ ತರೂರ್ ಗೆಲುವು ಪ್ರಯಾಸದ್ದಾಗಿತ್ತು. 'ಇಂಡಿಯಾ' ಮೈತ್ರಿಕೂಟಕ್ಕೆ 19 ಸ್ಥಾನಗಳು ಬಂದಿದ್ದರೂ, ಕೇರಳದಲ್ಲಿ ತನ್ನ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಿದೆ

ಮತ ಪ್ರಮಾಣ:
16.68% ಬಿಜೆಪಿ
75.51% 'ಇಂಡಿಯಾ' ಮೈತ್ರಿಕೂಟ
7.81% ಇತರೆ

ಆಧಾರ: ಪಿಟಿಐ, ಚುನಾವಣಾ ಆಯೋಗ

ತಮಿಳುನಾಡು: ತಮಿಳುನಾಡಿನಲ್ಲಿ ಬಿಜೆಪಿ ಈ ಬಾರಿ ಉತ್ತಮ ಸಾಧನೆ ಮಾಡಲಿದೆ. ರಾಜ್ಯದಲ್ಲಿ ಬಿಜೆಪಿ ಮತ ಪ್ರಮಾಣ ಎರಡಂಕಿಯಷ್ಟಾಗಲಿದೆ ಎಂದು ಪಕ್ಷವೇ ಹೇಳಿಕೊಂಡಿತ್ತು. ಜತೆಗೆ ಪ್ರಾದೇಶಿಕ ಪಕ್ಷ ಪಿಎಂಕೆ ಒಟ್ಟಿಗೆ ಬಿಜೆಪಿ ಮೈತ್ರಿಯನ್ನೂ ಮಾಡಿಕೊಂಡಿತ್ತು. ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳು ಗೆಲುವಿನ ನಗೆ ಬೀರುವಲ್ಲಿ ವಿಫಲರಾಗಿದ್ದಾರೆ. ಇರುವ 39 ಕ್ಷೇತ್ರಗಳಲ್ಲೂ 'ಇಂಡಿಯಾ' ಮೈತ್ರಿಕೂಟದ ಅಭ್ಯರ್ಥಿಗಳು ಮುನ್ನಡೆ ಸಾಧಿಸಿದ್ದಾರೆ

ಮತ ಪ್ರಮಾಣ:
47.45% 'ಇಂಡಿಯಾ' ಮೈತ್ರಿಕೂಟ: ಡಿಎಂಕೆ, ವಿಸಿಕೆ, ಎಂಡಿಎಂಕೆ, ಕಾಂಗ್ರೆಸ್, ಎಡಪಕ್ಷಗಳು...
11.15% ಬಿಜೆಪಿ
20.5% ಎಐಎಡಿಎಂಕೆ
20.9% ಇತರೆ

2019ರ ಲೋಕಸಭಾ ಚುನಾವಣೆಯ ಫಲಿತಾಂಶ ತೋರಿಸುವ ನಕ್ಷೆ


ಒಡಿಶಾ: ಅನಿರೀಕ್ಷಿತ ಫಲಿತಾಂಶ ಬಂದಿರುವ ರಾಜ್ಯಗಳಲ್ಲಿ ಮೊದಲ ಸಾಲಿನಲ್ಲಿ ನಿಲ್ಲುವುದು ಒಡಿಶಾ. ಆಡಳಿತಾರೂಢ ಬಿಜೆಡಿಯನ್ನು ಅಧಿಕಾರದಿಂದ ದೂರವಿಟ್ಟಿರುವ ಬಿಜೆಪಿ, 21 ಕ್ಷೇತ್ರಗಳ ಪೈಕಿ 19ರಲ್ಲಿ ಮುನ್ನಡೆ ಸಾಧಿಸಿದೆ. ಬಿಜೆಡಿಯು ಒಂದು ಸ್ಥಾನಕ್ಕೆ ಕುಸಿದಿದ್ದರೆ, ಕಾಂಗ್ರೆಸ್ ಒಂದು ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ

ಮತ ಪ್ರಮಾಣ:
37.50% ಬಿಜೆಡಿ
45.32% ಬಿಜೆಪಿ
13% ಕಾಂಗ್ರೆಸ್
4.18% ಇತರೆ

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ಪಕ್ಷಗಳ ಮತಪ್ರಮಾಣ

ಎನ್‌ಡಿಎ ಮೈತ್ರಿಕೂಟಕ್ಕೆ ದೊರೆತ ಮತಗಳಿಗಿಂತ 'ಇಂಡಿಯಾ' ಮೈತ್ರಿಕೂಟಕ್ಕೆ ದೊರೆತ ಮತಗಳೇ ಹೆಚ್ಚು



* ಫಲಿತಾಂಶ ಮತ್ತು ಮುನ್ನಡೆ ವಿವರ ರಾತ್ರಿ 10.30ರವರೆಗೆ

ಗುಂಡಣ್ಣ



ಬಲ್ಲವರಿಂದ ಕಲಿಯುವ ವಿನಯದ ಗುಣ

ನುಡಿ ಬೆಳಗು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ನೀಲಗಾರ ಮೇಳದವರು ಹೇಳಿದ ನೀತಿ ಕಥೆಯಿದು. ಕಲ್ಯಾಣ ಪಟ್ಟಣದಲ್ಲಿ ಬಸವಣ್ಣನವರು ಒಕ್ಕಳ ಅಕ್ಕಿ, ಒಂದು ಬದನೆಕಾಯಿ, ಒಂದು ಮಾನ ತೊಗರಿಬೇಳೆಯಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶಿವಶರಣರಿಗೆ ದಾಸೋಹ ನಡೆಸುತ್ತಿರುತ್ತಾರೆ. ಈ ಕಾರಣಕ್ಕೆ ಜನ ಬಸವೇಶ್ವರರನ್ನು ಹೆಚ್ಚಿನ ಗುರು ಎಂದು ಹೊಗಳುತ್ತಿದ್ದರು. ಆದರೆ ಬಸವಣ್ಣನವರ ಅಂತರಂಗದಲ್ಲಿ ಬೇರೆಯದೆ ಚಿಂತೆಯಿತ್ತು. ತಮ್ಮ ಮಡದಿ ಬಳಿ ನಮಗಿಂತ ಹೆಚ್ಚಿನ ಗುರು ಇಲ್ಲವಲ್ಲೇ ನೀಲಲೋಚನೆ ಎಂದು ತಮ್ಮ ನೋವನ್ನು ಆಗಾಗ ತೋಡಿಕೊಳ್ಳುತ್ತಿದ್ದರು. ಒಮ್ಮೆ ನೀಲಮ್ಮನವರು 'ನಿಮಗಿಂತ ಹೆಚ್ಚಿನ ಗುರು ಇದ್ದಾರೆ. ಅವರು ಸಿಗಬೇಕಾದರೆ ಆನೆ ಗಾತ್ರದ ಪಂಚಲೋಹದ ಗಂಟೆ ಮಾಡಿಸಿ, ಅದಕ್ಕೆ ನಾಲಿಗೆ ಇಡಿಸದೆ ಊರ ಕಡೆಬಾಗಿಲಲ್ಲಿ ನೇತು ಹಾಕಿ. ಅಂತಹ ಗುರು ಒಬ್ಬರು ಬಂದಾಗ ನಾಲಿಗೆಯಿಲ್ಲದ ಗಂಟೆ ಸಪ್ತನಾದ ಮಾಡುತ್ತದೆ' ಎಂದರಂತೆ. ಅದರಂತೆ ಬಸವಣ್ಣ ಪಟ್ಟಣದ ಹೆಬ್ಬಾಗಿಲಿಗೆ ಗಂಟೆ ತೂಗು ಹಾಕಿಸಿ ಇತ್ತ ತಪಸ್ಸಿಗೆ ಕೂತರು. ಇವರ ಭಕ್ತಿ ಪರೀಕ್ಷಿಸಲು ಪ್ರಭುದೇವರು ಸೋತ ಕೈಗಳ ಹೊತ್ತು, ಕುಂಟು ಕಾಲಲ್ಲಿ, ಕಣ್ಣು ಕುರುಡಾಗಿಸಿಕೊಂಡು, ಸತ್ತ ಬಸವನ ಚರ್ಮ ಹೊದ್ದು, ಸತ್ತ ಎಮ್ಮೆಯ ಕರು ಹೆಗಲ ಮೇಲೆ ಹೊತ್ತು ಹೆಬ್ಬಾಗಿಲ ಸಮೀಪ ಬಂದರಂತೆ. ಅಲ್ಲೇ ಇದ್ದ ಹರಳಯ್ಯನವರ ಬೂದಿಗುಡ್ಡೆಯ ಮೇಲೆ ಕೂತು ಭಂಗಿಫಲಾಹಾರ ಸೇವಿಸುತ್ತಾ ಕೂತಾಗ ಸತ್ತಿದ್ದ ಎಮ್ಮೆಯ ಕರು ಎದ್ದು ಹುಲ್ಲು ಮೇಯತೊಡಗಿತ್ತು. ಆಗ ನಾಲಿಗೆ ಇಲ್ಲದ ತೂಗು ಗಂಟೆ ಸಪ್ತನಾದ ಮಾಡಿತು. ಶಿವಗಣಗಳಿಗೆ ದಾಸೋಹ ಮಾಡಿಸುತ್ತಿದ್ದ ಬಸವಣ್ಣನವರಿಗೆ ಈ ಗಂಟೆಯ ನಿನಾದ ಆಗ ಕೇಳಿಸಲಿಲ್ಲವಂತೆ.

ಆಗ ಅಯ್ಯ ಹಸಿವಾಗಿದೆ ಪಟ್ಟಣದೊಳಗೆ ಬಿಡಿ ಎಂದು ಪ್ರಭುದೇವರು ಕಾವಲಿನವನಿಗೆ ಕೋರಿಕೊಂಡರಂತೆ. ಕಾವಲಿಗ ಪಟ್ಟಣದೊಳಗೆ ಪ್ರವೇಶಿಸಲು ಬಿಡದೆ, ಮೂರು ಗುದ್ದು ಹಾಕಿ ಹಿಂದಕ್ಕೆ ತಳ್ಳಿದನಂತೆ. ಆಗ ಗಂಟೆ ಮತ್ತೆ ನಾದ ಮಾಡತೊಡಗಿತು. ದನಿ ಕೇಳಿ ಓಡಿ ಬಂದ ಬಸವಣ್ಣ ಗುರುಕಾಲಿಗೆ ಎರಗಿ ತಮ್ಮ ಗುರು ಮಠಕ್ಕೆ ಬರುವಂತೆ ಪ್ರಾರ್ಥಿಸಿದರು. ನಾ ಬಂದರೆ ನಿಮ್ಮ ಗುರುಮಠ ಲಯವಾಗಿ, ಕಲ್ಯಾಣ ಪಟ್ಟಣ ಹಾಳಾಗಿ ಹೋಗುತ್ತದೆ ಎಂದರೂ ಬಸವಣ್ಣ ಗುರುವನ್ನು ಬಿಡಲಿಲ್ಲ. ನೀವು ದಯಮಾಡಿಸಲೇಬೇಕು ಎಂದು ಪಾದ ಹಿಡಿದರು. ಆಗ ಪಾದಗಳೇ ಕಿತ್ತು ಬಂದವು. ರಟ್ಟೆ ಹಿಡಿದಾಗ ರಟ್ಟೆಗಳು ಮುರಿದವು. ರುಂಡ ಮುಟ್ಟಿದಾಗ ಅದೂ ಕಿತ್ತು ಬಂತು. ಕೊನೆಗೆ ಗುರುವಿನ ದೇಹವನ್ನು ಕಾವಿ ಬಟ್ಟೆಯಲ್ಲಿ ಗಂಟು ಕಟ್ಟಿ ತಲೆ ಮೇಲೆ ಹೊತ್ತು ತಂದು ನಂದಿ ಮಂಚದ ಮೇಲಿಟ್ಟರು.

ನಂತರ ನಿಮ್ಮ ನಿಜರೂಪ ತೋರಬೇಕು ಧರ್ಮಗುರುವೇ ಎಂದು ಬಸವಣ್ಣ ಕೋರಿದರು. ಇವರ ಭಕ್ತಿಗೆ ಮೆಚ್ಚಿದ ಪ್ರಭುದೇವರು ಬಸವಣ್ಣನವರಿಗೆ ಪರಂಜ್ಯೋತಿ ಎಂದು ಹರಸಿ 'ನಿಮ್ಮ ಬಳಿ ಇರುವ ಕಾಲಜ್ಞಾನ ಪುಸ್ತಕವನ್ನು ನನಗೆ ಕೊಡಿ' ಎಂದು ಕೇಳಿ ಪಡೆಯುತ್ತಾರೆ. 'ಕಲ್ಯಾಣ ಪಟ್ಟಣವನ್ನು ನೀವೇ ಆಳಿ. ನಾವು ಅಲೆಮಾರಿಯಾಗಿ ಹೋಗಲು ಅನುಮತಿ ಕೊಡಿ' ಎಂದು ಹೊರಟು ಹೋಗುತ್ತಾರೆ. ತನಗಿಂತ ಕಿರಿಯರಿಲ್ಲ ಎಂಬ ವಿನಮ್ರತೆ ಹೊಂದಿದ್ದ ಬಸವಣ್ಣ ಅರಿವು ಕೊಡಬಲ್ಲ ದೊಡ್ಡ ಗುರುವಿನ ಆಗಮನಕ್ಕೆ ಕಾಯುವುದೇ ವಿಶೇಷ. ಹಾಗೆಯೇ ತಾನೇ ಶ್ರೇಷ್ಠನೆಂಬ ಅಹಮ್ಮಿಕೆ ಇಲ್ಲದ ಪ್ರಭುದೇವರು ಬಸವಣ್ಣನಿಂದ ಕೇಳಿ ಪಡೆದಿದ್ದೂ ಕೂಡ ಜ್ಞಾನದ ಪುಸ್ತಕ. ತಮ್ಮೊಳಗಿನ ಅಹಂಕಾರ ತೊರೆದು ಬಲ್ಲವರಿಂದ ಕಲಿಯಬೇಕೆಂಬ ಹಂಬಲದ ಈ ಕಥೆ ಅಚ್ಚರಿ ಹುಟ್ಟಿಸುತ್ತದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಜೂನ್ 5, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಚತುರ್ದಶಿ ಗಂ. 19-56 ನಕ್ಷತ್ರ: ಕೃತ್ತಿಕಾ ಗಂ. 21-16 ಯೋಗ: ಸುಕರ್ಮ ಗಂ. 24-35 ಕರಣ: ವಿಷ್ಟಿ ಗಂ. 8-57, ವೃಷಭ ಮಾಸದ ನೇ 22 ದಿನ, ಮಳೆನಕ್ಷತ್ರ: ರೋಹಿಣಿ 4.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 06-06 ಸೂರ್ಯಾಸ್ತ: 06-52
ಮುಸ್ಲಿಂ ದಿನಾಂಕ: 27 ಜುಲ್ಖಾಯಿದ್
ಅದೃಷ್ಟ ಸಂಖ್ಯೆ: 4, 9

ಮೇಷ: ಕೃಷಿಗೆ ಸಂಬಂಧಿಸಿದ ಕೆಲಸಗಳು ಯಾವುದೇ ಅಡೆತಡೆಗಳಿಲ್ಲದೆ ಸರಿಯಾಗಿ ಮುಂದುವರಿಯಲಿವೆ. ಇಂದು ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಬೇಕಾದ ಕಾರಣ ಭೋಜನದ ಸಮಯವು ಬದಲಾಗಬಹುದು.

ವೃಷಭ: ಮಗಳ ಮದುವೆ ವಿಷಯದ ಕುರಿತು ಆಕೆಯ ಅನುಮತಿ ಪಡೆದು ಮನೆಯವರ ಜೊತೆ ಪ್ರಸ್ತಾಪಿಸುವುದು ಒಳಿತು. ನಿಮ್ಮ ಎಲ್ಲ ಕಾರ್ಯಗಳಿಗೂ ಹೆಗಲು ಕೊಡುವ ಸಂಗಾತಿಯನ್ನು ಅಭಿನಂದಿಸುವ ಸಂದರ್ಭ ಒದಗಿಬರಲಿದೆ.

ಮಿಥುನ: ನಿಮ್ಮ ಮಿತ್ರರೊಬ್ಬರು ಎಲ್ಲ ವಿಧದಲ್ಲಿಯೂ ನಿಮಗೆ ಕುಟುಂಬದವರಿಗಿಂತ ಹೆಚ್ಚಿನ ಸಹಾಯ ಮಾಡಲಿದ್ದಾರೆ. ಮಾನಸಿಕ ಖಿನ್ನತೆಯಿಂದ ಹೊರಬರಲು ವೈದ್ಯರ ಸಹಾಯ ಪಡೆಯುವುದು ಸರಿ.

ಕರ್ಕಾಟಕ: ಸದಾ ಕೆಲಸಗಳಿಂದ ಬಿಡುವು ಮಾಡಿಕೊಂಡು ಮನೆಯವರೊಡನೆ ಕಾಲ ಕಳೆಯಲಿದ್ದೀರಿ. ಇದು ನಿಮಗೆ ಖುಷಿ ಕೊಡಲಿದೆ. ರಕ್ಷಣೆ ಬಯಸಿ ಬಂದ ಸ್ನೇಹಿತನಿಗೆ ಕೈಲಾದ ಸಹಾಯ ಮಾಡಿ, ಒಳ್ಳೆಯದಾಗಲಿದೆ.

ಸಿಂಹ: ಸ್ನೇಹಪರ ಸ್ವಭಾವ, ಪರೋಪಕಾರ ಅಥವಾ ಕೊನೆಯ ಪಕ್ಷದಲ್ಲಿ ನಿರ್ಲಿಪ್ತತೆಯಿಂದಾಗಿ ವೈಯಕ್ತಿಕ ಸ್ಥಾನ ಮಾನಗಳು ನಿಮ್ಮದಾಗಲಿವೆ. ತುರ್ತು ಕಾರ್ಯಗಳ ನಿರ್ವಹಣೆ ಮಾಡಬೇಕಾಗಲಿದೆ. ಈಶ್ವರನನ್ನು ಆರಾಧಿಸಿ.

ಕನ್ಯಾ: ನಿಕಟ ಸಂಬಂಧಿಗಳೊಂದಿಗೆ ನಿಮ್ಮ ಬದುಕಿನ ದುರ್ಘಟನೆಯ ವಿಷಯಗಳನ್ನು ಹಂಚಿಕೊಳ್ಳುವುದರಿಂದ ಉತ್ತಮ ಸಲಹೆಗಳು ಸಿಗಲಿವೆ. ಉದ್ಯೋಗ ಬದಲಿಸುವ ವಿಚಾರದಲ್ಲಿ ಚೆನ್ನಾಗಿ ಯೋಚಿಸುವುದು ಉತ್ತಮ.

ತುಲಾ: ವೈಯಕ್ತಿಕ ವಿಚಾರವನ್ನು ಆಪ್ತರೊಬ್ಬರ ಬಳಿ ಹೇಳಿಕೊಳ್ಳುವುದರಿಂದ ಮಾನಸಿಕ ದುಃಖ ಕಡಿಮೆಯಾಗಲಿದೆ. ವ್ಯಾಪಾರದಲ್ಲಿ ಅನಿರೀಕ್ಷಿತ ಬದಲಾವಣೆ ಕಾಣುವ ಸಾಧ್ಯತೆ ಇದೆ. ಪತಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ.

ವೃಶ್ಚಿಕ: ಸ್ವತ್ತು ಮಾರಾಟ ಅಥವಾ ಖರೀದಿ ವಿಚಾರವಾಗಿ ಸೋದರರ ಅಭಿಪ್ರಾಯ ಪಡೆದು ಮುಂದುವರಿಯುವುದು ಉತ್ತಮ. ಈ ದಿನದ ನಿಮ್ಮ ಲೇವಾದೇವಿ ವ್ಯವಹಾರದಲ್ಲಿ ಭಾಗಶಃ ಅನುಕೂಲವಿದೆ.

ಧನು: ಮನೆಯಲ್ಲಿ ನಡೆಯುವ ಕಾರ್ಯಕ್ರಮಕ್ಕಾಗಿ ದೊಡ್ಡ ಮಟ್ಟದಲ್ಲಿ ದಿನಸಿ ವಸ್ತುಗಳ ಖರೀದಿಸಬೇಕಾಗಲಿದೆ. ಆತ್ಮವಿಶ್ವಾಸ ಹೆಚ್ಚಿಸುವ ಕೆಲಸಗಳಲ್ಲಿ ತೊಡಗುವಿರಿ. ಕಾರ್ಯ ನಿಮಿತ್ತವಾಗಿ ದೂರದ ಸಂಚಾರ ಅಗತ್ಯವಾಗಲಿದೆ.

ಮಕರ: ಗಂಭೀರ ಚಿತ್ತ ಹಾಗೂ ದೃಢ ಮನಸ್ಸಿನಿಂದ ಕೈಗೊಂಡ ಕೆಲಸಗಳು ಖಂಡಿತವಾಗಿಯೂ ಕಾರ್ಯಗತವಾಗಲಿವೆ. ಮಕ್ಕಳ ಹೆಚ್ಚಿನ ಮೊಬೈಲ್ ಬಳಕೆಯು ನಿಮ್ಮ ಯೋಚನೆಗಳಿಗೆ ಕಾರಣವಾಗುತ್ತದೆ.

ಕುಂಭ: ಹಣಕಾಸಿನ ಜವಾಬ್ದಾರಿ ಹೊಂದಿದ ಕೆಲಸ ಮಾಡುವವರಿಗೆ ಹಣಕಾಸಿನಲ್ಲಿ ನಿಮ್ಮಿಂದ ವ್ಯತ್ಯಾಸಗಳಾಗುವ ಸಾಧ್ಯತೆಗಳಿದೆ. ಆತ್ಮೀಯರೊಂದಿಗೆ ವ್ಯವಹಾರಗಳ ಕುರಿತು ಅತ್ಯಂತ ಆಳವಾದ ಚರ್ಚೆಯನ್ನು ನಡೆಸಿ.


ಮೀನ: ನಿಮ್ಮ ರಾಜಕೀಯ ಭವಿಷ್ಯದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ನಿಮ್ಮ ಸ್ವಂತ ಊರಿನಲ್ಲಿ ಬೇಕಾದ ಪ್ರಯತ್ನ ಮಾಡಿ. ಧರ್ಮ-ಕರ್ಮದಂತಹ ಕಾರ್ಯಗಳಲ್ಲಿ ಹಿರಿಯರ ಮಾರ್ಗದರ್ಶನದಿಂದ ಆಸಕ್ತಿ ಹೆಚ್ಚಲಿದೆ.

ಪದಬಂಧ 5702

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3. ಮತಿ ಕೊನೆಗಿದ್ದರೂ ಅನಗತ್ಯ ಖರ್ಚು! (4)
5. ಯಜಮಾನನ ಹುಟ್ಟುಗುಣ! (4)
6. ಗಾಡಿಯ ಚಕ್ರಗಳು ಬೀಳದಂತೆ ತಡೆಯುವ ಕೀಲು (4)
8. ಷಹರದವರು ನೀಡಿರುವ ಪಾನಕ (4)
12. ನಸುಕಿನಲ್ಲಿ ಕಾಣುತ್ತಿರುವ ಕಾಡು ಹೂ (4)
14. ಬಿಗುಮಾನ ಬಿಟ್ಟು ತೋರಿಸುತ್ತಿರುವ ಆತ್ಮಪ್ರತಿಷ್ಠೆ! (4)
15. ಅವನು ತೋರಿಸುತ್ತಿರುವ ಸಹಾನುಭೂತಿ! (4)
16.ಗರತಿ ಸೇರಿರುವ ವರ್ಗ! (4)
12.ಸಸ್ಯಗಳಿಂದ ತೆಗೆದಿರುವ ಜಿಡ್ಡು (4)

ಮೇಲಿಂದ ಕೆಳಕ್ಕೆ
1.ಪ್ರಜೆಗಳಿಂದ ನಡೆಯುವ ಆಡಳಿತ (5)
2.ಕ್ರೂರವಾದುದನ್ನು ಹೀಗೂ ಹೇಳುತ್ತಾರೆ (4)
3.ಕತ್ತು ಕೊನೆಗಿದ್ದರೆ ವಾಸ್ತವ ಸುದ್ದಿ! (4)
4.ನೆಕ್ಕಲು ಬಂದವನದ್ದು ವಿಚಿತ್ರ ವರ್ತನೆ! (3)
7.ಹಂಬಲ ಅಥವಾ ಚಟ (2)
9.ಮುಸಲ್ಮಾನ ದೊರೆಯಿಲ್ಲಿ ತಿರುಗಿದ್ದಾನಲ್ಲಾ? (3)
10.ಶಾಖವನ್ನು ಅಳೆಯುವ ಸಾಧನ (5)
11. ಹೊಕ್ಕಳು ಇಲ್ಲಿ ಕಾಣುತ್ತಿದೆ (2)
14.ಅಮೃತವೆಂದಿರುವುದು ಬರೀ ಸುಳ್ಳು! (3)
13.ಮಡಿವಂತನು ನೀಡಿರುವ ಪ್ರತ್ಯುತ್ತರ (4)



5701ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಅನುಭೂತಿ 3. ಆಕಸ್ಮಿಕ
5. ಸಮ 7. ನಾಳ
8. ಲವಣ 10. ವಿನಯ
12. ಕಾಡು 13. ಋಣ
15. ಯಜಮಾನ 16. ತರಕಾರಿ

ಮೇಲಿಂದ ಕೆಳಕ್ಕೆ:
1. ಅರಸ 2. ತಿಮಿಂಗಿಲ
3. ಆರೋಹಣ 4. ಕವಳ
6. ಮರಳುಗಾಡು 7. ನಾಮಕರಣ
9. ವರ್ಧನ 10. ವಿದ್ಯಮಾನ
11. ಯಮದೂತ 12. ಕಾಷಾಯ
14. ಗಡಾರಿ

ಸುಡೊಕು 6087

	7	9			3		8	1
				8		2		9
8	1		2	6		7	3	
	8					1		5
	9	2	8	1	5		6	
5						8		
9		7	5					6
	5				2		4	
4	3		6		1			2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6086 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಚಂದ್ರನಿಂದ ಕಲ್ಲಿನ ಮಾದರಿ ತರುತ್ತಿರುವ ಚೀನಾ

ಬೀಜಿಂಗ್ (ಎಪಿ): ಚಂದ್ರನ ಅಂಗಳದಲ್ಲಿನ ಕಲ್ಲು ಮತ್ತು ಮಣ್ಣಿನ ಮಾದರಿಯನ್ನು ಸಂಗ್ರಹಿಸಿ ತರಲಿರುವ ತನ್ನ ಬಾಹ್ಯಾಕಾಶ ನೌಕೆಯು ಭೂಮಿಯತ್ತ ಪ್ರಯಾಣ ಆರಂಭಿಸಿದೆ ಎಂದು ಚೀನಾ ಹೇಳಿದೆ.

ಕಳೆದ ತಿಂಗಳು ಉಡಾವಣೆ ಮಾಡಲಾಗಿದ್ದ ಚೇಂಜ್'ಇ-6 ಹೆಸರಿನ ಬಾಹ್ಯಾಕಾಶ ನೌಕೆಯು ಇತ್ತೀಚೆಗೆ ಚಂದ್ರನ ಮೇಲ್ಮೈನಲ್ಲಿ ಇಳಿದಿತ್ತು. ಈಗಾಗಲೇ ಚಂದ್ರನ ಮೇಲ್ಮೈನಲ್ಲಿ ಸಂಗ್ರಹಿಸಿರುವ ಮಣ್ಣು ಮತ್ತು ಕಲ್ಲಿನ ಮಾದರಿಯನ್ನು ನೌಕೆಯಲ್ಲಿನ ಪೆಟ್ಟಿಗೆಯಲ್ಲಿಟ್ಟುಕೊಂಡಿದ್ದು, ಜೂನ್ 25ರಂದು ಚೀನಾದ ಇನ್ನರ್ ಮಂಗೋಲಿಯಾ ಪ್ರಾಂತ್ಯದ ಮರುಭೂಮಿಯಲ್ಲಿ ಬಂದಿಳಿಯಲಿದೆ ಎಂದು ಚೀನಾ ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)

04-6-2024

ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1500)
ಒಂದು ವಾರದ ಡೆಲಿವರಿ	1485 (1495)
ಸೋಯಾ ಕಚ್ಚಾ	915 (925)
ಪಾಮ್ ವಾರದ ಡೆಲಿವರಿ	893(904)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹71,700 (71,100)

ಬೆಳ್ಳಿ ಕೆ.ಜಿ ₹88,900 (88,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹16000
ಎಸಿ	₹9100
ಆರ್‌ಪಿ	₹16500
ಆರ್‌ಸಿ	₹10140

ಅಡಿಕೆ ಧಾರಣೆ

ಬಂಟ್ವಾಳ		ಸಿದ್ದಾಪುರ			
ಕೋಕ	18000-28500	ಬಿಳಿಗೋಟು	26889-29389	ಕೆಂಪುಗೋಟು	24899-29399
ಹೊಸತು	28500-38000	ಚಾಲಿ	34599-36299	ರಾಶಿ	46099-49779
ಹಳತು	38000-46500	ಕೋಕ	25669-29399	**ಯಲ್ಲಾಪುರ**	
ಶಿವಮೊಗ್ಗ		ಕೆಂಪುಗೋಟು	27699-32699	ಕೆಂಪುಗೋಟು	26709-35119
ಅಪಿ	26193-26193	ರಾಶಿ	42889-49999	ರಾಶಿ	43369-53219
ಬೆಟ್ಟೆ	40254-55509	ತಟ್ಟಿಬೆಟ್ಟೆ	36799-43099	ತಟ್ಟಿಬೆಟ್ಟೆ	33869-42300
ಗೊರಬಲು	17169-42399	**ಶಿರಸಿ**		ಅಪಿ	55399-62699
ರಾಶಿ	33500-54099	ಬೆಟ್ಟೆ	33099-46899	ಬಿಳಿಗೋಟು	22699-32899
ಸರಕು	45159-78596	ಬಿಳಿಗೋಟು	24009-31899	ಚಾಲಿ	32911-37160
		ಚಾಲಿ	33018-38592	ಕೋಕ	11399-26899

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,263
ಇಂದಿನ ಅಂತ್ಯ	21,884
▼	1,379
ದಿನದ ಗರಿಷ್ಠ	21,281

ವಿನಿಮಯ ದರ

$ ಡಾಲರ್	83.51
£ ಪೌಂಡ್	106.61
€ ಯುರೊ	90.83
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹555
12 ಕ್ಕೆ	₹78
ಮೈಸೂರು	
100ಕ್ಕೆ	₹555

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1480 (1490)
ಸೋಯಾ (ರಿಫೈನ್ಡ್)	₹950 (960)
ಸೂರ್ಯಕಾಂತಿ (ರಿಫೈನ್ಡ್)	₹960 (970)
ಪಾಮೋಲಿನ್	₹895 (906)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹311-510

ದ್ವಿತಳಿ (ಬಿ.ವಿ) ₹350-623

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹190

ಆರ್‌ಎಸ್‌ಎಸ್-5 ₹183

ಗುಡ್ ಲಾಟ್ ₹173

(ಪ್ರತಿ ಕೆ.ಜಿಗೆ)

ಷೇರು ಸೂಚ್ಯಂಕದ ಮಹಾಪತನ

ಒಂದನೇ ಪುಟದಿಂದ

ಸೋಮವಾರದ ವಹಿವಾಟಿನಲ್ಲಿ ಶೇ 3ರಷ್ಟು ಏರಿಕೆ ಕಂಡಿದ್ದ ಸೆನ್ಸೆಕ್ಸ್ 4,389 ಅಂಶ ಕುಸಿತ ಕಂಡು (ಶೇ 5.74ರಷ್ಟು) ಎರಡು ತಿಂಗಳ ಕನಿಷ್ಠ ಮಟ್ಟವಾದ 72,079 ಅಂಶಗಳಿಗೆ ತಲುಪಿದೆ. ವಹಿವಾಟಿನ ಒಂದು ಸಂದರ್ಭದಲ್ಲಿ 6,234 ಅಂಶ ಇಳಿಕೆ ಕಂಡು (ಶೇ 8.15ರಷ್ಟು) ಐದು ತಿಂಗಳ ಕನಿಷ್ಠ ಮಟ್ಟವಾದ 70,234 ಅಂಶಗಳಿಗೆ ತಲುಪಿತ್ತು. ನಿಫ್ಟಿ 1,379 ಅಂಶ ಕುಸಿತ ಕಂಡು (ಶೇ 5.93ರಷ್ಟು) 21,884 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ಆರಂಭಿಕ ವಹಿವಾಟಿನಲ್ಲಿ 1,982 ಅಂಶ ಕುಸಿತ ಕಂಡು (ಶೇ 8.52ರಷ್ಟು) 21,281 ಅಂಶಗಳಿಗೆ ಮುಟ್ಟಿತ್ತು.

ಅದಾನಿ ಸಮೂಹದ ಷೇರಿನ ಮೌಲ್ಯ ಕುಸಿತ

ಒಂದನೇ ಪುಟದಿಂದ

ಅದಾನಿ ಟೋಟಲ್ ಗ್ಯಾಸ್ ಶೇ 18.88, ಎನ್‌ಡಿಟಿವಿ ಶೇ 18.52, ಅದಾನಿ ಪವರ್ ಶೇ 17.27, ಅಂಬುಜಾ ಸಿಮೆಂಟ್ಸ್ ಶೇ 16.88, ಎಸಿಸಿ ಶೇ 14.71 ಹಾಗೂ ಅದಾನಿ ವಿಲ್ಮರ್ ಷೇರಿನ ಮೌಲ್ಯದಲ್ಲಿ ಶೇ 9.98ರಷ್ಟು ಕುಸಿದಿದೆ.

ಅದಾನಿ ಸಮೂಹವು ಉದ್ಯಮದ ವಿಸ್ತರಣೆಯ ಭಾಗವಾಗಿ ಮುಂದಿನ ಒಂದು ದಶಕದ ಅವಧಿಯಲ್ಲಿ ₹7.51 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ ಎಂದು ಅಮೆರಿಕದ ಬ್ರೋಕರೇಜ್ ಸಂಸ್ಥೆಯಾದ ಜೆಫರಿಸ್ ಹೇಳಿತ್ತು. ಹಾಗಾಗಿ, ಶುಕ್ರವಾರದ ವಹಿವಾಟಿನಲ್ಲಿ ಅದಾನಿ ಕಂಪನಿಗಳ ಷೇರಿನ ಮೌಲ್ಯದಲ್ಲಿ ಶೇ 14ರಷ್ಟು ಏರಿಕೆಯಾಗಿತ್ತು.

ಶೇ 97.82ರಷ್ಟು ನೋಟು ವಾಪಸ್

ಮುಂಬೈ (ಪಿಟಿಐ): ಮೇ ತಿಂಗಳ ಅಂತ್ಯಕ್ಕೆ ₹2 ಸಾವಿರ ಮುಖಬೆಲೆಯ ಶೇ 97.82ರಷ್ಟು ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿದ್ದು, ಇನ್ನೂ ₹7,755 ಕೋಟಿ ಮೌಲ್ಯದ ನೋಟುಗಳು ನಾಗರಿಕರ ಬಳಿ ಇವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ಒಟ್ಟು ₹3.56 ಲಕ್ಷ ಕೋಟಿ ಮೌಲ್ಯದ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ ಕಳೆದ ವರ್ಷದ ಮೇ 19ರಂದು ಆರ್‌ಬಿಐ ಘೋಷಿಸಿತ್ತು.

ಬಿಎಸ್‌ಸಿ ಮಿಡ್ ಕ್ಯಾಪ್ ಶೇ 8.07, ಸ್ಮಾಲ್ ಕ್ಯಾಪ್ ಶೇ 6.79ರಷ್ಟು ಇಳಿಕೆ

ಕರಡಿ ಕುಣಿತಕ್ಕೆ ಷೇರುಪೇಟೆ ತತ್ತರ

ಮುಂಬೈ (ಪಿಟಿಐ): ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶಕ್ಕಾಗಿ ಷೇರುಗಳ ಮಾರಾಟಕ್ಕೆ ಮುಂದಾಗಿದ್ದು ಕೂಡ ಷೇರು ಸೂಚ್ಯಂಕಗಳು ಇಳಿಕೆ ಕಾಣಲು ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸೋಮವಾರ ಗೂಳಿಯು ನಾಗಾಲೋಟ ಕಂಡಿತ್ತು. ಮಂಗಳವಾರದ ವಹಿವಾಟಿನಲ್ಲಿ ಕರಡಿ ಕುಣಿತ ಜೋರಾಯಿತು. ಸಾರ್ವಜನಿಕ ವಲಯದ ಉದ್ದಿಮೆಗಳು, ಬ್ಯಾಂಕ್‌ಗಳು, ವಿದ್ಯುತ್, ಯುಟಿಲಿಟಿ, ತೈಲ ಮತ್ತು ಅನಿಲ, ಬಂಡವಾಳ ಸರಕು ಸೂಚ್ಯಂಕದ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದವು.

'ಲೋಕಸಭಾ ಚುನಾವಣೆಯ ಅನಿರೀಕ್ಷಿತ ಫಲಿತಾಂಶದಿಂದ ಆತಂಕಕ್ಕೆ ಸಿಲುಕಿದ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಷೇರುಪೇಟೆಗಳು ಕುಸಿತ ಕಂಡಿವೆ. ಆದರೆ, ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಹಾಗಾಗಿ, ಮಾರುಕಟ್ಟೆಯು ಚೇತರಿಕೆಯ ಹಳಿಗೆ ಮರಳಬಹುದು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

2014ರ ಮೇ 16ರಂದು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ವೇಳೆ ಸೆನ್ಸೆಕ್ಸ್ 261 ಅಂಶ ಏರಿಕೆ ಕಂಡು 24,121 ಅಂಶಗಳಲ್ಲಿ ಸ್ಥಿರಗೊಂಡಿತ್ತು. ನಿಫ್ಟಿ 79 ಅಂಶ ಏರಿಕೆ ಕಂಡು 7,203 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತ್ತು.

2019ರ ಮೇ 19ರಂದು 298 ಅಂಶ ಇಳಿಕೆ ಕಂಡು 38,811 ಅಂಶಗಳಿಗೆ ತಲುಪಿತ್ತು. ನಿಫ್ಟಿ 80 ಅಂಶ ಇಳಿಕೆ ಕಂಡು 11,657 ಅಂಶಗಳಲ್ಲಿ ಸ್ಥಿರಗೊಂಡಿತ್ತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಎಲ್ ಆ್ಯಂಡ್ ಟಿ ಷೇರಿನ ಮೌಲ್ಯದಲ್ಲಿ ಶೇ 12ರಷ್ಟು ಕುಸಿದಿದೆ. ಟಾಟಾ ಸ್ಟೀಲ್, ಇಂಡಸ್‌ಇಂಡ್ ಬ್ಯಾಂಕ್, ಭಾರ್ತಿ ಏರ್‌ಟೆಲ್, ಐಸಿಐಸಿಐ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಜೆಎಸ್‌ಡಬ್ಲ್ಯು ಸ್ಟೀಲ್‌ನ ಷೇರಿನ ಮೌಲ್ಯವೂ ಇಳಿಕೆಯಾಗಿದೆ.

ಹಿಂದುಸ್ತಾನ್ ಯೂನಿಲಿವರ್ ಶೇ 6ರಷ್ಟು ಮತ್ತು ನೆಸ್ಲೆ ಇಂಡಿಯಾ ಷೇರಿನ ಮೌಲ್ಯದಲ್ಲಿ ಶೇ 3ರಷ್ಟು ಏರಿಕೆಯಾಗಿದೆ. ಟಿಸಿಎಸ್, ಏಷ್ಯನ್ ಪೇಂಟ್ಸ್, ಸನ್ ಫಾರ್ಮಾ ಷೇರಿನ ಮೌಲ್ಯವೂ ಹೆಚ್ಚಳವಾಗಿದೆ.


ಬಿಎಸ್‌ಸಿ ಮಿಡ್ ಕ್ಯಾಪ್ ಶೇ 8.07ರಷ್ಟು ಹಾಗೂ ಸ್ಮಾಲ್ ಕ್ಯಾಪ್ ಶೇ 6.79ರಷ್ಟು ಇಳಿಕೆಯಾಗಿದೆ.

ಯುಟಿಲಿಟಿ ಸೂಚ್ಯಂಕ (ಶೇ 14.40), ಪವರ್ (ಶೇ 14.25), ತೈಲ ಮತ್ತು ಅನಿಲ (ಶೇ 13.07), ಸೇವೆ (12.65), ಬಂಡವಾಳ ಸರಕು (ಶೇ 12.06), ಎನರ್ಜಿ (ಶೇ 11.62) ಮತ್ತು ಲೋಹ (ಶೇ 9.65) ಸೂಚ್ಯಂಕ ಇಳಿಕೆ ಕಂಡಿವೆ.

ಸೋಲ್, ಟೋಕಿಯೊ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆದರೆ, ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆ ಗಳಿಕೆ ಕಂಡಿವೆ. ಯುರೋಪ್ ಮಾರುಕಟ್ಟೆಯಲ್ಲೂ ಇಳಿಕೆಯಾಗಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 1.88ರಷ್ಟು ಕುಸಿತವಾಗಿದ್ದು, ಪ್ರತಿ ಬ್ಯಾರೆಲ್‌ಗೆ 76.89 ಡಾಲರ್ ಆಗಿದೆ.

ರಿಲಯನ್ಸ್ ಇಂಡಸ್ಟ್ರೀಸ್‌ಗೆ ನಷ್ಟ: ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರಿನ ಮೌಲ್ಯದಲ್ಲಿ ಶೇ 7.50ರಷ್ಟು ಕುಸಿತವಾಗಿದ್ದು, ಎಂ-ಕ್ಯಾಪ್ ₹1.54 ಲಕ್ಷ ಕೋಟಿ ನಷ್ಟವಾಗಿದೆ.



ಪಿಎಸ್‌ಇ, ಬ್ಯಾಂಕ್ ಷೇರಿನ ಮೌಲ್ಯ ಇಳಿಕೆ

ನವದೆಹಲಿ (ಪಿಟಿಐ): ಸಾರ್ವಜನಿಕ ವಲಯದ ಉದ್ದಿಮೆಗಳು (ಪಿಎಸ್‌ಇ) ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಷೇರಿನ ಮೌಲ್ಯದಲ್ಲಿ ಶೇ 24ರಷ್ಟು ಇಳಿಕೆಯಾಗಿದೆ.

ನಿಫ್ಟಿ ಪಿಎಸ್‌ಇ ಸೂಚ್ಯಂಕ 1,856 ಅಂಶ ಇಳಿಕೆ (ಶೇ 16.38ರಷ್ಟು) ಕಂಡಿದ್ದು, 9,475 ಅಂಶ ಆಗಿದೆ. ಪವರ್ ಫೈನಾನ್ಸ್ ಕಾರ್ಪೊರೇಷನ್ ಷೇರಿನ ಮೌಲ್ಯದಲ್ಲಿ ಶೇ 21.62, ಕಂಟೈನರ್ ಕಾರ್ಪ್ ಆಫ್ ಇಂಡಿಯಾ ಶೇ 19.43 ಹಾಗೂ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಷೇರಿನ ಮೌಲ್ಯದಲ್ಲಿ ಶೇ 19.21ರಷ್ಟು ಇಳಿಕೆಯಾಗಿದೆ. ಒಎನ್‌ಜಿಸಿ ಶೇ 16.23, ಕೋಲ್ ಇಂಡಿಯಾ ಶೇ 13.54, ಎನ್‌ಟಿಪಿಸಿ ಶೇ 14.52 ಹಾಗೂ ಪವರ್ ಗ್ರಿಡ್ ಷೇರಿನ ಮೌಲ್ಯದಲ್ಲಿ ಶೇ 11.98ರಷ್ಟು ಕುಸಿದಿದೆ.

ನಿಫ್ಟಿ ಪಿಎಸ್‌ಯು ಬ್ಯಾಂಕ್ ಸೂಚ್ಯಂಕ 1,211 ಅಂಶ ಇಳಿಕೆಯಾಗಿದೆ (ಶೇ 15.14ರಷ್ಟು). ಯೂನಿಯನ್ ಬ್ಯಾಂಕ್ ಶೇ 17.65, ಬ್ಯಾಂಕ್ ಆಫ್ ಬರೋಡಾ ಶೇ 15,74, ಪಂಜಾಬ್ ನ್ಯಾಷನಲ್ ಬ್ಯಾಂಕ್ ಶೇ 15.15, ಕೆನರಾ ಬ್ಯಾಂಕ್ ಶೇ 13.45 ಮತ್ತು ಎಸ್‌ಬಿಐ ಷೇರಿನ ಮೌಲ್ಯದಲ್ಲಿ ಶೇ 13.37ರಷ್ಟು ಇಳಿಕೆಯಾಗಿದೆ.

ರೂಪಾಯಿ ಮೌಲ್ಯ 37 ಪೈಸೆ ಕುಸಿತ



ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ಮಂಗಳವಾರ ರೂಪಾಯಿ ಮೌಲ್ಯವು 37 ಪೈಸೆಯಷ್ಟು ಕುಸಿದಿದ್ದು, ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ ₹83.51ಕ್ಕೆ ತಲುಪಿದೆ.

ದೇಶದ ಮಾರುಕಟ್ಟೆಗಳಲ್ಲಿ ಕಂಡುಬಂದ ಷೇರುಗಳ ಮಾರಾಟ ಹೆಚ್ಚಳ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ವಿದೇಶಿ ಕರೆನ್ಸಿಗಳು ಮೌಲ್ಯವರ್ಧನೆಗೊಂಡಿದ್ದರಿಂದ ರೂಪಾಯಿ ಮೌಲ್ಯದಲ್ಲಿ ಇಳಿಕೆಯಾಗಿದೆ ಎಂದು ವರ್ತಕರು ತಿಳಿಸಿದ್ದಾರೆ.

ಸೋಮವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ₹83.14ಕ್ಕೆ ತಲುಪಿತ್ತು.

'ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ನಿರೀಕ್ಷಿತ ಸ್ಥಾನಗಳನ್ನು ಪಡೆಯುವಲ್ಲಿ ವಿಫಲವಾಗಿದೆ. ಹಾಗಾಗಿ, ದೇಶದ ಷೇರುಪೇಟೆಗಳು ಕುಸಿತ ಕಂಡಿವೆ. ಭಾರತದ ಬಂಡವಾಳ ಮಾರುಕಟ್ಟೆಗಳಿಂದ ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಿದ್ದರಿಂದ ರೂಪಾಯಿ ಮೌಲ್ಯ ಕುಸಿದಿದೆ. ಸೋಮವಾರದ ವಹಿವಾಟಿನಲ್ಲಿ ಕುಸಿತ ಕಂಡಿದ್ದ ಅಮೆರಿಕದ ಡಾಲರ್ ಚೇತರಿಕೆ ಕಂಡಿದೆ' ಎಂದು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಾದ ಪಿಎನ್‌ಪಿ ಪರಿಬಾಸ್‌ನ ಸಂಶೋಧನಾ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

ನೀಟ್: ಮೊದಲ ರ‍್ಯಾಂಕ್ ಹಂಚಿಕೊಂಡ 67 ವಿದ್ಯಾರ್ಥಿಗಳು

ನವದೆಹಲಿ (ಪಿಟಿಐ): ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮಂಗಳವಾರ, ಪ್ರಸಕ್ತ ಶೈಕ್ಷಣಿಕ ಸಾಲಿನ 'ನೀಟ್-ಯುಜಿ' ಪ್ರವೇಶ ಪರೀಕ್ಷೆ ಫಲಿತಾಂಶವನ್ನು ಪ್ರಕಟಿಸಿದೆ. 67 ವಿದ್ಯಾರ್ಥಿಗಳು ಪ್ರಥಮ ರ‍್ಯಾಂಕ್ ಹಂಚಿಕೊಂಡಿದ್ದಾರೆ. ಉನ್ನತ ರ‍್ಯಾಂಕ್ ಹಂಚಿಕೊಂಡವರಲ್ಲಿ 14 ವಿದ್ಯಾರ್ಥಿನಿಯರು ಸೇರಿದ್ದಾರೆ.

ಒಟ್ಟು 67 ವಿದ್ಯಾರ್ಥಿಗಳು ಏಕರೂಪವಾಗಿ 99.997129 ಪರ್ಸೆಂಟೈಲ್ ಅಂಕ ಪಡೆದಿದ್ದಾರೆ. ಹೀಗಾಗಿ, ಈ ಎಲ್ಲರಿಗೂ 1ನೇ ರ‍್ಯಾಂಕ್ ಹಂಚಿಕೆಯಾಗಿದೆ ಎಂದು ಎನ್‌ಟಿಎಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಮೊದಲ ರ‍್ಯಾಂಕ್ ಗಳಿಸಿದ 67 ವಿದ್ಯಾರ್ಥಿಗಳಲ್ಲಿ ರಾಜಸ್ಥಾನದ 11, ತಮಿಳುನಾಡಿನ 8 ಮತ್ತು ಮಹಾರಾಷ್ಟ್ರದ 7 ವಿದ್ಯಾರ್ಥಿಗಳು ಸೇರಿದ್ದಾರೆ.

ಈ ಪರೀಕ್ಷೆಯ ಮೂಲಕ ಶೇ 56.4ರಷ್ಟು ಅಭ್ಯರ್ಥಿಗಳು ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ಅರ್ಹತೆಯನ್ನು ಪಡೆದಿದ್ದಾರೆ. ಪ್ರವೇಶ ಪರೀಕ್ಷೆಯು ಮೇ 5ರಂದು ದೇಶದ ವಿವಿಧೆಡೆ ಏಕಕಾಲಕ್ಕೆ ನಡೆದಿತ್ತು.

ಟೈ-ಬ್ರೇಕಿಂಗ್ ಸೂತ್ರವನ್ನು ಆಧರಿಸಿ ಜೀವವಿಜ್ಞಾನ ವಿಷಯ ಹಾಗೂ ನಂತರದಲ್ಲಿ ಆದ್ಯತೆವಾರು ರಾಸಾಯನ ವಿಜ್ಞಾನ ಮತ್ತು ಭೌತವಿಜ್ಞಾನ ವಿಷಯಗಳಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳನ್ನು ಆಧರಿಸಿ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಎಂದು ಅಧಿಕಾರಿ ವಿವರಿಸಿದರು.

ಈ ವರ್ಷ ನೀಟ್ ಪರೀಕ್ಷೆಗೆ ದಾಖಲೆಯ ಅಂದರೆ 24.06 ಲಕ್ಷ ಅಭ್ಯರ್ಥಿಗಳು ಹೆಸರು ನೋಂದಣಿ ಮಾಡಿದ್ದರು. ಉತ್ತೀರ್ಣ ಪ್ರಮಾಣ ಬಹುತೇಕ ಕಳೆದ ವರ್ಷದಷ್ಟೇ ಅಂದರೆ ಶೇ 56.2ರಷ್ಟು ಆಗಿದೆ ಎಂದು ಅಧಿಕಾರಿಯು ತಿಳಿಸಿದರು. ಕನ್ನಡ ಸೇರಿದಂತೆ 13 ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು.

ನೀಟ್: ಮಂಗಳೂರಿನ ಅರ್ಜುನ್ ಕಿಶೋರ್ ಪ್ರಥಮ ರ‍್ಯಾಂಕ್

ಒಂದನೇ ಪುಟದಿಂದ

ಅರ್ಜುನ್ ತಂದೆ ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ಫಾರ್ಮಕಾಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಕಿಶೋರ್ ಮತ್ತು ಸ್ತ್ರೀರೋಗ ತಜ್ಞೆ ಡಾ. ರಶ್ಮಿ ಅವರ ಪುತ್ರ ಅರ್ಜುನ್ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ 99.8 ಅಂಕ ಗಳಿಸಿದ್ದರು.

'ಕಠಿಣ ಪರಿಶ್ರಮವೇ ಯಶಸ್ಸು ಎಂಬುದು ಎಕ್ಸ್‌ಪರ್ಟ್ ಕಾಲೇಜಿನ ಧ್ಯೇಯವಾಕ್ಯವಾಗಿದ್ದು, ಪರಿಶ್ರಮವಿದ್ದರೆ ಯಶಸ್ಸು ಖಂಡಿತ ಸಿಗುತ್ತದೆ. ವಿದ್ಯಾರ್ಥಿಯ ಶ್ರಮ, ಪಾಲಕರು, ಉಪನ್ಯಾಸಕರು, ಕಾಲೇಜಿನ ವಾತಾವರಣದಿಂದ ಇದು ಸಾಧ್ಯವಾಗಿದೆ' ಎಂದು ಎಕ್ಸ್‌ಪರ್ಟ್ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಪ್ರೊ. ನರೇಂದ್ರ ಎಲ್. ನಾಯಕ್ ಪ್ರತಿಕ್ರಿಯಿಸಿದರು.

ಗೆದ್ದ ಪ್ರಜಾತಂತ್ರ, ಮೈತ್ರಿಯೇ ಮಂತ್ರ

ಒಂದನೇ ಪುಟದಿಂದ

ಕರ್ನಾಟಕದಲ್ಲಿ ಜಾತ್ಯತೀತ ಜನತಾದಳವನ್ನು (ಜೆಡಿಎಸ್) ಮೈತ್ರಿಕೂಟದ ತೆಕ್ಕೆಗೆ ಸೆಳೆದುಕೊಂಡಿದ್ದರಿಂದ ಪಕ್ಷದ ಮಾನ ಉಳಿದಿದೆ. ಕೇಸರಿ ಪಾಳಯವು ಪ್ರಚಂಡ ಸಾಧನೆ ಮಾಡಿದ್ದು ಒಡಿಶಾದಲ್ಲಿ. ರಾಜ್ಯದ 21 ಕ್ಷೇತ್ರಗಳ ಪೈಕಿ 19ರಲ್ಲಿ ಗೆದ್ದು ಬೀಗಿದೆ. ಕೇರಳದಲ್ಲಿ ಪಕ್ಷ ಖಾತೆ ತೆರೆದಿದೆ. ತಮಿಳುನಾಡಿನಲ್ಲಿ ಮತ ಪ್ರಮಾಣ ಹಿಗ್ಗಿದೆ. ತೆಲಂಗಾಣದಲ್ಲಿ ಕಳೆದ ಬಾರಿಗಿಂತ ದುಪ್ಪಟ್ಟು ಸ್ಥಾನಗಳನ್ನು ಗಳಿಸಿದೆ.

ಮೋದಿ-ಅಮಿತ್ ಶಾ ನೇತೃತ್ವದಲ್ಲಿ ಬಿಜೆಪಿಯು 'ಭಾರತ'ವನ್ನು ಗೆಲ್ಲಲು ಅಭಿವೃದ್ಧಿ, ಕಲ್ಯಾಣ ಯೋಜನೆಗಳು, ಹಿಂದೂ-ಮುಸ್ಲಿಂ ಧ್ರುವೀಕರಣ, ಹಿಂದುಳಿದ ಜಾತಿಗಳ ರಾಜಕಾರಣ, ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದು, ಪೌರತ್ವ ತಿದ್ದುಪಡಿ ಕಾಯ್ದೆ ಜಾರಿ, ಶ್ರೀರಾಮ ಮಂದಿರ ಸಾಕಾರದಂತಹ ರಣತಂತ್ರಗಳನ್ನು ಪ್ರಯೋಗಿಸಿತು. ಸುವ್ಯವಸ್ಥಿತವಾದ ಅಬ್ಬರದ ಪ್ರಚಾರ ನಡೆಸಿತು. ಈ ತಂತ್ರಕ್ಕೆ ಈ ಸಲ ಭಾರಿ ಯಶಸ್ಸೇನೂ ಸಿಕ್ಕಿಲ್ಲ.

'ವಿಕಸಿತ ಭಾರತ', 'ಅಮೃತ ಕಾಲ'ದ ಕಲ್ಪನೆಗಳನ್ನು ಬಿತ್ತಿ ಹಾಗೂ ಕೋಮು ಧ್ರುವೀಕರಣದ ಮಾತುಗಳ ಮೂಲಕ ಬಿಜೆಪಿ ಕಾರ್ಯಕರ್ತರನ್ನು ಇನ್ನಿಲ್ಲದಂತೆ ಹುರಿದುಂಬಿಸಿದ ಬಳಿಕವೂ ಮೋದಿ ಅವರು ಬಿಜೆಪಿಯನ್ನು ಸ್ವತಂತ್ರವಾಗಿ ಅಧಿಕಾರದ ಚುಕ್ಕಾಣಿಗೆ ತರುವಲ್ಲಿ ವಿಫಲರಾಗಿದ್ದಾರೆ. ಒಂದರ್ಥದಲ್ಲಿ ಈ ಚುನಾವಣೆಯಲ್ಲಿ ಮೋದಿ ಅವರಿಗೆ ಸೋಲಾಗಿದೆ. ಮಿತ್ರ ಪಕ್ಷಗಳ ಮರ್ಜಿ ಇಲ್ಲದೆ ಸ್ವಂತ ಶಕ್ತಿಯ ಮೇಲೆ ಸರ್ಕಾರ ರಚಿಸಿದ್ದ ಐತಿಹಾಸಿಕ ಗೆಲುವನ್ನು 2014 ಹಾಗೂ 2019ರಲ್ಲಿ ಬಿಜೆಪಿ ಸಂಪಾದಿಸಿತ್ತು. ಈ ಸಲ ಚುನಾವಣಾ ಪೂರ್ವ ಮಿತ್ರ ಪಕ್ಷಗಳನ್ನು ಜತೆಗಿಟ್ಟುಕೊಂಡು ಅವುಗಳ ಆಣತಿಗೆ ತಕ್ಕಂತೆ ಸರ್ಕಾರವನ್ನು ಮುನ್ನಡೆಸಬೇಕಾದ ಸ್ಥಿತಿ ಕಮಲ ಪಾಳಯಕ್ಕೆ ಎದುರಾಗಿದೆ. ಮಿತ್ರರನ್ನು ಮೋದಿ ಅವರು ಹೇಗೆ ಸಂಭಾಳಿಸುತ್ತಾರೆ ಎಂಬುದು ಕುತೂಹಲಕಾರಿ.

ಬಿಜೆಪಿ ಧರ್ಮಾಧಾರಿತ ಹಾಗೂ ಕಾಂಗ್ರೆಸ್ ಪಕ್ಷವು ಜಾತಿ ಆಧಾರಿತ ವಿಷಯಗಳನ್ನು ಎತ್ತಿಕೊಂಡು ಮತ ಧ್ರುವೀಕರಣಕ್ಕೆ ಪ್ರಯತ್ನ ನಡೆಸಿದ್ದವು. ಬಿಜೆಪಿ ರೂಪಿಸಿದ ರಾಷ್ಟ್ರೀಯ ಸಂಕಥನಕ್ಕೆ ಎದುರಾಗಿ ಪ್ರಾದೇಶಿಕ ಪಕ್ಷಗಳು ಸ್ಥಳೀಯ ವಿಚಾರಗಳ ಸಂಕಥನ ರೂಪಿಸಿದ್ದವು. ಮೋದಿ ಅವರ ಅಬ್ಬರದ ಪ್ರಚಾರ ತಂತ್ರಗಳನ್ನು ಸಮರ್ಥವಾಗಿ ಎದುರಿಸಿದ ಸಮಾಜವಾದಿ ಪಕ್ಷ, ತೃಣಮೂಲ ಕಾಂಗ್ರೆಸ್, ಡಿಎಂಕೆ, ಶಿವಸೇನಾ (ಉದ್ಧವ್ ಠಾಕ್ರೆ ಬಣ), ಎನ್‌ಸಿಪಿ (ಶರದ್ ಪವಾರ್ ಬಣ) ಸಾಧನೆ ಅಪೂರ್ವವಾದದ್ದು.

ಕೈಕೊಟ್ಟ 'ಉತ್ತರ': ದೇಶದ ಬಹುದೊಡ್ಡ ರಾಜಕೀಯ ರಂಗಭೂಮಿಯಾದ ಉತ್ತರ ಪ್ರದೇಶದಲ್ಲೇ ಕಮಲ ಪಾಳಯವು ಭಾರಿ ಮುಖಭಂಗ ಅನುಭವಿಸಿದೆ. ಲೋಕಸಭೆಯ 80 ಸ್ಥಾನಗಳಿಗೆ ಪ್ರತಿನಿಧಿಗಳನ್ನು ಕಳುಹಿಸಿಕೊಡುವ ವಿಶಾಲ ಪ್ರದೇಶವಿದು. 2014 ಹಾಗೂ 2019ರ ಚುನಾವಣೆಗಳಲ್ಲಿ ಮೋದಿ ಹಾಗೂ ಅಮಿತ್ ಶಾ ಜೋಡಿಯ ಪ್ರಚಂಡ ನಾಯಕತ್ವದಲ್ಲಿ ಬಿಜೆಪಿಯು ರಾಜ್ಯದಲ್ಲಿ ಬಹುಪಾಲು ಸ್ಥಾನಗಳನ್ನು ಗೆದ್ದು ಕೇಂದ್ರ ಸರ್ಕಾರವನ್ನು ತನ್ನ ತೆಕ್ಕೆಗೆ ಹಾಕಿಕೊಂಡಿತ್ತು. ಈ ಬಾರಿ ರಾಜ್ಯದಲ್ಲಿ ಬಿಜೆಪಿಗೆ ಸಿಕ್ಕಿರುವುದು 33 ಸ್ಥಾನಗಳಷ್ಟೇ. ಸಮಾಜವಾದಿ ಪಕ್ಷ (ಎಸ್‌ಪಿ) ಹಾಗೂ ಕಾಂಗ್ರೆಸ್ ಮೈತ್ರಿಕೂಟಕ್ಕೆ 'ಬಹುಜನ' ಮತದಾರರು ಬಹುಪರಾಕ್ ಎಂದಿದ್ದಾರೆ. ದಲಿತ, ಮುಸ್ಲಿಂ, ಯಾದವ ಹಾಗೂ ಇತರ ಹಿಂದುಳಿದ ವರ್ಗಗಳ ಸಮೀಕರಣದಿಂದ ಮೈತ್ರಿಕೂಟವು 44 ಕ್ಷೇತ್ರಗಳಲ್ಲಿ ಗೆದ್ದು ಬೀಗಿದೆ. 2019ರ ಚುನಾವಣೆಯಲ್ಲಿ ಬಿಎಸ್‌ಪಿ-ಎಸ್‌ಪಿ ಮೈತ್ರಿಕೂಟವು 15 ಸ್ಥಾನಗಳನ್ನು ಜಯಿಸಿದ್ದವು. ಎಸ್‌ಪಿ ಐದು ಸ್ಥಾನಗಳಿಗೆ ತೃಪ್ತಿಪಟ್ಟುಕೊಂಡಿತ್ತು. ಈ ಸಲ ಎಸ್‌ಪಿಯ ಸಂಖ್ಯೆ 37ಕ್ಕೆ ಜಿಗಿದಿದೆ.

ಅಯೋಧ್ಯೆಯಲ್ಲಿ ಬಾಲರಾಮನ ಪ್ರತಿಷ್ಠಾಪನೆಯ ಪ್ರಭಾವಳಿಯಿಂದಾಗಿ ರಾಜ್ಯದ ಎಲ್ಲ 80 ಸ್ಥಾನಗಳನ್ನೂ ಗೆದ್ದುಕೊಂಡು ಸಾರ್ವಕಾಲಿಕ ಸಾಧನೆಯ ದಾಖಲೆ ಮಾಡುತ್ತೇವೆ ಎಂದು ಕೇಸರಿ ಪಾಳಯದ ನಾಯಕರು ಪ್ರಚಾರ ಮಾಡಿದ್ದರು. ಆದರೆ, ಅಯೋಧ್ಯೆ ಇರುವ ಫೈಜಾಬಾದ್ ಕ್ಷೇತ್ರದಲ್ಲೇ ಬಿಜೆಪಿ ಅಭ್ಯರ್ಥಿ ಭಾರಿ ಅಂತರದಿಂದ ಸೋತಿದ್ದಾರೆ.

ದೊಡ್ಡ ರಾಜ್ಯಗಳಲ್ಲಿ ಹಿನ್ನಡೆ: ದೆಹಲಿ ಗದ್ದುಗೆಗೆ ಲಗ್ಗೆ ಹಾಕುವ ರಹದಾರಿ ಎನಿಸಿರುವ ದೊಡ್ಡ ರಾಜ್ಯಗಳಾದ ಉತ್ತರ ಪ್ರದೇಶ, ಮಹಾರಾಷ್ಟ್ರ ಹಾಗೂ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಭಾರಿ ಹಿನ್ನಡೆಯಾಗಿದೆ. ಈ ಮೂರು ರಾಜ್ಯಗಳಲ್ಲಿ ಕಮಲ ಪಾಳಯವು ಕಳೆದ ಬಾರಿ ಗೆದ್ದಿದ್ದ 52 ಸ್ಥಾನಗಳನ್ನು ಕಳೆದುಕೊಂಡಿದೆ. 2019ರಲ್ಲಿ ರಾಜಸ್ಥಾನ ಹಾಗೂ ಹರಿಯಾಣದಲ್ಲಿ ಎಲ್ಲ ಸ್ಥಾನಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿತ್ತು. ರಾಜಸ್ಥಾನದಲ್ಲಿ 11 ಹಾಗೂ ಹರಿಯಾಣದಲ್ಲಿ 5 ಕ್ಷೇತ್ರಗಳು ನಷ್ಟವಾಗಿವೆ. ಕರ್ನಾಟಕದಲ್ಲೂ ಎಂಟು ಸ್ಥಾನಗಳು ಕಡಿಮೆಯಾಗಿವೆ.

ಭಾರಿ ಬೆಲೆಏರಿಕೆ, ನಿರುದ್ಯೋಗ, ರೈತರ ಹೋರಾಟ, ಅಗ್ನಿವೀರ ಯೋಜನೆ ವಿರುದ್ಧ ಸಿಡಿದ ಜನಾಕ್ರೋಶವು ಬಿಜೆಪಿಗೆ ಭಾರಿ ಹೊಡೆತ ನೀಡಿದೆ. ಉತ್ತರ ಭಾರತದ ಪ್ರಭಾವಿ ಸಮುದಾಯಗಳಾದ ಜಾಟರು, ರಜಪೂತರು ದೊಡ್ಡ ಪ್ರಮಾಣದಲ್ಲಿ ಬಿಜೆಪಿ ವಿರುದ್ಧ ಮತ ಚಲಾಯಿಸಿದ್ದಾರೆ.

'ಕೈ' ಪುನಶ್ಚೇತನ

ಲೋಕಸಭೆಯಲ್ಲಿ ಅಧಿಕೃತ ವಿರೋಧ ಪಕ್ಷದ ಸ್ಥಾನ ಗಳಿಸಲು ಬೇಕಿರುವ ಸ್ಥಾನಗಳು 54. ಈ ಸಂಖ್ಯೆ ಕೂಡ ಬಿಸಿಲುಗುದುರೆ ಎನಿಸುವ ಹೀನಾಯ ಸೋಲನ್ನು ಕಾಂಗ್ರೆಸ್ ಈ ಹಿಂದಿನ ಎರಡು ಚುನಾವಣೆಗಳಲ್ಲಿ ಅನುಭವಿಸಿತ್ತು. ಸತತ ಸೋಲಿನ ಸರಮಾಲೆಯಿಂದ ಅವನತಿಯ ಅಂಚು ತಲುಪಿದ್ದ ಕಾಂಗ್ರೆಸ್ ಪಕ್ಷ ಹಠಾತ್ತನೆ ಪುನಶ್ಚೇತನದ ಹಳಿಗೆ ಬಂದಿದೆ. ದೂಳಿನಿಂದ ಮೇಲೆದ್ದಿದೆ. ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಡೆಸಿದ 'ಭಾರತ್ ಜೋಡೋ ಯಾತ್ರೆ'ಗಳು ಪಕ್ಷಕ್ಕೆ ಫಲವನ್ನು ಕೊಟ್ಟಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ-ರಾಹುಲ್ ಗಾಂಧಿ ನೇತೃತ್ವದಲ್ಲಿ ವ್ಯವಸ್ಥಿತ ಪ್ರಚಾರ ನಡೆಸಿದ್ದರಿಂದ ಕಾಂಗ್ರೆಸ್ ಪಾಳಯವು ನೂರರ ಗಡಿಗೆ ಬಂದು ನಿಂತಿದೆ. ಚುನಾವಣೆ ಘೋಷಣೆಯಾಗುವವರೆಗೆ ನಿಸ್ತೇಜವಾಗಿದ್ದ 'ಇಂಡಿಯಾ' ಮೈತ್ರಿಕೂಟವು ಒಗ್ಗಟ್ಟಿನಿಂದ ಹೋರಾಡಿ ಎನ್‌ಡಿಎಗೆ ಪ್ರಬಲ ಪೈಪೋಟಿ ನೀಡಿದೆ.

ಸೀಟು ಹಂಚಿಕೆ ಸಂದರ್ಭದಲ್ಲಿ 'ಇಂಡಿಯಾ' ಮೈತ್ರಿಕೂಟದ ನಾಯಕರು ಕೊಡು ಕೊಳ್ಳುವಿಕೆಯಲ್ಲಿ ಬಹಳ ಉದಾರಿಗಳಾಗಿದ್ದರು. ಕಾಂಗ್ರೆಸ್ ಪಕ್ಷವು ಇತಿಹಾಸದಲ್ಲೇ ಮೊದಲ ಬಾರಿಗೆ ಕನಿಷ್ಠ ಸ್ಥಾನಗಳಲ್ಲಿ (338 ಕ್ಷೇತ್ರಗಳಲ್ಲಿ) ಸ್ಪರ್ಧಿಸಿ ಪ್ರಾದೇಶಿಕ ಪಕ್ಷಗಳಿಗೆ ಹೆಚ್ಚು ಸ್ಥಾನ ಬಿಟ್ಟುಕೊಟ್ಟಿತು. ಜತೆಗೆ, ವ್ಯವಸ್ಥಿತ ಪ್ರಚಾರ ತಂತ್ರ ಅನುಸರಿಸಿತು. ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಾವಣೆ ಮಾಡಲಿದೆ ಹಾಗೂ ಮೀಸಲಾತಿ ಕಿತ್ತುಕೊಳ್ಳಲಿದೆ ಎಂದು ಪ್ರಚಾರ ನಡೆಸಿತು. ಈ ಪ್ರಚಾರ ತಂತ್ರವು ಪಕ್ಷಕ್ಕೆ ಸಾಕಷ್ಟು ಅನುಕೂಲ ಮಾಡಿಕೊಟ್ಟಿತು.

ಭಾರತ–ಐರ್ಲೆಂಡ್ ಹಣಾಹಣಿ ಇಂದು; ವಿಶ್ವಕಪ್ ಜಯದ ಹಾದಿಯಲ್ಲಿ ಮೊದಲ ಸವಾಲು

ರೋಹಿತ್ ಬಳಗಕ್ಕೆ ಶುಭಾರಂಭದ ಛಲ

ನ್ಯೂಯಾರ್ಕ್ (ಪಿಟಿಐ): ಅನುಭವಿ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಈ ಹಿಂದೆ ವಿಶ್ವಕಪ್ ಗೆದ್ದ ಭಾರತ ತಂಡದಲ್ಲಿ ಆಡಿದ್ದ ಸಂತಸ ಅನುಭವಿಸಿದ್ದಾರೆ.

ಆದರೆ ಸದ್ಯ ತಂಡದಲ್ಲಿರುವ ಇನ್ನುಳಿದ ಆಟಗಾರರಿಗೆ ಅಂತಹದೊಂದು ಅನುಭವ ಲಭಿಸಿಲ್ಲ. ಜಸ್‌ಪ್ರೀತ್ ಬೂಮ್ರಾ ಮತ್ತು ರವೀಂದ್ರ ಜಡೇಜ ಸೇರಿದಂತೆ ತಂಡದಲ್ಲಿರುವ ಇನ್ನುಳಿದ ಯುವ ಆಟಗಾರರು ಐಸಿಸಿ ವಿಶ್ವಕಪ್ ಟ್ರೋಫಿಗೆ ಮುತ್ತಿಕ್ಕಲು ಕಾದಿದ್ದಾರೆ.


ಭಾರತದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ —ಎಎಫ್‌ಪಿ ಚಿತ್ರ

ಈಗ ಅಂತಹದೊಂದು ಅವಕಾಶ ಲಭಿಸಿದೆ.


ಐರ್ಲೆಂಡ್ ತಂಡದ ನಾಯಕ ಪಾಲ್ ಸ್ಟರ್ಲಿಂಗ್

ಇಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಎ ಗುಂಪಿನಲ್ಲಿರುವ ಭಾರತ ತಂಡವು ಬುಧವಾರ ತನ್ನ ಮೊದಲ ಪಂದ್ಯವನ್ನು ಆಡಲಿದ್ದು, ಐರ್ಲೆಂಡ್ ಬಳಗವನ್ನು ಎದುರಿಸಲಿದೆ. 'ಹೊಸ ಬಾಟಲಿಯಲ್ಲಿ ಹಳೆ ಮದ್ಯ' ಎಂಬಂತೆ ತನ್ನ ಹಳೆಯ ಸಿದ್ಧಸೂತ್ರವಾದ ಸ್ಪಿನ್ ಶಕ್ತಿಯೊಂದಿಗೆ ಕಣಕ್ಕಿಳಿಯುತ್ತಿದೆ. ಟೂರ್ನಿಯಲ್ಲಿ ಇದುವರೆಗೆ ನಡೆದ ಪಂದ್ಯಗಳಲ್ಲಿ ಬ್ಯಾಟರ್‌ಗಳು ರನ್‌ಗಳ ಹೊಳೆ ಹರಿಸಲು ಸಾಧ್ಯವಾಗಿಲ್ಲ. ಹೊಚ್ಚಹೊಸ ಪಿಚ್‌ಗಳು ಇದಕ್ಕೆ ಆಸ್ಪದ ಕೊಡುತ್ತಿಲ್ಲ. ಇತ್ತೀಚೆಗೆ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಕಂಡುಬಂದ ಅಬ್ಬರದ ಬ್ಯಾಟಿಂಗ್ ವಿಶ್ವಕಪ್ ಟೂರ್ನಿಯಲ್ಲಿ ಕಾಣಸಿಗುತ್ತಿಲ್ಲ.

ಏಕದಿನ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ರೋಹಿತ್ ಬಳಗವು ಸೋತಿತ್ತು. ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದಿದ್ದ ಆ ಪಂದ್ಯದ ನಂತರ ತಮ್ಮ ಮೇಲೆಯೇ ದೃಷ್ಟಿ ಇಟ್ಟಿದ್ದ ಕ್ಯಾಮೆರಾಗಳಿಂದ ತಪ್ಪಿಸಿಕೊಳ್ಳಲು ರೋಹಿತ್ ಪ್ರಯತ್ನಿಸಿದ್ದರು.

ವಿರಾಟ್ ಕೊಹ್ಲಿ ಆ ಟೂರ್ನಿಯಲ್ಲಿ 765 ರನ್ ಗಳಿಸಿದ್ದರು. ಕೆಲವೊಮ್ಮೆ ಶ್ರೇಷ್ಠ ಆಟಗಾರರಿದ್ದರೂ ತಂಡವು ಅತ್ಯುನ್ನತ ಸಾಧನೆ ಮಾಡುವಲ್ಲಿ ಯಶಸ್ವಿಯಾಗುವುದಿಲ್ಲವೆಂಬ ಮಾತು ಭಾರತ ತಂಡಕ್ಕೆ ಅನ್ವಯಿಸುತ್ತದೆ. 37 ವರ್ಷದ ರೋಹಿತ್ ಅವರಿಗೆ ಇದು ಬಹುತೇಕ ಕೊನೆಯ ವಿಶ್ವಕಪ್ ಟೂರ್ನಿಯಾಗಲಿದೆ. ಗೆಲುವಿನೊಂದಿಗೆ ವೃತ್ತಿಜೀವನಕ್ಕೆ ವಿದಾಯ ಹೇಳುವ ಗುರಿ ಅವರದ್ದು.

ಅನುಭವ ಮತ್ತು ಸಾಮರ್ಥ್ಯದಲ್ಲಿ ಭಾರತ ತಂಡವು ಐರ್ಲೆಂಡ್‌ಗಿಂತಲೂ ಬಲಶಾಲಿಯಾಗಿದೆ. ಆದರೆ ಜಯಿಸುವ ನೆಚ್ಚಿನ ತಂಡವಾಗಿ ಆಡುವ ಒತ್ತಡವೂ ರೋಹಿತ್ ಶರ್ಮಾ ಬಳಗಕ್ಕೆ ಇದೆ. ಐರ್ಲೆಂಡ್ ಮೊದಲಿನಿಂದಲೂ ತನ್ನ ದಿಟ್ಟ ಆಟಕ್ಕೆ ಹೆಸರಾಗಿದೆ. ಭಾರತವು ಇಲ್ಲಿ ಆಡುತ್ತಿರುವ ಗುಂಪಿನಲ್ಲಿ ಪಾಕಿಸ್ತಾನ ಬಿಟ್ಟರೆ ಇನ್ನುಳಿದ ತಂಡಗಳಿಂದ ಕಠಿಣ ಸವಾಲು ಎದುರಾಗುವುದಿಲ್ಲ. ಐರ್ಲೆಂಡ್ ತಂಡದಲ್ಲಿ ಪಾಲ್ ಸ್ಟರ್ಲಿಂಗ್, ಜೋಷ್ ಲಿಟಲ್, ಹ್ಯಾರಿ ಟೆಕ್ಟರ್, ಆ್ಯಂಡಿ ಬಾಲ್‌ಬಿರಿನಿ ಅವರು ಭಾರತಕ್ಕೆ ದಿಟ್ಟ ಸವಾಲೊಡ್ಡಬಲ್ಲ ಆಟಗಾರರಾಗಿದ್ದಾರೆ.

ಭಾರತ ತಂಡಕ್ಕೆ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಹೆಚ್ಚಿದೆ. ಆದರೆ ಕೊಹ್ಲಿ ಮೂರು ಅಥವಾ ನಾಲ್ಕನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬರುವುದಾದರೆ ಯಶಸ್ವಿ ಜೈಸ್ವಾಲ್ ಅವರಿಗೆ ರೋಹಿತ್ ಜೊತೆಗೆ ಇನಿಂಗ್ಸ್ ಆರಂಭಿಸುವ ಅವಕಾಶ ಸಿಗಬಹುದು. ಮಧ್ಯಮ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್, ರಿಷಭ್ ಪಂತ್, ಹಾರ್ದಿಕ್ ಪಾಂಡ್ಯ ಹಾಗೂ ಶಿವಂ ದುಬೆ ಅವರಿದ್ದಾರೆ.

ಬೌಲರ್‌ಗಳಾದ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್ ಹಾಗೂ ಅರ್ಷದೀಪ್ ಸಿಂಗ್ ಅವರ ಮೇಲೆ ನಿರೀಕ್ಷೆ ಇದೆ. ಆದರೆ ಮೂವರು ಸ್ಪಿನ್ನರ್‌ಗಳನ್ನು ಕಣಕ್ಕಿಳಿಸುವ ಸಾಧ್ಯತೆ ಹೆಚ್ಚಿದೆ.

ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ರಿಷಭ್ ಪಂತ್ (ವಿಕೆಟ್‌ಕೀಪರ್), ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್, ಮೊಹಮ್ಮದ್ ಸಿರಾಜ್, ಸಂಜು ಸ್ಯಾಮ್ಸನ್, ಯಜುವೇಂದ್ರ ಚಾಹಲ್.

ಐರ್ಲೆಂಡ್: ಪಾಲ್ ಸ್ಟರ್ಲಿಂಗ್ (ನಾಯಕ), ಮಾರ್ಕ್ ಅಡೇರ್, ರಾಸ್ ಅಡೇರ್, ಆ್ಯಂಡಿ ಬಾಲ್‌ಬಿರಿನಿ, ಕರ್ಟಿಸ್ ಕ್ಯಾಂಪರ್, ಗರೆತ್ ಡೆಲನಿ, ಜಾರ್ಜ್ ಡಾಕ್ರೆಲ್, ಗ್ರಹಾಂ ಹ್ಯೂಮ್, ಜೋಶ್ ಲಿಟಲ್, ಬ್ಯಾರಿ ಮೆಕಾರ್ತಿ, ನೀಲ್ ರಾಕ್ (ವಿಕೆಟ್‌ಕೀಪರ್), ಹ್ಯಾರಿ ಟೆಕ್ಟರ್, ಲಾರ್ಕನ್ ಟಕರ್, ಬೆನ್ ವೈಟ್, ಕ್ರೇಗ್ ಯಂಗ್.

ಇಂದಿನ ಪಂದ್ಯ
ಭಾರತ–ಐರ್ಲೆಂಡ್: ರಾತ್ರಿ 8
ನೇರಪ್ರಸಾರ : ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಡಿ ಸ್ಪೋರ್ಟ್ಸ್, ಹಾಟ್‌ಸ್ಟಾರ್ ಆ್ಯಪ್.

ಸೌಲಭ್ಯಗಳ ಬಗ್ಗೆ ಕ್ರಿಕೆಟಿಗರ ಅಸಮಾಧಾನ

ನ್ಯೂಯಾರ್ಕ್ (ಪಿಟಿಐ): ಇದೇ ಮೊದಲ ಬಾರಿಗೆ ಟಿ20 ವಿಶ್ವಕಪ್ ಟೂರ್ನಿ ಆಯೋಜಿಸುತ್ತಿರುವ ಅಮೆರಿಕದಲ್ಲಿ ಸೌಲಭ್ಯಗಳ ಕುರಿತು ಕೆಲವು ಕ್ರಿಕೆಟಿಗರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವೇಳಾಪಟ್ಟಿ, ಅಭ್ಯಾಸದ ಪಿಚ್, ಪ್ರಯಾಣ ಮತ್ತಿತರ ಸೌಲಭ್ಯಗಳ ಕುರಿತು ಆಕ್ಷೇಪಗಳು ವ್ಯಕ್ತವಾಗುತ್ತಿವೆ. ಡಿ ಗುಂಪಿನಲ್ಲಿ ಆಡುತ್ತಿರುವ ಶ್ರೀಲಂಕಾ ತಂಡದ ನಾಯಕ ವನಿಂದು ಹಸರಂಗಾ ಹಾಗೂ ಬೌಲರ್ ಮಹೀಷ ತೀಕ್ಷಣ ಅವರು ಈಗ ಸೌಲಭ್ಯಗಳ ಬಗ್ಗೆ ದೂರಿದ್ದಾರೆ.

'ಒಂದು ಪಂದ್ಯ ಮುಗಿಸಿ ಇನ್ನೊಂದರಲ್ಲಿ ಆಡಲು ಬೇರೆ ಕ್ರೀಡಾಂಗಣಕ್ಕೆ ಪ್ರಯಾಣಿಸುವ ಅವಧಿಯು ಸುದೀರ್ಘವಾಗಿದೆ. ನಾವು ಫ್ಲಾರಿಡಾದಿಂದ ಮಿಯಾಮಿ ಮೂಲಕ ಪ್ರಯಾಣಿಸುವ ವಿಮಾನಕ್ಕಾಗಿ ಎಂಟು ಗಂಟೆ ಕಾಯಬೇಕಾಯಿತು. ಅದಕ್ಕಾಗಿ ರಾತ್ರಿ 8 ಗಂಟೆಗೆ ಪ್ರಯಾಣ ಆರಂಭಿಸಬೇಕಿತ್ತು. ಆದರೆ ವಿಮಾನವು ಬೆಳಗಿನ ಜಾವ 5ಕ್ಕೆ ಹೊರಟಿತು. ಇದು ಸರಿಯಿಲ್ಲ. ಈ ರೀತಿಯ ವ್ಯವಸ್ಥೆಯಿಂದಾಗಿ ನಾವುಬಹುತೇಕ ಪ್ರತಿ ದಿನವೂ ಪ್ರಯಾಣ ಮಾಡಬೇಕಾಗಿದೆ' ಎಂದು ತೀಕ್ಷಣ ದೂರಿದ್ದಾರೆ.

'ಪ್ರಯಾಣದ ಒತ್ತಡ ಹಾಗೂ ವಿಶ್ರಾಂತಿ ಇಲ್ಲದ ಕಾರಣಕ್ಕೆ ಆಟಗಾರರ ಸಾಮರ್ಥ್ಯದಲ್ಲಿ ಕುಸಿತವಾಗಿದೆ. ಹೋಟೆಲ್‌ನಿಂದ ಅಭ್ಯಾಸದ ಕ್ರೀಡಾಂಗಣಕ್ಕೆ ಬರಲು ಕೂಡ ಸುಮಾರು ಒಂದು ಗಂಟೆ ಪ್ರಯಾಣಿಸಬೇಕಿದೆ. ಅದಕ್ಕಾಗಿ ಬೆಳಿಗ್ಗೆ 5ಕ್ಕೆ ಎದ್ದು ಹೊರಡಬೇಕು' ಎಂದೂ ಹೇಳಿದರು.

ಶ್ರೀಲಂಕಾ ತಂಡವು ತನ್ನ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಸೋತಿದೆ.

ಭಾರತ ತಂಡದ ಆಟಗಾರರು ಇಲ್ಲಿರುವ ಸೌಲಭ್ಯಗಳ ಕುರಿತು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಫಝಲ್ಹಕ್ ಫರೂಖಿಗೆ ಐದು ವಿಕೆಟ್: ಅಫ್ಗಾನಿಸ್ತಾನಕ್ಕೆ ಜಯ

ಪ್ರಾವಿಡೆನ್ಸ್ (ಗಯಾನ), (ಪಿಟಿಐ): ಆರಂಭ ಆಟಗಾರರಾದ ರಹಮಾನುಲ್ಲಾ ಗುರ್ಬಾಜ್ ಮತ್ತು ಇಬ್ರಾಹಿಂ ಜದ್ರಾನ್ ಅರ್ಧಶತಕಗಳನ್ನು ಬಾರಿಸಿದ ನಂತರ ಎಡಗೈ ವೇಗದ ಬೌಲರ್ ಫಜಲ್ಹಕ್ ಫರೂಖಿ (9ಕ್ಕೆ5) ಅವರು ಅಮೋಘ ಬೌಲಿಂಗ್ ಮಾಡಿದರು.

ವಿಶ್ವಕಪ್‌ಗೆ ಪದಾರ್ಪಣೆ ಮಾಡಿದ ಯುಗಾಂಡಾ ತಂಡವನ್ನು ಸೋಮವಾರ 125 ರನ್‌ಗಳಿಂದ ಸುಲಭವಾಗಿ ಸೋಲಿಸಿದ ಅಫ್ಗಾನಿಸ್ತಾನ ಟಿ20 ವಿಶ್ವಕಪ್ ಅಭಿಯಾನವನ್ನು ಉತ್ತಮವಾಗಿ ಆರಂಭಿಸಿತು. ಗುರ್ಬಾಜ್ 45 ಎಸೆತಗಳಲ್ಲಿ 76 ರನ್ ಬಾರಿಸಿದರೆ, ಅವರ ಜೊತೆಗಾರ ಜದ್ರಾನ್ 46 ಎಸೆತಗಳಲ್ಲಿ 70 ರನ್ ಹೊಡೆದರು. ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಅಫ್ಗಾನಿಸ್ತಾನ 5 ವಿಕೆಟ್‌ಗೆ 183 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಗುರ್ಬಾಜ್ ಮತ್ತು ಜದ್ರಾನ್ 14.3 ಓವರುಗಳಲ್ಲಿ 154 ರನ್ ಪೇರಿಸಿದ್ದರು.

ಹೊಸ ಚೆಂಡಿನಲ್ಲಿ ಪರಿಣಾಮಕಾರಿಯಾದ ಫರೂಖಿ (4–0–9–5) ಯುಗಾಂಡ ಬ್ಯಾಟಿಂಗ್ ಕ್ರಮಾಂಕವನ್ನು ಧ್ವಂಸಗೊಳಿಸಿದರು. ಅವರಿಗೆ ಎರಡು ಬಾರಿ ಹ್ಯಾಟ್ರಿಕ್ ಅವಕಾಶ ಸ್ವಲ್ಪದರಲ್ಲೇ ತಪ್ಪಿತು. ಮೊದಲ ವಿಶ್ವಕಪ್ ಆಡಿದ ಯುಗಾಂಡ 16 ಓವರುಗಳಲ್ಲಿ 58 ರನ್ನಿಗೆ ಪತನಗೊಂಡಿತು. ಮೊದಲ ಸಲ ಐದು ವಿಕೆಟ್ ಗೊಂಚಲು ಪಡೆದ ಫರೂಖಿ ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾದರು.


ಫಜಲ್ಹಕ್ ಫರೂಖಿ. ಎಕ್ಸ್ ಚಿತ್ರ

ಸ್ಕೋರುಗಳು: ಅಫ್ಗಾನಿಸ್ತಾನ: 20 ಓವರುಗಳಲ್ಲಿ 5 ಕ್ಕೆ183 (ರಹಮಾನುಲ್ಲಾ ಗುರ್ಬಾಜ್ 76, ಇಬ್ರಾಹಿಂ ಜದ್ರಾನ್ 70, ಮೊಹಮ್ಮದ್ ನಬಿ ಔಟಾಗದೇ 14; ಕಾಸ್ಮಸ್ ಕೆವುಟ 25ಕ್ಕೆ2, ಬ್ರಯಾನ್ ಮಸಾಬ 21ಕ್ಕೆ2); ಯುಗಾಂಡ: 16 ಓವರುಗಳಲ್ಲಿ 58 (ರಿಯಾಜತ್ ಅಲಿ ಶಾ 11, ರಾಬಿನ್ಸನ್ ಒಬುಯಾ 14; ಫಜಲ್ಹಕ್ ಫಾರೂಕಿ 9ಕ್ಕೆ5, ನವೀನ್ ಉಲ್ ಹಕ್ 4ಕ್ಕೆ2, ರಶೀದ್ ಖಾನ್ 12ಕ್ಕೆ2)

ದ್ರಾವಿಡ್‌ಗೆ ಕೊನೆಯ ವಿಶ್ವಕಪ್

ಪ್ರಜಾವಾಣಿ ವಾರ್ತೆ

ನ್ಯೂಯಾರ್ಕ್: ಟಿ20 ವಿಶ್ವಕಪ್ ಟೂರ್ನಿ ಬಳಿಕ ಭಾರತದ ಕೋಚ್ ಹುದ್ದೆಯಿಂದ ಕೆಳಗಿಳಿಯುವುದಾಗಿ ರಾಹುಲ್ ದ್ರಾವಿಡ್ ಸೋಮವಾರ ಹೇಳಿದ್ದಾರೆ.


ರಾಹುಲ್

ದ್ರಾವಿಡ್ ಅವರ ಒಪ್ಪಂದವು ಈ ತಿಂಗಳ ಕೊನೆಯಲ್ಲಿ ಕೊನೆಗೊಳ್ಳುತ್ತದೆ. ಸುಮಾರು ಮೂರು ವರ್ಷದಿಂದ ತಂಡದ ತರಬೇತುದಾರಾಗಿದ್ದಾರೆ. ಅವರು ಕೋಚ್ ಹುದ್ದೆಗೆ ಮರು ಅರ್ಜಿ ಸಲ್ಲಿಸಿಲ್ಲ ಎಂದು ಬಿಸಿಸಿಐ ತಿಳಿಸಿದೆ.

ಐರ್ಲೆಂಡ್ ವಿರುದ್ಧದ ಭಾರತದ ಆರಂಭಿಕ ಪಂದ್ಯಕ್ಕೆ ಮುಂಚಿತವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ 51 ವರ್ಷದ ರಾಹುಲ್, 'ಇದು ನಾನು ಉಸ್ತುವಾರಿ ವಹಿಸುವ ಕೊನೆಯ ಟೂರ್ನಿಯಾಗಿದೆ' ಎಂದು ಹೇಳಿದರು.

'ದುರದೃಷ್ಟವಶಾತ್, ಪಂದ್ಯದ ವೇಳಾಪಟ್ಟಿಗಳು ಮತ್ತು ನನ್ನ ಜೀವನದ ಈ ಹಂತದಲ್ಲಿ ಮತ್ತೆ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತದೆ ಎಂದುಭಾವಿಸುವುದಿಲ್ಲ. ಭಾರತ ತಂಡಕ್ಕೆ ತರಬೇತಿ ನೀಡುವುದನ್ನು ಆನಂದಿಸಿದ್ದೇನೆ ಮತ್ತು ಇದು ನಿಜವಾಗಿಯೂ ವಿಶೇಷ ಕೆಲಸ ಎಂದು ಭಾವಿಸುತ್ತೇನೆ' ಎಂದರು.

2021ರ ಟಿ20 ವಿಶ್ವಕಪ್ ನಂತರ ಭಾರತದ ಮಾಜಿ ನಾಯಕ ರವಿ ಶಾಸ್ತ್ರಿ ಅವರಿಂದ ಅಧಿಕಾರ ವಹಿಸಿಕೊಂಡರು.

ಕಳೆದ ವರ್ಷ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಮತ್ತು ತವರಿನಲ್ಲಿ ನಡೆದ ಏಕದಿನ ವಿಶ್ವಕಪ್ ಎರಡರಲ್ಲೂ ಭಾರತ ತಂಡ ಫೈನಲ್ ತಲುಪಿತ್ತು.

'ಪ್ರಾಮಾಣಿಕವಾಗಿ ಹೇಳುವುದಾದರೆ, ಈ ಟೂರ್ನಿಗಳಲ್ಲಿ ನಾವು ನಿಜವಾಗಿಯೂ ಉತ್ತಮವಾಗಿ ಆಡಿದ್ದೇವೆ ಎಂದು ಭಾವಿಸುತ್ತೇನೆ' ಎಂದರು.

ಪ್ರಿಂಗ್ಲೆ ದಾಳಿ: ನೆದರ್ಲೆಂಡ್ಸ್‌ಗೆ ಜಯ

ಡಲಾಸ್ (ಪಿಟಿಐ): ಟಿಮ್ ಪ್ರಿಂಗ್ಲೆ (20ಕ್ಕೆ3) ಹಾಗೂ ಲೋಗನ್ ವ್ಯಾನ್ ಬೀಕ್ (18ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ನೆದರ್ಲೆಂಡ್ಸ್ ತಂಡವು ಮಂಗಳವಾರ ನಡೆದ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ನೇಪಾಳ ಎದುರು ಗೆಲುವು ಸಾಧಿಸಿತು.

ಗ್ರ್ಯಾಂಡ್ ಪ್ರಿಯರಿ ಕ್ರೀಡಾಂಗಣದಲ್ಲಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ನೆದರ್ಲೆಂಡ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.


ಪ್ರಿಂಗ್ಲೆ ಹಾಗೂ ಬೀಕ್ ದಾಳಿಯ ಮುಂದೆ ನೇಪಾಳ 19.2 ಓವರ್‌ಗಳಲ್ಲಿ 106 ರನ್ ಗಳಿಸಿ ಆಲೌಟ್ ಆಯಿತು. ಈ ಗುರಿ ಬೆನ್ನಟ್ಟಿದ್ದ ನೆದರ್ಲೆಂಡ್ಸ್ ತಂಡವು 18.4 ಓವರ್‌ಗಳಲ್ಲಿ 4 ವಿಕೆಟ್‌ಗೆ 109 ರನ್ ಗಳಿಸಿ ಜಯಿಸಿತು.

ಅಲ್ಪ ಮೊತ್ತ ಬೆನ್ನಟ್ಟಿದ ನೆದರ್ಲೆಂಡ್ಸ್‌ಗೆ ಸುಲಭವಾಗಿ ಜಯಿಸಲು ಸಾಧ್ಯವಾಗಲಿಲ್ಲ. ನೇಪಾಳ ಬೌಲರ್‌ಗಳು ಕಾಡಿದರು.

ಆರಂಭಿಕ ಬ್ಯಾಟರ್ ಮೈಕೆಲ್ ಲೆವಿಟ್ (1) ಅವರು ಸೋಮಪಾಲ್ ಕಮಿ ಬೌಲಿಂಗ್‌ನಲ್ಲಿ ಔಟಾದರು.. ವಿಕ್ರಮ್‌ಜಿತ್ ಸಿಂಗ್ (22),ಸೈಬ್ರಾಂಡ್ ಎಂಗಲ್‌ಬ್ರೆಕ್ಟ್(14) ಹಾಗೂ ಸ್ಕಾಟ್ ಎಡವರ್ಡ್ಸ್ (5) ಬಹುಬೇಗ ನಿರ್ಗಮಿಸಿದರು.

ಮ್ಯಾಕ್ಸ್ ಒ'ಡೌಡ್ ಅವರ (ಅಜೇಯ 54, 48ಎ) ಅರ್ಧಶತಕ ಹಾಗೂ ಬಾಸ್ ಡಿ ಲೀಡೆ (ಅಜೇಯ 11) ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇನ್ನಿಂಗ್ಸ್ ಆರಂಭಿಸಿದ ನೇಪಾಳ ಬ್ಯಾಟಿಂಗ್ ಪಡೆ ಆರಂಭದಲ್ಲಿಯೇ ಮುಗ್ಗರಿಸಿತು. ಪ್ರಿಂಗ್ಲೆ ದಾಳಿಯಲ್ಲಿ ಆಸಿಫ್ ಶೇಖ್ (4), ಅನಿಲ್ ಸಾಹ್ (11) ಹಾಗೂ ರೋಹಿತ್ ಪಾಡೇಲ್ (35) ಔಟಾದರು. ನಂತರ ದಾಳಿಗಿಳಿದ ಬೀಕ್ ಸಹ ಮೂರು ವಿಕೆಟ್ ಗಳಿಸಿ ಪೆಟ್ಟುಕೊಟ್ಟರು.


ನೆದರ್ಲೆಂಡ್ಸ್‌ನ ಬೌಲರ್ ಟಿಮ್ ಪ್ರಿಂಗ್ಲೆ. ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ನೇಪಾಳ: 19.2 ಓವರ್‌ಗಳಲ್ಲಿ 106 (ರೋಹಿತ್ ಪಾಡೇಲ್ 35, ಕರಣ್ 17, ಟಿಮ್ ಪ್ರಿಂಗ್ಲೆ 20ಕ್ಕೆ3, ಲೋಗನ್ ವ್ಯಾನ್ ಬೀಕ್ 18ಕ್ಕೆ3.

ನೆದರ್ಲೆಂಡ್ಸ್: 18.4 ಓವರ್‌ಗಳಲ್ಲಿ 109 (ಮ್ಯಾಕ್ಸ್ ಒ'ಡೌಡ್ ಅಜೇಯ 54, ವಿಕ್ರಮ್‌ಜಿತ್ ಸಿಂಘ್ 22, ಸೋಮಪಾಲ್ ಕಮಿ 18ಕ್ಕೆ1, ದಿಪೇಂದ್ರ ಸಿಂಗ್ 6ಕ್ಕೆ1)

ಪಂದ್ಯ ಶ್ರೇಷ್ಠ: ಟಿಮ್ ಪ್ರಿಂಗ್ಲೆ

ಮಳೆ: ಇಂಗ್ಲೆಂಡ್ –ಸ್ಕಾಟ್ಲೆಂಡ್ ಪಂದ್ಯ ರದ್ದು

ಬ್ರಿಜ್‌ಟೌನ್, ಬಾರ್ಬಡೋಸ್ (ಪಿಟಿಐ): ಜಾರ್ಜ್ ಮುನ್ಸೆ ಮತ್ತು ಮೈಕೆಲ್ ಜೋನ್ಸ್ ಅವರು ಮಂಗಳವಾರ ಇಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡಕ್ಕೆ ಅಬ್ಬರದ ಆರಂಭ ನೀಡಿದರು.

ಕೆನ್ಸಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಸ್ಕಾಟ್ಲೆಂಡ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು.

ಎದುರಾಳಿ ಇಂಗ್ಲೆಂಡ್ ತಂಡದ ಅನುಭವಿ ಬೌಲರ್‌ಗಳನ್ನು ದಿಟ್ಟತನದಿಂದ ಎದುರಿಸಿದ ಜಾರ್ಜ್ (ಬ್ಯಾಟಿಂಗ್ 18; 19ಎ, 4X3) ಹಾಗೂ ಜೋನ್ಸ್ (ಬ್ಯಾಟಿಂಗ್ 30; 20ಎ, 4X3, 6X1) ಅಬ್ಬರಿಸಿದರು.

ಇದರಿಂದಾಗಿ ತಂಡವು 6.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 51 ರನ್ ಗಳಿಸಿತು. ಈ ಹಂತದಲ್ಲಿ ಜೋರು ಮಳೆ ಸುರಿದ ಕಾರಣ ಆಟ ರದ್ದುಗೊಳಿಸಲಾಯಿತು

ಕೇಕ್ ತರಲು ತಡ: ಪತ್ನಿ–ಪುತ್ರನಿಗೆ ಚಾಕುವಿನಿಂದ ಇರಿದ ಭೂಪ!

ಮುಂಬೈ (ಪಿಟಿಐ): ತನ್ನ ಹುಟ್ಟುಹಬ್ಬದ ಸಂಭ್ರಮಾಚರಣೆಗೆ ಕೇಕ್ ತರುಲು ತಡ ಮಾಡಿದರು ಎಂದು ಕೋಪಗೊಂಡ ವ್ಯಕ್ತಿಯೊಬ್ಬ, ಪತ್ನಿ ಹಾಗೂ ಪುತ್ರನಿಗೆ ಚಾಕುವಿನಿಂದ ಇರಿದಿರುವ ಘಟನೆ ಮುಂಬೈನಲ್ಲಿ ನಡೆದಿದೆ.

'ಕಳೆದ ಶನಿವಾರ ಆರೋಪಿ ರಾಜೇಂದ್ರ ಶಿಂದೆಯ ಹುಟ್ಟುಹಬ್ಬವಿತ್ತು. ಮನೆಗೆಲಸ ಮಾಡುತ್ತಿದ್ದ ಆತನ ಪತ್ನಿ, ಕೆಲಸದ ಸ್ಥಳದಲ್ಲಿ ವಿಳಂಬವಾಗಿದ್ದರಿಂದ ಮರುದಿನ ಕೇಕ್ ತಂದು ಹುಟ್ಟುಹಬ್ಬ ಆಚರಣೆಗೆ ಮುಂದಾಗಿದ್ದರು. ಈ ವೇಳೆ ಕೋಪಗೊಂಡ ಶಿಂದೆ, ಪತ್ನಿಯೊಂದಿಗೆ ಜಗಳ ಶುರು ಮಾಡಿದ್ದಾನೆ. ಜಗಳ ಬಿಡಿಸಲು ಬಂದ ಪುತ್ರನಿಗೆ ಚಾಕುವಿನಿಂದ ಇರಿದಿದ್ದಾನೆ. ಬಳಿಕ ಪುತ್ರನ ರಕ್ಷಣೆಗೆ ಮುಂದಾದ ಪತ್ನಿಯ ಮುಂಗೈಗೆ ಚುಚ್ಚಿ ಸ್ಥಳದಿಂದ ಪರಾರಿಯಾಗಿದ್ದಾನೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜೇಂದ್ರ ತನ್ನ ಪುತ್ರನ ಪಕ್ಕೆಲುಬು ಮತ್ತು ಎದೆಯ ಭಾಗಕ್ಕೆ ಬಲವಾಗಿ ಇರಿದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ರಂಜನಾ ಶಿಂದೆ ಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ.ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನೆಟ್ಟಾರು ಹತ್ಯೆ: ಮತ್ತೊಬ್ಬನ ಬಂಧನ

ಅಪರಾಧ ಸುದ್ದಿ

ನವದೆಹಲಿ (ಪಿಟಿಐ): ಕರ್ನಾಟಕದಲ್ಲಿ 2022ರ ಜುಲೈನಲ್ಲಿ ನಡೆದಿದ್ದ ಬಿಜೆಪಿ ಯುವ ಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿದಂತೆ ಮತ್ತೊಬ್ಬ ಆರೋಪಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮಂಗಳವಾರ ಬಂಧಿಸಿದೆ.

ಬಂಧಿತ ಆರೋಪಿಯನ್ನು ರಿಯಾಜ್ ಯೂಸಫ್ ಹಾರಳ್ಳಿ ಅಲಿಯಾಸ್ ರಿಯಾಜ್ ಎಂದು ಗುರುತಿಸಲಾಗಿದೆ. ಈತ ವಿದೇಶಕ್ಕೆ ಪರಾರಿಯಾಗಲು ಯತ್ನಿಸುತ್ತಿದ್ದಾಗ ಮುಂಬೈ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿದೆ ಎಂದು ಎನ್‌ಐಎ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಮೂಲಕ ರಿಯಾಜ್ ಬಂಧನವೂ ಸೇರಿದಂತೆ ಈ ಪ್ರಕರಣದಲ್ಲಿ ಇಲ್ಲಿಯವರೆಗೆ ಬಂಧಿತವಾಗಿರುವ ಒಟ್ಟು ಆರೋಪಿಗಳ ಸಂಖ್ಯೆ 19ಕ್ಕೆ ಏರಿಕೆಯಾಗಿದೆ.

ಅಂತರರಾಜ್ಯ 'ಡ್ರಗ್ ಪೆಡ್ಲರ್ಸ್' ಬಂಧನ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದ ಇಟಾನಗರದಲ್ಲಿ ಇಬ್ಬರು ಅಂತರರಾಜ್ಯ ಮಾದಕ ವಸ್ತು ಮಾರಾಟಗಾರರನ್ನು ಬಂಧಿಸಲಾಗಿದ್ದು, ₹42 ಲಕ್ಷ ಮೌಲ್ಯದ 348.58 ಗ್ರಾಂ ಹೆರಾಯಿನ್ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಇಟಾನಗರದಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುವ ಜಾಲದ ಬಗ್ಗೆ ಮೂಲಗಳಿಂದ ಸುಳಿವು ಸಿಕ್ಕಿತ್ತು. ಇದನ್ನಾಧರಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಉರ್ಗೇನ್ ದೋರ್ಜಿ(21) ಎಂಬಾತನನ್ನು ಬಂಧಿಸಿ, ಆತನ ಬಳಿಯಿದ್ದ 65 ಗ್ರಾಂ ಹೆರಾಯಿನ್ ವಶಕ್ಕೆ ಪಡೆದಿದ್ದರು. ಬಳಿಕ ವಿಚಾರಣೆ ವೇಳೆ ಆತ, ಟಿಥಾಯ್ ಪ್ರೋವ್ ಗೋಲ್ಮೈ(28) ಹೆಸರಿನ ಮಣಿಪುರಿ ಯುವಕನಿಗೆ ಡ್ರಗ್ ಸರಬರಾಜು ಮಾಡುತ್ತಿದ್ದುದಾಗಿ ಬಾಯಿ ಬಿಟ್ಟಿದ್ದ. ಅಲ್ಲದೆ, ಶೀಘ್ರದಲ್ಲೇ ಗೋಲ್ಮೈ ಇಂಫಾಲ್‌ನಿಂದ ಇಟಾನಗರಕ್ಕೆ ಬಸ್ ಮೂಲಕ ಹೆಚ್ಚಿನ ಡ್ರಗ್ಸ್ ತರುವ ಮಾಹಿತಿ ನೀಡಿದ್ದ' ಎಂದು ಎಸ್‌ಪಿ ರೋಹಿತ್ ರಾಜ್‌ಬೀರ್ ಸಿಂಗ್ ತಿಳಿಸಿದ್ದಾರೆ.

'ಬಂಧಿತ ದೋರ್ಜಿ ನೀಡಿದ್ದ ಮಾಹಿತಿಯನ್ನು ಆಧರಿಸಿ ಗೋಲ್ಮೈನನ್ನು ಬಂಧಿಸಲಾಗಿದೆ. ಆತನ ಬಳಿಯಿದ್ದ 283.58 ಗ್ರಾಂ ಹೆರಾಯಿನ್ ಅನ್ನು ವಶಪಡಿಸಿಕೊಳ್ಳಲಾಗಿದೆ. ಮಾದಕ ವಸ್ತುಗಳು ಹಾಗೂ ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ(ಎನ್‌ಡಿಪಿಎಸ್) ಅಡಿ ಪ್ರಕರಣ ದಾಖಲಿಸಿ, ಹೆಚ್ಚಿನ ವಿಚಾರಣೆ ನಡೆಸುತ್ತಿದ್ದೇವೆ' ಎಂದು ಅವರು ಹೇಳಿದ್ದಾರೆ.

ಯುದ್ಧ ವಿಮಾನ ಅಪಘಾತ ಇಬ್ಬರು ಪೈಲಟ್‌ಗಳು ಸುರಕ್ಷಿತ

ಮುಂಬೈ (ಪಿಟಿಐ): ಮಹಾರಾಷ್ಟ್ರದ ನಾಸಿಕ್‌ನಲ್ಲಿ ಭಾರತೀಯ ವಾಯುಪಡೆಯ ಸುಖೋಯ್ ಯುದ್ಧ ವಿಮಾನವು ಅಪಘಾತಕ್ಕೀಡಾಗಿದ್ದು, ಈ ವಿಮಾನದಲ್ಲಿದ್ದ ಪೈಲಟ್ ಮತ್ತು ಸಹ ಪೈಲಟ್ ಇಬ್ಬರೂ ಸುರಕ್ಷಿತವಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುಖೋಯ್–30 ಎಂಕೆಐ ಯುದ್ಧ ವಿಮಾನವು ಶಿರಸ್‌ಗಾಂವ್ ಬಳಿ ಇರುವ ಮೈದಾನದಲ್ಲಿ ಪತನಗೊಂಡಿತು. ಈ ವೇಳೆ ವಿಂಗ್ ಕಮಾಂಡರ್ ಬೋಕಿಲ್ ಮತ್ತು ಸೆಕೆಂಡ್ ಇನ್ ಕಮಾಂಡ್ ಬಿಸ್ವಾಸ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಹೆಚ್ಚಿನ ಚಿಕಿತ್ಸೆಗಾಗಿ ಈ ಇಬ್ಬರೂ ಪೈಲಟ್‌ಗಳನ್ನು ಎಚ್‌ಎಎಲ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ವಿಮಾನದ ಅಪಘಾತಕ್ಕೆ ಕಾರಣವೇನು ಎಂಬುದನ್ನು ಇನ್ನಷ್ಟೇ ಪತ್ತೆ ಹಚ್ಚಬೇಕಿದೆ. ಪ್ರಾಥಮಿಕ ವರದಿ ಪ್ರಕಾರ, ತಾಂತ್ರಿಕ ದೋಷದಿಂದಾಗಿ ಈ ಘಟನೆ ನಡೆದಿರಬಹುದು ಎಂದು ಮತ್ತೊಬ್ಬ ಪೊಲೀಸ್ ಅಧಿಕಾರಿ ಹೇಳಿದ್ದಾರೆ.

ಕೇರಳ ಶಾಲಾ ಪಠ್ಯ ಪುಸ್ತಕದಲ್ಲಿ ಪುರುಷನ ಅಡುಗೆಯ ಅಧ್ಯಾಯ

ತಿರುವನಂತಪುರ: ಮಕ್ಕಳಲ್ಲಿ ಲಿಂಗ ಸಮಾನತೆ ಮನೋಭಾವವನ್ನು ಬೆಳೆಸುವ ಉದ್ದೇಶದಿಂದ ಕೇರಳ ಸರ್ಕಾರವು ಪುರುಷರು ಅಡುಗೆ ಮಾಡುವ ಹಾಗೂ ಅಡುಗೆ ಕೋಣೆಯಲ್ಲಿ ಕೆಲಸ ಮಾಡುವಂತಹ ದೃಶ್ಯ ಸಹಿತ ಪಾಠವನ್ನು ಶಾಲಾ ಪಠ್ಯ ಪುಸ್ತಕಗಳಲ್ಲಿ ಪರಿಚಯಿಸಿದೆ.

ಶಿಕ್ಷಣ ಸಚಿವ ವಿ. ಶಿವಕುಟ್ಟಿ ಅವರು ಮೂರನೇ ತರಗತಿಯ ಪಠ್ಯಪುಸ್ತಕದಲ್ಲಿ ಪತಿಯು ಅಡುಗೆ ಮಾಡುತ್ತಿರುವ ದೃಶ್ಯವಿರುವ ಪಾಠದ ಚಿತ್ರವನ್ನು ಸಾಮಾಜಿಕ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಮಹಿಳೆ ಮಾತ್ರವೇ ಅಡುಗೆ ಕೋಣೆಯಲ್ಲಿ ಕೆಲಸ ಮಾಡಬೇಕು ಮತ್ತು ಆಕೆಯೇ ಮನೆಯ ಎಲ್ಲರಿಗೂ ಊಟ ತಯಾರಿಸಬೇಕು ಎಂಬ ಸಾಮಾನ್ಯ ಮನಃಸ್ಥಿತಿ ಮತ್ತು ಚಿತ್ರಣವನ್ನು ಬದಲಿಸಿ, ಪುರುಷರು ಕೂಡ ಅಡುಗೆ ಮಾಡಬಹುದು ಹಾಗೂ ಇದು ಯಾವುದೇ ಲಿಂಗ ಆಧಾರಿತ ಕೆಲಸವಲ್ಲ ಎಂಬುದನ್ನು ಮಕ್ಕಳಲ್ಲಿ ಮೂಡಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ.

ಲಿಂಗ ತಾರತಮ್ಯ ಹೋಗಲಾಡಿಸಲು ಕೇರಳದ ಸಿಪಿಎಂ ಸರ್ಕಾರ ಕೈಗೊಂಡಿರುವ ಮತ್ತೊಂದು ಕ್ರಮ ಇದಾಗಿದ್ದು, ಈಗಾಗಲೇ ಕೇವಲ ಗಂಡು ಮಕ್ಕಳ ಮತ್ತು ಕೇವಲ ಹೆಣ್ಣುಮಕ್ಕಳ ಬೇರೆ ಬೇರೆ ಶಾಲೆಗಳನ್ನು ಒಟ್ಟುಗೂಡಿಸಿ ಇಬ್ಬರೂ ಒಂದೆಡೆ ಶಿಕ್ಷಣ ಪಡೆಯುವಂತೆ ಮಾಡಲು ಸರ್ಕಾರ ಪ್ರಯತ್ನಿಸುತ್ತಿದೆ.

ಮಲಯಾಳ ಮಾಧ್ಯಮ ಪಠ್ಯಪುಸ್ತಕದಲ್ಲಿ ಪತಿಯು ಅಡುಗೆ ಕೋಣೆಯ ನೆಲದಲ್ಲಿ ಕುಳಿತು ತೆಂಗಿನಕಾಯಿ ತುರಿಯುತ್ತಿರುವ ಚಿತ್ರವಿದ್ದರೆ, ಇಂಗ್ಲಿಷ್ ಮಾಧ್ಯಮ ಪುಸ್ತಕದಲ್ಲಿ ಪತಿಯು ಮಕ್ಕಳಿಗಾಗಿ ಅಡುಗೆ ಕೋಣೆಯಲ್ಲಿ ತಿಂಡಿ ತಯಾರು ಮಾಡುತ್ತಿರುವ ಚಿತ್ರವಿದೆ. ಮಕ್ಕಳೂ ಸೇರಿದಂತೆ ಇತರ ಕುಟುಂಬ ಸದಸ್ಯರು ಸಹ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿರುವುದನ್ನು ತೋರಿಸಲಾಗಿದೆ.

ಪಾಠದ ಬಳಿಕ ಮಕ್ಕಳು ತಮ್ಮ ಮನೆಯ ಅಡುಗೆ ಕೋಣೆಯಲ್ಲಿ ಕಂಡುಬರುವ ಚಟುವಟಿಕೆಗಳ ಬಗ್ಗೆ ತಮ್ಮ ಅವಲೋಕನಗಳನ್ನು ಬರೆಯುವಂತೆ ಸೂಚಿಸಲಾಗಿದೆ.

ಪ್ಯಾರಾ ಈಜುಪಟು ಪುನೀತ್ ಏಷ್ಯನ್ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಪ್ಯಾರಾ ಈಜುಪಟು ಪುನೀತ್ ನಂದಕುಮಾರ್ ಅವರು ಜರ್ಮನಿಯಲ್ಲಿ ನಡೆದ ಪ್ಯಾರಾ ಈಜು ವಿಶ್ವ ಸರಣಿಯ ಕೂಟದಲ್ಲಿ 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಏಷ್ಯನ್ ದಾಖಲೆ ನಿರ್ಮಿಸಿದರು.


ಪುನೀತ್

ಕರ್ನಾಟಕದ ಪುನೀತ್ ಅವರು 3 ನಿಮಿಷ 17.88 ಸೆಕೆಂಡ್‌ನಲ್ಲಿ ಗುರಿ ತಲುಪಿ ದಾಖಲೆ ಬರೆದರು. ಕೂಟದಲ್ಲಿ ಅವರು ಏಳನೇ ಸ್ಥಾನ ಪಡೆದರು. ಭಾರತದ ಮತ್ತೊಬ್ಬ ಸ್ಪರ್ಧಿ ಶ್ರೀಧರ್ ನಾಗಪ್ಪ ಮಾಲಗಿ (3 ನಿಮಿಷ 28.13ಸೆಕೆಂಡ್) ಎಂಟನೇ ಸ್ಥಾನ ಪಡೆದರು. ಬರ್ಲಿನ್‌ನಲ್ಲಿ ಮೇ 30ರಿಂದ ಜೂನ್ 2ರತನಕ ಕೂಟ ನಡೆಯಿತು.

ಆರೋಪಪಟ್ಟಿ ಸಲ್ಲಿಕೆಯಾದ ನಂತರ ವಿಚಾರಣೆ –ಸುಪ್ರೀಂ
ಸಿಸೋಡಿಯಾ ಜಾಮೀನು ಅರ್ಜಿ ತಿರಸ್ಕೃತ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐ ದಾಖಲಿಸಿರುವ ಪ್ರಕರಣಗಳಲ್ಲಿ ಜಾಮೀನು ಕೋರಿ ದೆಹಲಿಯ ಮಾಜಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರ ಜಾಮೀನು ಅರ್ಜಿಗಳ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.



ಭ್ರಷ್ಟಾಚಾರ ಮತ್ತು ಹಣ ಅಕ್ರಮ ವರ್ಗಾವಣೆ ಪ್ರಕರಣಗಳಲ್ಲಿ ಇ.ಡಿ ಮತ್ತು ಸಿಬಿಐಗಳು ಆರೋಪಪಟ್ಟಿ ಸಲ್ಲಿಸಲಿ. ಆ ಬಳಿಕ ಸಿಸೋಡಿಯಾ ಅವರ ಜಾಮೀನು ಅರ್ಜಿಗಳನ್ನು ವಿಚಾರಣೆಗೆ ಪರಿಗಣಿಸಲಾಗುವುದು ಎಂದು ನ್ಯಾಯಾಲಯ ಹೇಳಿದೆ.

'ಜುಲೈ 3ರಂದು ಕೇಂದ್ರೀಯ ತನಿಖಾ ತಂಡಗಳು ಈ ಪ್ರಕರಣದ ಅಂತಿಮ ದೋಷಾರೋಪ ಪಟ್ಟಿ ಸಲ್ಲಿಸಲಿವೆ' ಎಂದು ಇ.ಡಿ ಮತ್ತು ಸಿಬಿಐ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ತಿಳಿಸಿದರು.

ಇದಕ್ಕೆ ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ರಜಾ ಕಾಲದ ಪೀಠವು, ಸಮ್ಮತಿಸಿತು.

ತಮ್ಮ ಕಕ್ಷಿದಾರ ಕಳೆದ 15 ತಿಂಗಳುಗಳಿಂದ ಜೈಲಿನಲ್ಲಿರುವ ಹೊರತಾಗಿಯೂ, ಈ ಪ್ರಕರಣಗಳ ವಿಚಾರಣೆಯೇ ಇನ್ನೂ ಆರಂಭವಾಗಿಲ್ಲ.

ಜೊತೆಗೆ ಈ ಪ್ರಕರಣಗಳ ತನಿಖೆ ಇನ್ನೂ ನಡೆಯುತ್ತಿರುವ ಕಾರಣ ಭವಿಷ್ಯದಲ್ಲೂ ವಿಚಾರಣೆ ಆರಂಭವಾಗುವ ಸಾಧ್ಯತೆ ಇಲ್ಲ. ಹೀಗಾಗಿ, ತಮ್ಮ ಕಕ್ಷಿದಾರ ಸಿಸೋಡಿಯಾ ಅವರಿಗೆ ಜಾಮೀನು ಮಂಜೂರು ಮಾಡಬೇಕು ಎಂದು ಎಂದು ಸಿಸೋಡಿಯಾ ಪರ ವಕೀಲ ಅಭಿಷೇಕ್ ಮನುಸಿಂಘ್ವಿ ಪೀಠವನ್ನು ಕೋರಿದರು.

ಈ ಪ್ರಕರಣದ ತನಿಖೆ ನಿಧಾನವಾಗಿ ನಡೆದರೆ, ಸಿಸೋಡಿಯಾ ಅವರು ಜಾಮೀನು ಕೋರಿ ಅರ್ಜಿ ಸಲ್ಲಿಸಬಹುದು ಎಂದು 2023ರ ಅಕ್ಟೋಬರ್ 30ರಂದು ಸುಪ್ರೀಂ ಕೋರ್ಟ್ ಹೇಳಿದೆ.

ಆದರೆ, ಈ ಪ್ರಕರಣದಲ್ಲಿ 162 ಸಾಕ್ಷ್ಯಗಳಿದ್ದು, 5 ಸಾವಿರ ಪುಟಗಳ ದಾಖಲೆಗಳನ್ನು ಹೊಂದಿರುವುದಾಗಿ ಇ.ಡಿ ಹೇಳುತ್ತಿದೆ. ಅಲ್ಲದೆ, 294 ಸಾಕ್ಷ್ಯಗಳು ಇದ್ದು, 30 ಸಾವಿರ ಪುಟಗಳ ದಾಖಲೆ ಹೊಂದಿರುವುದಾಗಿ ಸಿಬಿಐ ಹೇಳುತ್ತಿದೆ. ಹೀಗಾಗಿ, ಈ ಪ್ರಕರಣದ ವಿಚಾರಣೆ ಶೀಘ್ರ ಆರಂಭವಾಗುವ ಸಾಧ್ಯತೆಯೇ ಇಲ್ಲ ಎಂದು ಅಭಿಷೇಕ್ ಮನುಸಿಂಘ್ವಿ ವಾದಿಸಿದರು.

ಆಂಧ್ರ ಕ್ರಿಕೆಟ್ ಸಂಸ್ಥೆಯಿಂದ ಎನ್‌ಒಸಿ ಪಡೆದ ವಿಹಾರಿ

ನವದೆಹಲಿ (ಪಿಟಿಐ): ರಣಜಿ ಟ್ರೋಫಿ ಟೂರ್ನಿ ಸಂದರ್ಭದಲ್ಲಿ ಆಂಧ್ರ ತಂಡದ ನಾಯಕತ್ವದಿಂದ ತಮ್ಮನ್ನು ಕೆಳಗಿಳಿಸಿದ್ದನ್ನು ಟೀಕಿಸಿ ಆಂಧ್ರ ಕ್ರಿಕೆಟ್ ಸಂಸ್ಥೆಯ (ಎಸಿಎ) ಅವಕೃಪೆಗೆ ಒಳಗಾಗಿದ್ದ ಕ್ರಿಕೆಟಿಗ ಹನುಮ ವಿಹಾರಿ, ಸಂಸ್ಥೆಯಿಂದ ಕೊನೆಗೂ ನಿರಾಕ್ಷೇಪಣಾ ಪತ್ರವನ್ನು (ಎನ್‌ಒಸಿ) ಪಡೆದಿದ್ದಾರೆ.

'ತನ್ನನ್ನು ನಿರ್ದಾಕ್ಷಿಣ್ಯವಾಗಿ ನಾಯಕತ್ವದಿಂದ ಕೆಳಗಿಳಿಸಿ ಅವಮಾನಿಸಿದೆ. ಮುಂದೆಂದೂ ನಾನು ಆಂಧ್ರ ತಂಡಕ್ಕೆ ಆಡುವುದಿಲ್ಲ' ಎಂದು ಅವರು ಮಾರ್ಚ್‌ನಲ್ಲಿ ಹೇಳಿದ್ದರು. ಈ ಸಂಬಂಧ ವಿಹಾರಿ ಅವರಿಗೆ ಎಸಿಎ ನೋಟಿಸ್ ನೀಡಿತ್ತು.

ವಿಹಾರಿ ಅವರಿಗೆ ದೇಶೀಯ ಕ್ರಿಕೆಟ್‌ನಲ್ಲಿ ಬೇರೆ ರಾಜ್ಯಗಳ ತಂಡಗಳಿಗೆ ಆಡಬೇಕಾದರೆ ಹಿಂದಿನ ತಂಡದಿಂದ ನಿರಾಕ್ಷೇಪಣಾ ಪತ್ರ ಅಗತ್ಯವಿತ್ತು. ಅದು ಸೋಮವಾರ ಅವರ ಕೈಸೇರಿದ್ದು, ಈ ಬಗ್ಗೆ ಎಕ್ಸ್‌ನಲ್ಲಿ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

'ಎರಡು ತಿಂಗಳಿಂದ ನಾನು ಎನ್‌ಒಸಿ ಕೇಳುತ್ತಿದ್ದೆ. ಎಸಿಎಗೆ ನಾಲ್ಕು ಬಾರಿ ಮೇಲ್ ಮಾಡಿದ್ದೇನೆ. ಆದರೂ ನೀಡಿರಲಿಲ್ಲ. ಈಗ ರಾಜ್ಯದಲ್ಲಿ ರಾಜಕೀಯ ಚಿತ್ರಣ ಬದಲಾಗಿದೆ. ಹೀಗಾಗಿ, ತಕ್ಷಣ ಎನ್‌ಒಸಿ ನೀಡಿದ್ದಾರೆ' ಎಂದು ಅವರು ಬರೆದುಕೊಂಡಿದ್ದಾರೆ. ಆಂಧ್ರ ಪ್ರದೇಶದ ವಿಧಾನಸಭೆ ಚುನಾವಣೆಯಲ್ಲಿ ವೈಎಸ್‌ಆರ್ ಕಾಂಗ್ರೆಸ್ ಸೋತು, ತೆಲುಗು ದೇಶಂ ಪಕ್ಷ ಬಹುಮತ ಪಡೆದಿದೆ.

'ವಿಹಾರಿ ಅವರು 2024-25ರ ಋತುವಿನಲ್ಲಿ ಬಿಸಿಸಿಐಗೆ ಸಂಯೋಜಿತವಾಗಿರುವ ಯಾವುದೇ ತಂಡವನ್ನು ಪ್ರತಿನಿಧಿಸಲು ಆಂಧ್ರ ಕ್ರಿಕೆಟ್ ಸಂಸ್ಥೆಯಿಂದ ಯಾವುದೇ ಅಭ್ಯಂತರವಿಲ್ಲ' ಎಂದು ಎಸಿಎ ಕಾರ್ಯದರ್ಶಿ ಗೋಪಿನಾಥ್ ರೆಡ್ಡಿ ಎನ್‌ಒಸಿಯಲ್ಲಿ ಉಲ್ಲೇಖಿಸಿದ್ದಾರೆ.

ಚೆಸ್: ಅಗ್ರ ಐದಕ್ಕೇರಿದ ಅರ್ಜುನ್

ನವದೆಹಲಿ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ, ಫ್ರೆಂಚ್ ಟೀಮ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ತೋರಿದ ಉತ್ತಮ ಪ್ರದರ್ಶನದ ಪರಿಣಾಮ ಫಿಡೆ ರೇಟಿಂಗ್‌ನಲ್ಲಿ ಐದನೇ ಸ್ಥಾನಕ್ಕೆ ತಲುಪಿದ್ದಾರೆ. ಲೈವ್ ರೇಟಿಂಗ್‌ನಲ್ಲಿ ಅತ್ಯುನ್ನತ ಕ್ರಮಾಂಕಕ್ಕೆ ಏರಿದ ಭಾರತದ ಆಟಗಾರ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ.

ಪ್ರಸಕ್ತ 2769ರ ರೇಟಿಂಗ್ ಹೊಂದಿರುವ ಅರ್ಜುನ್, ಇಲ್ಲಿಯವರೆಗೆ 8.7 ಪಾಯಿಂಟ್ಸ್ ಸೇರಿಸಿದ್ದಾರೆ. ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್, ಅಮೆರಿಕದ ಹಿಕಾರು ನಕಾಮುರ ಮತ್ತು ಫ್ಯಾಬಿಯಾನೊ ಕರುವಾನ ಮತ್ತು ರಷ್ಯಾದ ಇಯಾನ್ ನಿಪೊಮ್‌ನಿಷಿಮಾತ್ರ ಭಾರತದ ಆಟಗಾರನಿಗಿಂತ ಮುಂದಿದ್ದಾರೆ.


ಅರ್ಜುನ್

ಈ ವಾರದ ಆರಂಭದಲ್ಲಿ ಅವರ ರೇಟಿಂಗ್ ಜೀವನಶ್ರೇಷ್ಠ 2771.2 ತಲುಪಿತ್ತು. ವಿಶ್ವನಾಥನ್ ಆನಂದ್ ಬಿಟ್ಟರೆ ಭಾರತದ ಆಟಗಾರರಾರೂ ಇಷ್ಟು ಎತ್ತರಕ್ಕೆ ಏರಿರಲಿಲ್ಲ.

20 ವರ್ಷ ವಯಸ್ಸಿನ ಇರಿಗೇಶಿ, ಮೆಟ್ಜ್ ಫಿಷರ್ ಚೆಸ್ ಕ್ಲಬ್ ಪ್ರತಿನಿಧಿಸುತ್ತಿದ್ದು ಇದುವರೆಗೆ ಆಡಿರುವ ಐದು ಪಂದ್ಯಗಳಲ್ಲಿ ನಾಲ್ಕು ಪಂದ್ಯಗಳನ್ನು ಗೆದ್ದಿದ್ದಾರೆ. ಸ್ವದೇಶದ ಪಿ.ಹರಿಕೃಷ್ಣ, ಜರ್ಮನಿಯ ವಿತಾಲಿ ಕುನಿನ್ ವಿರುದ್ಧ ಪಡೆದ ಗೆಲುವು ಇವುಗಳಲ್ಲಿ ಸೇರಿವೆ. ಈ ಟೂರ್ನಿಯಲ್ಲಿ ಇನ್ನೆರಡು ಸುತ್ತುಗಳು ಆಡಲು ಉಳಿದಿವೆ.

ಫ್ರೆಂಚ್ ಓಪನ್: ಸೆಮಿಗೆ ಸಿನ್ನರ್ ಲಗ್ಗೆ

ಪ್ಯಾರಿಸ್ (ರಾಯಿಟರ್ಸ್): ಇಟಲಿಯ ಯಾನಿಕ್ ಸಿನ್ನರ್ ಅವರು ಮಂಗಳವಾರ ನಡೆದ ಪಂದ್ಯದಲ್ಲಿ 6-2, 6-4, 7-6 (3) ರಿಂದ ಹತ್ತನೇ ಕ್ರಮಾಂಕದ ಗ್ರಿಗರ್ ದಿಮಿಟ್ರೋವ್ ಅವರನ್ನು ಸೋಲಿಸಿ ಫ್ರೆಂಚ್ ಓಪನ್ ಟೂರ್ನಿಯ ಸಿಂಗಲ್ಸ್ ಸೆಮಿಫೈನಲ್ ಪ್ರವೇಶಿಸಿದರು. ಆ ಮೂಲಕ ಎರಡನೇ ಗ್ರ್ಯಾನ್‌ಸ್ಲಾಮ್ ಟೂರ್ನಿ ಗೆಲ್ಲುವ ನಿಟ್ಟಿನಲ್ಲಿ ಎರಡನೇ ಶ್ರೇಯಾಂಕದ ಸಿನ್ನರ್ ದೃಢವಾದ ಹೆಜ್ಜೆಯಿಟ್ಟರು.

ಮೊದಲ ಸಲ ವಿಶ್ವದ ಅಗ್ರಪಟ್ಟಕ್ಕೇರುವುದು ಖಚಿತವಾದ ಕೆಲವೇ ನಿಮಿಷಗಳ ಮೊದಲು, 22 ವರ್ಷ ವಯಸ್ಸಿನ ಸಿನ್ನರ್ ಅವರಿಗೆ ಈ ಗೆಲುವು ಒಲಿಯಿತು.

ಅವರಿಗೆ ಸೆಮಿಫೈನಲ್‌ನಲ್ಲಿ ಇನ್ನೊಬ್ಬ ಯುವ ತಾರೆ ಕಾರ್ಲೋಸ್ ಅಲ್ಕರಾಜ್ ಸಂಭವನೀಯ ಎದುರಾಳಿಯಾಗಲಿದ್ದು ಸತ್ವಪರೀಕ್ಷೆ ಎದುರಾಗಲಿದೆ. ಅಲ್ಕರಾಜ್ ಅದಕ್ಕೆ ಮೊದಲು ಎಂಟರ ಘಟ್ಟದಲ್ಲಿ ಸ್ಟೆಫಾನೊಸ್ ಸಿಸಿಪಸ್ ಅವರನ್ನು ಎದುರಿಸಲಿದ್ದಾರೆ.

ಸಿನ್ನರ್ ಅವರು ಫಿಲಿಪ್ ಶಾಟಿಯೆ ಅಂಕಣದಲ್ಲಿ ಬಲ್ಗೇರಿಯಾದ ದಿಮಿಟ್ರೋವ್ ಅವರ ಬ್ಯಾಕ್‌ಹ್ಯಾಂಡ್ ಹೊಡೆತಗಳಿಗೆ ಸವಾಲು ಹಾಕಿದರು. ಸಿನ್ನರ್‌ಗೆ ಮೊದಲ ಸೆಟ್‌ನಲ್ಲಿ ಡಬಲ್ ಬ್ರೇಕ್ ದೊರೆಯಿತು. ಹೀಗಾಗಿ ಹೆಚ್ಚಿನ ಶ್ರಮಹಾಕುವ ಪ್ರಮೇಯ ಬರಲಿಲ್ಲ. ಪ್ರಬಲ ಕ್ರಾಸ್‌ಕೋರ್ಟ್ ಹೊಡೆತಗಳ ಮೂಲಕ ಅವರು ಪ್ರಾಬಲ್ಯ ಮುಂದುವರಿಸಿ, ಋತುವಿನ 33ನೇ ಗೆಲುವಿಗೆ ಅಡಿಪಾಯ ಹಾಕಿದರು.

ದಿಮಿಟ್ರೋವ್ ಮೂರನೇ ಸೆಟ್‌ನಲ್ಲಿ ಪ್ರಬಲ ಹೋರಾಟ ತೋರಿದರು. ಈ ವರ್ಷ ಬ್ರಿಸ್ಬೇನ್ ಓಪನ್ ಪ್ರಶಸ್ತಿ ಗೆದ್ದಿದ್ದ ಅವರು, ಸೋಲುವ ಮೊದಲು ಸೆಟ್‌ಅನ್ನು ಟೈಬ್ರೇಕರ್‌ಗೆ ಬೆಳೆಸಿದರು. ಆದರೆ ಸಿನ್ನರ್ ಅವರ ನಿಖರವಾದ ಆಟ ಅವರಿಗೆ ನಿರ್ಣಾಯಕ ಸಂದರ್ಭದಲ್ಲಿ ಗೆಲುವು ತಂದುಕೊಟ್ಟಿತು.


ಚೆಂಡನ್ನು ಹಿಂತಿರುಗಿಸುತ್ತಿರುವ ಸಿನ್ನರ್ ಎಎಫ್‌ಪಿ ಚಿತ್ರ

ಹಿಂದೆ ಸರಿದ ಜೊಕೊ; ಸಿನ್ನರ್‌ಗೆ ಅಗ್ರಪಟ್ಟ

ಪ್ಯಾರಿಸ್ (ಎಎಫ್‌ಪಿ): ನಾರ್ವೆಯ ಕ್ಯಾಸ್ಪರ್ ರುಡ್ ವಿರುದ್ಧ ಬುಧವಾರ ಫ್ರೆಂಚ್ ಓಪನ್ ಟೂರ್ನಿ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ಪಂದ್ಯ ಆಡಬೇಕಾಗಿದ್ದ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಮೊಣಕಾಲಿನ ನೋವಿನಿಂದ ಹಿಂದೆಸರಿದಿದ್ದಾರೆ ಎಂದು ಟೂರ್ನಿಯ ಸಂಘಟಕರು ಮಂಗಳವಾರ ತಿಳಿಸಿದ್ದಾರೆ.

ಈ ಮೂಲಕ ಮೂರು ಬಾರಿಯ ಚಾಂಪಿಯನ್ ಜೊಕೊವಿಚ್ ದೀರ್ಘಕಾಲದಿಂದ ಹೊಂದಿದ್ದ ವಿಶ್ವದ ನಂ ಆಟಗಾರನ ಸ್ಥಾನ ಕಳೆದುಕೊಳ್ಳಲಿದ್ದಾರೆ. ರುಡ್ ಸೆಮಿಫೈನಲ್‌ಗೆ ಮುನ್ನಡೆಯಲ್ಲಿದ್ದಾರೆ.

ಇದರೊಂದಿಗೆ ಯಾನಿಕ್ ಸಿನ್ನರ್ ಅವರು ಮುಂದಿನ ವಾರ ಪ್ರಕಟವಾಗಲಿರುವ ಎಟಿಪಿ ರ್‍ಯಾಂಕಿಂಗ್‌ನಲ್ಲಿ ಅಗ್ರ ಕ್ರಮಾಂಕಕ್ಕೆ ಏರಲಿದ್ದಾರೆ. ಈ ಸ್ಥಾನಕ್ಕೇರುವ ಇಟಲಿಯ ಮೊದಲ ಆಟಗಾರ ಎನಿಸಲಿದ್ದಾರೆ. ಅವರು ಫೈನಲ್ ತಲುಪಿದಲ್ಲಿ ಅಗ್ರಕ್ರಮಾಂಕ ಖಾತರಿಯಾಗುತಿತ್ತು. ಆದರೆ ಅದಕ್ಕೆ ಮೊದಲೇ ಅವರಿಗೆ ಈ ಸ್ಥಾನ ಖಚಿತವಾಗಿದೆ.

ಸೋಮವಾರ ಫ್ರಾನ್ಸಿಸ್ಕೊ ಸೆರುನಡೊಲೊ ಎದುರು ಮೂರನೇ ಸುತ್ತಿನಲ್ಲಿ ಐದು ಸೆಟ್‌ಗಳ ಪಂದ್ಯ ಗೆದ್ದ ನಂತರ ತಮ್ಮ ಫಿಟ್ನೆಸ್ ಬಗ್ಗೆ ಜೊಕೊವಿಚ್ ಸಂದೇಹ ವ್ಯಕ್ತಪಡಿಸಿದ್ದರು. ಫಿಲಿಪ್ ಶಾಟಿಯೆ ಅಂಕಣ 'ಜಾರುತ್ತಿದ್ದುದು' ಇದಕ್ಕೆಲ್ಲ ಕಾರಣ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು.

ಬ್ಯಾಡ್ಮಿಂಟನ್: ಸೇನ್, ರಾಜಾವತ್ ಶುಭಾರಂಭ

ಜಕಾರ್ತ (ಪಿಟಿಐ): ಭಾರತದ ಲಕ್ಷ್ಯ ಸೇನ್ ಮತ್ತು ಪ್ರಿಯಾಂಶು ರಾಜಾವತ್ ಅವರು ಇಂಡೊನೇಷ್ಯಾ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಶುಭಾರಂಭ ಮಾಡಿದರು.

ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಸೇನ್ ಅವರು ಮಂಗಳವಾರ ನಡೆದ ಮೊದಲ ಸುತ್ತಿನಲ್ಲಿ 21–12, 21–17ರಿಂದ ಜಪಾನ್‌ನ ಕಂಟಾ ತ್ಸುನೇಯಮಾ ವಿರುದ್ಧ ನೇರ ಗೇಮ್‌ಗಳ ಗೆಲುವು ಸಾಧಿಸಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅವರು ಮುಂದಿನ ಸುತ್ತಿನಲ್ಲಿ ಏಳನೇ ಶ್ರೇಯಾಂಕದ ಆತಿಥೇಯ ದೇಶದ ಆ್ಯಂಟನಿ ಸಿನಿಸುಕ್ ಗಿಂಟಿಂಗ್ ಅವರನ್ನು ಎದುರಿಸುವರು.


ಭಾರತದ ಲಕ್ಷ್ಯ ಸೇನ್ ಆಟದ ವೈಖರಿ —ಎಪಿ/ ಪಿಟಿಐ ಚಿತ್ರ

ರಾಜಾವತ್ ಅವರು ಸ್ವದೇಶದ ಎಚ್.ಎಸ್. ಪ್ರಣಯ್ ಅವರಿಗೆ ಆಘಾತ ನೀಡಿದರು. 32ರ ಘಟ್ಟದ ಪಂದ್ಯದಲ್ಲಿ ರಾಜಾವತ್ 21–17, 21–12 ರಿಂದ ವಿಶ್ವದ 9ನೇ ಕ್ರಮಾಂಕದ ಪ್ರಣಯ್ ಅವರನ್ನು ಸೋಲಿಸಿದರು. ಮುಂದಿನ ಸುತ್ತಿನಲ್ಲಿ ಅವರು ಎಂಟನೇ ಶ್ರೇಯಾಂಕದ ಕುನ್ಲವುಟ್ ವಿಟಿಡ್ಸರ್ನ್ (ಥಾಯ್ಲೆಂಡ್) ಅವರನ್ನು ಎದುರಿಸುವರು.

ಭಾರತದ ಮತ್ತೊಬ್ಬ ಸಿಂಗಲ್ಸ್ ಆಟಗಾರ ಕಿರಣ್ ಜಾರ್ಜ್ ಕೂಡ ಮೊದಲ ಸುತ್ತಿನಲ್ಲೇ ನಿರ್ಗಮಿಸಿದರು. ಅವರು 21-11, 10-21, 20-22 ರಿಂದ ಚೀನಾದ ಹಾಂಗ್ ಯಾಂಗ್ ವೆಂಗ್ ವಿರುದ್ಧ ಕಠಿಣ ಹೋರಾಟ ನಡೆಸಿ, ಸೋಲೊಪ್ಪಿಕೊಂಡರು. ಮೊದಲ ಗೇಮ್‌ನಲ್ಲಿ ಹಿಡಿತ ಸಾಧಿಸಿದ್ದ ಜಾರ್ಜ್, ನಂತರದ ಗೇಮ್‌ಗಳಲ್ಲಿ ಮುಗ್ಗರಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಟ್ರಿಸಾ ಜೊಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯು ಮೊದಲ ಸುತ್ತಿನಲ್ಲಿ 21-15, 21-11ರಿಂದ ಚೀನಾ ತೈಪೆಯ ಯು ಪೈ ಚೆಂಗ್ ಮತ್ತು ಯು ಹ್ಸಿಂಗ್ ಸನ್ ಅವರನ್ನು ಮಣಿಸಿ ಎರಡನೇ ಸುತ್ತಿಗೆ ಮುನ್ನಡೆಯಿತು.

ಒಲಿಂಪಿಕ್ಸ್: ಬೋಪಣ್ಣಗೆ ಬಾಲಾಜಿ ಜೊತೆಗಾರ

ನವದೆಹಲಿ (ಪಿಟಿಐ): ಭಾರತದ ಅಗ್ರಗಣ್ಯ ಟೆನಿಸ್ ಡಬಲ್ಸ್ ಆಟಗಾರ ರೋಹನ್ ಬೋಪಣ್ಣ ಅವರಿಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎನ್. ಶ್ರೀರಾಮ್ ಬಾಲಾಜಿ ಜೊತೆಗಾರ ಆಗಲಿದ್ದಾರೆ.

ರೋಲಂಡ್ ಗ್ಯಾರೋಸ್‌ನಲ್ಲಿ ನಡೆಯುತ್ತಿರುವ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಸ್ಫೂರ್ತಿಯುತ ಪ್ರದರ್ಶನ ನೀಡಿದ ಬಾಲಾಜಿ ಅವರನ್ನೇ ತಂಡದ ಸಂಯೋಜನೆಗಾಗಿ 44 ವರ್ಷದ ಬೋಪಣ್ಣ ಅಂತಿಮಗೊಳಿಸಿದ್ದಾರೆ. ಅದಕ್ಕೆ ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ಒಪ್ಪಿಗೆ ನೀಡಲಿದೆ.

ಬಾಲಾಜಿ ಮತ್ತು ಮೆಕ್ಸಿಕೊದ ಮಿಗುಯೆಲ್ ಏಂಜೆಲ್ ರೆಯೆಸ್–ವರೆಲಾ ಜೋಡಿಯು ಫ್ರೆಂಚ್ ಓಪನ್‌ನ ಪುರುಷರ ಡಬಲ್ಸ್‌ನ ಮೂರನೇ ಸುತ್ತಿನಲ್ಲಿ ಎರಡನೇ ಶ್ರೇಯಾಂಕದ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯು ಎಬ್ಡೆನ್ ಜೋಡಿಗೆ ತೀವ್ರ ಪೈಪೋಟಿ ನೀಡಿತ್ತು. ಈ ಪಂದ್ಯದಲ್ಲಿ ಬಾಲಾಜಿ ನಿರಾಸೆ ಅನುಭವಿಸಿದರೂ, ಉತ್ತಮ ಆಟದ ಮೂಲಕ ಬೋಪಣ್ಣ ಅವರ ಗಮನ ಸೆಳೆದಿದ್ದರು.

ಐಎಸ್‌ಎಸ್‌ಎಫ್: ಇಶಾ ಆರನೇ ಸ್ಥಾನ

ಮ್ಯೂನಿಚ್ (ಪಿಟಿಐ): ಭಾರತದ ಇಶಾ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಮಹಿಳೆಯರ 25 ಮೀ ಪಿಸ್ತೂಲ್ ಸ್ಪರ್ಧೆಯಲ್ಲಿ ಆರನೇ ಸ್ಥಾನ ಪಡೆದರು.

ಫೈನಲ್‌ನಲ್ಲಿ ಇಶಾ 20 ಸ್ಕೋರ್ ಗಳಿಸಿದರು. ಸ್ಪರ್ಧೆಯಲ್ಲಿ ಫ್ರಾನ್ಸ್‌ನ ಕ್ಯಾಮಿಲ್ಲೆ ಜೆಡ್ರೆಜೆವ್ಸ್ಕಿ ಚಿನ್ನ ಗೆದ್ದರು. ಜರ್ಮನಿಯ ಡೋರಿನ್ ವೆನ್ನೆಕ್ಯಾಂಪ್ ಬೆಳ್ಳಿ ಪದಕ ಗೆದ್ದರೆ, ಕೊರಿಯಾದ ಕಿಮ್ ಯೆಜಿ ಮೂರನೇ ಸ್ಥಾನ ಪಡೆದರು.

ಸೋಮವಾರ ನಡೆದಿದ್ದ ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಭಾರತದ ರಮಿತಾ ಅವರೂ ಆರನೇ ಸ್ಥಾನ ಗಳಿಸಿದ್ದರು. ಸತತ ಎರಡನೇ ದಿನವೂ ಭಾರತಕ್ಕೆ ಪದಕ ಒಲಿಯಲಿಲ್ಲ. 3 ಚಿನ್ನದೊಂದಿಗೆ ಚೀನಾ ಪದಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.